ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ

ಎಂ.ಫಿಲ್.ಪದವಿಯ ನಿಬಂಧ

"ಡಾ.ಸಿದ್ಧಲಿಂಗಯ್ಯನವರ ಸಾಹಿತ್ಯದಲ್ಲಿ ಡಾ.ಅಂಬೇಡ್ಕರ್ ಚಿಂತನೆಗಳು"

ಸಂಶೋಧನ ವಿದ್ಯಾರ್ಥಿ

ಕೆ.ಮುನಿಯಪ್ಪ

ನೋಂದಣಿ ಸಂಖ್ಯೆ : KVMBKS-00430

ಮಾರ್ಗದರ್ಶಕರು

ಡಾ.ಕೆ.ವಿ.ಚಂದ್ರಣ್ಣಗೌಡ ಎಂ.ಎ., ಎಲ್.ಎಲ್.ಬಿ, ಪಿಎಚ್.ಡಿ

ಉಪಪ್ರಾಚಾರ್ಯರು

ಮುಖ್ಯಸ್ಥರು, ಕನ್ನಡ ವಿಭಾಗ

ವಿ.ವಿ.ಪುರ ಕಲೆ ಮತ್ತು ವಾಣಿಜ್ಯ ಸಂಜೆ ಕಾಲೇಜು

ಕೆ.ಆರ್.ರಸ್ತೆ, ಬೆಂಗಳೂರು - ೪

ಕಾವ್ಯಮಂಡಲ

ನಂ.೧೩/೮೫, ರಾಷ್ಟ್ರೀಯ ವಿದ್ಯಾಲಯ ರಸ್ತೆ

ಬಸವನಗುಡಿ

ಬೆಂಗಳೂರು - ೫೬೦೦೦೪

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ

ಎಂ.ಫಿಲ್.ಪದವಿಯ ನಿಬಂಧ

"ಡಾ.ಸಿದ್ಧಲಿಂಗಯ್ಯನವರ ಸಾಹಿತ್ಯದಲ್ಲಿ ಡಾ.ಅಂಬೇಡ್ಕರ್ ಚಿಂತನೆಗಳು"

ಸಂಶೋಧನ ವಿದ್ಯಾರ್ಥಿ
ಕೆ.ಮುನಿಯಪ್ಪ
ನೋಂದಣಿ ಸಂಖ್ಯೆ: KVMBKS-00430

ಮಾರ್ಗದರ್ಶಕರು
ಡಾ.ಕೆ.ವಿ.ಚಂದ್ರಣ್ಣಗೌಡ ಎಂ.ಎ., ಎಲ್.ಎಲ್.ಬಿ, ಪಿಎಚ್.ಡಿ
ಉಪಪ್ರಾಚಾರ್ಯರು
ಮುಖ್ಯಸ್ಥರು, ಕನ್ನಡ ವಿಭಾಗ
ವಿ.ವಿ.ಪುರ ಕಲೆ ಮತ್ತು ವಾಣಿಜ್ಯ ಸಂಜೆ ಕಾಲೇಜು
ಕೆ.ಆರ್.ರಸ್ತೆ, ಬೆಂಗಳೂರು – ೪

ಕಾವ್ಯಮಂಡಲ
ನಂ.೧೩/೮೫, ರಾಷ್ಟ್ರೀಯ ವಿದ್ಯಾಲಯ ರಸ್ತೆ
ಬಸವನಗುಡಿ
ಬೆಂಗಳೂರು – ೫೬೦೦೦೪

ದೃಢೀಕರಣ ಪತ್ರ

"ಡಾ.ಸಿದ್ಧಲಿಂಗಯ್ಯನವರ ಸಾಹಿತ್ಯದಲ್ಲಿ ಡಾ.ಅಂಬೇಡ್ಕರ್ ಚಿಂತನೆಗಳು" ಎಂಬ ವಿಷಯವನ್ನು ಕುರಿತು ನಿಬಂಧವನ್ನು ಕನ್ನಡ ವಿಶ್ವವಿದ್ಯಾಲಯ, ಹಂಪಿ ಇವರಿಗೆ ಎಂ.ಫಿಲ್ ಪದವಿಗಾಗಿ **ಡಾ.ಕೆ.ವಿ.ಚಂದ್ರಣ್ಣಗೌಡ** ಅವರ ಮಾರ್ಗದರ್ಶನದಲ್ಲಿ ಸಂಶೋಧನಾ ವಿದ್ಯಾರ್ಥಿಯಾದ ನಾನು ಸ್ವತಂತ್ರ ಅಧ್ಯಯನದ ಮೂಲಕ ಸಿದ್ಧಪಡಿಸಿದ್ದೇನೆ. ಈ ನಿಬಂಧವನ್ನು ಈ ಮೊದಲು ಯಾವುದೇ ವಿಶ್ವವಿದ್ಯಾಲಯದ ಪದವಿ ಪ್ರಕಟಣೆಗಾಗಿ ಬಳಸಿಕೊಂಡಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ತಮ್ಮ ವಿಶ್ವಾಸಿ,

(ಕೆ.ಮುನಿಯಪ್ಪ)
ಸಂಶೋಧನಾ ವಿದ್ಯಾರ್ಥಿ
ಕಾವ್ಯಮಂಡಲ
ನಂ.೧೩/೮೫, ರಾಷ್ಟ್ರೀಯ ವಿದ್ಯಾಲಯ ರಸ್ತೆ
ಬಸವನಗುಡಿ
ಬೆಂಗಳೂರು – ೫೬೦೦೦೪

ಸ್ಥಳ : ಬೆಂಗಳೂರು
ದಿನಾಂಕ : 9-9-10.

ಮಾರ್ಗದರ್ಶಕರ ಪ್ರಮಾಣಪತ್ರ

"ಡಾ.ಸಿದ್ಧಲಿಂಗಯ್ಯನವರ ಸಾಹಿತ್ಯದಲ್ಲಿ ಡಾ.ಅಂಬೇಡ್ಕರ್ ಚಿಂತನೆಗಳು" ಎಂಬ ವಿಷಯವನ್ನು ಕುರಿತು ನಿಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್ ಪದವಿಗಾಗಿ ಸಲ್ಲಿಸಲು ಕೆ.ಮುನಿಯಪ್ಪ ಅವರು ನನ್ನ ಮಾರ್ಗದರ್ಶನದಲ್ಲಿ ಸ್ವತಂತ್ರ ಅಧ್ಯಯನದ ಮೂಲಕ ಸಿದ್ಧಪಡಿಸಿದ್ದಾರೆ. ಈ ನಿಬಂಧವನ್ನು ಈ ಮೊದಲು ಬೇರೆ ಯಾವುದೇ ವಿಶ್ವವಿದ್ಯಾಲಯದ ಪದವಿ, ಪ್ರಕಟಣೆಗಾಗಲೀ ಸಲ್ಲಿಸಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ಮಾರ್ಗದರ್ಶಕರು

(ಡಾ.ಕೆ.ವಿ.ಚಂದ್ರಣ್ಣಗೌಡ)
ಎಂ.ಎ. ಎಲ್.ಎಲ್.ಬಿ. ಪಿಎಚ್.ಡಿ
ಉಪಪ್ರಾಚಾರ್ಯರು
ಮುಖ್ಯಸ್ಥರು, ಕನ್ನಡ ವಿಭಾಗ
ವಿ.ವಿ.ಪುರ ಕಲೆ ಮತ್ತು ವಾಣಿಜ್ಯ ಸಂಜೆ ಕಾಲೇಜು
ಕೆ.ಆರ್.ರಸ್ತೆ, ಬೆಂಗಳೂರು – ೪

ಡಾ॥ಕೆ.ವಿ. ಚಂದ್ರಣ್ಣಗೌಡ
ಎಂ.ಎ., ಎಲ್.ಎಲ್.ಬಿ., ಪಿಎಚ್.ಡಿ
ಮುಖ್ಯಸ್ಥರು, ಕನ್ನಡ ವಿಭಾಗ
ವಿ.ವಿ. ಪುರ ಕಲೆ ಮತ್ತು ವಾಣಿಜ್ಯ ಸಂಜೆ ಕಾಲೇಜು
ಕೆ.ಆರ್. ರಸ್ತೆ, ಬೆಂಗಳೂರು-560 004

ಸ್ಥಳ : ಬೆಂಗಳೂರು
ದಿನಾಂಕ:

ಪರಿವಿಡಿ	ಪುಟಸಂಖ್ಯೆ

ಅಧ್ಯಾಯ – ೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಹಿಂದೂ ಸಮಾಜ ವ್ಯವಸ್ಥೆಯಲ್ಲಿ ಅತ್ಯಂತ ತಳಭಾಗದಲ್ಲಿರುವುದೇ ಅಸ್ಪೃಶ್ಯ ಸಮುದಾಯಗಳು. ಶತ ಶತಮಾನಗಳಿಂದಲೂ ಈ ಸಮುದಾಯಗಳು ಸವರ್ಣೀಯರಿಂದ ಅಸ್ಪೃಶ್ಯರೆಂದೇ ಪರಿಗಣಿಸಲ್ಪಟ್ಟಿದೆ. ಇಂತಹ ಸಮುದಾಯಗಳು ಹಿಂದೂ ಸವರ್ಣೀಯರ ಪಾಲಿಗೆ ಅಪವಿತ್ರರು, ಅವರನ್ನು ಸ್ಪರ್ಶಿಸಕೂಡದು, ನೋಡಕೂಡದು, ಅವರ ದನಿ ಕೇಳಕೂಡದು ಇವರು ಬೀದಿಗೆ ಬಂದಾಗ ಹೆಜ್ಜೆ ಗುರುತುಗಳು ನೆಲದ ಮೇಲೆ ಮೂಡದಂತೆ ಅಳಿಸಲು ಬೆನ್ನಿಗೆ ಪೊರಕೆಯನ್ನು ಕಟ್ಟಿಕೊಂಡಿರಬೇಕಾಗಿತ್ತು. ದಾರಿಯಲ್ಲಿ ಎಂಜಲು ಉಗಿಯುವಂತಿರಲಿಲ್ಲವಾದ ಕಾರಣ ಕೊರಳಲ್ಲಿ ಮಡಿಕೆಯನ್ನು ಕಟ್ಟಿಕೊಂಡಿರಬೇಕಾಗಿತ್ತು. ಇಂತಹ ನಾಡಿನ ನಡುವಿನಲ್ಲೇ ಸಿಡಿದು ಬಂದು ಈ ಶೋಷಿತ ಸಮುದಾಯಗಳಿಗೆ ಸಮಾಜದಲ್ಲಿ ಹೊಸ ಜೀವನ, ಆಲೋಚನೆ, ಚಿಂತನೆಗಳನ್ನು ನೀಡಿ ತಮ್ಮ ಬದುಕಿಗಾಗಿ ಹೋರಾಡುವ ಶಕ್ತಿಯನ್ನು, ಬಾಳಿಗೆ ಬೆಳಕನ್ನು ತಂದವರು ದಲಿತರ ಸೂರ್ಯ ಡಾ.ಬಾಬಾ ಸಾಹೇಬ್ ಅಂಬೇಡ್ಕರ್‌ರವರು.

ಬದುಕಿನ ಭದ್ರತೆಗೆ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯದ ಜೊತೆಗೆ ಶೋಷಣೆ ರಹಿತ ಸಮಾಜ ವ್ಯವಸ್ಥೆಯ ನಿರ್ಮಾಣ ಮಾಡಬೇಕಾದರೆ ಬುದ್ಧ, ಬಸವರ ತತ್ವ-ಸಿದ್ಧಾಂತಗಳು ಹೇಗೆ ಸರ್ವಕಾಲಿಕವಾಗಿವೆಯೋ, ಹಾಗೆಯೇ ದಲಿತರ ಬದುಕಿನ ಸರ್ವತೋಮುಖ ಬೆಳವಣಿಗೆಗೆ ಡಾ.ಅಂಬೇಡ್ಕರ್ ತತ್ವ ಸಿದ್ಧಾಂತಗಳು ಕೂಡ. ಮಾನವೀಯತೆಯೇ ಅಡಿಪಾಯವಾಗಿರುವ ಸಮಾಜ ನಿರ್ಮಾಣ ಮಾಡಲು ಅವರ ಆಶಯಗಳು ನಿತ್ಯಸತ್ಯವಾಗಿ ಕಾಣುತ್ತವೆ.

ಡಾ.ಅಂಬೇಡ್ಕರ್‌ರವರ ಜೀವನ, ಹೋರಾಟ, ಆಶಯಗಳ ಅಡಿಯಲ್ಲೇ ಅನೇಕ ತಳವರ್ಗದ ಸಮುದಾಯಗಳು ತಮ್ಮ ಮೇಲೆ ನಡೆಯುವ ದಬ್ಬಾಳಿಕೆ, ಶೋಷಣೆಯ ವಿರುದ್ಧ ದನಿಯೆತ್ತಲು ಪ್ರಾರಂಭಿಸಿದರು. ಸಂವಿಧಾನಶಿಲ್ಪಿಯ ಕಾನೂನು ಬದ್ಧ ಮೀಸಲಾತಿಯ ಅಡಿಯಲ್ಲಿ ಶಿಕ್ಷಣ ಕಲಿತು, ನೌಕರಿಯನ್ನು ಪಡೆಯಲಾರಂಭಿಸಿದರು. ವಿದ್ಯಾವಂತ ಜನಸಮುದಾಯ ತಮ್ಮ ಮೇಲಿನ ದೌರ್ಜನ್ಯ, ಗುಲಾಮತನದ ವಿರುದ್ಧ ಬರವಣಿಗೆಗಳ ಮೂಲಕ ಸಾಹಿತ್ಯ ರಚನೆಯನ್ನು ಕೈಗೊಂಡು ಅದರ ಮೂಲಕ ಶೋಷಿತ, ದುಡಿಯುವ, ರೈತಾಪಿ ವರ್ಗಗಳಲ್ಲೂ ಜಾಗೃತಿಯನ್ನು ಮೂಡಿಸಲು ಪ್ರಯತ್ನ ಮಾಡಿದರು. ಇವರಿಗೆಲ್ಲಾ ಸ್ಫೂರ್ತಿಯಾಗಿ, ಬೆನ್ನೆಲುಬಾಗಿ ನಿಂತು ಸದಾ ಪ್ರೇರಣೆ, ಉತ್ಸಾಹ, ಛಲ, ಸ್ವಾಭಿಮಾನವನ್ನು ತುಂಬುತ್ತಿದ್ದುದು ಡಾ.ಅಂಬೇಡ್ಕರ್ ಬರಹ-ಚಿಂತನೆಗಳು. ಹೇಗೆ ಹಿಂದೆ ಪುರಾಣಗಳಲ್ಲಿ ಸವರ್ಣೀಯರು ಒಬ್ಬ ಮಾನವೀಯ ನೆಲೆಯಲ್ಲಿ ಆಡಳಿತ ನಡೆಸುತ್ತಿದ್ದ ರಾಜ ಬಲಿ

ಚಕ್ರವರ್ತಿಯನ್ನು ಸಂಹಾರ ಮಾಡಲು ಶ್ರೀರಾಮನನ್ನು ವಾಮನನನ್ನಾಗಿ ಸೃಷ್ಟಿಸಿದರೋ ಹಾಗೆಯೇ ದಲಿತರಲ್ಲಿ ಕ್ಷಿ ಪ್ರಗತಿಯಲ್ಲಿ ಈ ಸವರ್ಣೀಯರ ಶೋಷಣೆ, ದಬ್ಬಾಳಿಕೆ, ಅಸಮಾನತೆ, ಅರಾಜಕತೆಯ ವಿರುದ್ಧ ದಲಿತರಿಗೆ ಜಾಗೃತಿಯನ್ನು ಸಾಹಿತ್ಯ ಸಂರಚನೆಯ ಮೂಲಕ ೧೯೭೦ರ ದಶಕದಲ್ಲಿ ಜಾಗೃತಿ ಮೂಡಿಸಿ, ಸಮಾಜ ಪರಿವರ್ತನೆಗೆ ಕಾರಣೀಭೂತರೆನಿಸಿದ ಕ್ರಾಂತಿಕಾರಿ ದಲಿತ ಕವಿ ಡಾ.ಸಿದ್ಧಲಿಂಗಯ್ಯ.

ಸಾವಿರಾರು ವರ್ಷಗಳ ಕಾಲ ತುಳಿತಕ್ಕೊಳಗಾದ ದಲಿತ ವರ್ಗದ ರೋಷದ ಕಿಡಿ ಸಾಹಿತ್ಯವಾಗಿ ಮೂಡಿ ಕನ್ನಡ ಸಾಹಿತ್ಯಕ್ಕೆ ಹೊಸ ಆಯಾಮ ನೀಡಿ ಬಂಡಾಯ ಪರವಾದ ಸಾಹಿತ್ಯಕ್ಕೆ ನಾಂದಿ ಹಾಡಿದ ಕವಿ ಡಾ.ಸಿದ್ಧಲಿಂಗಯ್ಯ. ಅವರಿಗೆ ಬಾಲ್ಯದಲ್ಲಿಯೇ ಡಾ.ಅಂಬೇಡ್ಕರ್ ಆದರ್ಶರಾಗಿದ್ದರು. ಅವರ ಬಗ್ಗೆ ಚೆನ್ನಾಗಿ ತಿಳಿದಿದ್ದು, ಭಾಷಣಗಳನ್ನು ಮಾಡುತ್ತಿದ್ದರಿಂದ ಇವರು 'ಅಂಬೇಡ್ಕರ್ ಭಕ್ತರು' ಎಂದು ಕರೆಯಲ್ಪಡುತ್ತಿದ್ದರು. ಇವರು ಮೊದಮೊದಲು ದಲಿತ ಹೋರಾಟಗಾರರಾಗಿ ದಲಿತರಿಗಾಗಿ ಹೋರಾಟ ಮಾಡಬೇಕು. ಅವರ ಪರವಾಗಿ ದನಿಯೆತ್ತಿ ನ್ಯಾಯ ದೊರಕಿಸಿಕೊಡಬೇಕೆಂದು ತೀರ್ಮಾನ ಮಾಡಿಕೊಂಡು ಹಾಗೆಯೇ ನಡೆದುಕೊಳ್ಳುತ್ತಿದ್ದರು.

ಡಾ.ಅಂಬೇಡ್ಕರ್ ಹೋರಾಟದ ಹಾದಿಯಲ್ಲೇ ಇವರು ಕೂಡ ದಲಿತರ ಉದ್ಧಾರಕ್ಕಾಗಿ ಹೋರಾಟ ನಡೆಸಿದ್ದಾರೆ. ದೇವಾಲಯ ಪ್ರವೇಶ ಚಳುವಳಿ ಮಾಡಿದ್ದಾರೆ. "ಬನ್ನೇರುಘಟ್ಟ ರಸ್ತೆಯಲ್ಲಿ ಬರುವ ಬಿಳೇಕಳ್ಳಿ ಎಂಬ ಊರಿನಲ್ಲಿ ದೇವಸ್ಥಾನಕ್ಕೆ ದಲಿತರ ಪ್ರವೇಶವನ್ನು ನಿಷೇಧಿಸಲಾಗಿತ್ತು. ಇದನ್ನು ತಿಳಿದ ಸಿದ್ಧಲಿಂಗಯ್ಯನವರು ದಲಿತ ಸಂಘರ್ಷ ಸಮಿತಿಯ ಇತರ ಕಾರ್ಯಕರ್ತರೊಟ್ಟಿಗೆ ಬಿಳೇಕಳ್ಳಿಗೆ ಹೋಗಿ ದೊಡ್ಡ ಸಭೆಯನ್ನು ಏರ್ಪಡಿಸಿ, ಭಾಷಣವನ್ನು ಮಾಡಿ ಮೆರವಣಿಗೆ ಮೂಲಕ ದೇವಾಲಯ ಪ್ರವೇಶಿಸಿದರು(೧೯೭೮-೭೯)[1]. ಇದಾದ ಮೇಲೆ ಸವರ್ಣೀಯರ ಜೊತೆ ಹೊಡೆದಾಟಗಳು ನಡೆದು ಹೋಯಿತು. ೧೯೩೦ರಲ್ಲಿ ಮಹಾರಾಷ್ಟ್ರದ ನಾಸಿಕ್ ಕಳಾರಾಂ ದೇವಸ್ಥಾನ ಪ್ರವೇಶಿಸಿದ ಅಂಬೇಡ್ಕರ್ ಹಲ್ಲೆಗೊಳಗಾದ ಘಟನೆ ನೆನಪಿಗೆ ತರುತ್ತದೆ. ಹೀಗೆ ದಲಿತ ಹೋರಾಟಗಾರರಾಗಿ ಗುರುತಿಸಲ್ಪಟ್ಟಿದ್ದರು.

ನಂತರ ಇವರಿಗೆ ಸಾಹಿತ್ಯಿಕವಾಗಿ ಪ್ರಾರಂಭದಲ್ಲಿ "ಕುವೆಂಪು ಬರವಣಿಗೆಯಲ್ಲಿರುವ ಮೌಢ್ಯ ವಿರೋಧಿ ವಿಚಾರ ಮತ್ತು ಪ್ರತಿಭಟನೆ ಆಕರ್ಷಿಸಿತು. ಸಮಾಜ ಸುಧಾರಕರಾಗಿ, ಮಾರ್ಗದರ್ಶಕರಾಗಿಯೂ ಕಂಡರು. ಆದರೆ ಮುಂದೆ ಕುವೆಂಪು ಹೇಳಿದ್ದು ಸಾಲದು. ಈ ಮಿತಿಗಳನ್ನು ದಾಟಬೇಕು ಎನಿಸಿದಾಗ ಡಾ.ಅಂಬೇಡ್ಕರ್‌ರವರ ಬರಹ ಸಿದ್ಧಾಂತ, ಚಿಂತನೆಗಳು ಪ್ರಭಾವ ಪ್ರಮುಖವಾಯಿತೆಂದು"[2] ಡಾ.ಸಿದ್ಧಲಿಂಗಯ್ಯನವರೇ ಹೇಳುತ್ತಾರೆ. ಶೋಷಿತ ಸಮಾಜದಿಂದಲೇ ಬಂದು ಅದರ ಘೋರ ಅನುಭವಗಳನ್ನು ಕಂಡುಂಡು ಅದರ ವಿನಾಶಕ್ಕೆ ಶ್ರಮಿಸಿ, ಆ ಸಮುದಾಯಗಳಲ್ಲಿ

ಶಿಕ್ಷಣ, ಸಂಘಟನೆ, ಹೋರಾಟ, ಸ್ವಾಭಿಮಾನ, ಛಲವನ್ನು ತುಂಬಿ ಸಮಾಜದಲ್ಲಿ ಗೌರವಯುತ ಜೀವನ ನಡೆಸಲು ನಮಗೆ ದಾರಿದೀಪವಾಗಿದ್ದೇ ಡಾ.ಅಂಬೇಡ್ಕರ್ ವಿಚಾರಧಾರೆಗಳು.

ಅವರ ಬರಹ, ವಿಚಾರ, ಚಿಂತನೆ, ಆಶಯಗಳನ್ನು ಓದಿ, ಚಿಂತಿಸಿ, ಜಾಗೃತರಾಗಿ ಅವರ ಮಾರ್ಗದಲ್ಲೇ ನಡೆಯಲು ಪ್ರಯತ್ನಿಸಿದವರು ಅಗಣಿತ. ಅವರಲ್ಲಿ ಡಾ.ಸಿದ್ಧಲಿಂಗಯ್ಯ ಕೂಡ ಸೇರಿದ್ದಾರೆ. ಇವರ ಸಾಹಿತ್ಯ ಬರವಣಿಗೆಯಲ್ಲಿ ದಲಿತರ ನಿಜ ಜೀವನ, ಅವರ ಸಿಟ್ಟು, ಆಕ್ರೋಶ, ನೋವು, ನಲಿವು, ಹತಾಶೆ, ಆಸೆ, ಆಕಾಂಕ್ಷೆಗಳೆನ್ನೆಲ್ಲವನ್ನು ಪ್ರತಿಬಿಂಬಿಸುವುದರ ಮೂಲಕವೇ ಯಾರ ವಿಚಾರಧಾರೆ ಇವರಿಗೆ ಪ್ರೇರಣೆ, ಸ್ಫೂರ್ತಿಯಾಗಿದ್ದಿತೋ ಅವರ ಚಿಂತನೆ, ಆಲೋಚನೆ, ಸಿದ್ಧಾಂತಗಳನ್ನು ಬರವಣಿಗೆಯ ಆಂತರ್ಯದಲ್ಲಿ ಹಿಡಿದಿಟ್ಟಿರುವುದನ್ನು ಕಾಣಬಹುದಾಗಿದೆ.

"ಗುಡಿಸಲಿನಲ್ಲಿ ಅರಳುವ ಗುಲಾಬಿ
ನಕ್ಷತ್ರ ನನ್ನ ಕವನ
ಕತ್ತಲೆಯಲ್ಲಿ ಕಾಣುವ ಬೆಳಕು
ಬಂಡಾಯದ ಈ ಕವನ" (ನನ್ನ ಕವನ)

ಕರ್ನಾಟಕದ ಶೋಷಿತರಲ್ಲಿ ಬಂಡಾಯದ ಬಾವುಟವನ್ನು ಹಾರಿಸಿ ಚಳುವಳಿ ಮತ್ತು ಸಾಹಿತ್ಯಕ್ಕೆ ಹೊಸ ರೂಪವನ್ನು ಜನಪದ ಕಾಳಜಿಯ ಸಾಹಿತ್ಯವನ್ನು ತಮ್ಮ ಕಾರ್ಯದಲ್ಲಿ ಅದರ ನೋವುಗಳನ್ನು ವ್ಯಕ್ತಪಡಿಸುತ್ತಲೇ ಬದಲಾವಣೆ ಬಯಸಿದರು. "ಜಾತಿಗಿಂತ ಮನುಷ್ಯನ ಸ್ವಭಾವಗಳು ಬಹಳ ಮುಖ್ಯ ದಲಿತರನ್ನು ದಲಿತರನ್ನಾಗಿ ಉಳಿಸಿ ಕೊಳ್ಳುವುದೇ ಸರ್ಕಾರದ ಧೋರಣೆ, ದಲಿತರಲ್ಲಿ ಸ್ವತಂತ್ರವಾದ ವ್ಯಕ್ತಿತ್ವವನ್ನು ರೂಪಿಸುವ ವಾತಾವರಣವನ್ನು ಸರ್ಕಾರ ರೂಪಿಸುತ್ತಿಲ್ಲ. ಸ್ವಾಭಿಮಾನ, ಛಲ ಹುಟ್ಟಿಸುವ ಸನ್ನಿವೇಶ ನಿರ್ಮಾಣ ಮಾಡಬೇಕು"[3] ಜಾತಿ ವಿನಾಶಕ್ಕೆ ಕಾರಣವಾಗುವ ಅಂತರ್ಜಾತಿ ವಿವಾಹ, ಅದಕ್ಕೆ ಮೀಸಲಾತಿ ಇವುಗಳನ್ನೆಲ್ಲಾ ಒಳಗೊಂಡು ಸಾಮಾಜಿಕ, ಧಾರ್ಮಿಕ, ರಾಜಕೀಯ ಚಿಂತನೆಗಳನ್ನು ತಮ್ಮ ಸಾಹಿತ್ಯದಲ್ಲಿ ಹೇಗೆ ಅಭಿವ್ಯಕ್ತಪಡಿಸಿದ್ದಾರೆಂಬುದರ ಬಗ್ಗೆ ಈ ಅಧ್ಯಯನ ಬೆಳಕು ಚೆಲ್ಲುತ್ತದೆ.

ಸ್ವರೂಪ ಮತ್ತು ವ್ಯಾಪ್ತಿ :-

ಸ್ವರೂಪ ಮತ್ತು ವ್ಯಾಪ್ತಿಯ ದೃಷ್ಟಿಯಿಂದ ನೋಡಿದಾಗ ಡಾ. ಸಿದ್ಧಲಿಂಗಯ್ಯನವರ ಕಾವ್ಯ, ನಾಟಕ, ಸಾಹಿತ್ಯ ಭಾಷಣಗಳಿಗೆ ಸೀಮಿತಗೊಳಿಸಿ ಅದರಲ್ಲಿ ಹೇಗೆ ದಲಿತರ ಜೀವನ ಹೋರಾಟ ಅಶೋತ್ತರಗಳ ಜೊತೆಗೆ ಡಾ.ಅಂಬೇಡ್ಕರ್‌ರವರ ಆಲೋಚನೆ ಕ್ರಮದಲ್ಲೇ ಹೊಸ ಚಿಂತನೆಗಳು ಅಭಿವ್ಯಕ್ತಗೊಂಡಿದೆ ಎಂಬ ವಿಷಯವನ್ನು ಗ್ರಹಿಸುವುದರ ಜೊತೆಗೆ ಡಾ.ಅಂಬೇಡ್ಕರ್ ಪ್ರಭಾವ ಕರ್ನಾಟಕ

ದಲಿತ ಚಳುವಳಿ, ದಲಿತ ಸಾಹಿತ್ಯದ ಮಟ್ಟಿಗೆ ತೀವ್ರತರವಾದ ಪ್ರಭಾವ ಹೇಗೆ ಬೀರಿದೆ ಎಂಬುದಕ್ಕೆ ಅನುಗುಣವಾಗಿ ಅಧ್ಯಯನ ನಡೆಸಲು ಪ್ರಯತ್ನಿಸಿರುತ್ತೇನೆ.

ಈ ಅಧ್ಯಯನದ ವ್ಯಾಪ್ತಿಯನ್ನು ನೋಡಿದಾಗ ಈ ಮೊದಲೇ ಹೇಳಿದಂತೆ "ಡಾ.ಸಿದ್ಧಲಿಂಗಯ್ಯನವರ ಸಾಹಿತ್ಯದಲ್ಲಿ ಡಾ.ಅಂಬೇಡ್ಕರ್ ಚಿಂತನೆಗಳು" ಕುರಿತ ಹಿನ್ನೆಲೆಯಲ್ಲಿ ವ್ಯಾಪಕವಾದ ಅಧ್ಯಯನ ನಡೆದಿಲ್ಲ. ಈ ಕಾರಣದಿಂದಾಗಿ ಈ ವಿಷಯದ ಬಗ್ಗೆ ಹಲವು ಆಕರಗಳಿಂದ ವಿಷಯಗಳನ್ನು ಗ್ರಹಿಸಿ ಅದನ್ನು ಸರಿಯಾದ ಕ್ರಮದಲ್ಲಿ ವಿಶ್ಲೇಷಿಸುವ ಒಂದು ಕಾರ್ಯದಿಂದಾಗಿ ಈ ವಿಷಯವನ್ನು ಎಂ.ಫಿಲ್ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿದ್ದು ನನ್ನ ಮಾರ್ಗದರ್ಶಕರಾದ ಡಾ.ಕೆ.ವಿ.ಚಂದ್ರಣ್ಣಗೌಡರ ಸಲಹೆ ಸೂಚನೆ, ಮಾರ್ಗದರ್ಶನದ ಮೇರೆಗೆ ಈ ವಿಷಯವನ್ನು ತಲಸ್ಪರ್ಶಿಯಾಗಿ ಅಧ್ಯಯನ ನಡೆಸಿದ್ದೇನೆ.

ಅಡಿ ಟಿಪ್ಪಣಿಗಳು

೧. ಸಂಬಂಜ ಅನ್ನೋದು ದೊಡ್ಡದು ಕನಾ, ಅಪ್ಪಗೆರೆ ಸೋಮಶೇಖರ, ಪುಟ ಸಂಖ್ಯೆ-೪೨

೨. ಬಡವರ ನಗುವಿನ ಶಕ್ತಿ, ಸಂ.ಎಚ್.ದಂಡಪ್ಪ, ಪುಟ-೧೫

೩. ಅದೇ, ಪುಟ-೧೮

ಅಧ್ಯಾಯ -೨

ಭಾರತದಲ್ಲಿ ಅಂಬೇಡ್ಕರ್ ಚಿಂತನೆಗಳು

೨.೧ ಡಾ. ಅಂಬೇಡ್ಕರ್‌ರವರ ಬಾಲ್ಯ ಜೀವನ :-

ಡಾ.ಭೀಮರಾವ್ ಅಂಬೇಡ್ಕರ್‌ರವರು ಜಗತ್ತಿನ ಮಾನವೀಯ ಚಿಂತಕರ ಸಾಲಿನಲ್ಲಿ ನಿಲ್ಲುವ ಮಹಾನ್ ವ್ಯಕ್ತಿಯಾಗಿದ್ದಾರೆ. ಭಾರತದಲ್ಲಿ ದಲಿತ, ಹಿಂದುಳಿದ, ಶೋಷಿತ ಸಮಾಜದ ದನಿಯಾಗಿ, ಅವರ ಎಲ್ಲಾ ನ್ಯಾಯಯುತ ಹೋರಾಟ ಚಳುವಳಿಗಳ ಸ್ಫೂರ್ತಿ, ಪ್ರೇರಣೆಯಾಗಿ ಬಂದವರು, ಈಗಲೂ ಅವರಿಗೆ ಶಕ್ತಿಯಾಗಿ ಮುನ್ನಡೆಸುತ್ತಿರುವ ಧೀಮಂತ ವ್ಯಕ್ತಿಯಾಗಿದ್ದಾರೆ. ಏಕೆಂದರೆ ಇವರಿಗೆಲ್ಲಾ ಅನ್ಯಾಯವನ್ನು ಖಂಡಿಸುವ ಧೈರ್ಯವನ್ನು, ತನಗೆ ನ್ಯಾಯವಾಗಿ ದೊರೆಯಬೇಕಾಗಿರುವ ಹಕ್ಕನ್ನು, ಸಮಾಜದ ಸ್ಥಾನ-ಮಾನ, ಸಮಾನತೆ, ಸ್ವಾತಂತ್ರ್ಯ ಪಡೆಯುವ ಛಲ, ಸ್ವಾಭಿಮಾನ, ಆತ್ಮವಿಶ್ವಾಸವನ್ನು ಚಿಗುರಿಸಿದವರೇ ಡಾ.ಬಿ.ಆರ್.ಅಂಬೇಡ್ಕರ್‌ರವರು.

ಇವರು ನಿಮ್ನ ವರ್ಗಗಳಿಗೆ ವ್ಯಕ್ತಿಯಾಗಿರದೇ ಅವರ ಭಕ್ತಿಯಾಗಿ, ಶಕ್ತಿಯಾಗಿ ಹೊರಹೊಮ್ಮಿದವರು. ಶಿಕ್ಷಣ, ಸಂಘಟನೆ, ಹೋರಾಟದ ಮಂತ್ರಗಳನ್ನು ಭಿತ್ತಿ, ಪುರೋಹಿತಶಾಹಿ ವ್ಯವಸ್ಥೆ ಹೆಣೆದಿದ್ದ ವ್ಯೂಹದಿಂದ ಹೊರಬರುವ ಮಾರ್ಗವನ್ನು ಅವರಿಂದ ಬಿಡುಗಡೆ, ಮುಕ್ತಿಯನ್ನು ದೊರಕಿಸಿಕೊಟ್ಟವರು. ಇಡೀ ದೇಶದ ಹಿಂದೂಗಳು ಬ್ರಿಟಿಷರ ಗುಲಾಮತನದಿಂದ ಮುಕ್ತಿ ಪಡೆಯಲು ಸತತ ಸತ್ಯಾಗ್ರಹವನ್ನು ನಡೆಸಿ ಹೇಗೆ ಬಿಡುಗಡೆ ಪಡೆಯುವ ದಾರಿಯಲ್ಲಿ ಗಾಂಧೀಜಿ ದೇಶದ ಹಿಂದೂಗಳಿಗೆ ಮಹಾತ್ಮರಾದರೋ ಹಾಗೆಯೇ ಈ ದೇಶದಲ್ಲಿಯೇ ಹುಟ್ಟಿ, ಈ ದೇಶದ ಭವ್ಯ ಪ್ರಜೆಗಳಾಗಿದ್ದರೂ ಕೂಡ ಮೇಲ್ವರ್ಗದ ಉಪಟಳಕ್ಕೆ, ಸ್ವಾರ್ಥದಿಂದ ಗುಲಾಮತನದಲ್ಲಿ ಹೆಣಗಿ, ನರಳಿದವರು. ಅವರನ್ನು ಪ್ರಾಣಿಗಳಿಗಿಂತ ಕೀಳು ಸ್ಥಿತಿಯ ಬದುಕು ನಡೆಸುತ್ತಿದ್ದ ನಿಮ್ನ ವರ್ಗಗಳ ಜೀವನಕ್ಕೆ ಜ್ಞಾನಜ್ಯೋತಿಯಾಗಿ, ಅವರ ಪಾಲಿನ ದೈವವಾಗಿ, ಅವರ ರೀತಿ-ನೀತಿಗಳನ್ನೇ ಬದಲಾಯಿಸಿ ಅವರ ಬದುಕಿಗೊಂದು ಅರ್ಥ ಕಲ್ಪಿಸಿದವರು. ಮನುಷ್ಯರನ್ನು ಮನುಷ್ಯರಾಗಿ ನೋಡಿ ಇಲ್ಲವೇ ಅವರನ್ನು ಸ್ವತಂತ್ರವಾಗಿ ಬಿಟ್ಟುಬಿಡಿ ಎಂದು ಮೇಲ್ವರ್ಗದ ಅಸಮಾನತೆ, ಶೋಷಿತರ ಮನಸ್ಸುಗಳಿಗೆ ಹೇಳಿದವರು. ಹೋರಾಟ, ಚಿಂತನೆಗಳಿಂದ ಕಾನೂನು ರೀತಿಯಲ್ಲಿ ಸಮಾನತೆಯನ್ನು ತಂದು, ಸ್ವಾತಂತ್ರ್ಯ ಜೀವನ ನಡೆಸಲು ಅನುವು ಮಾಡಿಕೊಟ್ಟು, ನಿಮ್ನ ವರ್ಗಗಳು ಎಲ್ಲಾ ಕ್ಷೇತ್ರಗಳಲ್ಲಿಯೂ ತಮ್ಮ ಬುದ್ಧಿಶಕ್ತಿ, ಸಾಮರ್ಥ್ಯಗಳನ್ನು ತೋರಿಸಲು ಕಾರಣೀಕರ್ತರಾದವರು. ದಲಿತ ಜೀವನ ನಿರ್ಮಾಣದ

ಧಾರ್ತ್ಯ, ಭಾರತೀಯ ನಿಮ್ನ ವರ್ಗಗಳ ಮಹಾತ್ಮ, ಮಾನವೀಯತೆ ಬಂಧು, ಹೋರಾಟದ ಕಿಡಿ, ಕ್ರಾಂತಿಕಾರಿ, ದಲಿತಸೂರ್ಯ, ಭಾರತರತ್ನ ಬಾಬಾಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್‌ರವರು.

"ಪ್ರಪಂಚದ ಮಹಾಪುರುಷರ ಚರಿತ್ರೆಗಳ ಮೇಲೆ ಕಣ್ಣಾಡಿಸಿದರೆ ಯಾವೊಬ್ಬ ವ್ಯಕ್ತಿಯೂ ತನ್ನ ಜನ್ಮ ಬಲದಿಂದಲೇ ಮಹಾನ್ ವ್ಯಕ್ತಿ ಎನಿಸಿಕೊಳ್ಳಲಾರನೆಂಬ ಸಂಗತಿ ಮನದಟ್ಟಾಗುವುದು."[೧] ಯಾರೇ ಆದರೂ ಅವರು ಜಾತಿಯಿಂದ ಶ್ರೇಷ್ಠರಾಗಲು ಸಾಧ್ಯವಿಲ್ಲ. ಅವರ ಗುಣವ್ಯಕ್ತಿತ್ವ, ಬುದ್ಧಿವಂತಿಕೆ, ಹೃದಯವಂತಿಕೆಯಿಂದ ಶ್ರೇಷ್ಠರಾಗುತ್ತಾರೆ. ಇದಕ್ಕೆ ನಮ್ಮ ಭಾರತೀಯರಿಗೆ ಡಾ.ಅಂಬೇಡ್ಕರ್ ಜೀವಂತ ಉದಾಹರಣೆಯಾಗಿ ನಿಲ್ಲುತ್ತಾರೆ. ಕೆಲವು ನಾಯಕರು ಕ್ರಾಂತಿಕಾರಿಗಳು, ಮಹಾತ್ಮರು, ಸಮಾಜದಲ್ಲಿನ ಮೇಲು-ಕೀಳುಗಳ ತಾರತಮ್ಯ, ವರ್ಣಭೇದನೀತಿ, ಗುಲಾಮತನ ತೊಲಗಬೇಕೆಂದು, ಮತ್ತೆ ಕೆಲವರು ಪ್ರಜಾಪ್ರಭುತ್ವದ ರಾಜ್ಯಾಡಳಿತ ಜಾರಿಗೆ ಬರಬೇಕೆಂದು ಸತತ ಪ್ರಯತ್ನಗಳಲ್ಲಿ ತೊಡಗಿರುವುದನ್ನು ಇತಿಹಾಸ ಪುಟಗಳಲ್ಲಿ ನೋಡುತ್ತೇವೆ, ನಾವು ಓದುತ್ತೇವೆ. ಅದೇ ಇತಿಹಾಸದ ಸುವರ್ಣಪುಟಗಳಲ್ಲಿ ಈ ಎರಡನ್ನು ಹೋರಾಟದ ಮೂಲಕ ಸಾಧಿಸಿ ತೋರಿಸಿದವರು ಡಾ.ಬಿ.ಆರ್.ಅಂಬೇಡ್ಕರ್.

"ಪತಿತಪಾವನವೆಂದು ಬಿರುದುವೆತ್ತ ಭಗವಂತ ದೀನ-ದಲಿತೋದ್ಧಾರಕ್ಕಾಗಿ ಬುದ್ಧ, ಕಬೀರರ ರೂಪದಲ್ಲಿ ಜನ್ಮಧಾರಣೆ ಮಾಡಿದಂತೆ ಮತ್ತೆ ಅವತರಿಸಬಾರದೇ?"[೨] ಎಂಬ ಮೊರೆಗೆ ಸನ್ಯಾಸಿಯೂ ಕೂಡ ರಾಮಜೀ ಸತ್ಪಾಲ್ ಭೀಮಬಾಯಿಗೆ ಆಶೀರ್ವಚನ ನೀಡುತ್ತಾರೆ. ಹೇಗೆ ಬುದ್ಧ ಜನಿಸಿದಾಗ ಸನ್ಯಾಸಿಗಳು ಆ ದಿವ್ಯ ಮಗುವನ್ನು ಕಂಡು ಈತ ಜಗತ್ತಿನ ಕತ್ತಲನ್ನು ತೊಲಗಿಸಿ ಬೆಳಕು ನೀಡುವ ಗುರುವಾಗುತ್ತಾನೆ. ಇಲ್ಲವೇ ಜಗತ್ತನ್ನು ಆಳುವ ರಾಜ ಆಗುತ್ತಾನೆ ಎನ್ನುವ ಋಷಿಮುನಿಯ ವಾಕ್ಯದಂತೆ ಇಲ್ಲಿ ಹುಟ್ಟಲಿರುವ ಆ ದಿವ್ಯ ಜ್ಯೋತಿಯ ಬಗ್ಗೆ ಹೀಗೆ ನುಡಿಯುತ್ತಾರೆ. "ಮಹಾಪುರುಷ ನಿಮಗೆ ಮಗನಾಗಿ ಜನಿಸುತ್ತಾನೆ. ನಿನ್ನ ವಂಶಕ್ಕವನು ಬೆಳಕಾಗುತ್ತಾನೆ; ರಾಷ್ಟ್ರದ ಜ್ಯೋತಿಯಾಗುತ್ತಾನೆ. ದೀನದಲಿತರಿಗೆ ತಾರಕಶಕ್ತಿಯಾಗುತ್ತಾನೆ. ಜಗತ್ತಿನಲ್ಲೆಲ್ಲ ಅವನ ಕೀರ್ತಿ ಪಸರಿಸುತ್ತದೆ."[೩] ಎಂದು ಹೇಳುತ್ತಾರೆ. ಅದರಂತೆಯೇ ಭೀಮಬಾಯಿಯ ಹೊಟ್ಟೆಯಲ್ಲಿ ಭಾರತ ದೇಶದ ತೇಜಃಪುಂಜ, ಬುದ್ಧ, ಬಸವರ ಸಮಾನತೆಯ ಸಮಾಜ, ಮಾನವೀಯ ಮೌಲ್ಯಗಳ ಜೀವನ ನಡೆಸುವ ಕನಸನ್ನು ನನಸು ಮಾಡುವ ಅಮರಜ್ಯೋತಿ ಭೂಮಿಗೆ ಭೀಮನ ರೂಪದಲ್ಲಿ ಬಂದಿತು.

ಮಹಾರಾಷ್ಟ್ರದ ಅಸ್ಪೃಶ್ಯ ಸಮುದಾಯಗಳಲ್ಲಿ ಮಹಾರ್ ಎಂಬ ಸ್ವಾಭಿಮಾನಿ ಸಮುದಾಯದಲ್ಲಿ ಭೀಮರಾವ್ ಅಂಬೇಡ್ಕರ್‌ರವರು ರತ್ನಗಿರಿ ಜಿಲ್ಲೆಯ ಮುಂಡಣಗಡ ತಾಲ್ಲೂಕಿನ ಅಂಬಾವಾಡೆಯಲ್ಲಿ ಜನನ ಎಂಬುದು ಜನಜನಿತವಾಗಿದೆ. ಇದು ಅವರ ಪೂರ್ವಿಕರ ಸ್ಥಳವಾಗಿದ್ದು, ಮೂಲತಃ ಅಂಬೇಡ್ಕರ್ ಜನಿಸಿದ್ದು ಇಂದಿನ ಮಧ್ಯಪ್ರದೇಶದ ಮಹೂ/ಮ್ಹೌನಲ್ಲಿ ಭೀಮರಾವ್ ರಾಮಜಿ ಸತ್ಪಾಲರಿಗೆ ೧೪ನೇ ಮಗನಾಗಿ ೧೮೯೧ ಏಪ್ರಿಲ್ ೧೪ರಲ್ಲಿ ಜನಿಸಿದರು. ಮಗು ತೆಳ್ಳಗೆ ಗುಂಡಗೆ

ಮುದ್ದು ಮುದ್ದಾಗಿ ಇರುವ ಕಾರಣ ಅವನನ್ನು ಭೀಮ ಎಂದು ಕರೆದರು. ಅವರ ಆಪ್ತೇಷ್ಟರೆಲ್ಲ 'ಭೀವಾ' ಎಂದು ಕರೆಯುತ್ತಿದ್ದರು. ೧೪ ಮಕ್ಕಳಲ್ಲಿ ಉಳಿದವರು ಐವರು ಭೀಮನಿಗೆ ಹಿರಿಯವರಾಗಿ ಬಲರಾಮ್, ಆನಂದರಾಮ್ ಎಂಬ ಇಬ್ಬರು ಗಂಡುಮಕ್ಕಳು ಮಂಜುಳ ಮತ್ತು ತುಳಸಿ ಎಂಬ ಹೆಣ್ಣುಮಕ್ಕಳು ಇವರಿಗೆಲ್ಲ ಗೂನುಬೆನ್ನಿನಿಂದಾಗಿ ಸಂಸಾರ ಸುಖದಿಂದ ವಂಚಿತೆಯಾಗಿದ್ದ ಭೀಮಬಾಯಿಯ ನಾದಿನಿ ಮೀರಾಳೆ ನಿಜವಾದ ತಾಯಿಯಾಗಿದ್ದಳು. ಭೀಮನೇ ಕೊನೆಯವ, ಅದಕ್ಕೆ ಅವನಲ್ಲಿ ಇವರಿಗೆ ವಿಶೇಷ ಪ್ರೀತಿ ವಾತ್ಸಲ್ಯ ಭೀಮ ಆಕೆಯನ್ನು ಬಿಟ್ಟಿರುತ್ತಿರಲಿಲ್ಲ. ಅತ್ತಾಗ ಆಕೆಯೇ ಎತ್ತಿಕೊಳ್ಳಬೇಕು. ಕೈತುತ್ತು ಕೊಡಬೇಕು, ಸ್ನಾನ ಮಾಡಿಸಬೇಕು, ರಾತ್ರಿ ಆಕೆಯ ಬಳಿಯೇ ಮಲಗಬೇಕು. "ಎಳೆತನದಲ್ಲಿ ಭೀಮ ಬಲುತುಂಟನಾಗಿದ್ದನು. ಮನೆಯ ಬಳಿಯಲ್ಲಿದ್ದ ಆಲದಮರದ ರಂಬೆ –ಕೊಂಬೆಗಳ ಮೇಲೆ ಜಗಿದಾಡುವುದು, ಇತರ ಮಕ್ಕಳೊಡನೆ ಜಗಳ ಕಾಯುವುದು, ಏನಾದರೂ ತುಂಟಾಟ ಮಾಡುವುದು ಅವನ ನಿತ್ಯದ ಕಸುಬಾಗಿತ್ತು. ದಿನನಿತ್ಯ ಅವನ ತಂಟೆತಕರಾರುಗಳನ್ನು ಬಗೆಹರಿಸಲು ಮನೆಯವರು ಸಾಕು ಸಾಕೆನಿಸಿಬಿಡುತ್ತಿತ್ತು."[9]

ಭೀಮನಿಗೆ ಆರು ವರ್ಷ ವಯಸ್ಸಾಗಿದ್ದಾಗ ತಾಯಿ ಭೀಮಬಾಯಿ ತೀರಿಕೊಂಡಳು. ಆಗ ಮೀರಾ ಅವರಿಗೆ ತಾಯಿಯಾಗಿ ನಿಂತಳು. ಪ್ರೀತಿಯಿಂದ ಮುದ್ದಾಗಿ ಸಾಕಿದಳು. "ಮುದ್ದಿನಿಂದ ಅವನು ಉಬ್ಬಿಹೋಗಲಿಲ್ಲ. ಚೇಷ್ಟೆಯ ಪುಟ್ಟನಾಗಲಿಲ್ಲ. ಹೊರಗಿನವರೊಂದಿಗೆ ಆಟಕೂಟಗಳಲ್ಲಿಯೂ ಹೆಚ್ಚಾಗಿ ಭಾಗವಹಿಸುತ್ತಿರಲಿಲ್ಲ. ಕೆಲವು ವೇಳೆ ಏಕಾಂತದಲ್ಲಿದ್ದಾಗ ಅವನು ಗಾಢಚಿಂತೆಯಲ್ಲಿದ್ದಂತೆ, ಬಾಹ್ಯಸ್ಥಿತಿಯನ್ನು ಮರೆತಂತೆ ಕುಳಿತಿರುತ್ತಿದ್ದನು."[3] ಅವನ ತಾಯಿಯ ಮರಣ ಭೀಮನಿಗೆ ಅಷ್ಟು ದೊಡ್ಡ ಆಘಾತವನ್ನೇ ಉಂಟು ಮಾಡಿತು. ಇನ್ನು ಮನೆಯ ವಾತಾವರಣ ಅಪೂರ್ವವಾದ ಬೆಳವಣಿಗೆಗೆ ಸಹಾಯವಾಗಿತ್ತು. ಭಾಷೆಯ ಮೇಲೆ ಪ್ರಭುತ್ವ ಸಾಧಿಸಲು, ಸನ್ನಡತೆಯನ್ನು ರೂಢಿಸಿಕೊಳ್ಳಲು ಸಾಧ್ಯವಾಗುವಂತೆ ಮಾಡಿತು.

ಹೇಗೆಂದರೆ ತಂದೆ ರಾಮಾಜೀ ಸಕ್ಪಾಲ್ ಮಕ್ಕಳಿಗೆ ಮಹಾಭಾರತ, ರಾಮಾಯಣಗಳನ್ನು ಓದಿ ಹೇಳುತ್ತಿದ್ದರು. ಮರಾಠಿ ಸಂತ ಕವಿಗಳಾದ ಮಾರೋಪಂತ, ಮುಕ್ತೇಶ್ವರ, ತುಕರಾಂರ ಅಭಂಗಗಳನ್ನು ಹಾಡುತ್ತಿದ್ದರು. ಹಾಗೆಯೇ ಪ್ರತಿದಿನ ಬೆಳಗ್ಗೆ ಮತ್ತು ಸಂಜೆ ಮಕ್ಕಳಿಗೆ ಭಜನೆ, ಕಬೀರರ ದೋಹ(ತ್ರಿಪದಿ)ಗಳನ್ನು ಹೇಳಿಕೊಟ್ಟು, ಅವರ ಬಾಯಿಯಿಂದ ಹಾಡಿಸುತ್ತಿದ್ದರು. ಮಕ್ಕಳಿಗೆ ಆಧ್ಯಾತ್ಮಿಕ ಶಿಕ್ಷಣವಲ್ಲದೇ, ಲೌಕಿಕ ಶಿಕ್ಷಣದಲ್ಲಿಯೂ ಅನುಭವವನ್ನು ಹೊಂದಿದ ಕಾರಣ ಮನೆಯ ಪಾಠ ಹೇಳಿ ಕಲಿಸುತ್ತಿದ್ದರು. ಅವರು ಶಿಕ್ಷಕರಾಗಿ, ಮುಖ್ಯೋಪಾಧ್ಯಯರಾಗಿ ಕೆಲಸ ಮಾಡಿದ ಅನುಭವವಿತ್ತು. ಅದಕ್ಕೆ ಅವರಿಗೆ ಇಂಗ್ಲೀಷ್, ಗಣಿತ, ವ್ಯಾಕರಣ ವಿಷಯಗಳನ್ನು ಚೆನ್ನಾಗಿ ಕಲಿಸುತ್ತಿದ್ದರು.

ರಾಮಾಜೀ ಸಕ್ಪಾಲ್ ಕಬೀರರ ಸಂದೇಶಗಳು, ಮಹಾತ್ಮ ಜ್ಯೋತಿ ಬಾಪುಲೆಯವರ ಜೀವನ ಮಾರ್ಗದಲ್ಲಿ ಅವರ ನಿಷ್ಠ ಅನುಯಾಯಿಯಾಗಿದ್ದರು. ಅವರು ಮಾಂಸಾಹಾರ, ಮದ್ಯಪಾನ ಮುಂತಾದ ಮಾದಕ ವಸ್ತುಗಳಿಂದ ದೂರವಿದ್ದರು. ಅಲ್ಲದೆ ಅನ್ಯಾಯವನ್ನು ಖಂಡಿಸುವ ಕೆಚ್ಚೂ ಅವರಲ್ಲಿತ್ತು. "೧೮೯೨ರಲ್ಲಿ ಬ್ರಿಟಿಷ್ ಆಡಳಿತ ಆದೇಶವೊಂದನ್ನು ಹೊರಡಿಸಿ, ಸೇನೆಯಲ್ಲಿ ಮಹಾರ್‌ರನ್ನು ಸೇರಿಸಿಕೊಳ್ಳುವುದಿಲ್ಲ ಎಂದು ಪ್ರಕಟಿಸಿದಾಗ ಆ ಆದೇಶದ ವಿರುದ್ಧ ಪ್ರತಿಭಟನೆ ಮಾಡಿದ್ದರು. ಇಂಥ ಆದೇಶವನ್ನು ಹಿಂತೆಗೆದುಕೊಳ್ಳುವ ವಿಚಾರದಲ್ಲಿ ಬ್ರಿಟಿಷರಿಗೆ ಸಲ್ಲಿಸಬೇಕಾದ ಮನವಿಯನ್ನು ಸಿದ್ಧಪಡಿಸುವಂತೆ ಕೋರಿ, ಅವರು ರಾನಡೆ ಅವರನ್ನು ನೇರವಾಗಿ ಸಂಪರ್ಕಿಸಿ, ಬ್ರಿಟಿಷ್ ಗೌವರ್ನರ್ ಅವರನ್ನು ಒಮ್ಮೆ ಭೇಟಿ ಮಾಡಿ ಅಸ್ಪೃಶ್ಯರ ಅಭಿವೃದ್ಧಿಗಾಗಿ ಹಲವು ಸಲಹೆಗಳನ್ನು ನೀಡಿದ್ದರು"[೬] ಹೀಗೆ ತಂದೆಯ ಪರೋಪಕಾರಿ ಬುದ್ಧಿ, ಅಭೂತದಯೆ, ಸತ್ಯನಿಷ್ಠೆ, ನ್ಯಾಯಪರತೆ ಮತ್ತು ನಿರ್ಭಯತೆಗಳು ಭೀಮನಿಗೆ ಅರಿವಿಲ್ಲದಂತೆಯೇ ಸೂಕ್ಷ್ಮಮತಿಯ ಎಳೆಯ ಮನದಲ್ಲಿ ಮುದ್ರಿತಗೊಳ್ಳುತ್ತಿದ್ದವು, ರಕ್ತಗತವಾಗುತ್ತ ಬಂದಿದ್ದವು.

ಮನೆಯಲ್ಲಿನ ಆರ್ಥಿಕ ಕಗ್ಗಂಟ್ಟು, ತಾಯಿಯ ಸಾವಿನ ಸಂಕಟ, ಮೀರಾಳ ಮಮತೆ, ಕಾರುಣ್ಯ ಪ್ರೀತಿ, ಅಪ್ಪನ ಧಾರ್ಮಿಕ ಮತ್ತು ಜ್ಞಾನದೊಂದಿಗೆ, ಸಮಾಜ ತಿಳುವಳಿಕೆಯ ಅರಿವಿನೊಂದಿಗೆ ಮುದ್ದುಭೀಮನು ತನ್ನ ಬಾಲ್ಯವನ್ನು ಕಳೆದನು.

೨.೨ವಿದ್ಯಾಭ್ಯಾಸ :-

ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಭಾರತೀಯ ಸಾಮಾಜಿಕತೆಯಲ್ಲಿ ಮಾನವೀಯ ಉಸಿರಾಟವಿಲ್ಲದಿದ್ದ ಕಾಲಘಟ್ಟದಲ್ಲಿ ಜನಿಸಿದವರು. ಜಾತಿವ್ಯವಸ್ಥೆಯ ವಿಷವರ್ತುಲದೊಳಗೆ ಮೂಡಿಬಂದ ದೈತ್ಯ ಪ್ರತಿಭೆ. ಇವರ ಬಾಲ್ಯಜೀವನ ಸಾಮಾಜಿಕ ನೋವಿನ ಮಡುವಿನಲ್ಲಿಟ್ಟು ಬೆಳೆಯುತ್ತಾ ಅದರ ಹಾಲಹಲವನ್ನು ನುಂಗಿಕೊಂಡು ಮೇಲೆದ್ದ ಬೆಂಕಿಯುಂಡೆಯಾಗಿದ್ದಾರೆ.

ಭೀಮನ ತಂದೆ ಸೈನಿಕ ಶಾಲೆಯ ಮುಖ್ಯೋಪಾಧ್ಯಾಯ ವೃತ್ತಿಯಿಂದ ನಿವೃತ್ತರಾದರು. ಆಗ, ಭೀಮನಿಗೆ ಎರಡು ವರ್ಷ. ಅವರು ಮೇಹಿಯಿಂದ ಕೊಂಕಣ ಪ್ರದೇಶದ ದಾಪೋಲಿಗೆ ಸಂಸಾರ ಸಮೇತ ಬಂದರು. ಅಲ್ಲಿಯೇ ೫ ವರ್ಷದವನಾದಾಗ ಪ್ರಥಮಬಾರಿಗೆ ಪ್ರಾಥಮಿಕ ಶಾಲೆ ಸೇರಿದ್ದು. ದಾಪೋಲಿಯಲ್ಲಿ ಮಕ್ಕಳಿಗೆ ಶಿಕ್ಷಣದ ಸೌಕರ್ಯ ಒದಗಿಸಲಾರದೆಂದೆನಿಸಿ ರಾಮಾಜೀಯವರು ಪರಿವಾರ ಸಮೇತ ಮುಂಬಯಿಗೆ ಬಂದರು. ಅಲ್ಲಿಂದ ಅವರು ಸೈನ್ಯಾಧಿಕಾರಿಗಳಿಗೆ ಅರ್ಜಿ ಕಳುಹಿಸಿ ಸಾತಾರಾ ಪಿ.ಡ್ಲ್ಯೂ.ಡಿ. ಕಛೇರಿಯಲ್ಲಿ ಸ್ಟೋರ್‌ಕೀಪರ್ ಕೆಲಸಕ್ಕೆ ಸೇರಿ, ಅಲ್ಲಿನ ಮಿಲಿಟರಿ ಕ್ವಾರ್ಟಸ್‌ನಲ್ಲೇ ಉಳಿದುಕೊಂಡರು. ಭೀಮನ ಪ್ರಾಥಮಿಕ ಶಿಕ್ಷಣ ಇಲ್ಲೇ ಮುಂದುವರೆಯಿತು. ೧೯೦೦ ನವೆಂಬರ್ ೭

ರಂದು ಸಾತಾರಾದಲ್ಲೇ ಪ್ರಾಥಮಿಕ ಶಿಕ್ಷಣ ಮುಗಿಸಿಕೊಂಡು ತನ್ನ ಅಣ್ಣನೊಂದಿಗೆ ಪ್ರೌಢಶಾಲೆ ಪ್ರವೇಶಿಸಿದರು.

"ಒಂದು ದಿನ ಶಾಲೆ ತಪ್ಪಿಸುವ ಉದ್ದೇಶದಿಂದ ಭೀಮ ಮಳೆಯಲ್ಲಿ ಚೆನ್ನಾಗಿ ತೊಯ್ದಿಕೊಂಡು ಶಾಲೆ ತಲುಪಿದ. ಪೇಂಡ್ಸೆ ಎಂಬ ಶಿಕ್ಷಕರು ತಕ್ಷಣ ಅವನನ್ನು ತಮ್ಮ ಮನೆಗೆ ಕಳಿಸಿ ಬಟ್ಟೆ ಬದಲಾಯಿಸಿ ಬಂದು ತರಗತಿಯಲ್ಲಿ ಕೂಡುವಂತೆ ಮಾಡಿದರು. ಅಂದಿನಿಂದ ಛಲಗಾರಿಕೆ ಬಿಟ್ಟು ಬಿಡಬೇಕೆಂದು ನಿರ್ಧಾರ ಮಾಡಿದನಾದರೂ ಮುಂದೆ 'ಛಲಂ ಕುಲಂ' ಎಂಬ ತತ್ವ ಅವನ ಗುಣವಾಗಿ ಹೋಯಿತು"[2]

ಶಾಲಾ ದಿನಗಳಲ್ಲೇ ಭೀಮನಿಗೆ ಅಸ್ಪೃಶ್ಯತೆಯ ನರಕಯಾತನೆ ಅನುಭವವಾಯಿತು. ಓದು, ಬರಹಗಳಲ್ಲಿ ನಡೆ-ನುಡಿಗಳಲ್ಲಿ ಉಡುಗೆ-ತೊಡುಗೆಗಳಲ್ಲಿ ಇತರರಿಗಿಂತ ತಾನು ಕಡೆಯಲ್ಲವಾದರೂ ಸವರ್ಣೀಯ ಮಕ್ಕಳು ತನ್ನನ್ನೇಕೆ ಮುಟ್ಟಿಸಿಕೊಳ್ಳುತ್ತಿಲ್ಲ. ಮಡಿ ಮೈಲಿಗೆ ಭಾವನೆ ಅವನಲ್ಲಿ ಚಿಂತೆ ಗೀಡು ಮಾಡಿತು. ಭೀಮನಿಗೆ ಶಾಲೆಯ ದಿನಗಳಲ್ಲಿ ಹಟಮಾರಿತನ ತೋರಿ ತನಗೆ ಅನಿಸಿದ್ದನ್ನು ಸಾಧಿಸುವ ಛಲಗಾರನಾಗಿದ್ದನು.

ಬೇಸಿಗೆಯ ಒಂದು ದಿನ ಭೀಮ ತನ್ನ ಅಣ್ಣ ಮತ್ತು ಇನ್ನೊಬ್ಬ ಸಂಬಂಧಿ ಹುಡುಗನೊಂದಿಗೆ ತಂದೆಯನ್ನು ನೋಡಲು ಗೊರೆಗಾಂವ್‌ಗೆ ಪ್ರಯಾಣ ಹೊರಟರು. ಅವರು ಪಡಳಿ ರೈಲು ನಿಲ್ದಾಣದಲ್ಲಿ ಹಿಡಿದು ಮಸೂರಿನಲ್ಲಿಳಿದರು. ಅವರು ಬರೆದ ಪತ್ರ ತಂದೆಗೆ ತಲುಪದ ಕಾರಣ ರೈಲು ನಿಲ್ದಾಣಕ್ಕೆ ಬಂದಿರಲಿಲ್ಲ. ಅಲ್ಲಿಂದ ಮುಂದಿನ ದಾರಿ ಅವರಿಗೆ ತಿಳಿದಿರಲಿಲ್ಲ. ನಿಲ್ದಾಣದಲ್ಲಿ ಬಹಳ ಹೊತ್ತು ಕಾದ ಬಳಿಕ ಕೊನೆಗೆ ಸ್ಟೇಷನ್ ಮಾಸ್ಟರ್‌ನ ಸಹಾಯದಿಂದ ಎತ್ತಿನಗಾಡಿಯಲ್ಲಿ ಪ್ರಯಾಣ ಪ್ರಾರಂಭಿಸಿದರು. ಗಾಡಿಯವ ಸವರ್ಣೀಯ ಮುದುಕ ತನ್ನ ಗಾಡಿಯಲ್ಲಿರುವ ಮಕ್ಕಳು ಒಳ್ಳೆಯ ಬಟ್ಟೆ ಧರಿಸಿ ಕುಳಿತಿರುವ ಮಕ್ಕಳು ಅಸ್ಪೃಶ್ಯರು ಎಂಬುದು ಮೊದ ಮೊದಲು ತಿಳಿಯಲಿಲ್ಲ. ಅವರ ಮಾತುಕತೆಗಳಿಂದ ಚಿಂದಿ ಬಟ್ಟೆಯ, ಕೊಳಕು ಮೈಯ್ಯ ಮುದುಕನಿಗೆ ಅನುಮಾನವಾಗಿ "ಉಡುಪು ನೋಡಿದ್ರೆ ಉತ್ತಮರಂತೆ ಕಾಣ್ತಿರ. ಮಾತು ನೋಡಿದ್ರೆ ಮಹರ್‌ರಂತೆ ತೋರ್ತಿರ, ನಮ್ಮನ್ನಲ್ಲೇನ್ನಾದರೂ ಯಾಸೆ ಕಾಣ್ತಾದೇ? ಅಪ್ಪೋತ್ತಿನ್ಂದ ನೀವು ಹೊಲೆಯರ ವಿಷಯನ್ನೇ ಮಾತಾಡ್ತಿದ್ದೀರಿ, ನಿಮ್ಜಾತಿ ಯಾವುದು?" "ಜಾತಿ ಕಟ್ಕೊಂಡೇನು? ನಿಮ್ಮಬಟ್ಟೆಗಿಂತ ನಮ್ಮಬಟ್ಟೆ ಮಡಿಯಾಗಿಲ್ವ?" ಎಂದಾಗ ಇವರು ಅಸ್ಪೃಶ್ಯರೆಂದು ನಿರ್ಧಾರಿಸಿ ಕೂಡಲೇ ಗಾಡಿ ನಿಲ್ಲಿಸಿ. "ಲೋ ಬಡ್ಡೀ ಮಕ್ಕಳು, ನಿಮ್ಗೆಲ್ಲಾ ಅನ್ನ ಹೆಚ್ಚಾಗಿದೆ. ಕೊಬ್ಬಿ ಹೋಗಿದ್ದೀರಾ? ಮುಂಡೇವಾ ನಿಮ್ಗಿಷ್ಟು ಗೊತ್ತಾಗಬಾರದಾ? ಇನ್ನು ಕುಂತಿದ್ದೀರಲ್ಲೋ ಇಳಿರೋ ನನ್ಗಾಡಿ ಹೊಲಸಾಯ್ತು ಅದೆಷ್ಟು ನೀರುಬೇಕೋ ತೊಳೆಯಾಕೆ? ನಿಮ್ದರಿದ್ರ ಮುಖ ನೋಡಿದ್ಮೇಲೆ ಈ ದಿನದ ಸಂಪಾದನೆ ಸೊನ್ನೆ" ಎಂದು ಅವಾಚ್ಯ ಪದಗಳನ್ನು ಬಯ್ಯುತ್ತ

ಮಕ್ಕಳನ್ನು ಗಾಡಿಯಿಂದ ಗೊಬ್ಬರ ಕೆಡುವಂತೆ ಕೆಳಗೆ ಉರುಳಿಸಿದನು" ಅವನನ್ನು ಹೊಗಳಿ ಎರಡು ಪಟ್ಟು ಬಾಡಿಗೆ ಕೊಡುವುದಾಗಿ ಅವರು ಕೇಳಿದಾಗ ಆ ಮುದುಕನ ಮನಸ್ಸು ಅರಳಿತಾದರೂ ಗಾಡಿಯನ್ನು ಭೀಮನೇ ನಡೆಸಬೇಕಾಯಿತು. ಆತ ಕೆಳಗಿಳಿದು ಗಾಡಿಯ ಹಿಂದೆ ನಡೆದುಕೊಂಡು ಬರತೊಡಗಿದನು. ಪ್ರಯಾಣ ದೀರ್ಘವಾಗಿತ್ತು. ಬೇಸಿಗೆ ಕಾಲ ಆದ ಕಾರಣ ಬಿಸಿಲು ಜೋರಾಗಿತ್ತು. ಮಕ್ಕಳಿಗೆ ಬಾಯಾರಿಕೆಯಾಗಿತ್ತು. ಆ ಮಕ್ಕಳನ್ನು ಕಂಡು ಯಾರಲ್ಲೂ ಕನಿಕರ ಉಂಟಾಗಲಿಲ್ಲ. ದಾರಿಯಲ್ಲಿ ಕಂಡ ಜನರನ್ನು ಅವರು ಕೇಳಿದರೆ ಎಲ್ಲರೂ ಜಾತಿಯನ್ನೇ ಕೇಳುತ್ತಿದ್ದರೇ ವಿನಹಃ ನೀರು ಮಾತ್ರ ಕೊಡುತ್ತಿರಲಿಲ್ಲ. ಜಾತಿ ಗೊತ್ತಾದ ಬಳಿಕ ಗಲೀಜು, ಕೊಚ್ಚೆ ಗುಂಡಿಗಳನ್ನು ತೋರಿಸುತ್ತಿದ್ದರು. ಸುಮಾರು ಒಂದೂವರೆ ದಿವಸ ಕುಡಿಯಲು ನೀರು ಸಿಗಲಿಲ್ಲ. ಮರುದಿನ ಮಧ್ಯಾಹ್ನ ಅರೆ ಜೀವ ಅವಸ್ಥೆಯಲ್ಲಿ ಗೋರೆಗಾಂವ್ ತಲುಪಿದರು.

"ಒಮ್ಮೆ ಬಾಯಾರಿಕೆಯನ್ನು ತಾಳಲಾಗದೆ ಭೀಮನು ಹತ್ತಿರದಲ್ಲಿ ಕಂಡ ಸಾರ್ವಜನಿಕ ನಲ್ಲಿಯೊಂದರಲ್ಲಿ ನೀರು ಕುಡಿದು ಬಿಟ್ಟ. ವಿಷಯವನ್ನು ತಿಳಿದ ಹಿಂದೂ ಸವರ್ಣೀಯರು ಭೀಮನ ಬೆನ್ನ ಮೇಲೆ ಬಾಸುಂಡೆ ಬೀಳುವಂತೆ ಕಟ್ಟಿ ಹಾಕಿ ಥಳಿಸಿದರು"[೧೦]

"ಇನ್ನೊಮ್ಮೆ ಭೂಮಿತಿಯ ಸಿದ್ಧಾಂತವೊಂದನ್ನು ಕರಿ ಹಲಗೆಯ ಮೇಲೆ ಬಿಡಿಸಿ ತೋರಿಸಲು ಅಧ್ಯಾಪಕರು ಭೀಮನಿಗೆ ಆದೇಶ ನೀಡಿದರು. ಶಾಲಾ ವರ್ಗದೊಳಗಿನ ಮಕ್ಕಳೆಲ್ಲ ಅವಸರವಸರದಿದ್ದೆದ್ದು ಕರಿ ಹಲಗೆಯ ಬಳಿಗಿಟ್ಟಿದ್ದ ತಮ್ಮ ಊಟದ ಡಬ್ಬಿಗಳು ಅಪವಿತ್ರಗೊಳ್ಳುತ್ತವೆಂದು ಪಟಪಟನೇ ಅವುಗಳನ್ನು ಎತ್ತಿಕೊಂಡರು"[೧೧]

ಇಂಥ ಅವಮಾನಕರ ಘಟನೆಗಳಿಂದಾಗಿ ಭೀಮನ ಮನಸ್ಸು ಒಳಗೊಳಗೆ ಕುದಿಯತೊಡಗುತ್ತಿತ್ತು. ತನ್ನ ಜಾತಿಯವರು ಮೇಲು ಜಾತಿಯ ಮನೆಯ ಮಲವನ್ನು ತನ್ನ ತಲೆಯ ಮೇಲೆ ಹೊತ್ತು ಹೊರಗೆ ಬೀಸಾಡುತ್ತಿದ್ದರು. ಹಬ್ಬದ ದಿನಗಳಲ್ಲಿ ಅವರ ಎಂಜಲಿನ ಊಟಕ್ಕಾಗಿ ಕಾಯುತ್ತಿದ್ದ ದೃಶ್ಯಗಳನ್ನು ನೋಡಿ ನೋವಿನಿಂದ ಅತ್ತದುಂಟು. ಶಾಲೆಯಲ್ಲಿ ಎಲ್ಲರಂತೆ ತನ್ನ ಸಹಪಾಠಿಗಳ ಜೊತೆ ಅವರ ಸಾಲುಗಳಲ್ಲಿ ಕುಳಿತು ಕೊಳ್ಳುವಂತಿರಲಿಲ್ಲ. ಇವರು ಬರಿಯ ನೆಲದ ಮೇಲೆ ಅದು ಬಾಗಿಲ ಮೂಲೆಯಲ್ಲಿ ಗೋಣಿಚೀಲ ತಂದು ಹಾಸಿಕೊಂಡು ಕುಳಿತು ಕೊಳ್ಳಬೇಕಾಗಿತ್ತು. ಶಿಕ್ಷಕರು ಮಾಡುತ್ತಿದ್ದ ಪಾಠವೂ ಕೂಡ ಸರಿಯಾಗಿ ಕೇಳಿಸದ ಸ್ಥಿತಿ. ಶಿಕ್ಷಕರು ಕೂಡ ಇವರ ಕಡೆ ಗಮನ ನೀಡುತ್ತಿರಲಿಲ್ಲ. ಶಿಕ್ಷಕರು ಅವರ ಪುಸ್ತಕಗಳನ್ನು ಮುಟ್ಟುತ್ತಿರಲಿಲ್ಲ. ಕಾಫಿರೈಟಿಂಗ್ ಲೆಕ್ಕದ ನೋಟ್‌ಬುಕ್‌ಗಳನ್ನು ತೋರಿಸುವಾಗ ಅವರು ದೂರದಿಂದಲೇ ತೋರಿಸಬೇಕು. ಅವರು ಅದನ್ನು ಕಣ್ಣರಳಿಸಿ ನೋಡಿ ತಲೆಯಲ್ಲಾಡಿಸುತ್ತಿದ್ದರು. ಇಲ್ಲವೇ ಸನ್ನೆಗಳಿಂದಲೇ ಉತ್ತರಿಸುವ ಸ್ಥಿತಿಯಾಗಿತ್ತು. ಆಕಸ್ಮಾತಾಗಿ ಬಾಯಾರಿಕೆಯಾದರೆ ಮನೆಗೆ ಹೋಗುವವರಿಗೆ ಸಹಿಸಿಕೊಳ್ಳಬೇಕಾಗಿತ್ತು. ನೀರು

ಕುಡಿಯುವುದು ಅನಿವಾರ್ಯವಾದರೆ ಅವರಿಗೆ ಬಾಯಿಗೆ ಕೈಯೊಡ್ಡಿ ಕೊಳ್ಳಬೇಕು. ಆಗ ಸವರ್ಣೀಯರ ಮಕ್ಕಳು ೨-೩ ಅಡಿ ಎತ್ತರದಿಂದ ಲೋಟದಿಂದ ನೀರು ಸುರಿಯುತ್ತಿದ್ದರು.

ಇದರ ಜೊತೆಗೆ ಅಗಸ ಮಹರ್ ಜಾತಿಯವರು ಬಟ್ಟೆ ಒಗೆಯುವಂತಿಲ್ಲ. ಹಜಾಮ ಜಾತಿಯವರು ಇವರ ತಲೆಯ ಕೂದಲನ್ನು ಕತ್ತರಿಸುವಂತಿಲಿಲ್ಲ. ಭೀಮನಿಗೆ ಒಮ್ಮೆ ತಲೆಕೂದಲು ಜಾಸ್ತಿ ಬೆಳೆದಾಗ ಅವನ ಸೋದರತ್ತೆಯೇ ಭೀಮನ ತಲೆಗೂದಲನ್ನು ಕತ್ತರಿಸುತ್ತಿದ್ದರು. ಈ ರೀತಿಯ ಶೋಚನೀಯ ಪರಿಸ್ಥಿತಿಯಿಂದ ಭೀಮನ ಮನಸ್ಸು ಕಳವಳಗೊಂಡಿತು. ಆದರೂ ಶಾಲೆಯಲ್ಲಿ, ಸಮಾಜದಲ್ಲಿ ತನಗೆ ಸಿಗುತ್ತಿದ್ದ ನಿಂದನೆ, ಅವಮಾನ, ಅನ್ಯಾಯಗಳನ್ನು ಸಹಿಸಿಕೊಳ್ಳುವ ತಾಳ್ಮೆಯನ್ನು ಬೆಳಸಿಕೊಂಡು ಅವನ ಮನಸ್ಸು ಗಟ್ಟಿಯಾಗತೊಡಗಿತು. ಆದರೂ ಈ ವಾತಾವರಣದಿಂದಾಗಿ ಮನಸ್ಸು ರೋಸಿ ಹೋಗಿ ವಿದ್ಯಾಭ್ಯಾಸದ ಕಡೆಗೆ ಗಮನ ಕಡಿಮೆ ಮಾಡಿದನು. ತನಗೆ ಇಷ್ಟವಾದ ಹವ್ಯಾಸಗಳಲ್ಲಿ ನಿರಂತರವಾಗಿ ಕಾಲ ಕಳೆಯತೊಡಗಿದನು. ತೋಟಗಾರಿಕೆಯಲ್ಲಿ ಆಸಕ್ತಿ ಇದ್ದುದರಿಂದ ತನ್ನಲ್ಲಿರುವ ಕಾಸಿನಿಂದ ಹೊಸ ಸಸಿಗಳನ್ನು ಕೊಂಡು ತಂದು ಬೆಳೆಸುವುದನ್ನು ರೂಢಿಸಿಕೊಂಡನು. ನಂತರ ದನ ಮತ್ತು ಮೇಕೆಗಳನ್ನು ಮೇಯಿಸುವುದರ ಕಡೆಗೆ ಗಮನಕೊಟ್ಟನು. ಶಾಲೆಯಿಂದ ಮನೆಗೆ ಬಂದ ಮೇಲಂತೂ ಅಲೆದಾಡಲು ಹೊರಗಡೆ ಹೋಗಿ ಬಿಡುತ್ತಿದ್ದನು. ಕೊನೆಗೆ ಅವನು ಸಾತಾರಾ ರೈಲು ನಿಲ್ದಾಣಕ್ಕೆ ಹೋಗಿ ಕೂಲಿ ಕೆಲಸವನ್ನು ಮಾಡಿದ. ಆದರೆ ಅದು ಸೋದರತ್ತೆಗೆ ತಿಳಿದು ತುಂಬ ನೋವು ಪಟ್ಟುಕೊಂಡಿದ್ದನ್ನು ಕಂಡು ಅಂಥ ಕೆಲಸಕ್ಕೆ ಮತ್ತೇ ಕೈ ಹಾಕಲಿಲ್ಲ.

ರಾಮಾಜಿಯವರು ಮನಸ್ಸಿಲ್ಲದ ಮನಸ್ಸಿನಿಂದ ಮಕ್ಕಳ ಪೋಷಣೆಗಾಗಿ ಎರಡನೇ ಮದುವೆಯಾದರು. ಭೀಮನ ಬಗ್ಗೆ ಮಲತಾಯಿಗೆ ಅಷ್ಟೇನೂ ಪ್ರೀತಿ ಇರಲಿಲ್ಲವಾದ್ದರಿಂದ ತನ್ನ ತಾಯಿಯ ಉಡುಪುಗಳನ್ನು ಈಕೆ ಧರಿಸಿದರೆ ಇವನಿಗೆ ಇಷ್ಟವಾಗುತ್ತಿರಲಿಲ್ಲ. ಈ ಕಾರಣಕ್ಕಾಗಿಯೇ ತಂದೆಯ ಹಣಕಾಸಿನಿಂದ ತಾನು ವಿದ್ಯಾಭ್ಯಾಸ ಮಾಡಬಾರದೆಂದು ಮುಂಬಯಿಯಲ್ಲಿ ಬಟ್ಟೆ ಗಿರಣಿಗಳಲ್ಲಿ ಕೆಲಸಕ್ಕೆ ಸೇರಿ ಹಣ ಸಂಪಾದನೆ ಮಾಡಬೇಕೆಂದು ತೀರ್ಮಾನಿಸಿದನು.

"ಮುಂಬಯಿಗೆ ಹೋಗಲು ಹಣ ಬೇಕಾದ್ದುದರಿಂದ ಅದಕ್ಕೆ ಅತ್ತೆ ಸೊಂಟದಲ್ಲಿ ಸಿಕ್ಕಿಸಿಕೊಳ್ಳುತ್ತಿದ್ದ ಚೀಲದಿಂದ ಹಣ ಕದಿಯಲು ನಿರ್ಧರಿಸಿದನು. ಮೂರು ದಿನ ನಿರಂತರವಾಗಿ ಪ್ರಯತ್ನಿಸಿ ವಿಫಲನಾದ. ನಾಲ್ಕನೇ ದಿನ ಪ್ರಯತ್ನಿಸಿದಾಗ ಚೀಲ ತನ್ನದಾಯಿತು. ಆದರೆ ಅದರಲ್ಲಿ ಕೇವಲ ಅರ್ಧ ಆಣೆ ಇತ್ತು. ನಾಲ್ಕು ದಿನ ನಾನು ನಡೆಸಿದ ಪ್ರಯತ್ನಿಸಿದ ಬಗ್ಗೆ ನನ್ನಲ್ಲೇ ಜಿಗುಪ್ಸೆ ಮೂಡತೊಡಗಿತು. ಆ ರಾತ್ರಿ ದೃಢನಿರ್ಧಾರ ಮಾಡಿದೆ. ಬಹುಶಃ ನನ್ನ ಜೀವನದಲ್ಲಿ ಅದೊಂದು ಹೊಸ ನಿರ್ಧಾರವಾಯಿತು. ನಾನು ಇಂಥ ಹುಚ್ಚು ಹವ್ಯಾಸಗಳನ್ನು ಬಿಟ್ಟು ಚೆನ್ನಾಗಿ ವಿದ್ಯಾಭ್ಯಾಸ ಮಾಡುವ ನಿರ್ಧಾರ ಮಾಡಿದೆ. ಈಗ ಚೆನ್ನಾಗಿ ವಿದ್ಯಾಭ್ಯಾಸ ಮಾಡಿದರೆ ಮುಂದೆ ನನಗೆ ಒಳ್ಳೆಯ

ಕೆಲಸ ಸಿಕ್ಕಿ ನನ್ನ ತಂದೆ, ಅತ್ತೆ ಮತ್ತಿತರರನ್ನು ಚೆನ್ನಾಗಿ ನೋಡಿಕೊಳ್ಳಬಹುದೆಂಬ ಕನಸು ನನ್ನಲ್ಲಿ ಮೂಡಿತು"[೧೨] ಎಂದು ಸ್ವತಃ ಅಂಬೇಡ್ಕರ್‌ರವರೇ ೪೨ ವರ್ಷಗಳ ನಂತರ ಮಾಡಿದ ಭಾಷಣದಲ್ಲಿ ಈ ಪ್ರಸಂಗವನ್ನು ವಿವರಿಸಿದರು.

ಆಗ ಮನಸ್ಸನ್ನು ಸಂಪೂರ್ಣವಾಗಿ ವಿದ್ಯಾಭ್ಯಾಸದಲ್ಲಿ ತೊಡಗಿಸಿಕೊಳ್ಳಲಾರಂಭಿಸಿದನು. ಹೀನ ಸಮಾಜದ ಬಗ್ಗೆ ತಲೆಕೆಡಿಸಿಕೊಳ್ಳದೇ ತಾನು, ತನ್ನ ವಿದ್ಯಾಭ್ಯಾಸವೆಂಬಂತೆ ಓದಲಾರಂಭಿಸಿದನು. ಆಗಲೇ ಅಂಬೇಡ್ಕರ್ ಎಂಬ ಬ್ರಾಹ್ಮಣ ಶಿಕ್ಷಕರೊಬ್ಬರು ಭೀಮನನ್ನು ಕಂಡರೆ ಅವರಿಗೆ ವಿಶೇಷ ಪ್ರೀತಿ, ವಿಶ್ವಾಸ, ಅವರು ತರುತಿದ್ದ ಊಟದಲ್ಲಿ ಸ್ವಲ್ಪ ಪಾಲು ಭೀಮನಿಗೂ ಸಲ್ಲುತ್ತಿತ್ತು. ಈ ಶಿಕ್ಷಕರಿಗೆ ಭೀಮನ ಮೇಲೆ ಎಷ್ಟೊಂದು ಅಭಿಮಾನ ಹೆಸರಿನ ಮುಂದೆ ಇದ್ದ ಅಂಬಾವಾಡೇಕರ್ ಹೆಸರು ತೆಗೆದು ತಮ್ಮ ಕುಟುಂಬದ ಹೆಸರನ್ನು ಬರೆದುಬಿಟ್ಟರು. ಅಂಬೇಡ್ಕರ್ ಎಂದು ಮುಂದೆ ಇದೇ ಖಾಯಂ ಆಗಿ ಉಳಿದುಕೊಂಡಿತು.

೧೯೦೪ರಲ್ಲಿ ರಾಮಾಜೀ ತಮ್ಮ ಪರಿವಾರವನ್ನು ಸಾತಾರಾದಿಂದ ಮುಂಬಯಿಗೆ ಸ್ಥಳಾಂತರಿಸಿದರು. ಅಲ್ಲಿನ ಎಲ್ಫಿನ್‌ಸ್ಟನ್ ಸರ್ಕಾರಿ ಶಾಲೆಯಲ್ಲಿ ಪ್ರೌಢಶಾಲೆಗೆ ಸೇರಿಸಿದರು. ಅವನಿಗಾಗಿ ತಂದೆ ಹೊವಾರ್ಡ್ ಇಂಗ್ಲೀಷ್ ರೀಡರ್ ಪುಸ್ತಕ ತಂದುಕೊಟ್ಟರು. ತರ್ಖಡ್ಕರ್ ಎಂಬುವವರು ಮಾಡಿದ ಮೂರು ಉತ್ತಮ ಅನುವಾದ ಕೃತಿಗಳನ್ನು ತಂದುಕೊಟ್ಟರು. "ತಾವು ಅಪಾರ ಇಂಗ್ಲೀಷ್ ಭಾಷಾಜ್ಞಾನವನ್ನು ಪಡೆದುಕೊಳ್ಳಲು ಅಪರಿಮಿತ ಪದ ಭಂಡಾರ ಬೆಳೆಸಿಕೊಳ್ಳಲು, ಹಾಗೂ ಭಾರತದ ಪ್ರಮುಖ ಬರಹಗಾರರೆನಿಸಲು ಈ ಕೃತಿಗಳು ತಮಗೆ ಬಾಲ್ಯದಲ್ಲೇ ಪುಷ್ಟಿ ನೀಡಿದವು"[೧೩] ಎಂದು ಅಂಬೇಡ್ಕರ್‌ರೇ ಹೇಳಿದ್ದಾರೆ. ಬಾಲಕನಾಗಿದ್ದಾಗಲೇ ಓದಲು ಅಭ್ಯಾಸವನ್ನು ಬೆಳೆಸಿಕೊಂಡರು. ಗ್ರಂಥಾಲಯಕ್ಕೆ ಹೋಗಿ ಅಲ್ಲಿನ ಪುಸ್ತಕಗಳ ಕಡೆಯಲ್ಲಿ ಕಣ್ಣಾಡಿಸಿ ಬರುತ್ತಿದ್ದರು. ಓದಿದಷ್ಟೂ ಓದುವ ಬಯಕೆ ಹೆಚ್ಚುತ್ತಲೇ ಇತ್ತು. ಇವರು ಪರೀಕ್ಷೆಯನ್ನು ಪಾಸು ಮಾಡಬೇಕು. ಇಲ್ಲವೇ ರ್‍ಯಾಂಕ್ ಗಳಿಸಬೇಕೆಂದು ಓದುತ್ತಿರಲಿಲ್ಲ. ಜ್ಞಾನಸಂಪಾದನೆಗಾಗಿ, ಜ್ಞಾನದ ದಾಹವನ್ನು ತಣಿಸಿ ಕೊಳ್ಳಲು ಓದುತ್ತಿದ್ದರು. ಪಠ್ಯಪುಸ್ತಕಗಳಿಗಿಂತ ಇತರ ಪುಸ್ತಕಗಳ ಕಡೆಗೆ ಹೆಚ್ಚು ಗಮನ ನೀಡಿ ಓದುತ್ತಿದ್ದರು. ಇದರಿಂದ ವಿವಿಧ ವಿಷಯಗಳ ಬಗೆಗಿನ ತಿಳುವಳಿಕೆ ಆಳವಾದ ಅಧ್ಯಯನ, ನಿರಂತರ ಓದು, ಸಂಪೂರ್ಣ ಜ್ಞಾನದೃಷ್ಟಿ ಬಾಲಕ ಭೀಮನನ್ನು ಭಾರತದ ಮಹಾನ್ ಬುದ್ಧಿಜೀವಿಯಾಗಿ ಪುಸ್ತಕ ಪ್ರೇಮಿ ಅಂಬೇಡ್ಕರ್‌ರನ್ನಾಗಿ ಮಾಡಿತು.

ಪ್ರೌಢಶಾಲೆಯಲ್ಲೇ ವೇದಾಧ್ಯಯನ ಮಾಡಬೇಕಾದರೆ ಸಂಸ್ಕೃತ ಜ್ಞಾನ ಇರಬೇಕೆಂಬುದರಿಂದ ಅದನ್ನು ಕಲಿಯಬೇಕು ಎಂದು ದ್ವಿತೀಯ ಭಾಷೆಯಾಗಿ ಅರಿಸಿಕೊಳ್ಳಲು ಬಯಸಿದಾಗ "ಹೊಲೆ ಮುಂಡೆ ಗಂಡರಿಗೆ ವ್ಯಾಸಂಗ ಅವಕಾಶ ಮಾಡಿಕೊಟ್ಟಿದ್ದೇ ಹೆಚ್ಚು, ಇದಕ್ಕೆ

ಸಂಸ್ಕೃತ ಬೇರೆ ಬೇಕಂತೆ"[೧೪] ಎಂದು ಬ್ರಾಹ್ಮಣ ಶಿಕ್ಷಕರು ತಿರಸ್ಕಾರದ ಮಾತುಗಳನ್ನಾಡಿದಾಗ ಸಂಸ್ಕೃತಕ್ಕೂ ಬದಲಾಗಿ ಪರ್ಷಿಯನ್ ಭಾಷೆಯನ್ನಾರಿಸಿಕೊಂಡರು.

ಮನೆಯಲ್ಲಿ ಓದಲು, ಬರೆಯಲು ಕಷ್ಟದ ಸ್ಥಿತಿಯಿತ್ತು. ಒಂದೇ ಕೋಣೆಯಲ್ಲೇ ಅಡಿಗೆ, ಸ್ನಾನ, ಮಲಗುವುದು, ಊಟ ಎಲ್ಲವೂ ಅಲ್ಲೇ. ಜೊತೆಗೆ ಮೇಕೆಯೊಂದನ್ನು ಸಾಕಿಕೊಂಡಿದ್ದರು. ಒಬ್ಬರು ಮಲಗಿದರೆ ಇನ್ನೊಬ್ಬರು ಮಲಗಲು ಆಗುತ್ತಿರಲಿಲ್ಲ. ಅದಕ್ಕೆ ಭೀಮ ಬಹುಬೇಗ ಮಲಗುತ್ತಿದ್ದ ಆಗ ತಂದೆ ರಾತ್ರಿ ೨ ರಿಂದ ೩ ಗಂಟೆಯವರಿಗೆ ಕುಳಿತಿರುತ್ತಿದ್ದರು. ಅನಂತರ ಮಗನನ್ನು ಎಬ್ಬಿಸಿ ಅಭ್ಯಾಸ ಮಾಡಲು ಹೇಳಿ ಇವರು ಮಲಗುತ್ತಿದ್ದರು. ಇವರು ಸೀಮೆಎಣ್ಣೆ ಬುಡ್ಡಿಯ ಮುಂದೆ ಕುಳಿತು ಬೆಳಗಾಗುವ ತನಕ ಅಭ್ಯಾಸ ಮಾಡುತ್ತಿದ್ದರು. ಹೀಗೆ ಓದಿ ೧೯೦೭ರಲ್ಲಿ ಅಸ್ಪೃಶ್ಯ ಜಾತಿಯಲ್ಲೇ ಪ್ರಥಮ ಬಾರಿಗೆ ಮೆಟ್ರಿಕ್ ಪಾಸು ಮಾಡಿದ ಹುಡುಗ ಭೀಮನೊಬ್ಬನೆ. ಅದೊಂದು ದೊಡ್ಡ ಸುದ್ಧಿಯಾಯಿತು. ಅವನನ್ನು ಅಭಿನಂದಿಸಲು ಅಲ್ಲಿನ ಜನರು ಸಮಾರಂಭವನ್ನೇ ಏರ್ಪಡಿಸಿದರು. ಅಲ್ಲಿಗೆ ಆ ಕಾಲದಲ್ಲಿ ಶ್ರೇಷ್ಠ ಸಮಾಜ ಸುಧಾರಕರು.ಎಸ್.ಕೆ.ಬೋಲೆ ಅಧ್ಯಕ್ಷತೆಯಲ್ಲಿ ಸಾಹಿತಿ ಕೇಳೂಸ್ಕರ್ "ಗೌತಮ ಬುದ್ಧನ ಜೀವನ ಚರಿತ್ರೆ"ಯನ್ನು ಬಹುಮಾನವಾಗಿ ಸಲ್ಲಿಸಿದರು. ಅವರ ನೆರವಿನಿಂದಲೇ ಮಹಾರಾಜರು ಸಯ್ಯಾಜಿರಾವ್ ಗಾಯಕ್‌ವಾಡ್ ಪ್ರತಿ ತಿಂಗಳು ೨೦ ರೂಪಾಯಿಗಳ ಶಿಷ್ಯ ವೇತನ ಬರುವಂತೆ ಮಾಡಿದ್ದರು. ಇದರ ಮಧ್ಯೆ ಅಂದರೆ ೧೯೦೬ರಲ್ಲಿ ದಾಪೋಲಿಯ ಸುಬೇದಾರ್ ಭಿಕು ವಲಂಗಕರ್ ಅವರ ಮಗಳು ರಮಾಬಾಯಿ(ರಾಮಿಗೆ ೭ ವರ್ಷ) ಜೊತೆ ಬೈಕುಲಾ ಸಂತೆ ಮಾರ್ಕೆಟ್ ಷೆಡ್ ಒಂದರಲ್ಲಿ ರಾತ್ರಿ ಮದುವೆ ಆಯಿತು. ಆಗ ಅಂಬೇಡ್ಕರ್‌ಗೆ ಕೇವಲ ೧೭ ವರ್ಷ ವಯಸ್ಸು.

"ಸಂಪೂರ್ಣ ಜ್ಞಾನದಿಂದ ಸಂಪೂರ್ಣ ಶಕ್ತಿ" ಪ್ರಾಪ್ತವಾಗುತ್ತದೆ ಎಂಬಂತೆ ಅವರಿಗೆ ಓದುವುದೆಂದರೆ ಪಂಚಪ್ರಾಣ. ಊಟ ನಿದ್ರೆಗಳನ್ನು ಬಿಟ್ಟು ಅವರು ಓದುತ್ತಿದ್ದರು. ಕಾಲೇಜು ವಿದ್ಯಾಭ್ಯಾಸದಲ್ಲಿ ಅಂಬೇಡ್ಕರ್‌ಗೆ ಇಂಗ್ಲೀಷ್ ಪ್ರೊಫೆಸರ್ ಮುಲ್ಲರ್ ಅವನಿಗೆ ತಮ್ಮ ಶರ್ಟ್‌ಗಳನ್ನು ತೊಡಲು ಕೊಡುತ್ತಿದ್ದರು. ಆ ಕಾಲೇಜಿನಲ್ಲಿ ತುಂಬ ಒಳ್ಳೆಯ ಪ್ರಾಧ್ಯಾಪಕರಿದ್ದರೂ ಕೂಡ ಅಂತ ಚೈತನ್ಯವನ್ನು ತುಂಬುವ ಕೆಲಸ ಅಲ್ಲಿ ನಡೆಯಲಿಲ್ಲ. ಬಾಬಾ ಸಾಹೇಬರ ಮಾತಿನಲ್ಲೇ ಹೇಳುವುದಾದರೆ "ನಾನು ಪ್ರತಿವರ್ಷ ಯೂನಿವರ್ಸಿಟಿಯ ಪರೀಕ್ಷೆಗಳಲ್ಲಿ ಉತ್ತೀರ್ಣನಾಗುತ್ತಿದ್ದೆನಾದರೂ ನನಗೆಂದೂ ದ್ವಿತಿಯ ಶ್ರೇಣಿ ಪ್ರಾಪ್ತಿಯಾಗಲೇ ಇಲ್ಲ. ಬಿ.ಎ.ಪದವಿಯಲ್ಲಂತೂ ತೀರ ಸ್ವಲ್ಪ ಅಂಕಗಳಿಂದ ನನ್ನ ಸೆಕೆಂಡ್ ಕ್ಲಾಸ್ ತಪ್ಪಿಹೋಯ್ತು"[೧೫] ಎನ್ನುತ್ತಾರೆ. ೧೯೧೨ರಲ್ಲಿ ಮುಂಬಯಿ ವಿಶ್ವವಿದ್ಯಾಲಯದಿಂದ ಬಿ.ಎ. ಪದವಿಯನ್ನು ಪಡೆದು ಪದವೀಧರರಾದರು. ಬರೋಡ ಮಹಾರಾಜರ ಸೈನ್ಯದಲ್ಲಿ ಲೆಫ್ಟಿನೆಂಟ್ ಹುದ್ದೆಗೆ ಸೇರಿಕೊಂಡು ೧೫ ದಿನಗಳಲ್ಲಿಯೇ ಅಂದರೆ ೧೯೧೩ ಫೆಬ್ರವರಿ ೨ರಂದು ತಂದೆ ತೀವ್ರ ಅನಾರೋಗ್ಯದಿಂದ ಬಳಲಿ ತನ್ನ ಪ್ರೀತಿಯ ಮಗನನ್ನು ಒಮ್ಮೆ ಕಣ್ಣುತುಂಬ ನೋಡಿ ಅವನ ಬೆನ್ನು

ಸವರಿ ಮರುಕ್ಷಣದಲ್ಲೇ ಕೊನೆಯುಸಿರೆಳೆದರು. ಇದು ಡಾ.ಅಂಬೇಡ್ಕರ್ ಬಾಲ್ಯದಲ್ಲಿ ನಡೆದ ಕರಾಳ ದಿನವಾಯಿತು.

ಬರೋಡಾದ ಮಹಾರಾಜರು ದಲಿತರ ಜನಾಂಗದ ಉದ್ಧಾರದ ಬಗ್ಗೆ ವಿಶೇಷ ಗಮನ ನೀಡಿದ್ದರು. "ಯೋಗ್ಯ ಸ್ಥಾನಮಾನಗಳನ್ನು ಸಂಪಾದಿಸದಿದ್ದರೆ ತಮ್ಮ ಪ್ರಯತ್ನ ಮರುಭೂಮಿಯ ಕೃಷಿಯಾಗುತ್ತದೆ ಎಂದು ಅವರು ಬಗೆದಿದ್ದರು"[೧೬] ಅದಕ್ಕಾಗಿ ಪದವಿ ಮುಗಿದರೂ ವಿದ್ಯಾಭ್ಯಾಸವನ್ನು ಮುಂದುವರೆಸುವುದಾಗಿ ಅವರು ಅಮೇರಿಕಾದ ಕೊಲಂಬಿಯಾ ವಿಶ್ವವಿದ್ಯಾಲಯದಲ್ಲಿ ವಿದ್ಯಾಭ್ಯಾಸ ಮುಂದುವರೆಸುವವರಿಗೆ ವಿದ್ಯಾರ್ಥಿ ವೇತನ ನೀಡುವುದಾಗಿ ಪ್ರಕಟಿಸಿದರು. ಆಗ ಅಂಬೇಡ್ಕರ್ ಮುಂಬಯಿಗೆ ಬಂದು ಮಹಾರಾಜರನ್ನು ಕಂಡು ತನ್ನ ಇಚ್ಛೆಯನ್ನು ವ್ಯಕ್ತಪಡಿಸಿದಾಗ ಅವರ ಸಲಹೆಯಂತೆ ಅರ್ಜಿ ಹಾಕಿದರು. ಅದರಲ್ಲಿ ಮಹಾರಾಜರು ಅಂಬೇಡ್ಕರ್ ಸೇರಿದಂತೆ ೪ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿಕೊಂಡರು. ಆಯ್ಕೆಗೊಂಡವರು ಒಂದು ಕರಾರಿಗೆ ಸಹಿ ಹಾಕಬೇಕಿತ್ತು. ಅದೇನೆಂದರೆ ಕೊಲಂಬಿಯಾ ವಿಶ್ವವಿದ್ಯಾಲಯದಲ್ಲಿ ಪರಿಪೂರ್ಣ ಗಮನವನ್ನು ವಿದ್ಯಾಭ್ಯಾಸಕ್ಕೆ ಮೀಸಲಿಡಬೇಕು. ಹಿಂತಿರುಗಿ ಬಂದ ನಂತರ ೧೦ ವರ್ಷಗಳವರೆಗೆ ಮಹಾರಾಜರ ಸೇವೆಯಲ್ಲಿ ಕೆಲಸ ಮಾಡಬೇಕೆಂಬುದೇ ಆ ಕರಾರು. ಅದರಂತೆ ೧೯೧೩ ಜುಲೈ ೩ನೇ ವಾರದಲ್ಲಿ ನ್ಯೂಯಾರ್ಕ್ ತಲುಪಿದರು.

ನ್ಯೂಯಾರ್ಕ್‌ನಲ್ಲಿ ಅವರಿಗೆ ಒಂದು ಹೊಸ ಅನುಭವವಾಯಿತು. ಜಾತಿ, ಮತ, ಮೇಲು, ಕೀಳು ಭಾವನೆಗಳ ಪೀಡೆ ಕಾಡಲಿಲ್ಲ. ಸ್ವಚ್ಛಂದವಾಗಿ ಹಕ್ಕಿಯಂತೆ ಹಾಡುವ ಮನೋಸ್ಥಿತಿಯು ಅವರಲ್ಲಿ ಉಂಟಾಯಿತು. ಅಲ್ಲಿದ್ದರೂ ಕೂಡ ಮನಸ್ಸು ದುರ್ಬಲ ವರ್ಗಗಳ ಕಡೆಗೆ ಮಿಡಿಯುತ್ತಿತ್ತು. "ಮಾತಾ ಪಿತೃಗಳು ಮಕ್ಕಳ ಜನ್ಮದಾತರಾದರೆ ಸಾಲದು. ಅವರ ಭಾಗ್ಯವನ್ನು ರೂಪಿಸುವ ರೂವಾರಿಗಳಾಗಬೇಕು. ಗಂಡು ಮಕ್ಕಳಿಗೆ ಮಾತ್ರವಲ್ಲ, ಹೆಣ್ಣುಮಕ್ಕಳಿಗೂ ಸೂಕ್ತ ಶಿಕ್ಷಣ ನೀಡುವು ದಾದರೆ ಮುಂದೆ ಒಳ್ಳೆಯ ದಿನಗಳನ್ನು ಕಾಣಬಹುದೆಂಬ ನಂಬಿಕೆ ನನಗಿದೆ" ಎಂದು ಗೆಳೆಯರಿಗೆ ಬರೆದ ಪತ್ರಗಳಲ್ಲಿ ಹೇಳಿದ್ದಾರೆ. ಅಲ್ಲಿ ಡಾ.ಅಂಬೇಡ್ಕರ್ ವಿದೇಶದಲ್ಲಿ ಮೋಜಿನಲ್ಲಿ ಮುಳಗಲಿಲ್ಲ. ಅಲ್ಲಿಯೂ ಕೂಡ ಪ್ರತಿದಿನವೂ ೧೮ ಗಂಟೆಗಳ ಕಾಲ ಅಭ್ಯಾಸದಲ್ಲಿ ತೊಡಗಿರುತ್ತಿದ್ದರು. ಸರಳ ಉಡುಗೆ-ತೊಡುಗೆ, ಸರಳ – ಆಹಾರ ಪದ್ಧತಿಯನ್ನು ಅಳವಡಿಸಿಕೊಂಡು ಇತಿ-ಮಿತಿಯಾಗಿ ಖರ್ಚುಗಳನ್ನು ಮಾಡಿ ಪುಸ್ತಕಗಳನ್ನು ಖರೀದಿಸುವುದು ಮತ್ತು ಮನೆಯ ವೆಚ್ಚಕ್ಕಾಗಿ ಮಡದಿಗೂ ಹಣವನ್ನು ಕಳುಹಿಸಿಕೊಡುತ್ತಿದ್ದರು.

ವಿಜ್ಞಾನ, ಗಣಿತ, ಸಮಾಜಶಾಸ್ತ್ರ, ರಾಜಕೀಯಶಾಸ್ತ್ರಗಳಲ್ಲಿ ಅಪಾರ ಆಸಕ್ತಿ ಇದ್ದ ಕಾರಣ ಅವರು ಎಲ್ಲ ವಿಷಯಗಳನ್ನು ಅಭ್ಯಾಸ ಮಾಡಿದ್ದರು. ಮುಂಬಯಿಯಲ್ಲಿ ಇಂಗ್ಲೀಷ್, ಪರ್ಷಿಯನ್ ಭಾಷೆಗಳನ್ನು ತೆಗೆದುಕೊಂಡಿದ್ದರು. ಕೊಲಂಬಿಯಾದಲ್ಲಿ ರಾಜಕೀಯಶಾಸ್ತ್ರ, ಸಮಾಜಶಾಸ್ತ್ರ, ಅರ್ಥಶಾಸ್ತ್ರ,

ನೈತಿಕ ತತ್ವಶಾಸ್ತ್ರ ಆಂತ್ರಾಪಾಲಜಿ ವಿಷಯಗಳನ್ನು ಅಭ್ಯಾಸ ಮಾಡಿದ್ದರು. ಜಾನ್‌ಡ್ಯೂಯಿ, ಜೇಮ್ಸ್ ಶಾಟ್‌ವೆಲ್, ಎಡ್ವಿನ್ ಸೆಲಿಗ್ಮನ್, ಜೇಮ್ಸ್ ಹಾವೆ ರಾಬಿನ್ಸನ್, ಫ್ರಾಂಕ್‌ಲಿನ್ ಗಿಡಿಂಗ್, ಅಲೆಗ್ಸಾಂಡರ್, ಗೋಲ್ಡನ್‌ವೆ.ಆರ್ ಮುಂತಾದ ದಿಗ್ಗಜ ವಿದ್ವಾಂಸರು ಕಲಿಸುತ್ತಿದ್ದರು. ಡಾ.ಅಂಬೇಡ್ಕರ್ ಆರ್.ಎ.ಸೆಲಿಗ್ಮನ್ ಅವರಿಂದ ಅಪಾರವಾಗಿ ಆಕರ್ಷಿತರಾದರು. ಅಂಬೇಡ್ಕರ್‌ಗೆ ಸಂಶೋಧನಾ ವಿಧಾನವನ್ನು ರೂಪಿಸಿಕೊಳ್ಳಲು ಹಾಗೂ ಯಾವುದೇ ವಿಷಯವನ್ನು ಅತ್ಯಂತ ಸಮಾಧಾನ ಚಿತ್ತದಿಂದ ಅಧ್ಯಯನ ಮಾಡಲು ಪ್ರೊ.ಸೆಲಿಗ್ಮಾನ್ ಸಲಹೆ ನೀಡಿದ್ದರು. ೧೯೧೫ರಲ್ಲಿ ಅವರು "ಪ್ರಾಚೀನ ಭಾರತದ ವಾಣಿಜ್ಯ" ಎಂಬ ವಿಷಯದಲ್ಲಿ ಎಂ.ಎ. ಪದವಿ ಗಳಿಸಿದರು. ೧೯೧೬ರಲ್ಲಿ ಡಾ.ರೋಲ್ಡನ್ ವೈಸರ್ ಸಮ್ಮುಖದಲ್ಲಿ ಅಂಬೇಡ್ಕರ್ ಆಂತ್ರಾಪಾಲಜಿ ವಿಷಯಕ್ಕೆ ಸಂಬಂಧಿಸಿದಂತೆ "ಭಾರತದಲ್ಲಿ ಜಾತಿಗಳು ಅವುಗಳ ತಾಂತ್ರಿಕತೆ, ಉಗಮ ಮತ್ತು ಬೆಳವಣಿಗೆ" ಎಂಬ ವಿಷಯದ ಬಗ್ಗೆ ಪ್ರೌಢಪ್ರಬಂಧವನ್ನು ಮಂಡಿಸಿದರು.

ಮತ್ತೆ ಒಂದು ಹೆಜ್ಜೆ ಮೇಲೇರಿ ಡಾ.ಅಂಬೇಡ್ಕರ್ "ಭಾರತದ ರಾಷ್ಟ್ರೀಯ ಡಿವಿಡೆಂಡ್: ಒಂದು ಐತಿಹಾಸಿಕ ಮತ್ತು ವಿಶ್ಲೇಷಣಾತ್ಮಕ ಅಧ್ಯಯನ" ಎಂಬ ವಿಷಯದ ಬಗ್ಗೆ ಅಧ್ಯಯನ ಕೈಗೊಂಡು ಸತತ ಅಧ್ಯಯನ ಸಂಶೋಧನೆಯಿಂದ ಮಹಾಪ್ರಬಂಧವನ್ನು ಮುಗಿಸಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದರು. ವಿಶ್ವವಿದ್ಯಾಲಯ ಇವರಿಗೆ ಪಿಎಚ್.ಡಿ. ಪದವಿ ನೀಡಿತು. ಈ ಮಹಾಪ್ರಬಂಧವನ್ನು ಗ್ರಂಥರೂಪದಲ್ಲಿ ಪ್ರಕಟಿಸಿದಾಗ ಅದನ್ನು ಬರೋಡದ ಮಹಾರಾಜರಾಗಿದ್ದ ತಮ್ಮ ಶಿಕ್ಷಣಕ್ಕೆ ನೆರವು ನೀಡಿದ ಸಯ್ಯಾಜಿರಾವ್ ಗಾಯಕವಾಡರಿಗೆ ಅರ್ಪಣೆ ಮಾಡಿದರು. ಇದೇ ಪ್ರಬಂಧ ೧೮ ವರ್ಷಗಳ ನಂತರ (೧೯೩೪) ಲಂಡನ್‌ನಲ್ಲಿ "ಬ್ರಿಟಿಷ್ ಭಾರತದಲ್ಲಿ ಪ್ರಾಂತೀಯ ಆರ್ಥಿಕ ವ್ಯವಸ್ಥೆಯ ವಿಕಾಸ" ಎಂಬ ಹೆಸರಿನ ಕೃತಿಯಾಗಿ ಪ್ರಕಟಣೆಯಾಯಿತು.(ದಿ ಇವಲೂಶನ್ ಆಫ್ ಪ್ರಾವ್ಹಿನ್ಷಿಯಲ್ ಫೈನಾನ್ಸ್ ಇನ್ ಬ್ರಿಟಿಷ್ ಇಂಡಿಯಾ)

ಅಂಬೇಡ್ಕರ್‌ರವರು ಉನ್ನತವಾದ ಅಧ್ಯಯನ ಮಾಡಬೇಕೆಂದು ಕೊಲಂಬಿಯಾದಿಂದ ಲಂಡನ್‌ಗೆ ಹೊರಟರು. ಅಲ್ಲಿ ಗ್ರೇಸ್ ಇನ್ ಸಂಸ್ಥೆಯಲ್ಲಿ ಕಾನೂನು ಪದವಿಗೆ ಸೇರಿದರು. ಅದೇ ಕಾಲಕ್ಕೆ ಲಂಡನ್ ಸ್ಕೂಲ್ ಆಫ್ ಎಕಾನಾಮಿಕ್ಸ್ ಅಂಡ್ ಪೊಲಿಟಿಕಲ್ ಸೈನ್ಸ್‌ಗೆ ಹೆಸರು ನೋಂದಾಯಿಸಿಕೊಂಡರು. ಅವರು ಅರ್ಥಶಾಸ್ತ್ರದಲ್ಲಿ ಅತ್ಯುನ್ನತ ಅಧ್ಯಯನ ಮಾಡಿ ಕೈಗೊಂಡಿದ್ದರಿಂದ ಡಿ.ಎಸ್.ಸಿ. ಪರೀಕ್ಷೆ ಬರೆಯಲು ಅಲ್ಲಿನ ಅಧ್ಯಾಪಕರು ಒಪ್ಪಿದರು. ಅದನ್ನು ಮುಗಿಸುವ ಮುನ್ನವೇ ಬರೋಡಾದ ಮಹಾರಾಜರಿಂದ ಕೂಡಲೇ ಹಿಂತಿರುಗಿ ಬರಬೇಕೆಂದು ಕರೆ ಬಂತು.

ಮೊದಲು ತಮ್ಮ ಆತ್ಮೀಯ ಮಿತ್ರರಾದ ಅಂಬೇಡ್ಕರ್ ಗುರುಗಳಾದ ಪ್ರೊ.ಸೆಲಿಗ್ಮನ್‌ರನ್ನು ಭೇಟಿ ಮಾಡಲು ಲಾಲಲಜಪತರಾಯ್ ಲಂಡನ್ನಿಗೆ ಬಂದಿದ್ದಾಗ, ಸ್ವಾತಂತ್ರ್ಯ ಚಳುವಳಿಗೆ ನಿಮ್ಮ ಬೆಂಬಲ ಬೇಕು ಎಂದಾಗ ಅಂಬೇಡ್ಕರ್ ನಾನಿನ್ನು ವಿದ್ಯಾರ್ಥಿಯಾಗಿದ್ದೇನೆ. ವಿದ್ಯಾಭ್ಯಾಸ ಮುಗಿಯದೇ

ನಾನು ಚಳುವಳಿಯಲ್ಲಿ ಭಾಗವಹಿಸುವುದಿಲ್ಲ ಎಂದು ಹೇಳಿದ್ದರು. ಈಗ ಮಹಾರಾಜ ಕರೆಯನ್ನು ತಿರಸ್ಕರಿಸಲಾಗದೇ ಭಾರತಕ್ಕೆ ಹಿಂತಿರುಗಬೇಕಾಯಿತು. ಆದರೆ ವಿದ್ಯಾಭ್ಯಾಸ ಮುಂದುವ ರೆಸಲು ೧೯೨೦ರಲ್ಲಿ ಮತ್ತೆ ಲಂಡನ್ನಿಗೆ ಬಂದು ಗ್ರೇಸ್ ಇನ್‌ನಲ್ಲಿ ವಕೀಲ ವೃತ್ತಿಯ ಅಭ್ಯಾಸಕ್ಕೆ ಸೇರಿದ್ದರು. ಗ್ರಂಥಾಲಯದಲ್ಲೇ ಬಹುಸಮಯವನ್ನು ಮೊದಲನೆಯ ಓದುಗನಾಗಿ ಪ್ರವೇಶಿಸಿ ಕಡೆಯ ಓದುಗರಾಗಿ ಗ್ರಂಥಾಲಯದಿಂದ ಹಿಂದಿರುಗುತ್ತಿದ್ದರು. ಅವರು ಓದಿನಲ್ಲೇ ಮುಳುಗಿದರೆ ಅವರಿಗೆ ಯಾವುದರ ಅರಿವು ಇರುತ್ತಿರಲಿಲ್ಲ. ಗ್ರಂಥಾಲಯದ ಸಿಬ್ಬಂದಿ ಬಂದು ಎಚ್ಚರಿಸಿದರೆ ಓಹೋ ಸಮಯವಾಯಿತೆಂದು ಎದ್ದು ಬರುತ್ತಿದ್ದರು. ಒಮ್ಮೆ ಆ ಸಿಬ್ಬಂದಿ ಸಂಜೆ ಯಾರು ಇಲ್ಲವೆಂದು ಬೀಗ ಬೀಗಹಾಕಿಕೊಂಡು ಹೋಗಿ ಮತ್ತೆ ಬೆಳಗ್ಗೆ ಬಂದು ಬೀಗ ತೆಗೆದಾಗ ಅವರಿಗೆ ಆಶ್ಚರ್ಯ ಅಂಬೇಡ್ಕರ್ ಓದುತ್ತಿದರಂತೆ ಹೀಗೆ ಓದುತ್ತಾ ೧೯೨೧ರ ಜೂನ್ ಹೊತ್ತಿಗೆ ಸಂಶೋಧನೆಯನ್ನು ಮುಗಿಸಿ "ಬ್ರಿಟಿಷ್ ಭಾರತದಲ್ಲಿ ಸಾಮ್ರಾಜ್ಯಶಾಹಿಯ ಹಣಕಾಸಿನ ಪ್ರಾಂತೀಯ ವಿಕೇಂದ್ರೀಕರಣ" ಎಂಬ ವಿಷಯಕ್ಕೆ ಮಾಸ್ಟರ್ ಆಫ್ ಸೈನ್ಸ್ ಪದವಿಯನ್ನು ಗಳಿಸಿದರು. ಮರುವರ್ಷ ಅಕ್ಟೋಬರ್‌ನಲ್ಲಿ "ರೂಪಾಯಿಯ ಸಮಸ್ಯೆ" ಎಂಬ ಕುರಿತು ಸಂಶೋಧನ ಗ್ರಂಥವನ್ನು ಲಂಡನ್ ವಿಶ್ವವಿದ್ಯಾಲಯಕ್ಕೆ ಒಪ್ಪಿಸಿದರು.

ಇನ್ನು ಹೆಚ್ಚು ಅಧ್ಯಯನ ಮಾಡಬಯಸಿದ ಅಂಬೇಡ್ಕರ್ ಯೂರೋಪಿನ ಬಾನ್ ವಿಶ್ವವಿದ್ಯಾಲಯಕ್ಕೆ ೧೯೨೨ ಡಿಸೆಂಬರ್‌ನಲ್ಲಿ ಹೊರಟರು. ೧೯೨೩ರಲ್ಲಿ "ಭಾರತದಲ್ಲಿ ಜವಾಬ್ದಾರಿ ಸರ್ಕಾರವೊಂದರ ಜವಾಬ್ದಾರಿ" ಎಂಬ ವಿಷಯದ ಬಗ್ಗೆ ಪ್ರಬಂಧವನ್ನು ಸಿದ್ಧಪಡಿಸಿ ಡಾಕ್ಟರ್ ಆಫ್ ಸೈನ್ಸ್ ಪದವಿಯನ್ನು ಪಡೆದರು.

ಹಾಗೆಯೇ ಕಾನೂನು ವಿಷಯದಲ್ಲಿ ಬ್ಯಾರಿಸ್ಟರ್ ಆಫ್ ಲಾ ಪದವಿಯನ್ನು ಪಡೆದರು. ಹೀಗೆ ಲಂಡನ್ ವಿಶ್ವವಿದ್ಯಾಲಯದಿಂದ ಎರಡು ವಿಷಯಗಳಿಗೆ ಮಾಸ್ಟರ್ ಪದವಿ, ಎರಡು ಡಾಕ್ಟರೇಟ್ ಪದವಿಗಳನ್ನು, ತತ್ವಶಾಸ್ತ್ರ ವಿಷಯದಲ್ಲಿ ಅಮೇರಿಕನ್ ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪದವಿ ಪಡೆದು, ಸಮಾಜಶಾಸ್ತ್ರ ಮತ್ತು ಅರ್ಥಶಾಸ್ತ್ರದಲ್ಲಿ ವಿಶ್ವವಿಜ್ಞಾನ ವಿದ್ವಾಂಸರಿಂದ ಮೇಧಾವಿಯೆಂದು ಕರೆಸಿಕೊಳ್ಳುವ ಮಟ್ಟಿಗೆ ಅಂಬೇಡ್ಕರ್‌ರವರು ವಿದ್ಯಾಭ್ಯಾಸವನ್ನು, ಭಾರತದ ಇತಿಹಾಸದಲ್ಲೇ ಕಂಡರಿಯದ ಜ್ಞಾನ ಸಂಪತ್ತನ್ನು ಪಡೆದು ಜ್ಞಾನಜ್ಯೋತಿಯಾಗಿ ಪುಸ್ತಕ ಪ್ರೇಮಿಯಾಗಿ ಬೆಳಗಿದರು.

೨.೩ ಹೋರಾಟ, ಚಳುವಳಿ ಮತ್ತು ಚಿಂತನೆಗಳು :-

ಹೋರಾಟಗಳಲ್ಲಿ ಕೂಗುವ ಧ್ವನಿ ಸ್ವಾರ್ಥ, ಹಿತ ಸಾಧನೆ ಬಯಸುತ್ತಿದ್ದರೆ, ಅದರ ಅಲೆಗಳು ಅಷ್ಟೇ ಬೇಗನೆ ಮರೆಯಾಗಿ ಬಿಡುತ್ತವೆ. ಸ್ವಾರ್ಥ ಸಾಧನೆಗಾಗಿ ಹೋರಾಡುವವರೆಲ್ಲರೂ ಅವಕಾಶವಾದಿ ಪ್ರಭುಗಳಾಗಿ ಬಿಡುತ್ತಾರೆ. ಆದರೆ ಸಾಮಾಜಿಕ ಕಳಕಳಿಯನ್ನು ಮೈಗೂಡಿಸಿಕೊಂಡವರು ಅದರ ಬಗೆಗಿನ ಹೋರಾಟಕ್ಕೆ ಮುಂದಾದಾಗ ಅಂತಹವರ ಧ್ವನಿ ಸಿಂಹ ಗರ್ಜನೆಯಾಗಿರುತ್ತದೆ. ಅಂತಹ ವ್ಯಕ್ತಿತ್ವವನ್ನು, ವಿಚಾರಧಾರೆಗಳನ್ನು, ರೂಢಿಸಿಕೊಂಡಿದ್ದವರು ಡಾ.ಭೀಮರಾವ್ ರಾಮಜೀ ಅಂಬೇಡ್ಕರ್.

೧೯೧೪ ಜನವರಿ ೨೭ರಂದು ಆಗ ಅಂಬೇಡ್ಕರ್‌ಗೆ ೨೪ ವರ್ಷ. ಸೌತ್ ಬರೋಡ ಆಯೋಗದ ಮುಂದೆ ಹಾಜರಾಗಿ ಲಿಖಿತ ಮನವಿ ಸಲ್ಲಿಸಿ, ನಿಮ್ನ ವರ್ಗಗಳಿಗೂ ಸ್ವಾಭಾವಿಕವಾದ ಮತದಾನದ ಹಕ್ಕನ್ನು ವಿಸ್ತರಿಸಬೇಕೆಂದು ಅಗ್ರಹಿಸಿದರು. ಬಹುಶಃ ಆ ವಯಸ್ಸಿನಲ್ಲೇ ವೈಯಕ್ತಿಕ ಸುಖಗಳಿಗೆ ಮರುಹೋಗಿದ್ದರೆ ಬಹುಶಃ ಇಂದೂ ಕೋಟಿಗಟ್ಟಲೆ ಜನರ ವಿಮೋಚನೆಗೆ ದಾರಿ ಸಿಗುತ್ತಿರಲಿಲ್ಲವೇನೋ, ಡಾ.ಅಂಬೇಡ್ಕರ್‌ರವರಿಗೆ ಆಗಲೇ ಸಮಾಜದ ಬಗ್ಗೆ, ತನ್ನ ಜನಾಂಗದ ಬಗ್ಗೆ ಕಾಳಜಿ ಇದ್ದರ ಪ್ರತಿಫಲವೇ ದಲಿತ ಜನಾಂಗದ ವಿಮೋಚನೆಗೆ ದಾರಿ ದೊರೆಯಿತು.

ಆಗ ಮತದಾನದ ಹಕ್ಕು ಕೇವಲ ಆಸ್ತಿ-ಪಾಸ್ತಿ ಹೊಂದಿದ ಶ್ರೀಮಂತರಿಗೆ, ಜಾತಿಯಲ್ಲಿ ಶ್ರೇಷ್ಠಕುಲದವರಿಗೆ, ಪಂಡಿತರೆನಿಸಿಕೊಂಡವರಿಗೆ ಮಾತ್ರವೇ ಪ್ರಭುಗಳ ಆಯ್ಕೆಯಲ್ಲಿ ಸ್ವಾತಂತ್ರ್ಯವಿತ್ತು. ಅಸ್ಪೃಶ್ಯರಿಗೆ, ಹಿಂದುಳಿದವರಿಗೆ, ಅಲೆಮಾರಿಗಳಿಗೆ, ಗಿರಿಜನರಿಗೆ, ಅಲ್ಪಸಂಖ್ಯಾತರಿಗೆ ರಾಜಕೀಯದಲ್ಲಿ ಭಾಗವಹಿಸುವ ಅಥವಾ ಅದರ ಬಗ್ಗೆ ಮಾತಾನಾಡುವ ಹಕ್ಕು ಕೂಡ ಇರಲಿಲ್ಲ. ಇಂತಹ ತನ್ನ ಸಮುದಾಯಗಳ ಧ್ವನಿಯಾದವರು ಡಾ.ಅಂಬೇಡ್ಕರ್. ಪ್ರಜಾಮೌಲ್ಯಗಳನ್ನು ಯಾರು ಬೇಕಾದರೂ ಅರ್ಥ ಮಾಡಿಕೊಳ್ಳಬಹುದು. ಜಾತಿ ಆಧಾರದ ಮೇಲೆ ನಿರ್ಧರಿಸುವ ಪ್ರಜಾತಾಂತ್ರಿಕ ವ್ಯವಸ್ಥೆ ಕೆಟ್ಟ ಅನೈತಿಕತೆ ಸಾಮಾಜಿಕ ವ್ಯವಸ್ಥೆಯನ್ನು ಸೃಷ್ಟಿ ಮಾಡಿದಂತೆ ಆಗುತ್ತದೆಂದು ಪ್ರತಿಯೊಬ್ಬರಿಗೂ ಕೂಡ ಮೂಲಭೂತ ಹಕ್ಕುಗಳು ಸಮಾನವಾಗಿ ದೊರೆಯಬೇಕೆಂದು ಇಲ್ಲಿ ವರ್ಗ, ಜಾತಿ, ಧರ್ಮ, ಲಿಂಗ, ವರ್ಣ, ಜನಾಂಗ ಹಾಗೂ ಇತರ ಇನ್ನಾವುದೇ ಆಧಾರದ ಮೇಲೆ ಮಾನವೀಯವಾದ ಮೂಲಭೂತ ಹಕ್ಕುಗಳನ್ನು ತಿರಸ್ಕರಿಸಬಾರದೆಂದು ಆಯೋಗಕ್ಕೆ ಅಗ್ರಹಪಡಿಸಿದರು. ಅಂದರೆ ಜನತಾಪ್ರತಿನಿಧಿಗಳ ಸರಕಾರ ರಚನೆಗೊಳ್ಳಬೇಕಾದರೆ ಅಸ್ಪೃಶ್ಯರಿಗೆ ಅವರ ಜನಸಂಖ್ಯೆಯ ಪ್ರಮಾಣದಲ್ಲಿ ಪ್ರಾತಿನಿಧ್ಯ ನೀಡುವುದು ಅತ್ಯವಶ್ಯಕವೆಂದು ಅಸ್ಪೃಶ್ಯರಿಗೆ ೯ ಸ್ಥಾನಗಳನ್ನು ನೀಡಬೇಕೆಂಬ ತಮ್ಮ ಮನವಿಯಲ್ಲಿ ಕೇಳಿಕೊಂಡರು. ಈ ಸೌತ್‌ಬರೋ ಆಯೋಗದ ಮುಂದೆ ಅವರು ಮಂಡಿಸಿದ ವಾದದಿಂದ ಭಾರತದಲ್ಲಿ ಶೋಷಿತರ ನೈಜ ಬದುಕಿನ ಚಿತ್ರದರ್ಶನವಾಯಿತು. ಅಲ್ಪಸ್ವಲ್ಪ ಪ್ರಮಾಣದ ಶಿಕ್ಷಣ ಪಡೆದು

ಜಾಗೃತಿ ಮೂಡಿಸಿ ತಮ್ಮ ವಿಮೋಚನೆಗಾಗಿ ಮಾರ್ಗದರ್ಶಕರ ಹುಡುಕಾಟದಲ್ಲಿದ್ದ ಜನಾಂಗಕ್ಕೆ ಡಾ.ಅಂಬೇಡ್ಕರ್ ಬೆಳಕಾಗಿ ಬಂದು ದಾರಿ ದೀಪವಾದರು.

೧೯೨೦ನೇ ಮಾರ್ಚ್ ೨೩ರಂದು ಕೊಲ್ಲಾಪುರದ ಸಂಸ್ಥಾನದ ಮಂಗಾವ್ ಪಟ್ಟಣದಲ್ಲಿ ಜರುಗಿದ "ಅಸ್ಪೃಶ್ಯ ಜನಾಂಗ ಅಖಿಲ ಭಾರತ ಅಧಿವೇಶನದ ಅಧ್ಯಕ್ಷರಾದ ಡಾ.ಅಂಬೇಡ್ಕರ್‌ರವರನ್ನು ಕುರಿತು ಬರೋಡದ ಶಾಹುಮಹಾರಾಜರು "ನೀವೀಗ ಡಾ.ಅಂಬೇಡ್ಕರ್ ಅವರ ರೂಪದಲ್ಲಿ ನಿಮ್ಮ ಉದ್ಧಾರಕನೊಬ್ಬನನ್ನು ಪಡೆದಿದ್ದೀರಿ. ಅವರು ದಾಸ್ಯ ಸಂಕೋಲೆಯಿಂದ ನಿಮ್ಮನ್ನು ಪಾರು ಮಾಡುತ್ತಾರೆಂಬ ಭರವಸೆ ನನಗಿದೆ. ಮುಂಬರುವ ದಿನಗಳಲ್ಲಿ ಅವರು ಭರತಖಂಡದ ಅಗ್ರಗಣ್ಯ ನಾಯಕರಾಗಿ ರಾರಾಜಿಸುತ್ತಾರೆಂದು ನನ್ನ ಅಂತರಂಗ ನುಡಿಯುತ್ತಿದೆ"[೧೭] ಎಂದು ಘೋಷಿಸುವ ಮೂಲಕ ಡಾ.ಅಂಬೇಡ್ಕರ್‌ರವರನ್ನು ರಾಷ್ಟ್ರೀಯ ಜನಾಂದೋಲನದ ಮುಂಚೂಣಿಯಲ್ಲಿ ನಿಲ್ಲುವಂತೆ ಪ್ರೇರೇಪಿಸಿದರು. ತಮ್ಮ ಸಾಮಾಜಿಕ ಹೋರಾಟಗಳಿಗೆ ಜನ ಬೆಂಬಲ ಯಾಚಿಸಲು ನಿಮ್ನ ವರ್ಗ ಮತ್ತು ಹಿಂದುಳಿದ ವರ್ಗದವರನ್ನು ತಾವೇ ಸ್ಥಾಪಿಸಿದ "ಬಹಿಷ್ಕೃತ ಹಿತಕಾರಣಿ ಮಹಾಸಭಾ"ಕ್ಕೆ ಮುಕ್ತವಾಗಿ ಆಹ್ವಾನವನ್ನು ನೀಡಿದರು. ಈ ಮಹಾಸಭಾ ಮೂಲಕ ಗ್ರಾಮಗಳ ಹಂತದಲ್ಲಿ ಜನಜಾಗೃತಿಗೆ ವಿವಿಧ ಕಾರ್ಯಕ್ರಮಗಳನ್ನು ಹಾಕಿಕೊಂಡರು. ಈ ಕಾರ್ಯಕ್ರಮಗಳ ಮೂಲಕ ಹಿಂದೂಧರ್ಮದಲ್ಲಿರುವ ಹಿಂದುಳಿದ ಮತ್ತು ಅಸ್ಪೃಶ್ಯರ ಸ್ಥಿತಿಗತಿಗಳ ಬಗ್ಗೆ ಅರ್ಥೈಸಿದರು. ಈ ಜಾತಿ ವ್ಯವಸ್ಥೆಯು ಪ್ರತಿಯೊಬ್ಬನ ನರನಾಡಿಗಳಲ್ಲಿಯೂ ರಕ್ತಗತವಾಗಿದೆ. ಏಕೆಂದರೆ ಅವನ ನಡವಳಿಕೆ ಜಾತಿಭಾವನೆಯಿಂದಲೇ ಕೂಡಿರುತ್ತದೆ. "ಹಳೆಯದೆಲ್ಲ ಹೊನ್ನೆಂದು ಭಾವಿಸುವುದಾಗಲೀ ಮುಂದೆಯೂ ನಡೆಯಬೇಕೆಂಬುದಾಗಲೀ ಇಂದು ಸಲ್ಲದ ವಿಚಾರ. ವಸ್ತುಸ್ಥಿತಿಯ ಬದಲಾವಣೆಯೊಡನೆ ವೈಚಾರಿಕ ಬದಲಾವಣೆಯೂ ಅನಿವಾರ್ಯ."[೧೮] ಅದ್ದರಿಂದ ಜಾತಿ ಪದ್ಧತಿಯನ್ನು ನಿರ್ಮೂಲನೆ ಮಾಡಿ ಸಮಾನತೆಯ ಆಧಾರದ ಮೇಲೆ ಸಮಾಜವನ್ನು ರೂಪಿಸಬೇಕು. ಇಲ್ಲವಾದರೆ ವೈಯಕ್ತಿಕ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳುತ್ತದೆ. ಮತ್ತೆ ಸಮುದಾಯಗಳ ಒಳಗೆ ಇರಬೇಕಾದ ಪ್ರಜಾತಾಂತ್ರಿಕ ಸಾಮಾಜಿಕತೆಯನ್ನು ಕೊಲೆ ಮಾಡಿ ಮತಾಂಧರ ನಾಡನ್ನು ಸೃಷ್ಟಿಸಿದಂತೆ ಆಗುತ್ತದೆ. ಆದ್ದರಿಂದ ಅತಿ ಮುಖ್ಯವಾಗಿ ಜಾತಿ ವಿನಾಶವಾಗಬೇಕಾಗಿದೆ.

ಮನುಷ್ಯನಿಗೆ ಸಾಮಾಜಿಕ ಸ್ವಾತಂತ್ರ್ಯವಿಲ್ಲದ ಜನ ಸಮುದಾಯಗಳ ಬದುಕು ಖೈದಿಗಳ ಸೆರೆವಾಸವಾದಂತೆ. ಸದಾ ಭಯಗ್ರಸ್ತ ವಾತಾವರಣದಲ್ಲಿ ಶೋಷಿತ ವರ್ಗಗಳಿಗೆ ಈ ಮಹಾಸಭಾದ ಮೂಲಕ ಬದುಕಿಗೆ ಒಂದು ಜೀವನ ಚೈತನ್ಯವನ್ನು ತುಂಬಿತ್ತು. ಅದರ ವಿಚಾರಧಾರೆಗಳನ್ನು ಪ್ರಚಾರ ಮಾಡುವ ಕಾರ್ಯವನ್ನು ಅವರೇ ಸ್ಥಾಪಿಸಿದ ಸ್ವಯಂ ಸೇವಕ ಸಂಘವಾದ "ಸಮತಾ ಸೈನಿಕದಳ" ನೇತೃತ್ವವನ್ನು ವಹಿಸಿಕೊಂಡಿತು. ಈ ಬಹಿಷ್ಕೃತ ಹಿತಕಾರಿಣಿ ಸಭಾ ಅಸ್ಪೃಶ್ಯರಲ್ಲಿ ಶಿಕ್ಷಣ, ಪ್ರಚಾರ,

ವಿದ್ಯಾರ್ಥಿನಿಲಯ ಸ್ಥಾಪನೆ, ಸಾಂಸ್ಕೃತಿಕ ಕಾರ್ಯಕ್ರಮ, ಆರ್ಥಿಕ ಪ್ರಗತಿ, ಕುಂದುಕೊರತೆಗಳನ್ನು ಕುರಿತು ಮನವಿ ಸಲ್ಲಿಸುವುದು ಇನ್ನೂ ಮುಂತಾದ ಮಾರ್ಗಗಳ ಮೂಲಕ ಅಸ್ಪೃಶ್ಯ ಉದ್ಧಾರ ಸಾಧನೆ, ಈ ಸಭೆಯ ಗುರಿಯಾಗಿತ್ತು. ಜೊತೆಗೆ ದಲಿತರಿಗೆ ರಾಜಕೀಯ ಮತ್ತು ಸಾಮಾಜಿಕ ಸಮಾನತೆಯನ್ನು ಸಂಪಾದಿಸುವುದಾಗಿತ್ತು. ಅಸ್ಪೃಶ್ಯರ ವಿಮೋಚನೆ, ಸ್ವಸಾಮರ್ಥ್ಯ, ಸ್ವಪ್ರಯತ್ನ, ಸ್ವಾಭಿಮಾನಗಳಿಂದ ಸಾಧ್ಯವೇ ಹೊರತು ಅನ್ಯರ ಕೃಪೆಯಿಂದ ಸಾಧ್ಯವಾಗದು ಎಂಬ ವಿಚಾರ ಡಾ.ಅಂಬೇಡ್ಕರ್‌ಗೆ ತನ್ನ ಅಂಗೈಹುಣ್ಣಿನಂತೆ ಸ್ಪಷ್ಟವಾಗಿ ಗೊತ್ತಿತ್ತು. ಅದಕ್ಕಾಗಿ ಅವರು "ನಿಮ್ಮ ವಿಮೋಚನೆ ನಿಮ್ಮನ್ನೇ ಅವಲಂಬಿಸಿದೆ. ಯಾವ ಮಹಾತ್ಮನನ್ನೂ ನಂಬಬೇಕಿಲ್ಲ"[೧೯] ಎಂದು ಖಾರವಾಗಿಯೇ ನುಡಿದರು. ಶಿಕ್ಷಣ, ಸಂಘಟನೆ, ಹೋರಾಟ ಈ ಮೂರು ನುಡಿಮುತ್ತುಗಳನ್ನು ಮಾಣಿಕ್ಯ ಎಂದು ಭಾವಿಸಿ ಹೊಸ ಸಮಾಜವ್ಯವಸ್ಥೆ, ನಿರ್ಮಾಣಕ್ಕೆ ನಿಮ್ಮ ವರ್ಗಗಳು ಮುಂದಾಗಬೇಕೆಂದು ಕರೆಕೊಟ್ಟರು.

ಡಾ.ಅಂಬೇಡ್ಕರ್‌ರವರ ಮಾತಿನ ಶೈಲಿ, ನೇರ ನುಡಿ, ಚುಚ್ಚುಮಾತು, ಕೆಣಕುವ ರೀತಿಯ ಮಾತುಗಳಾಗಿರುತ್ತಿದ್ದವು. "ಶೋಕಪೂರಿತವಾದ ನಿಮ್ಮ ಮುಖಗಳನ್ನು ನೋಡಿ, ಅಸಹಾಯಕವಾದ ನಿಮ್ಮ ಧ್ವನಿಯನ್ನು ಕೇಳಿ ನನ್ನ ಹೃದಯ ಬಿರಿಯುತ್ತದೆ. ಶತಮಾನಗಳಿಂದಲೂ ನೈರಾಶ್ಯದಲ್ಲಿರುವ ನೀವು ಇನ್ನು ಹತಾಶೆಯಲ್ಲೇ ಬೇಯುತ್ತಿರುವುದು ನನ್ನಲ್ಲಿ ಅಪಾರ ಕೋಪವನ್ನು ಉಂಟು ಮಾಡುತ್ತದೆ. ಭ್ರೂಣದಲ್ಲೇ ನೀವೇಕೆ ಸತ್ತು ಹೋಗಲಿಲ್ಲ? ನಿಮ್ಮ ಏಳ್ಗೆಯ ಬಗ್ಗೆ ನೀವೇ ಮುಂದಾಗಿ ಚಿಂತಿಸದಿದ್ದರೆ ನಿಮ್ಮ ಭವಿಷ್ಯವನ್ನು ಉತ್ತಮ ಪಡಿಸಿಕೊಳ್ಳಲು ನೀವೇ ಮನಸ್ಸು ಮಾಡದಿದ್ದರೆ, ಈ ಭೂಮಿಗೆ ಭಾರವಾಗಿ ಜೀವ ಹಿಡಿದುಕೊಂಡಾದರೂ ಏಕಿದ್ದೀರಿ? ಈ ಸಮಾಜದಲ್ಲಿರುವ ಪ್ರತಿಯೊಬ್ಬರಿಗೆ ಊಟ, ವಸ್ತ್ರ, ವಸತಿ ವ್ಯವಸ್ಥೆಯನ್ನು ಪಡೆದುಕೊಳ್ಳುವ ಜನ್ಮ ಸಿದ್ಧ ಅಧಿಕಾರವಿದೆ. ಸರಿಸಮಾನವಾಗಿ ಜೀವನ ನಡೆಸುವ ಹಕ್ಕಿದೆ. ನೀವು ಗೌರವಯುತ ಬದುಕು ನಡೆಸಲು ಇಚ್ಛಿಸುವುದಾದರೆ ಸ್ವಶಕ್ತಿಯಲ್ಲಿ ನಂಬಿಕೆಯಿಡಿ. ಅದಕ್ಕಿಂತ ಹೆಚ್ಚಿನ ಶಕ್ತಿ ಇನ್ನಾವುದರಲ್ಲೂ ಇಲ್ಲ"[೨೦] ಎಂದು ಮಾತನಾಡಲು ಆರಂಭಿಸಿದ್ದರು. ಡಾ.ಅಂಬೇಡ್ಕರ್‌ರವರ ಮಾತುಗಳಿಂದ ಪ್ರೇರಣೆ ಪಡೆದು ಎಚ್ಚೆತ್ತ ಶೋಷಿತ ಕುಟುಂಬಗಳು ಅವರ ಹೋರಾಟಕ್ಕೆ ಬೆಂಬಲ ನೀಡತೊಡಗಿದರು. ಅಸ್ಪೃಶ್ಯರು ಮೊದಲು ಸ್ವಾಭಿಮಾನಿಗಳಾಗಬೇಕು. ಇಲ್ಲದಿದ್ದರೆ ಜಾತಿಜಾಡ್ಯವನ್ನು ತೊಲಗಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಇಂದಿನ ಪರಿಸ್ಥಿತಿಯಲ್ಲಿ ಅವಿದ್ಯಾವಂತರೆಂದರೆ ಅಸ್ಪೃಶ್ಯರು. ಅಸ್ಪೃಶ್ಯರು ಓದು, ಬರಹ ಕಲಿಯಬೇಕು. ಅಸ್ಪೃಶ್ಯರು ಮಕ್ಕಳಿಗೆ ಇತರರಂತೆ ವಿದ್ಯಾಭ್ಯಾಸಕ್ಕಾಗಿ ಶಾಲಾಕಾಲೇಜುಗಳಲ್ಲಿ ಓದಲು ಅವಕಾಶ ಕಲ್ಪಿಸಿಕೊಡಬೇಕು. ಏಕೆಂದರೆ ಶೋಷಿತರು ತಮ್ಮ ವಿಮೋಚನೆಯ ದಾರಿಯನ್ನು ಕಾಣಬೇಕಾದರೆ ಶಿಕ್ಷಣವೇ ಮೂಲ ಅಸ್ತ್ರವಾಗಿದೆ ಎಂದು ಡಾ.ಅಂಬೇಡ್ಕರ್‌ರವರು ಹೇಳುತ್ತಿದ್ದರು.

ಸಾಮಾಜಿಕ ಆಂದೋಲನಗಳನ್ನು ಮುನ್ನಡೆಸಲು ಸಿದ್ಧರಾದ ಡಾ.ಅಂಬೇಡ್ಕರ್‌ರವರಿಗೆ ಭಾರತಾದ್ಯಂತ ನಿಮ್ನ ಮತ್ತು ಹಿಂದುಳಿದ ವರ್ಗಗಳ ಸಂಘಟನೆಗಳು ಬೆಂಬಲ ಸೂಚಿಸಿದವು. ಭಾರತೀಯ ಸಮಾಜದಲ್ಲಿ ಇವರೆಲ್ಲರೂ ಅನಾಗರಿಕರೆಂಬ ಸಂಕುಚಿತ ತೀರ್ಮಾನಗಳಿಂದಾಗಿ ಪ್ರಾಕೃತಿಕ ಸಂಪನ್ಮೂಲಗಳನ್ನು ಅನುಭೋಗಿಸಲು ಹೆಜ್ಜೆ ಹೆಜ್ಜೆಗೂ ನಿರ್ಬಂಧಗಳನ್ನು ಎದುರಿಸಿ, ಭಯದ ಬಾಳ್ವೆಯನ್ನು ನಡೆಸುತ್ತಿದ್ದರು. ಅವರೇ ನಿರ್ಮಿಸಿದ ದೇವಸ್ಥಾನಗಳ ಮೆಟ್ಟಿಲು ತುಳಿಯಲು ಆಗಿರಲಿಲ್ಲ. ಕೆರೆ–ಕಟ್ಟೆಗಳಲ್ಲಿ ನೀರು ಮುಟ್ಟುವ ಹಾಗಿರಲಿಲ್ಲ. ಯಾವಾಗೆಂದರೆ ಆವಾಗ ಊರನ್ನು ಪ್ರವೇಶಿಸುವಂತೆ ಇರಲಿಲ್ಲ. ಉತ್ತಮ ವಸತಿ ಪ್ರದೇಶಗಳಿಲ್ಲದೆ ಕೊಳಚೆ ಪ್ರದೇಶಗಳಲ್ಲಿ ವಾಸಿಸಬೇಕಾಗಿತ್ತು. ನಮ್ಮ ಕಾವ್ಯ ಸಾಹಿತ್ಯಗಳಲ್ಲಿ "ವಸು ದೈವಕ ಕುಟುಂಬಂ" ಎಂಬ ಕಲ್ಪನೆಗೆ ತದ್ವಿರುದ್ಧವಾಗಿ ಇಲ್ಲಿನ ಸಾಮಾಜಿಕ ಸ್ಥಿತಿ–ಗತಿಗಳಿತ್ತು. ಆದ್ದರಿಂದ ಡಾ.ಅಂಬೇಡ್ಕರ್‌ರವರು ಅಸ್ಪೃಶ್ಯತೆ ಆಚರಣೆಯ ವಿಶಾಲತೆಯನ್ನು ಹೀಗೆ ಅರ್ಥೈಸಿದವರು. "ಅಸ್ಪೃಶ್ಯತೆ ಹಿಂದೂಧರ್ಮದ ಒಂದು ಭಾಗವಾಗಿದೆ ಎನ್ನುವುದನ್ನು ಒಪ್ಪಿಕೊಳ್ಳುವಂತೆ ನಟಿಸುವ ಬುದ್ಧಿವಂತ ಸುಧಾರಕರೂ ಕೂಡ ಅಸ್ಪೃಶ್ಯತೆ ಆಚರಿಸುತ್ತಾರೆ" ಎಂದು ಹೇಳುತ್ತಾರೆ.

೧೯೨೭ರಲ್ಲಿ ಮುಂಬೈ ಶಾಸಕಾಂಗ ಸಭೆಗೆ ನಾಮಕರಣಗೊಂಡ ತರುವಾಯ ಸಾಮಾಜಿಕ ಆಂದೋಲನದ ರಥವನ್ನು ಎಳೆಯಲು ಅಣಿಗೊಂಡರು. ಅದಕ್ಕಿಂತಲೂ ಮುಂಚೆ ಅನೇಕ ಹಿಂದೂ ಧರ್ಮದ ಸುಧಾರಕರೂ ಪ್ರಯತ್ನಿಸಿದ್ದರು. ಅದರ ಪ್ರತಿಫಲ ಅಷ್ಟಾಗಿ ದೊರೆಯಲಿಲ್ಲ. ಹಿಂದೂಧರ್ಮ ಸರ್ವರನ್ನು ಸಮಾನವಾದ ದೃಷ್ಟಿಕೋನದಿಂದ ನೋಡಿದ ಮೇಲೆ ಶೋಷಿತರೇಕೆ ಅನ್ಯಾಯಕ್ಕೆ ಒಳಗಾದರೆಂಬ ಮೂಲಭೂತ ಪ್ರಶ್ನೆಗಳಿಗೆ ಉತ್ತರ ಹುಡುಕಲು ಮಹಾರ್ ಚೌಡರಕೆರೆ ಸತ್ಯಾಗ್ರಹ ಆರಂಭಿಸಿದ ಈ ಆಂದೋಲನದಲ್ಲಿ ಕೇವಲ ಮಹಾರ್ ಜಾತಿಯವರಿದ್ದರೆಂದು ಸಂಕುಚಿತತೆ ಇಂದಿನ ಪೀಳಿಗೆಗೆ ಬಂದರೆ ಡಾ.ಅಂಬೇಡ್ಕರ್‌ರವರ ಸಿದ್ಧಾಂತಗಳಲ್ಲಿರುವ ವೈಜ್ಞಾನಿಕ ಮನೋಧರ್ಮಗಳನ್ನು ಗ್ರಹಿಸುವುದರಲ್ಲಿ ಅವರೆಲ್ಲರೂ ಸೋತಂತೆಯೇ ಸರಿ. ಅಂದು ಕೂಡ ಅವರೊಡನೆ ಚರ್ಮಗಾರರು, ಆದಿವಾಸಿ, ಪೌರಕಾರ್ಮಿಕರು ಹಾಗೂ ಹಿಂದುಳಿದ ಜಾತಿಯ ಜನರಿದ್ದರು. ಅವರೆಲ್ಲರ ಸಮ್ಮುಖದಲ್ಲೇ ೧೯–೨೦ರ ಮಾರ್ಚ್ ೧೯೨೭ರಂದು ಮಹಾರ್ ನಗರದ ಚೌಡರಕೆರೆ ನೀರನ್ನು ಸ್ಪರ್ಶಿಸಿ ಅಸ್ಪೃಶ್ಯತೆಯ ವಿರುದ್ಧ ಐತಿಹಾಸಿಕ ಸಮರ ಸಾರಿದರು. ಆದರೆ ಇವರ ನಡವಳಿಕೆಯಿಂದ ಭಾರತೀಯ ಸಮಾಜವೆಲ್ಲ ಕಲುಷಿತಗೊಂಡಿವೆ ಎಂಬ ತೀರ್ಮಾನ ಹಿಂದುಗಳಲ್ಲಿ ಬಂದಿತು. ಅದಕ್ಕಾಗಿ ಶೋಷಿತ ಜನರ ವಿರುದ್ಧ ಸವರ್ಣೀಯರು ಸಿವಿಲ್ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿದರು. ಆದರೆ ಡಾ.ಅಂಬೇಡ್ಕರ್‌ರವರು ಒಬ್ಬ ಉತ್ತಮ ಮಹಾನ್

ನ್ಯಾಯವಾದಿಯಾಗಿದ್ದ ಕಾರಣ ಹಿಂದೂ ಜನರು ಹೂಡಿದ ದಾವೆಯನ್ನು ಸೋಲಿಸಿ ಅಸ್ಪೃಶ್ಯರ ಪರವಾಗಿ ಚಾರಿತ್ರಿಕವಾದ ಮಾನವೀಯ ಹಕ್ಕುಗಳನ್ನು ಪ್ರತಿಸ್ಥಾಪಿಸುವ ಹೊಸ ಯುಗಕ್ಕೆ ನಾಂದಿಯಾಡಿದರು.

ಅಲ್ಲಿ ನೆರೆದಿದ್ದ ಎಲ್ಲರನ್ನೂ ಕುರಿತು "ಚಿರಕಾಲ ಉಳಿಯುವಂಥ ಪ್ರಗತಿಯನ್ನು ಸಾಧಿಸಬೇಕಾದರೆ ನಾವು ಮೂರು ವಿಧದ ಶುದ್ಧಿಗೆ ನಮ್ಮನ್ನು ಒಳಪಡಿಸಿಕೊಳ್ಳುವುದು ಅವಶ್ಯಕ. ನಮ್ಮ ನಡವಳಿಕೆಯನ್ನು ಬದಲಿಸಿಕೊಳ್ಳಬೇಕು. ನಮ್ಮ ಭಾವನೆಗಳಿಗೆ ಹೊಸದನಿ ನೀಡಬೇಕು ಹಾಗೂ ನಮ್ಮ ವಿಚಾರಗಳನ್ನು ನವೀಕರಿಸಿಕೊಳ್ಳಬೇಕು. ಸತ್ತ ದನಗಳ ಮಾಂಸ ಹಾಗೂ ಎಂಜಲು ಪದಾರ್ಥಗಳನ್ನು ತಿನ್ನುವುದನ್ನು ಬಿಟ್ಟುಬಿಡುವ ಪ್ರಮಾಣವನ್ನು ಈ ಕ್ಷಣವೇ ಮಾಡಿರಿ. ನಮ್ಮಲ್ಲೇ ಇರುವ ಮೇಲು-ಕೀಳು ಭಾವನೆಯನ್ನು ಕಿತ್ತೊಗೆಯುವ ಪ್ರತಿಜ್ಞೆಯನ್ನು ಈಗಲೇ ಮಾಡಿರಿ. ಸ್ವಸಹಾಯವನ್ನು ರೂಪಿಸಿಕೊಂಡು ಆತ್ಮಗೌರವವನ್ನು ಮತ್ತೆ ಪಡೆದುಕೊಂಡು ಸ್ವ-ಅರಿವನ್ನು ಸಾಧಿಸಿದಾಗಲೇ ನಮ್ಮ ಜೀವನ ಮಟ್ಟ ಹೆಚ್ಚುತ್ತದೆ. ತಮ್ಮ ಜೀವನ ಮಟ್ಟಕ್ಕಿಂತ ತಮ್ಮ ಮಕ್ಕಳ ಜೀವನಮಟ್ಟ ಉತ್ತಮವಾಗಿರಬೇಕೆಂದು ಬಯಸಿದ ತಂದೆ -ತಾಯಿಗಳಿಗೂ, ಪ್ರಾಣಿಗಳಿಗೂ ಯಾವ ವ್ಯತ್ಯಾಸವೂ ಇರುವುದಿಲ್ಲ"[17] ಎಂದು ಕರೆ ನೀಡಿದರು. ನಿಮ್ನ ವರ್ಗದವರಿಗೆ ಪೌರ ಹಕ್ಕುಗಳು ಮತ್ತು ಸರ್ಕಾರಿ ನೌಕರಿಗಳು ದೊರೆಯಲು ಸಹಾಯ ಮಾಡುವಂತೆ, ಅವರ ಮಕ್ಕಳಿಗೆ ಉಚಿತ ಆಹಾರ ಒದಗಿಸುವಂತೆ, ತಾವೇ ಸತ್ತ ಪ್ರಾಣಿಗಳನ್ನು ಹೂಳುವಂತೆ, ನಿರ್ಣಯದ ಮೂಲಕ ಸವರ್ಣೀಯರಿಗೆ ಸಭೆ ಮನವಿ ಮಾಡಿಕೊಂಡಿತು. ಪಾನನಿರೋಧವನ್ನು ಜಾರಿಗೆ ತರುವಂತೆ, ಅಂತ್ಯಜರು ಸತ್ತ ದನ ತಿನ್ನದ ಹಾಗೆ ವಿಶೇಷ ಕಾನೂನಿನ ಮೇರೆಗೆ ನಿಷೇಧಿಸಬೇಕು; ಉಚಿತ ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಜಾರಿಗೆ ತರುವಂತೆ ವಿದ್ಯಾರ್ಥಿ ನಿಲಯಗಳಿಗೆ ಸಹಾಯಧನ ನೀಡುವಂತೆ ಸರ್ಕಾರಕ್ಕೆ ಒತ್ತಾಯ ಮಾಡಲಾಯಿತು.

ಮಹಡ್ ನಗರದ ಚೌಡರ್‌ಕೆರೆ ಆಂದೋಲನ ಅಸ್ಪೃಶ್ಯ ಹೋರಾಟ ಇತಿಹಾಸದಲ್ಲೆಂತೋ ಡಾ.ಅಂಬೇಡ್ಕರ್‌ರವರ ಜೀವನದಲ್ಲಿಯೂ ಮಹತ್ವಪೂರ್ಣವಾದ ಘಟನೆಯಾಗಿದೆ. ಅದು ಡಾ.ಅಂಬೇಡ್ಕರ್‌ರವರ ನಾಯಕತ್ವವನ್ನು ಗುರುತಿಸಿದುದ್ದಲ್ಲದೆ ಕಾಂಗ್ರೆಸ್, ಮುಸ್ಲಿಂ ಲೀಗ್‌ನಂತಹ ರಾಜಕೀಯ ಸಂಸ್ಥೆಗಳಿಗೆ ಅವರ ದಕ್ಷತೆಯನ್ನು, ಶಕ್ತಿಯನ್ನು ಪರಿಚಯ ಕೊಟ್ಟಿತು. ಅದು ಸಮಗ್ರ ಭಾರತೀಯ ಅಸ್ಪೃಶ್ಯ ಜನಾಂಗದ ಸಂಘಟನೆಗೆ ನಾಂದಿಹಾಡಿದ ಜೊತೆಗೆ ಸವರ್ಣೀಯರಿಗೆ ಎಚ್ಚರಿಕೆಯ ಸಂಕೇತ ಆಯಿತು. ಈ ಚೌಡರಕೆರೆಯ ಉದ್ದೇಶವನ್ನು ಡಾ.ಅಂಬೇಡ್ಕರ್‌ರವರು ಹೀಗೆ ಹೇಳಿದರು, 'ಚೌಡರ್‌ಕೆರೆಯ ನೀರು ಕುಡಿಯದಿದ್ದರೆ ನಾವು ಸಾಯುವುದಿಲ್ಲ, ನಾವು ಮನುಷ್ಯರು. ಈ ಕೆರೆಯ ನೀರಿಗೆ ನಮಗೂ ಹಕ್ಕಿದೆ ಎಂಬುದನ್ನು ಸಾಧಿಸುವುದೇ ಈ ಚಳುವಳಿಯ ಉದ್ದೇಶವಾಗಿತ್ತು.'

ಮಹಾಡ್ ನಗರದಲ್ಲಿ ನಡೆದ ಚೌಡರ್‌ಕೆರೆಯ ಸ್ಪರ್ಶಿಕ್ಕಿಂತಲೂ ಪ್ರಮುಖವಾದ ಇನ್ನೊಂದು ಹೋರಾಟವನ್ನು ನಾವು ಯಾರು ಮರೆಯುವಂತಿಲ್ಲ. ಚೌಡರಕೆರೆ ಆಂದೋಲನ ನಡೆದು

ಒಂಭತ್ತು ತಿಂಗಳಲ್ಲಿ ಮತ್ತೊಂದು ಮಹತ್ವದ ಘಟನೆಯೆಂದರೆ ಹಿಂದ್ಧೂಧರ್ಮದ ಆಧಾರಸ್ತಂಭ ಮತ್ತು ಹಿಂದೂ ಧರ್ಮಶಾಸ್ತ್ರಗಳಿಗೆ ಮೆದುಳಾಗಿರುವ "ಮನುಸ್ಮೃತಿ"ಯನ್ನು ಸಾರ್ವಜನಿಕರಿಗಾಗಿ ಮಹಡ್ ನಗರದ ಪ್ರಮುಖ ಬೀದಿಯೊಂದರಲ್ಲಿ ದಹಿಸಿದರು. (೨೫-೧೨-೧೯೨೭) ಸಮಾನತೆ ಮತ್ತು ನಿರ್ಜಾತೀಯತೆಯ ಆಧಾರದ ಮೇಲೆ ಹಿಂದೂ ಸಮಾಜವನ್ನು ಪುನರ್ ವ್ಯವಸ್ಥೆಗೊಳಿಸಿದಾಗ ಮಾತ್ರ ಈ ನಾಡಿನ ಉದ್ಧಾರ ಸಾಧ್ಯವಾಗುತ್ತದೆ. ಅದಕ್ಕಾಗಿ ಹಿಂದೂಧರ್ಮದ ಸುಧಾರಣೆಯಾಗಬೇಕಾಗಿದೆ. ಹಿಂದೂಧರ್ಮದಲ್ಲಿ ಚಲನಶೀಲ ಅಂಶಗಳಿರಬೇಕೆಂದು ಹಲವಾರು ದಾರ್ಶನಿಕರು ಅದನ್ನು ಪರಿಶುದ್ಧಗೊಳಿಸುವ ನಿಟ್ಟಿನಲ್ಲಿ ಚಿಂತಿಸಿದ್ದರು. ಆದರೆ ಯಾವೊಬ್ಬ ಹಿಂದೂ ಮನುಸ್ಮೃತಿಯನ್ನು ಅಧಿಕಾರಯುತವಾಗಿ ಸುಟ್ಟ ಘಟನೆ ಇತಿಹಾಸದಲ್ಲಿ ಅಲ್ಲಿಯ ತನಕ ಆಗಿರಲಿಲ್ಲ. ಅದನ್ನು ಸುಟ್ಟ ಸುದ್ದಿ ಭಾರತೀಯ ಹಿಂದೂಜನರ ರಕ್ತದೊಳಗೆ ಮಿಶ್ರಣವಾಗಿ ಡಾ.ಅಂಬೇಡ್ಕರ್‌ರವರನ್ನು ವ್ಯವಸ್ಥೆಯ ಕೊಂಡಿಯಿಂದ ಬೇರ್ಪಡಿಸುವ ಧರ್ಮೋಪಾಯದ ಕುತಂತ್ರವನ್ನು ಹೆಣೆಯಲು ಮುಂದು ಮಾಡಿತು. ಅದಕ್ಕೆ ಡಾ.ಅಂಬೇಡ್ಕರ್‌ರವರಿಗೆ 'ಧರ್ಮವಿರೋಧಿಪಟ್ಟ'ವನ್ನು ಕಟ್ಟಿದರು. ಆದರೆ ಅಪಾರವಾದ ವೈಜ್ಞಾನಿಕ ಚಿಂತನೆ ರೂಢಿಸಿಕೊಂಡಿದ್ದ ಅವರಿಗೆ ಇಂತಹ ಕಪಟಗಳೆಲ್ಲವೂ ಮತ್ತಷ್ಟು ಎತ್ತರಕ್ಕೆ ಬೆಳೆಯಲು ಸೋಪಾನವಾಯಿತು.

ಅಸ್ಪೃಶ್ಯರಿಗೆ ಹಿಂದೂಧರ್ಮದ ದೇವಾಲಯಗಳಿಗೆ ಪ್ರವೇಶ, ದೇವಾಲಯಗಳಿಗೆ ಮುಕ್ತ ಪ್ರವೇಶ ಕಾರ್ಯಕ್ರಮ ಹಾಕಿಕೊಂಡರು. ಏಕೆಂದರೆ "ನಮಗೀಗ ದೇವರನ್ನು ಪೂಜಿಸುವುದರಿಂದೊದಗುವ ತೃಪ್ತಿ ಮುಖ್ಯವಲ್ಲ. ಅಸ್ಪೃಶ್ಯರು ಸಂಪರ್ಕದಿಂದ ದೇವರಾಗಲಿ, ದೇವಮಂದಿರವಾಗಲಿ ಅಪವಿತ್ರವಾಯಿತೆನ್ನುವ ಭಾವನೆಯನ್ನು ನಿರ್ಮೂಲನೆ ಮಾಡುವುದೇ ನಮ್ಮ ಗುರಿ"[೨೨] ಎಂದು ವಿಚಾರವನ್ನು ಮನವರಿಕೆ ಮಾಡಿಕೊಟ್ಟರು. ಸವರ್ಣೀಯರ ಪಾರ್ವತಿ ದೇವಾಲಯ (೧೩-೧೦-೧೯೨೯) ಮತ್ತು ನಾಸಿಕ ಕಾಳರಾಮ ದೇವಾಲಯ ಪ್ರವೇಶಗಳೆರಡೂ ಸಹ ಹಿಂದೂಧರ್ಮದ ಜನರಲ್ಲಿ 'ಧರ್ಮೋದ್ಧಾರ' ಪ್ರಜ್ಞೆ ಬೆಳೆಸಿತು. ಕೊನೆಗೆ ಮಹಾತ್ಮಗಾಂಧೀಜಿಯವರೇ ಅಸ್ಪೃಶ್ಯರಿಗೆ ಭಾರತೀಯ ಸಮಾಜದ ಹಿಂದೂ ದೇವಾಲಯಗಳಿಗೆ ಮುಕ್ತಪ್ರವೇಶವಿದೆ ಎಂದು ಹೇಳತೊಡಗಿದರು. ಡಾ.ಅಂಬೇಡ್ಕರ್ ಮಾತ್ರ ಸ್ವತಃ ಈ ದೇವಾಲಯ ಪ್ರವೇಶಗಳಿಂದ ಶೋಷಿತರ ಬದುಕಿನ ಬವಣೆ ಶಾಶ್ವತವಾಗಿ ನಿವಾರಣೆಯಾಗಬೇಕೆಂದು ತೀರ್ಮಾನಿಸಿ ಅವರಿಗೆ ರಾಜಕೀಯ, ಶೈಕ್ಷಣಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ರಂಗಗಳಲ್ಲಿ ವಿಫಲ ಅವಕಾಶ ಸಿಕ್ಕಿದಾಗ ಮಾತ್ರವೇ ಈ ಜನರ ಅಭಿವೃದ್ಧಿ ಸಾಧ್ಯವೆಂದು ಹೇಳಿದರು. ಈ ನಿಟ್ಟಿನಲ್ಲಿಯೇ ಸಾಮಾಜಿಕ ಸ್ವಾತಂತ್ರ್ಯದ ಕಲ್ಪನೆಯನ್ನು ಹೀಗೆ ವ್ಯಕ್ತಪಡಿಸುತ್ತಾರೆ. 'ಸ್ವಾತಂತ್ರ್ಯವೆಂದರೆ ಒಂದು ದೇಶವು ತನಗೆ ತಾನೇ ಎಂತಹ ಸರ್ಕಾರ ಬೇಕೋ ಎನ್ನುವುದನ್ನು ಸಾಮಾಜಿಕ ವ್ಯವಸ್ಥೆ ಹೇಗಿರಬೇಕೆಂದು ಹೇಳಿಕೊಳ್ಳಲು ಅವಕಾಶವೇ ಹೊರತು ಬೇರೆನೊ

ಅಲ್ಲ' ಎನ್ನುತ್ತಾರೆ. ಸರ್ಕಾರವೊಂದು ತಾನು ನೀಡುವ ಪ್ರಜಾ ಆಡಳಿತದಲ್ಲಿ ಸಾಮಾಜಿಕ ಪ್ರಭುತ್ವವೇ ಪರಮಾಧಿಕಾರವನ್ನು ಹೊಂದಿರಬೇಕು. ಅಂದೆಂದಿಗೂ ಕಾಲ್ಪನಿಕ ಕತೆ ಅಥವಾ ಮಿಥ್ಯವಾದದ ಸಿದ್ಧಾಂತಗಳಡಿ ನಿರ್ಧರಿಸುವ ಮಿತ ಅವಕಾಶಗಳಂತೆ ಬಾರದೆಂದು ಬಾಬಾ ಸಾಹೇಬ್ ಡಾ.ಅಂಬೇಡ್ಕರ್‌ರವರು ಪ್ರತಿಪಾದಿಸುತ್ತಿದ್ದರು.

ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಮೋತಿಲಾಲ್ ನೆಹರು ಅವರ ಸಿದ್ಧಾಂತ ಆಶ್ರಯಗಳನ್ನು ಸಂವಿಧಾನವೆಂದು ತಿಳಿದು ಜಾರಿಗೊಳಿಸಲು ಹವಣಿಸುತ್ತಿರುವಾಗ ಬಾಬಾ ಸಾಹೇಬರು ಅಸ್ಪೃಶ್ಯತೆಯ ತಾಯಿಬೇರಿನ ಮೂಲವಿದ್ದರೂ, ಅದರ ತಂತು ಬೇರುಗಳನ್ನು ಕಿತ್ತೊಗೆಯಲು ಪ್ರಯತ್ನಿಸಿದರು. ಆಗ ಕಾಂಗ್ರೆಸ್ ಮತ್ತು ಅನೇಕ ಹಿಂದೂ ನಾಯಕರು ಅಸ್ಪೃಶ್ಯತೆ ಕೇವಲ ರಾಜಕೀಯ ಸಮಸ್ಯೆ, ಅದೊಂದು ಸಾಮಾಜಿಕ ಸಮಸ್ಯೆ ಅಲ್ಲವೆಂದು ದೀರ್ಘರಾಗವೆಳೆಯ ತೊಡಗಿದರು. ಅದಕ್ಕೆ ಡಾ.ಅಂಬೇಡ್ಕರ್‌ರವರು ಅಸ್ಪೃಶ್ಯತೆ ರಾಜಕೀಯ ಸಮಸ್ಯೆಯಾಗಿದ್ದರೆ ಭಾರತದಲ್ಲಿ ಇಷ್ಟೊಂದು ಅಜಗಜಾಂತರದ ಅಸಮಾನತೆಗಳಿರಲು ಸಾಧ್ಯವಿರುತ್ತಿರಲಿಲ್ಲ. ಹಾಗಿದ್ದರೆ ಇದಕ್ಕೆಲ್ಲ ಕಾರಣಗಳೇನು? ಎಂದು ಮರುಸವಾಲು ಹಾಕಿದಾಗ ಹಿಂದೂ ಧರ್ಮದ ಜನರಿಂದ ಯಾವುದೇ ಪ್ರತ್ಯುತ್ತರ ಬರಲಿಲ್ಲ. ಸೈಮನ್ ಆಯೋಗ ಭಾರತಕ್ಕೆ ಆಗಮಿಸುವ ವೇಳೆಗಾಗಲೇ ಡಾ.ಅಂಬೇಡ್ಕರ್ ಈ ದೇಶದಲ್ಲಿ ಶೋಷಿತ ಜನಾಂಗಗಳಿಗೆ ಸಾಮಾಜಿಕ ಮಾನವಹಕ್ಕು ಹಾಗೂ ಮುಕ್ತ ಅವಕಾಶಗಳಿಗಾಗಿ ಆಗ್ರಹಿಸುತ್ತಿದ್ದರು. ಹಿಂದೂ ಸವರ್ಣೀಯರಿಗೆ ಬಹಿಷ್ಕೃತ ಹಿತಕಾರಿಣಿ ಮಹಾಸಭಾವು ಇಲ್ಲಿನ ಶೋಷಿತ ಜಾತಿಗಳಿಗೆ ಪ್ರಜಾಮೌಲ್ಯ ಹಾಗೂ ಮಾನವ ಹಕ್ಕಿಗೆ ಪ್ರಸ್ತಾವನೆಯಲ್ಲಿ ಸೈಮನ್ ಆಯೋಗದ ಮುಂದೆ ಸಲ್ಲಿಸಲು ಬೇಕಾಗಿದ್ದು ಅಗತ್ಯ ಮಾಹಿತಿ ಸಿದ್ಧಪಡಿಸಲು ಕೇಳಿತು. ಭಾರತೀಯ ಜನಾಂಗಗಳಲ್ಲಿನ ಶೋಷಿತ ವರ್ಗಗಳ ಪರವಾಗಿ ಅವರು ಹಕ್ಕುಗಳ ಸಂರಕ್ಷಣಾ ಬೇಡಿಕೆ ಸಲ್ಲಿಸಿತು. ಡಾ.ಅಂಬೇಡ್ಕರ್‌ರವರು ಮುಂಬಯಿ ಪ್ರಾಂತ್ಯದಲ್ಲಿ ಅಸ್ಪೃಶ್ಯರ ಇಂಗ್ಲೀಷ್ ಶಿಕ್ಷಣದಲ್ಲಿರುವ ಪ್ರಗತಿಯ ಪರಾಮರ್ಶೆ ಮಾಡಿ ಅವರ ಶೈಕ್ಷಣಿಕ ಸುಧಾರಣೆಗಾಗಿ ಕ್ರಮ ಕೈಗೊಳ್ಳುವ ಬಗ್ಗೆ, ಹಾಗೂ ಮುಂಬಯಿ ವಿಧಾನಸಭೆಯಲ್ಲಿ ೧೪೦ ಸ್ಥಾನಗಳಲ್ಲಿ ೨೨ ಸ್ಥಾನಗಳನ್ನು ಅಸ್ಪೃಶ್ಯರಿಗೆ ಮೀಸಲಿಡಬೇಕು, ಮಂತ್ರಿಮಂಡಲದಲ್ಲೂ ಅವರ ಪ್ರತಿನಿಧಿಗಳಿರಬೇಕು, ಪ್ರಾಂತ್ಯದ ಆದಾಯದಲ್ಲಿ ದಲಿತರ ಶಿಕ್ಷಣಕ್ಕೆ ಬೇಕಾಗುವ ವೆಚ್ಚದ ಅಧಿಕಾರ ಭೂಸೇನೆ, ನೌಕಾಸೇನೆ ಮತ್ತು ಪೊಲೀಸ್ ಇಲಾಖೆಗಳಲ್ಲಿ ದಲಿತ ಜನರಿಗೆ ನೌಕರಿಗಳು ಇತ್ಯಾದಿ ಬೇಡಿಕೆಯನ್ನಿಟ್ಟರು. ಅಂದರೆ ಮುಖ್ಯವಾಗಿ ನಿಮ್ನ ವರ್ಗಗಳಿಗೆ ಪ್ರಾಂತೀಯ ಶಾಸಕಾಂಗ ಮತ್ತು ಕೇಂದ್ರಿಯ ಶಾಸಕಾಂಗ ಸಭೆಗಳಲ್ಲಿ ಸೂಕ್ತ ಪ್ರಾತಿನಿಧ್ಯ ಮತ್ತು ಪ್ರಜಾಸತ್ತಾತ್ಮಕ ಪ್ರಮಾಣಾನುಸಾರ ಸಾರ್ವಜನಿಕ ಸೇವೆಗಳಲ್ಲಿ ಮೀಸಲಾತಿ ಅಳವಡಿಸಲು ಆಗ್ರಹಿಸಿದರು.

ಅಸ್ಪೃಶ್ಯರಿಗೆ ಮತ್ತು ಹಿಂದುಳಿದ ಜನಗಳಿಗೆ ಎಲ್ಲಾ ಬಗೆಯ ನಾಗರೀಕ ಹಕ್ಕುಗಳನ್ನು ನೀಡಬೇಕೆಂದು ಪ್ರತಿಪಾದಿಸಿ ಅಸ್ಪೃಶ್ಯತೆ ಅಳಿಯದೆ ಈ ದೇಶಕ್ಕೆ ಉಳಿಗಾಲವಿಲ್ಲವೆಂದು ಭಾವಿಸಿದರು. ಡಾ.ಅಂಬೇಡ್ಕರ್‌ರವರು ಇಂಗ್ಲೇಂಡ್ ಸರ್ಕಾರದಿಂದ ನೇರವಾಗಿ ದುಂಡು ಮೇಜಿನ ಸಭೆಗೆ ಆಹ್ವಾನ ಸ್ವೀಕರಿಸಿದರು. ಅವರು ಅಂದಿನ ಪರಿಷತ್ತನಲ್ಲಿ ಮಂಡಿಸಿದ ವಾದಗಳನ್ನು ಬರೋಡ ಮಹಾರಾಜರೂ ಸಹ ಮುಕ್ತ ಕಂಠದಿಂದ ಕೊಂಡಾಡಿದರು. ಡಾ.ಅಂಬೇಡ್ಕರ್ ದಿನದಿಂದ ದಿನಕ್ಕೆ ಪ್ರಾಮುಖ್ಯತೆ ಗಳಿಸಿಕೊಂಡರು. ಅವರು ಅಸ್ಪೃಶ್ಯರ ಬಗ್ಗೆ ಮಾತನಾಡುತ್ತಿರುವಾಗ ಮತ್ತು ಅವರ ಪ್ರತಿಯೊಂದು ಭಾಷಣವು ಭಾರತದ ಯೋಗಕ್ಷೇಮದ ಮೇಲಿತ್ತು. ಒಂದು ಸಂಪ್ರದಾಯಿಕ ಮತ್ತೊಂದು ಸಮಾಜವಾದಿ ವೇದಿಕೆಗಳೆರಡರಲ್ಲೂ ಅಸ್ಪೃಶ್ಯರ ಧಾರುಣ ಅವ್ಯವಸ್ಥೆಯ ಬಗ್ಗೆ ಪರಮಾರ್ಶನವನ್ನು ನೀಡತೊಡಗಿದರು. ಅವೆಲ್ಲವೂ ಭಾವನೆಗಿಂತಲೂ ಪ್ರಯೋಗಾತ್ಮಕಕ್ಕೆ ಸಂಬಂಧಿಸಿದಂತಿದ್ದವು. ಗಾಂಧೀಜಿಯವರು ಅಸ್ಪೃಶ್ಯರ ಪ್ರತಿನಿಧಿಯಾಗಿ ಇಂಗ್ಲೆಂಡ್‌ನಲ್ಲಿ ಪ್ರತಿಯೊಬ್ಬರ ಪ್ರಶಂಸೆಗೆ ಒಳಗಾಗಿದ್ದರು. ಆದರೆ ಈಗ ಡಾ.ಅಂಬೇಡ್ಕರ್‌ರವರು ಅಸ್ಪೃಶ್ಯರ ನಿಜನಾಯಕರಾದರು ಅವರು ಹಾಗೆಯೇ ಮಹಾತ್ಮರ ನಿಲುವನ್ನು ಮುಕ್ತವಾಗಿ ಖಂಡಿಸುತ್ತಾ ಸಮ್ಮೇಳನದಲ್ಲಿ ಪ್ರಾಮುಖ್ಯತೆಗಳಿಸಿ ಕೊಂಡವರು. ಇದರಿಂದಾಗಿ ಸಮ್ಮೇಳನದಲ್ಲಿ ಡಾ.ಅಂಬೇಡ್ಕರ್ ಮತ್ತು ಗಾಂಧೀಜಿ ಪ್ರಭಾವಿತ ಗಣ್ಯ ವ್ಯಕ್ತಿಗಳಾದರು. ಡಾ.ಅಂಬೇಡ್ಕರ್‌ರವರ ಉಸಿರಿನ ಒಂದೊಂದು ಕಣದಲ್ಲೂ ಈ ದೇಶದ ಶೋಷಿತ ಜಾತಿಗಳ ಸಮಗ್ರ ವಿಮೋಚನೆಗಾಗಿ ದುಡಿಯಬೇಕೆಂಬ ಹಂಬಲ ತುಂಬಿದವು.

ಆದ್ದರಿಂದ ಭಾರತೀಯ ಸಮಾಜದಲ್ಲಿ ಅತಿ ಎತ್ತರದ ಸ್ಥಾನದಲ್ಲಿರಿಸಿ ಕೊಂಡು ಗೌರವಿಸುತ್ತಿದ್ದ ಮಹಾತ್ಮಗಾಂಧೀಜಿಯವರನ್ನು ಜಾತಿ ವ್ಯವಸ್ಥೆ ಹೋಗಲಾಡಿಸಿ ನಮ್ಮ ಸಮಸ್ಯೆಗಳಿಗೆ ಸ್ಪಂದಿಸಿರಿ ಎಂದು ಸಂಸತ್ತಿನಲ್ಲಿ ಆಗ್ರಹಿಸಿದರು. ಮಹಾತ್ಮಗಾಂಧೀಜಿರವರ ತಮ್ಮ ಎಲ್ಲಾ ಬಗೆಯ ವಾದ ಮತ್ತು ವ್ಯಾಖ್ಯಾನಗಳನ್ನು ವರ್ಣಶ್ರಮದಡಿ ಚಿಂತಿಸುತ್ತಿದ್ದರು. ಅವರ ಹೋರಾಟಗಳಲ್ಲಿಯೂ ಪ್ರಮುಖವಾಗಿ ರಾಜಕೀಯ ವಿಚಾರಗಳಿಗೆ ಸಂಬಂಧಿಸಿದ್ದರೆ ಅವುಗಳಲ್ಲಿ ಸಾಮಾಜಿಕ ಹೋರಾಟಗಳೆಲ್ಲವೂ ಸೂಕ್ಷ್ಮ ಪ್ರಮಾಣದಲ್ಲಿದ್ದವು. ಸಾಮಾಜಿಕವಾಗಿ ಗಾಂಧೀಜಿಯವರು ಸಾಮಾಜಿಕ ಶ್ರೇಣಿಯ ಅತ್ಯುನ್ನತ ಜಾತಿಗೆ ಸೇರಿದವರಾಗಿದ್ದರು. ಅವರು ಜಾತಿ ಪದ್ಧತಿಯನ್ನು ಸಮರ್ಥಿಸಿ ಅದರ ಶ್ರೇಣಿಯಲ್ಲಿ ಬ್ರಾಹ್ಮಣ ಮತ್ತು ವೈಶ್ಯರನ್ನು ಮೇಲಿಟ್ಟಿರುವ ಜನ್ಮಸಿದ್ಧಾಂತ ಸಮರ್ಥಿಸಿಕೊಂಡರು. ಬಹುಸಂಖ್ಯಾತರು ತಳಮಟ್ಟದಲ್ಲಿರುವ ಶೋಷಿತರ ಬೆಳವಣಿಗೆಗೆ ಯಾವುದೇ ಅವಕಾಶ ನೀಡಲಿಲ್ಲ. ಡಾ.ಅಂಬೇಡ್ಕರ್‌ರವರು ಮಹಾತ್ಮ ಗಾಂಧೀಜಿಯವರ ಇಂತಹ ದ್ವಿಮುಖವಾದ ನಿಲುವುಗಳನ್ನು ಕಟುವಾಗಿ ಟೀಕಿಸಿದರು. ಮಹಾತ್ಮಗಾಂಧೀಜಿ ಮಾತ್ರ ಸಂಪ್ರದಾಯವಾದ ಸುಧಾರಕರು. ಡಾ.ಅಂಬೇಡ್ಕರ್‌ರವರು ಜಾತಿ ಪ್ರಶ್ನೆಗಳಿಗೆ ಒಗಟುಗಳನ್ನು ತುಲನಾತ್ಮಕವಾಗಿ ವಿಶ್ಲೇಷಿಸಿ, ಇಲ್ಲಿನ

ನತದೃಷ್ಟ ಜನಾಂಗಗಳಿಗೆ ಪ್ರತ್ಯೇಕ ಮತದಾನ ಪದ್ಧತಿ ಮತ್ತು ಮೀಸಲಾತಿಯಿಂದ ಅವರ ಬದುಕಿನ ಸಾಮಾಜಿಕತೆಯಲ್ಲಿ ಮಾನವೀಯ ಸ್ವಾಭಾವಿಕ ಹಕ್ಕುಗಳು ಸಿಗುತ್ತವೆಂಬ ಚಿತ್ರಣವನ್ನು ಮಹಾತ್ಮಗಾಂಧೀಜಿ ಮುಂದಿಟ್ಟರು. ಆದರೆ ಮಹಾತ್ಮಗಾಂಧೀಜಿ ಮಾತ್ರ ಲಂಡನ್ನಿನಲ್ಲಿ ಮಹಮದೀಯ, ಕ್ರೈಸ್ತ ಹಾಗೂ ಸಿಖ್ ಧರ್ಮಗಳ ಬಗ್ಗೆ ಉದಾರವಾದ ನಿಲುವು ಪ್ರದರ್ಶಿಸಿದರು. ಅದರಲ್ಲೂ ಇವರೆಲ್ಲರಿಗಿಂತಲೂ ಕೀಳಾಗಿ ಬಾಳ್ವೆ ನಡೆಸುತ್ತಿದ್ದ ನಿಮ್ನ ವರ್ಗಗಳಿಗೆ ನೀಡುವ ಪ್ರತ್ಯೇಕ ಮತದಾನ ಪದ್ಧತಿಯು ಹಿಂದೂಧರ್ಮದ ಸರ್ವನಾಶಕ್ಕೂ ನೀಡುವ ಮುಕ್ತ ರಹದಾರಿ ಎಂದೇ ಟೀಕಿಸಿ, ಅಸಮ್ಮತಿ ಸೂಚಿಸಿದರು. ಡಾ.ಅಂಬೇಡ್ಕರ್‌ರವರು ಮಹೋನ್ನತ ಗುರಿ ಮತ್ತು ಉದ್ಧಾರ ವಿಚಾರಗಳ ಮುಖೇನ ತನ್ನ ಶೋಷಿತ ಬಂಧುಗಳಿಗಾಗಿ ಮಾನವೀಯ ಹಕ್ಕುಗಳನ್ನು ಸಂಪಾದಿಸಿ ಕೊಡಲು ಮಹತ್ವದ ಪ್ರಯತ್ನ ಹಾಕಿದವರು. ಈ ನಿಟ್ಟಿನಲ್ಲಿ ಡಾ.ಅಂಬೇಡ್ಕರ್‌ರವರು ತಮ್ಮ ಅಚಲವಾದ ನಿಲುವನ್ನು ಸಡಿಲಿಸಲಿಲ್ಲ.ಆದರೆ ಗಾಂಧೀಜಿ ಮಾತ್ರ ಅವರ ನಿಲುವನ್ನು ವಿರೋಧಿಸಿ ಆಮರಣಾಂತ ಉಪವಾಸ ಸತ್ಯಾಗ್ರಹ ಹೂಡಲು ನಿರ್ಧರಿಸಿದರು. ರಾಜಕೀಯ ಸಮಾಜದ ಸರ್ವಾಂಗೀಣ ಉನ್ನತಿಗೆ ಮೂಲ. ಈ ಅಧಿಕಾರ ನಮಗೆ ಬೇಕು. ಈ ಅಸ್ತ್ರದಿಂದ ನಮ್ಮ ಜನರ ಹಿತಾಸಕ್ತಿಗಳನ್ನು ಸಂರಕ್ಷಿಸಬಲ್ಲೆವು ಎಂಬ ದೃಢತೆಯನ್ನು ಡಾ.ಅಂಬೇಡ್ಕರ್‌ರವರು ಸಾರಿದರು.

ಮಹಾತ್ಮಗಾಂಧೀಜೀಗೆ ಅಂಬೇಡ್ಕರ್‌ರೊಬ್ಬರೇ ಪ್ರತಿಸ್ಪರ್ಧಿ. ನಿಮ್ನ ವರ್ಗಗಳ ಪ್ರತಿನಿಧಿಯಾದ ಅವರು ಕೋಟಿಗಟ್ಟಲೆಯಿರುವ ಅಸ್ಪೃಶ್ಯರಿಗಾಗಿ ಪ್ರತ್ಯೇಕ ಮತದಾನ ಕ್ಷೇತ್ರಗಳ ಹಾಗೂ ಕಠಿಣವಾದ ರಕ್ಷಣೆಗಳನ್ನು ಕೇಳಿದರು. ಈ ವ್ಯಕ್ತಿಗಳಿಬ್ಬರೂ ಯಾವಾಗಲೂ ಪರಸ್ಪರ ಅಪಾದಿಸಿಕೊಳ್ಳಲಿಲ್ಲ. ಡಾ.ಅಂಬೇಡ್ಕರ್‌ರವರು ಉತ್ತಮ ಸಮರ್ಥ ನ್ಯಾಯವಾದಿಯಾಗಿದ್ದರು. ಮಾತು ಮಾತ್ರ ತೀಕ್ಷ್ಣವಾದ ವಾದಗಳನ್ನು ಮಂಡಿಸಿದರು. "ನೀವು ನಿಮಗೊಂದು ಮಾತೃಭೂಮಿಯಿದೆಯೆಂದು ಹೇಳಿಕೊಳ್ಳುತ್ತೀರಿ. ನಾನು ಮತ್ತೇ ಮತ್ತೇ ಹೇಳುತ್ತೇನೆ. ನನಗೆ ಮಾತೃ ಭೂಮಿ ಎಂಬುದಿಲ್ಲ. ನನಗೆ ಸ್ವಲ್ಪವಾದರೂ ಸ್ವಾಭಿಮಾನವಿದೆ ಎನ್ನುವ ಹಾಗೂ ಮನುಷ್ಯತ್ವವಿದೆ ಎನ್ನುವ ಯಾವ ಅಸ್ಪೃಶ್ಯನೂ ತನಗೆ ನಾಯಿ-ಬೆಕ್ಕುಗಳಂತೆಯೂ ಬದುಕಗೊಡದ ಅಥವಾ ಪಶುಪ್ರಾಣಿಗಳಿಗೆ ಸಿಗುವಷ್ಟು ಸಹನ ಭೂತಿಯೂ ತನಗೆ ಸಿಗದ ದೇಶಕ್ಕೆ "ಇದು ನನ್ನ ದೇಶ" ಎಂದು ಹೇಳಿಕೊಳ್ಳುವುದು ಸಾಧವೇ ಇಲ್ಲ"[೨೩] ಎಂದು ನುಡಿದಾಗ ಮಹಾತ್ಮಗಾಂಧಿಜೀ ಹೊರಟು ಹೋದರು. ಗಾಂಧೀಜಿಯವರ ಈ ವರ್ತನೆ ಡಾ.ಅಂಬೇಡ್ಕರ್‌ರವರನ್ನು ಮತ್ತಷ್ಟು ಖಿನ್ನರನ್ನಾಗಿಸಿತು.

ಹೀಗೆ ಗಾಂಧೀಜಿ ಮತ್ತು ಅಂಬೇಡ್ಕರ್‌ರವರ ನಡುವಿನ ಪರಿಸ್ಥಿತಿ ಬಿಗಡಾಯಿಸಿದ ಸಮಯದಲ್ಲಿ ಕೂಡ ಡಾ.ಅಂಬೇಡ್ಕರ್‌ರವರು ತಮ್ಮ ಪ್ರಯತ್ನವನ್ನು ಫಲಕಾರಿಯಾಗಿಸಲು ಬ್ರಿಟಿಷ್ ಪ್ರಧಾನಿ ರಾಮ್ಸೆ ಮಾಕ್ಡೋನಾಲ್ಡ್ ಮತ್ತು ಅವರ ಸಚಿವರನ್ನು ೨೫-೫-೧೯೩೨ರಲ್ಲಿ ಭೇಟಿ ಮಾಡಿ ೩೩

ಮಟಗಳ ಜ್ಞಾಪನಾಪತ್ರ ಅರ್ಪಿಸಿದರು. ಇಂಗ್ಲೆಂಡ್ ಸಂಸತ್ತು ಭಾರತದಲ್ಲಿ (ಕಮ್ಯೂನಲ್ ಅವಾರ್ಡ್) ಕೋಮುವಾರು ನಿರ್ಧಾರದ ಆದೇಶವನ್ನು ೪-೮-೧೯೩೨ರಲ್ಲಿ ಒಪ್ಪಿ ಜಾರಿಗೊಳಿಸಿತು. ಇದರಿಂದ ಅಸ್ಪೃಶ್ಯರಿಗೆ ಪ್ರತ್ಯೇಕ ಮತದಾನ ಹಕ್ಕು ನೀಡಲಾಯಿತು. ಮತ್ತೇ ಸ್ಥಾನ ಮೀಸಲಾತಿಯನ್ನು ನೀಡಲಾಯಿತು. ಅದರಂತೆಯೇ ಹಿಂದೂ ಪ್ರತಿನಿಧಿಗಳ ಆಯ್ಕೆಗಾಗಿ ಮತದಾನ ಮಾಡುವ ಅಧಿಕಾರವನ್ನು ನೀಡಲಾಯಿತು. ಈ ತೀರ್ಮಾನದಿಂದ ಡಾ.ಅಂಬೇಡ್ಕರ್‌ಗೆ ತುಂಬ ಸಂತೋಷವಾಯಿತು. ಆದರೆ ಈ ಆದೇಶದ ವಿರುದ್ಧ ಹಿಂದೂ ಸಮುದಾಯ ಮತ್ತು ಗಾಂಧೀಜಿಯವರು ವಿರೋಧಿಸಿದರು. ಗಾಂಧೀಜಿಯವರು ಯರವಾಡ ಸೆರೆಮನೆಯಲ್ಲಿ ೨೦-೯-೧೯೩೨ರಲ್ಲಿ ಆಮರಣಾಂತ ಉಪವಾಸವನ್ನು ಕೈಗೊಂಡರು.

ಆಗ ಡಾ.ಅಂಬೇಡ್ಕರ್‌ರವರು "ಕ್ರಿಶ್ಚಿಯನ್ ಮತ್ತು ಮುಸ್ಲಿಂಮರಿಗೆ ವಿಶೇಷ ಸವಲತ್ತುಗಳನ್ನು ಸಲ್ಲಿಸುವುದರಿಂದ ರಾಷ್ಟ್ರ ಚೂರು ಚೂರಾಗಿ ಒಡೆಯುವದಿಲ್ಲವಾದರೆ, ಅಸ್ಪೃಶ್ಯರು ಪಡೆಯುವ ವಿಶೇಷ ಸೌಲಭ್ಯಗಳಿಂದ ಹಿಂದೂಧರ್ಮ ಛಿದ್ರವಾಗುವುದೆನ್ನುವುದರಲ್ಲಿ ಅರ್ಥವಿಲ್ಲ. ಮಹಾತ್ಮ ಚಿರಂಜೀವಿ ಅಲ್ಲ. ಅನೇಕ ಮಹಾತ್ಮರು ದೀನ ದಲಿತೋದ್ಧಾರಕ್ಕಾಗಿ ಶ್ರಮ ಪಟ್ಟಿದ್ದಾರೆ. ಈ ತನಕ ಅವರ ಶ್ರಮ ಫಲಿಸಲಿಲ್ಲ. ಮಹಾತ್ಮರು ಬಂದಿದ್ದಾರೆ, ಹೋಗಿದ್ದಾರೆ. ಅಸ್ಪೃಶ್ಯರು ಅಸ್ಪೃಶ್ಯರಾಗಿಯೇ ಉಳಿದಿದ್ದಾರೆ."[೨೪] ಅಸ್ಪೃಶ್ಯತೆ ನಿರ್ಮೂಲನೆಗಾಗಿ ಗಾಂಧೀಜಿಯವರೆಂದೂ ಆಮರಣಾಂತ ಉಪವಾಸ ಮಾಡಿಲ್ಲವೆಂದು ಹೇಳಿದ್ದರು.

"ನೀವೆಲ್ಲರೂ ಸೇರಿ ಹತ್ತಿರದ ಮರಕ್ಕೆ ನೇಣುಹಾಕಿದರೂ ಅಡ್ಡಿಯಿಲ್ಲ. ನನ್ನ ಜನರಿಗೆ ನ್ಯಾಯವಾಗಿ ಬರಬೇಕಾದ ಹಕ್ಕುಗಳನ್ನು ಮಾತ್ರ ನಾನು ಬಿಡಲು ಸಾಧ್ಯವಿಲ್ಲ"[೨೫] ಎಂದು ಗುಡುಗಿದರು. ಮಹಾತ್ಮಗಾಂಧೀಜಿಯವರನ್ನು ಕುರಿತು ಒಂದು ವಾರದ ಮಟ್ಟಿಗೆ ತಮ್ಮ ನಿಲುವು ಬದಲಾಯಿಸಿಕೊಳ್ಳಲು ಕೋರಿದರು. ೨೧ ಸೆಪ್ಟೆಂಬರ್ ೧೯೩೨ರಂದು ತೇಜ ಬಹದ್ದೂರ್ ಸಪ್ರು ತಮ್ಮ ದ್ವಿತೀಯ ವಾದ ಮಂಡಿಸಿ ಪ್ರಾಥಮಿಕ ಮತ್ತು ಮಾಧ್ಯಮಿಕ ಮೀಸಲಾತಿ ನೀಡಲು ಗಾಂಧೀಜಿಗೆ ಒಪ್ಪಿಗೆಯಿದೆ ಎಂದು ಅಂಬೇಡ್ಕರ್‌ಗೆ ತಿಳಿಸಿದರು. ಮಹಾತ್ಮಗಾಂಧೀಜಿಯ ದೇಹಸ್ಥಿತಿ ಗಂಭೀರವಾಗಿ ಹದಗೆಡತೊಡಗಿತು. ಮದನ ಮೋಹನ ಮಾಳವಿಯ, ಎಂ.ಕೆ.ಜಯಕರ್, ಬಿರ್ಲಾ, ಮೆಹತಾ, ರಾಜಗೋಪಾಲಚಾರಿ, ಎಂ.ಸಿ.ರಾಜ ಕೂಡ ಅಂಬೇಡ್ಕರ್‌ರನ್ನು ಸಂಧಿಸಿದರು ಸಮಸ್ಯೆ ಬಗೆಹರಿಯಲಿಲ್ಲ. ತಮ್ಮ ನಿಲುವಿನಲ್ಲಿ ಯಾವುದೇ ಬದಲಾವಣೆ ಇಲ್ಲ ಎಂದು ಹೇಳಿಬಿಟ್ಟರು. ಕೊನೆಗೆ ಕಸ್ತೂರಿಬಾ ಆಗಮಿಸಿ ಡಾ.ಅಂಬೇಡ್ಕರ್ ಮನಸ್ಸಿಗೆ ಮಾತೃಪ್ರೇಮದಿಂದ ಲಗ್ಗೆ ಹಾಕಿದರು. ಗಾಂಧೀಜಿಯ ಪುತ್ರ ದೇವದಾಸ್‌ಗಾಂಧಿ ಕೂಡ ತಮ್ಮ ತಂದೆಯ ಪ್ರಾಣ ಉಳಿಸಲು ಬೇಡಿಕೊಂಡರು. ಇಂತಹ ಸಂದಿಗ್ಧ ಪರಿಸ್ಥಿತಿ ಸಿಲುಕಿದ ಬಾಬಾ ಸಾಹೇಬರು ಕೊನೆಗೆ ಮಾನವೀಯ ದೃಷ್ಟಿಯಿಂದ ಚಿಂತಿಸಿ ಸರಳ ಮಿಸಲಾತಿಗೆ ಸಮ್ಮತಿಸಿದರು.

ಆದರೆ ೧೯೭ ಸ್ಥಾನಗಳಿಗೆ ಬದಲು ೧೪೮ ಸ್ಥಾನಗಳಿಗೆ ಬ್ರಿಟಿಷ್ ಭಾರತದ ಕೇಂದ್ರ ಶಾಸನ ಸಭೆಯಲ್ಲಿ ಹಿಂದೂಗಳಿದ್ದ ಒಟ್ಟು ಸ್ಥಾನಗಳ ಪೈಕಿ ಹತ್ತನೆ ಒಂದು ಭಾಗ (೧೦/೧)ವನ್ನು ನಿಮ್ನ ವರ್ಗಗಳಿಗೆ ಬಿಟ್ಟುಕೊಡುವ ನಿರ್ಧಾರದೊಂದಿಗೆ ೨೪ ಸೆಪ್ಟೆಂಬರ್ ೧೯೩೨ರಂದು ಪೂನಾ ನಗರದಲ್ಲಿ ಹಿಂದೂ ಜನರೊಡನೆ ಅಂಬೇಡ್ಕರ್ ಐತಿಹಾಸಿಕ ಒಪ್ಪಂದಕ್ಕೆ ಸಹಿ ಹಾಕಿದರು. ಇದುವೇ 'ಪೂನಾ ಒಪ್ಪಂದ'ವೆಂದು ಚರಿತ್ರೆಯಲ್ಲಿ ಖ್ಯಾತಿಪಡೆಯಿತು. ಈ ಒಪ್ಪಂದದಂತೆ ನಿಮ್ನ ವರ್ಗಗಳನ್ನು 'ಹರಿಜನ' ಹಾಗೂ 'ಗಿರಿಜನ' ಎನ್ನುವ ಬದಲು 'ಪರಿಶಿಷ್ಟ ಜಾತಿ ಮತ್ತು ಪಂಗಡ'ಗಳೆಂದು ನಾಮಕರಣಗೊಂಡವು.

ಈ ಪೂನಾ ಒಪ್ಪಂದವನ್ನು ಕುರಿತು "ನಾನಂತು ತುಂಬಾ ಇಕ್ಕಟ್ಟಿನ ಕತ್ತರಿಯಲ್ಲಿ ಸಿಕ್ಕಿಕೊಂಡಿದ್ದ ಜೀವವೊಂದನ್ನು ಉಳಿಸುವ ಹಾಗೂ ಜೊತೆ ಜೊತೆಗೆ ನನ್ನ ಜನರ ಭವಿಷ್ಯವನ್ನು ಅಂಧಕಾರಗೊಳಿಸದ ತೀರ್ಮಾನವೊಂದನ್ನು ಕೈಗೊಳ್ಳಬೇಕಾಗಿತ್ತು. ಆಗಿರುವ ಒಪ್ಪಂದ ನನಗೆ ಸಮಾಧಾನ ತಂದಿದೆ. ಆದರೆ ಮನಸ್ಸಿಗೆ ಅದು ಸಂತೋಷವನ್ನು ತಂದಿಲ್ಲ; ಸಂಕಟವೊಂದು ತಿಳಿಯಾಗಿ ಬಗೆಹರಿಯಿತೆಂಬ ತೃಪ್ತಿಯಿದೆಯಾದರೂ ನನ್ನ ಕರ್ತವ್ಯವನ್ನು ಸಾಧಿಸುವಲ್ಲಿ ನನ್ನ ಧ್ಯೇಯವನ್ನು ತಲುಪುವಲ್ಲಿ ನಾನು ಸಾಕಷ್ಟು ಮಟ್ಟಿಗೆ ವಿಫಲನಾಗಿದ್ದೇನೆ ಎಂಬ ವಿಷಾದ ನಮ್ಮನ್ನು ಆವರಿಸಿದೆ. ಈ ಹಂತದಲ್ಲೂ ನಿಮ್ಮ ಮುಂದೆ ನನ್ನ ಅಳಲನ್ನು ನಿವೇದಿಸಿಕೊಳ್ಳಬಯಸುತ್ತೇನೆ. ಈಗ ತೋರಿಸಿರುವಷ್ಟಾದರೂ ಔದಾರ್ಯವನ್ನು ದುಂಡುಮೇಜಿನ ಪರಿಷತ್ತಿನ ಸಭೆಯಲ್ಲಿ ಗಾಂಧೀಜಿ ಯಾಕೆ ತೋರಿಸಲಿಲ್ಲ? ನಿಮ್ನ ವರ್ಗಗಳ ಬಗೆಗಿನ ಕಾಳಜಿಯನ್ನು ಕೃತಿಯಲ್ಲಿ ಅವರು ಆಗಲೇ ತೋರಿದ್ದರೆ ಈ ಸಂಕಟ ಬರುತಿರಲಿಲ್ಲವೇನೋ; ಅವರು ಅನುಭವಿಸಿದ ಸಂಕಟಕ್ಕೆ ನಾವೆಲ್ಲರೂ ಪಟ್ಟ ಯಾತನೆಗೆ ಇಡೀ ದೇಶ ಎದುರಿಸಿದ ತೀವ್ರ ಆತಂಕ – ಅಸಮಾಧಾನಗಳಿಗೆ ಗಾಂಧೀಜಿಯವರೇ ಹೊಣೆಗಾರವಲ್ಲವೇ?"[೨೬] ಎಂದು ಪ್ರತಿಕ್ರಿಯಿಸಿದರು. ಒಟ್ಟಾರೆ ಕರ್ಣನನ್ನು ಸೋಲಿಸಲು ಇಂದ್ರನು ನಾನಾ ರೀತಿಯಲ್ಲಿ ಅವನಿಂದ ಎಲ್ಲ ಶಕ್ತಿಯನ್ನು ಕಿತ್ತುಕೊಂಡಂತೆ ಕರ್ಣನ ಸದ್ಗುಣವನ್ನೇ ತನ್ನ ಬಂಡವಾಳವನ್ನಾಗಿಸಿ ಮಾಡಿಕೊಂಡಂತೆ ರಾಜಕಾರಣಿ ಗಾಂಧೀಜಿ ಅಂಬೇಡ್ಕರ್‌ರನ್ನು ಪರಿಪೂರ್ಣವಾಗಿ ವಂಚಿಸಿದರು ಈ ಪೂನಾ ಒಪ್ಪಂದದಲ್ಲಿ ಎಂದರೆ ತಪ್ಪಾಗಲಾರದು. ನವೆಂಬರ್ ೭ ೧೯೩೨ರಲ್ಲಿ ಇಂಗ್ಲೆಂಡಿಗೆ ತೆರಳಿದರು. ಆಗ ಹಡಗಿನ ಯೂರೋಪಿನ ಪ್ರಯಾಣಿಕ ಪೂನಾ ಒಪ್ಪಂದ ಮಾತನಾಡುತ್ತ ಅಂಬೇಡ್ಕರ್‌ರನ್ನು ತೋರಿಸುತ್ತಾ "ಭಾರತೀಯ ಇತಿಹಾಸದಲ್ಲಿ ಹೊಸ ಪುಟಗಳನ್ನು ಬರೆಯುತ್ತಿರುವಾತನೇ ಈ ಯುವಕ"[೨೭] ಎಂದು ಹೇಳಿದನು. ಈ ಮಾತಿನಲ್ಲಿ ಅಪಾರ ಸತ್ಯಾಂಶವಿದೆ.

೧೯೧೧ರ ಜನಗಣತಿ ಜನಸಂಖ್ಯಾ ಆಧಾರದ ಮೇರೆಗೆ ಶೇಕಡ ೧೮೭ರಷ್ಟು ಮೀಸಲಾತಿಯನ್ನು ನಿಗದಿ ಪಡಿಸಲಾಯಿತು. ವಿದ್ಯಾಭ್ಯಾಸ, ಸರ್ಕಾರಿ ಮೀಸಲಾತಿ(ನೇಮಕಾತಿ), ರಾಜಕೀಯ ಹಾಗೂ ಇತರೆ ಸರ್ಕಾರಿ ಸೌಲಭ್ಯಗಳಿಗೆ ಮೀಸಲಾತಿ ನಿಯಮಗಳನ್ನು ಅಳವಡಿಸಲು

೧೯೩೫ರ ಕೇಂದ್ರೀಯ ಶಾಸನದಲ್ಲಿ ಪ್ರತ್ಯೇಕ ನಿಯಮಗಳನ್ನು ಕ್ರೋಢೀಕರಿಸಿದರು. ಡಾ.ಅಂಬೇಡ್ಕರ್‌ರು ಭಾರತೀಯ ಸಂವಿಧಾನದ ಇತಿಹಾಸದಲ್ಲಿ ೧೯೩೫ ಕೇಂದ್ರೀಯ ಕಾಯಿದೆ ರೂಪುಗೊಳ್ಳಲು ಪ್ರಯತ್ನಿಸಿದ ಮೊದಲ ಐತಿಹಾಸಿಕ ಅಸ್ಪೃಶ್ಯರಾದರು. ಏನೇನೂ ಇಲ್ಲದಿದ್ದಂತಹ ಸನ್ನಿವೇಶದಲ್ಲಿ ಡಾ.ಬಾಬಾ ಸಾಹೇಬರು ಗಾಂಧೀಜಿಯಂತಹ ಮಹಾನ್ ನಾಯಕರ ವಿರುದ್ಧ ನಿಂತು ತನ್ನ ಹೋರಾಟದ ಕಹಳೆ ಮೊಳಗಿಸಿದ ನೈಜ ಸಾಮಾಜಿಕ ಹೋರಾಟದ ರೂವಾರಿ ಎಂದೆನಿಸಿದರು.

ಭಾರತದ ಪ್ರಾಚೀನ ಇತಿಹಾಸದ ಪುಟಗಳನ್ನು ತೆರೆದರೆ ಮೌರ್ಯ ಸಾಮ್ರಾಜ್ಯದ ಅರಸ ಅಶೋಕನ ತದನಂತರ ಬಂದ ಅನೇಕ ಹಿಂದೂ ರಾಜರುಗಳೆಲ್ಲರೂ ಬ್ರಾಹ್ಮಣ್ಯ ತತ್ವನಿಷ್ಠ ಕಾನೂನುಗಳನ್ನೇ ಜಾರಿಗೊಳಿಸುತ್ತಿದ್ದರು. ಈ ದೇಶದ ಆಳ್ವಿಕೆಯ ಕಾಲಘಟ್ಟಗಳಲ್ಲಿ 'ಸುವರ್ಣಯುಗ' ಎಂದು ಪರಿಗಣಿಸಲ್ಪಟ್ಟಿದ್ದರು. ರಾಜ್ಯಾಡಳಿತಗಳಲ್ಲಿಯೂ ಅಸ್ಪೃಶ್ಯತೆಗಳ ಆಚರಣೆಗಳಿದ್ದವು. ಅಂದರೆ ಎಲ್ಲಿ ಸಾರ್ವತ್ರಿಕವಾಗಿ ಪ್ರಜಾಪ್ರಭುತ್ವದ ಮೌಲ್ಯಗಳಿರಲಿಲ್ಲವೆಂಬುದು ತಿಳಿಯುತ್ತದೆ. ಅದ್ದರಿಂದ ಈ ದೇಶದ ಜನವರ್ಗಗಳಿಗೆ ಪ್ರಜಾಪ್ರಭುತ್ವ ತತ್ವಗಳನ್ನು ಹೇಗಾದರೂ ಮಾಡಿ ಪರಿಚಯಿಸಿ ಅದರಂತೆ ಅವರ ಬದುಕು ಸೃಷ್ಟಿಯಾಗಬೇಕೆಂಬ ಮನಸ್ಥಿತಿ ಡಾ.ಅಂಬೇಡ್ಕರ್‌ರವರದು.

ಭಾರತದಲ್ಲಿನ ಜಾತಿಪದ್ಧತಿ ಮತ್ತು ಅಸಮಾನತೆಯ ಸಾಮಾಜಿಕ ವ್ಯವಸ್ಥೆಯೇ ನಮ್ಮ ಶತ್ರುಗಳಾಗಿವೆ. ನಮ್ಮಲ್ಲಿರುವ ಅಸಮತೋಲನಕ್ಕೆ ಕಾರಣವಾಗಿ ಹಿಂಸೆ ಮತ್ತು ಅಶಾಂತಿಗೆ ಪ್ರೇರಕವಾಗಿ ಇವುಗಳ ವಿರುದ್ಧ ಯುದ್ಧಕ್ಕೆ ನಮ್ಮಲ್ಲಿ ಒಗ್ಗಟ್ಟು ಅನಿವಾರ್ಯವಾಗಿದೆ. ಇದಕ್ಕಾದರೂ ನಾವು ಜಾತಿ, ಭಾಷೆ, ಧರ್ಮ ಹಾಗೇ ಪ್ರಾಂತ್ಯಗಳ ಮೇಲಿನ ಪ್ರೇಮ, ಪ್ರೀತಿ, ಅಭಿಮಾನ ತೊರೆದು ನಾವೆಲ್ಲರೂ ಮಾನವರು ಒಂದೇ ಎಂಬ ಮನುಷ್ಯತ್ವದ ನೆಲೆಯಲ್ಲಿ ಅರಿತು ಹೋರಾಟ ಮಾಡಿದರೆ ರಾಷ್ಟ್ರದಲ್ಲಿ ಆದರ್ಶವಾದ ಸಾಮಾಜಿಕ ಮತ್ತು ರಾಜಕೀಯ ಪ್ರಜಾಪ್ರಭುತ್ವವನ್ನು ಸ್ಥಾಪಿಸಬಹುದು ಎಂಬ ದೃಢನಂಬಿಕೆ ವಿಶ್ವಾಸಗಳನ್ನು ಬಾಬಾ ಸಾಹೇಬರು ಮೈಗೂಡಿಸಿಕೊಂಡಿದ್ದರು. ಹೆಚ್ಚಿನ ಪ್ರಾದೇಶಿಕತೆ ಅದರೊಳಗಿರುವ ಜಾತಿ ಮನಸ್ಸುಗಳಿಂದ ರಾಷ್ಟ್ರೀಯತೆಯ ಭಾವೈಕ್ಯತೆ ಆಗದೆಂಬ ಅಭಿಮತವನ್ನು ಹೊಂದಿದ್ದರು. ಒಂದು ರಾಷ್ಟ್ರ ಉತ್ತಮ ರಾಜಕೀಯ ವ್ಯವಸ್ಥೆ, ರಾಷ್ಟ್ರಾಭಿವೃದ್ಧಿಗೆ ಪೂರಕ ಶಕ್ತಿ ತುಂಬುತ್ತದೆ. ಸಮಾಜದಲ್ಲಿ ಕೆಡಕುಗಳು ಎಲ್ಲೆಲ್ಲಿವೆಯೋ ಅಲ್ಲೆಲ್ಲಾ ನೋವು ಮತ್ತು ಅನ್ಯಾಯದ ಕುರುಹುಗಳಾಗಿ ಉಳಿಯುವ ಮುನ್ನ ಅವುಗಳನ್ನು ನಿರ್ಮೂಲನೆ ಮಾಡಬೇಕಾದದ್ದು ಆರೋಗ್ಯವಂತ ರಾಜಕೀಯ ಜವಾಬ್ದಾರಿಯಾಗಿದೆ. ಪ್ರತಿಯೊಂದು ಆಡಳಿತ ರಾಜಕೀಯ ಇಚ್ಛಾಶಕ್ತಿಗಳಿಂದ ಆಗುವಾಗ ಸರ್ವರ ಉದಯವನ್ನು ನೆನಪಿನಲ್ಲಿಟ್ಟುಕೊಂಡು "ಸರ್ವರಿಗೆ ಸಮಬಾಳು ಸರ್ವರಿಗೂ ಸಮಪಾಲು" ಎಂಬ ವಿಶ್ವಮಾನವನದ ಕಲ್ಪನೆಯನ್ನು ಹೊಂದಿದ್ದರು ಡಾ.ಅಂಬೇಡ್ಕರ್‌ರವರು.

ಡಾ.ಅಂಬೇಡ್ಕರ್ ಮಾನಸಿಕಯಾತನೆ ನಡುವೆ ಪೂನಾ ಒಪ್ಪಂದಕ್ಕೆ ಸಹಿ ಹಾಕಿದ ಮೇಲೆ ೧೯೩೫ರ ಕೇಂದ್ರೀಯ ಶಾಸನದನ್ವಯ ದೇಶ ಚುನಾವಣೆಗೆ ಸಜ್ಜಾಯಿತು. ಅದಕ್ಕಾಗಿ ಅವರು ತಮ್ಮದೇ ಆದ ರಾಜಕೀಯ ಪಕ್ಷವನ್ನು ಸ್ಥಾಪಿಸಿದರು. ಅದೇ "ಸ್ವಾತಂತ್ರ್ಯ ಕಾರ್ಮಿಕ ಪಕ್ಷ" ದಲಿತ, ಹಿಂದುಳಿದ ಹಾಗೂ ಅಲ್ಪಸಂಖ್ಯಾತರ, ರೈತ, ಕೂಲಿ ಕಾರ್ಮಿಕರ ಬೆಂಬಲವನ್ನು ಯಾಚಿಸಿದರು. ಬಾಂಬೆಯ ಪ್ರಾಂತೀಯ ಶಾಸಕಾಂಗ ಸಭೆಗೆ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಅವರ ಪಕ್ಷ ೧೫ ಸೀಟುಗಳನ್ನು ಗಳಿಸಿತು. ಇದರಲ್ಲಿ ಚರ್ಮಗಾರರು, ಪೌರಕಾರ್ಮಿಕ ಜನಾಂಗಗಳಿಗೂ ಅವಕಾಶವನ್ನು ಕಲ್ಪಿಸಿ. ತಮ್ಮ ತತ್ವ ಬದ್ಧನಿಷ್ಠತೆಯನ್ನು ತೋರಿದರು:

೧೯೪೨ರ ವೇಳೆಗೆ ಡಾ.ಅಂಬೇಡ್ಕರ್ ರಾಜಕೀಯ ಮನೋಧರ್ಮದೊಳಗಿದ್ದ ಬಹುಸಂಖ್ಯಾತರ ಹಿತಾಸಕ್ತಿಗಳು ಈ ವರ್ಗಗಳಲ್ಲಿ ಚರ್ಚಿಸಿಕೊಂಡವು. ತಮ್ಮ ರಾಜಕೀಯ ಗುರಿ ಈಡೇರಿಕೆಗಾಗಿ ಅಖಿಲಭಾರತ ಪರಿಶಿಷ್ಟ ಜಾತಿಗಳ ಒಕ್ಕೂಟ ಆರಂಭಿಸಿದರು. (ಏಪ್ರಿಲ್.೧೯೪೨) ಇಲ್ಲಿಯೂ ಕೂಡ ಪರಿಶಿಷ್ಟ ಜಾತಿ ಮತ್ತು ಉಪಜಾತಿಗಳಿಗೆ ವಿಪುಲವಾದ ಅವಕಾಶಗಳನ್ನು ದೊರಕಿಸಿಕೊಟ್ಟರು. ಡಾ.ಅಂಬೇಡ್ಕರ್‌ರ ರಾಜಕೀಯ ಮುತ್ಸದ್ಧಿತನವನ್ನು ಗುರುತಿಸಿದ ವೈಸ್‌ರಾಯಿಗಳು ಅವರನ್ನು ೨೦-೭-೧೯೪೨ರಲ್ಲಿ ತಮ್ಮ ಕಾರ್ಯಕಾರಿ ಮಂಡಳಿಯಲ್ಲಿ ಕಾರ್ಮಿಕ ಖಾತೆ ಸಚಿವರನ್ನಾಗಿ ಸದಸ್ಯರನ್ನಾಗಿ ಅಖಿಲಭಾರತ ಪರಿಶಿಷ್ಟ ಜಾತಿಯ ಪರವಾಗಿ ನೇಮಿಸಿಕೊಂಡರು. ಕಾರ್ಮಿಕ ಸಚಿವರಾಗಿದ್ದಾಗ ಭಾರತದ ಇತಿಹಾಸದಲ್ಲಿ ಇದುವರೆಗೂ ಕಂಡರಿಯದಂತಹ ಕಾಯಿದೆ, ಶಾಸನ ಹಾಗೂ ಕಾರ್ಯಾದೇಶಗಳ ಮಹಾಪೂರವೇ ಹೊರಬಂದವು. ಕಾರ್ಮಿಕರ ಬದುಕಿಗೆ ಬೇಕಾದ ಅಗತ್ಯ ಆರೋಗ್ಯ ಸುಧಾರಣೆ, ವೇತನ ನಿಗದೀಕರಣ, ಗಣಿಕಾರ್ಮಿಕರ ಕ್ಷೇಮಾಭಿವೃದ್ಧಿ ನಿಧಿ, ಸ್ತ್ರೀಯರಿಗೆ ಹೆರಿಗೆ ಭತ್ಯ, ದುಡಿಯುವ ಸ್ಥಳಗಳಲ್ಲಿ ಉತ್ತಮ ಪರಿಸರ ಹಾಗೂ ಕೈಗಾರಿಕಾ ವಿವಾದಗಳನ್ನು ತಗ್ಗಿಸಲು ಅಗತ್ಯ ಕ್ರಮಗಳನ್ನು ಅಳವಡಿಸಿ "ಹೊಸಯುಗದ ಪರಿವರ್ತನೆಯ ಕಾನೂನುಗಳ ಹರಿಕಾರ"ರಾದರು. ಸುದೀರ್ಘವಾಗಿ ೪ ವರ್ಷಗಳ ಸೇವೆ ಸಲ್ಲಿಸಿದ ನಂತರ ಮುಂದಿನ ಮಹತ್ವದ ರಾಜಕೀಯ ಹೆಜ್ಜೆಗಳನ್ನಿಡಲು ಸಚಿವಸ್ಥಾನಕ್ಕೆ ರಾಜಿನಾಮೆಯನ್ನು ಕೊಟ್ಟರು.

ಮೇ, ೬, ೧೯೪೫ರಂದು ಬಾಂಬೆಯಲ್ಲಿ ಅಖಿಲ ಭಾರತ ಪರಿಶಿಷ್ಟ ಜಾತಿಯ ಒಕ್ಕೂಟದ ಮಹಾಅಧಿವೇಶನವನ್ನು ಉದ್ಘಾಟಿಸುತ್ತಾ ಕ್ರಿಪ್ಸ್ ಮತ್ತು ತೇಜಬಹುದ್ದೂರ್ ಸಪ್ರು ಅವರ ನಿಲುವುಗಳು ಅಸಂವಿಧಾನಿಕ ಪ್ರಜಾಪ್ರಭುತ್ವದ ನಿಲುವುಗಳೆಂದು ಖಂಡಿಸಿದರು. ಕೋಮುವಾರು ಬಿಕ್ಕಟ್ಟಿಗೆ ಪರಿಹಾರವನ್ನು ಸೂಚಿಸಿದರು. "ಸವರ್ಣೀಯ ಹಿಂದುಗಳು ಬಹುಸಂಖ್ಯಾತರಾಗಿದ್ದರೆಂಬ ಕಾರಣಕ್ಕೆ ಅವರ ಕೈಗೆ ಬ್ರಿಟಿಷರು ಅಧಿಕಾರ ಸೂತ್ರವನ್ನು ವಹಿಸುವುದು ಅನ್ಯಾಯವಾದದ್ದು. ಏಕೆಂದರೆ ಭಾರತದ ಇತರ ಅಲ್ಪಸಂಖ್ಯಾತ ವರ್ಗಗಳು ತಮ್ಮ ಪ್ರತಿರೋಧವನ್ನು ತೋರುವುದು ಶತಃಸಿದ್ಧ.

ಆದ್ದರಿಂದ ಅಲ್ಪಸಂಖ್ಯಾತ ವರ್ಗಗಳಿಗೆ ಸಮರ್ಪಕವಾದ ಪ್ರಾತಿನಿಧ್ಯವನ್ನು ಶಾಸನ ಸಭೆಗಳಲ್ಲಿ ನೀಡುವ ಮೂಲಕ ಪ್ರತಿರೋಧವನ್ನು ಶಮನ ಮಾಡಲು ಸಾಧ್ಯವಿದೆ. ಈ ವಿವರಗಳು ಈಗಲೇ ತೀರ್ಮಾನವಾದರೆ ಬ್ರಿಟಿಷ್‌ರಿಂದ ಅಧಿಕಾರ ಹಸ್ತಾಂತರ ಕೂಡ ಸುಗಮವಾಗಿ ನಡೆದೀತು"[೨೮] ಎಂದರು. ಅಂದರೆ ಹಿಂದುಗಳು, ಮುಸ್ಲಿಂರು, ಪರಿಶಿಷ್ಟ ಜಾತಿಗಳ ಪ್ರಾತಿನಿಧ್ಯ ಶಾಸಕಾಂಗದಲ್ಲಿ ಅವರ ಜನಸಂಖ್ಯೆಯ ಪ್ರಮಾಣಕ್ಕೆ ಸಮವಾಗಿರಬೇಕೆಂಬ ತತ್ವವನ್ನು ಅನುಸರಿಸಬೇಕೆಂದು ನಿಲುವು ತಾಳಿದರು. ಏಕೆಂದರೆ ಯಾರೊಬ್ಬರು ದೇಶದ ಆಳ್ವಿಕೆಯಲ್ಲಿ ಅವರ ಪ್ರಜಾಪ್ರಮಾಣಕ್ಕಿಂತ ಹೆಚ್ಚಿನ ಪ್ರಾತಿನಿಧ್ಯ ಪಡೆಯಬಾರದೆಂಬ ಧೋರಣೆ ಆಗಿತ್ತು. ಇದೊಂದು ಜಾತ್ಯಾತೀತ ನಿಲುವು.

೨೪ ಮಾರ್ಚ್ ೧೯೪೬ರಂದು ಆಯೋಗ ದೆಹಲಿಗೆ ಆಗಮಿಸಿ ರಾಜಕೀಯ ಪಕ್ಷಗಳ ಮುಖಂಡರನ್ನು ಭೇಟಿ ಮಾಡಿತು. ಪ್ರಮುಖವಾಗಿ ಡಾ.ಅಂಬೇಡ್ಕರ್ ಮತ್ತು ಗಾಂಧೀಜಿಯೊಂದಿಗೆ ಹಿಂದು ನಾಯಕರನ್ನು ಭೇಟಿ ಮಾಡಿ ವಿಚಾರ ವಿನಿಮಯ ಮಾಡಿಕೊಂಡಿತು. ೧೮೨ ವರ್ಷಗಳ ಬ್ರಿಟಿಷ್ ಆಡಳಿತದ ಕೊನೆಗೊಳ್ಳುವಾಗಲೂ ಕೂಡ ಅಖಂಡವಾದ ಭಾರತವನ್ನು ವಿಭಜಿಸಿ ಭಾರತಕ್ಕೆ ಸ್ವಾತಂತ್ರ್ಯ ನೀಡುವ ಪ್ರಸ್ತಾವನೆ ಕೊನೆಗೆ ಅನೇಕ ಚರ್ಚೆಗಳ ಬಳಿಕ ರುಂಡ-ಮುಂಡಗಳಾಗಿ ಕತ್ತರಿಸಿ ಅಂಗೀಕಾರಗೊಂಡಿತು.

ಕ್ಯಾಬಿನೆ ಟ್ ಆಯೋಗಧ ಶಿಫಾರಸ್ಸಿನಂತೆ ೩೮೯ ಪ್ರತಿನಿಧಿಗಳ ಸಂವಿಧಾನ ಶಾಸಕಾಂಗ ಸಭೆ ಅಸ್ತಿತ್ವಕ್ಕೆ ಬಂದಿತು. ಆದರೆ ಪಾಕಿಸ್ತಾನ ವಿಭಜನೆಯಾದ ಮೇಲೆ ಅದರ ಸದಸ್ಯತ್ವ ಸಂಖ್ಯೆಯಲ್ಲೂ ಇಳಿಕೆಯಾಯಿತು. ಡಾ.ಅಂಬೇಡ್ಕರ್‌ರವರು ಈ ಸಭೆಗೆ ಆಯ್ಕೆಗೊಳ್ಳಲು ಬಾಂಬೆ ಪ್ರಾಂತ್ಯದಿಂದ ಸ್ಪರ್ಧಿಸಿದರು. ಆದರೆ ದುರಂತ ಎಂದರೆ ಅಂತಹ ಮಹಾನ್ ವ್ಯಕ್ತಿಯೇ ಸೋಲಬೇಕಾಯಿತು. ಅಲ್ಲಿ ಕೂಡ ಮೇಲ್ವರ್ಗಗಳ ಉಪಟಳವಿತ್ತು.

ಪೂರ್ವಬಂಗಾಳದಿಂದ ಆಯ್ಕೆಗೊಂಡಿದ್ದ ಶ್ರೀಮಂಡಲ ಎಂಬ ಪರಿಶಿಷ್ಟ ಜಾತಿಯ ಸದಸ್ಯರು ತಮ್ಮ ಸ್ಥಾನವನ್ನು ತೆರವು ಗೊಳಿಸಿ ಪೂರ್ವಬಂಗಾಳದಿಂದ ಆಯ್ಕೆಯಾಗುವಂತೆ ಅವಕಾಶ ನೀಡಿದರು. ಬಹುಶಃ ಭಾರತದ ಇತಿಹಾಸದಲ್ಲೇ ಶ್ರೀಮಂಡಲರು ತೋರಿದ ಸಮಯಪ್ರಜ್ಞೆಯಿಂದಾಗಿ ಬಹುಸಂಖ್ಯಾತರ ಪಾಲಿಗೆ ಒಬ್ಬ ಶ್ರೇಷ್ಠ ಮಾನವ ಹಕ್ಕುಗಳ ಸಂರಕ್ಷಣಾಕಾರರನ್ನು ಕಾಣುವಂತೆ ಆಯಿತು. ಅವರಿಗೆ ಮತ್ತೊಂದು ರಾಷ್ಟ್ರೀಯ ಹೊಣೆಗಾರಿಕೆಯೂ ದೊರಕಿತು. ಅದೇ ಸಂವಿಧಾನದ ಕರಡು ರಚನಾ ಸಮಿತಿಯ ಅಧ್ಯಕ್ಷತೆ ಅವರು ಅದರ ಸದಸ್ಯರಾಗಿ ಆಯ್ಕೆಯಾದಕ್ಕಿಂತ, ಅಧ್ಯಕ್ಷಸ್ಥಾನ ಸಿಕ್ಕಿದಾಗ ಗಂಭೀರವಾಗಿ ಅದನ್ನು ಸ್ವೀಕರಿಸಿದರು. ಇದರಿಂದ ಸಮಗ್ರ ಭಾರತದ ಸರ್ವರನ್ನು ಏಕದೃಷ್ಟಿಯಿಂದ ನೋಡುವ ಅವಕಾಶ ದೊರಕಿತು. ಪ್ರಜಾಪ್ರಭುತ್ವ ಜನತೆಯ ಆರ್ಥಿಕ ಮತ್ತು ಸಾಮಾಜಿಕ ಜೀವನದಲ್ಲಿ ಕ್ರಾಂತಿಕಾರಿ ಬದಲಾವಣೆಗಳನ್ನು ರಕ್ತರಹಿತವಾಗಿ ತರುವ ಸರ್ಕಾರದ ಸ್ವರೂಪ ಮತ್ತು ವಿಧಾನ.

ಸಾಮಾಜಿಕ ಮತ್ತು ಆರ್ಥಿಕ ಪ್ರಜಾಸತ್ತೆ ಇಲ್ಲದೆಡೆ ರಾಜಕೀಯ ಪ್ರಜಾಸತ್ತೆ ಸಫಲವಾಗದು. ಆದ್ದರಿಂದ ಎಲ್ಲರಿಗೂ ಕೂಡ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಪ್ರಭುತ್ವಗಳನ್ನು ಈ ದೇಶದ ಸಮಸ್ತರ ಜೀವನಾಭಿವೃದ್ಧಿಗೆ ಪೂರಕವಾಗಬೇಕೆಂಬ ಮಹಾದಾಸೆಗಳನ್ನು ಹೊಂದಿದ್ದರು. ತಮ್ಮ ಮನೋಧರ್ಮವನ್ನು ಕ್ರೋಢೀಕರಿಸಲು ತಮಗೆ ದೊರೆತ ರಚನಾ ಸಮಿತಿಯಲ್ಲಿ ತೋರ್ಪಡಿಸಿದರು. ಅದರಂತೆ ಒಂದು ಮಾನವೀಯ ಮೌಲ್ಯಗಳನ್ನು ಒಳಗೊಂಡ ಮಾನವೀಯ ಸಂವಿಧಾನ ಕರಡು ಸಿದ್ಧತೆಯನ್ನು ೧೯೪೯ ನವೆಂಬರ್ ೨೬ರಂದು ಸಲ್ಲಿಸಿದರು. ಆಗ ಮಾಡಿದ ಭಾಷಣ "ಈ ಸಂವಿಧಾನ ಒಳ್ಳೆಯದಾಗಲಿ, ಕೆಟ್ಟದಾಗಲಿ ಅದರ ಗುಣಾವಗುಣಗಳು, ಅದರ ಕಾರ್ಯಾಚರಣೆ, ಮಾಡುವವರ ಮೇಲೆ ಅವಲಂಬಿಸಿರುತ್ತದೆ. ಭಾರತವು ಹಿಂದೆ ತನ್ನ ಸ್ವತಂತ್ರ್ಯವನ್ನುತನ್ನ ಜನರ ದೇಶದ್ರೋಹದಿಂದಾಗಿಯೇ ಕಳೆದುಕೊಂಡಿತು. ನಾನಿನ್ನು ನಮ್ಮ ಸ್ವಾತಂತ್ರ್ಯವನ್ನು ಅಭಾದಿತವಾಗಿಡಲು ನಮ್ಮ ರಕ್ತದ ಕೊನೆಯ ಹನಿಯವರೆಗೂ ಹೋರಾಡಬೇಕು"[೨೯] ಎಂದು ಹೇಳಿದರು. ಅವರು ಮುಂದುವರೆದು "ರಾಜಕೀಯ ಪ್ರಜಾಪ್ರಭುತ್ವದ ಯಶಸ್ವಿಗೆ ಸಾಮಾಜಿಕ ಪ್ರಜಾಪ್ರಭುತ್ವವೇ ಮೂಲ ಕಾರಣ. ಸ್ವಾತಂತ್ರ್ಯ ಸಮಾನತೆ, ಸೋದರತೆಗಳೇ ಸಾಮಾಜಿಕ ಪ್ರಜಾಪ್ರಭುತ್ವದ ಅಡಿಗಲ್ಲು. ಅವುಗಳ ಅನುಷ್ಠಾನವಿಲ್ಲದೇ ರಾಷ್ಟ್ರೀಯ ಐಕ್ಯತೆಯೂ ಇಲ್ಲ, ರಾಷ್ಟ್ರವೂ ಇಲ್ಲ" ಎಂದು ಹೇಳುತ್ತಾರೆ.

"ಜನವರಿ ೨೬, ೧೯೫೦ರಂದು ನಾವು ಈ ಸಂವಿಧಾನವನ್ನು ಜಾರಿಗೊಳಿಸಿದ್ದೇವೆ. ಅಂದು ನಾವು ಒಂದು ವಿರೋಧಾಭಾಸದ ಬದುಕಿಗೆ ನಮ್ಮನ್ನು ತೆರೆದುಕೊಳ್ಳಲಿದ್ದೇವೆ. ರಾಜಕೀಯದಲ್ಲಿ ಸಮಾನತೆಯನ್ನು ಒಪ್ಪಿಕೊಂಡು, ಸಾಮಾಜಿಕ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ಅಸಮಾನತೆಯನ್ನು ಒಪ್ಪಕೊಳ್ಳುವ ಇಬ್ಬದಿ ನಿಲುವನ್ನು ನಮ್ಮದಾಗಿಸಿಕೊಳ್ಳಲಿದ್ದೇವೆ. ಈ ಇಬ್ಬದಿ ನಿಲುವನ್ನು ನಾವು ಅತಿ ಶೀಘ್ರವಾಗಿ ಕೈ ಬಿಡಬೇಕಾಗುತ್ತದೆ. ಈ ವಿರೋಧಾಭಾಸ ಬಹುಬೇಗ ಕೊನೆಗೊಳ್ಳಬೇಕು. ಇಲ್ಲದಿದ್ದರೆ ಈ ಸಭೆಯು ಅಪಾರ ಶ್ರಮವಹಿಸಿ ಸಿದ್ಧಪಡಿಸಿ, ಸಂವಿಧಾನದ ಮೂಲಕ ನೀಡಲಾಗಿರುವ ರಾಜಕೀಯ ಪ್ರಜಾಪ್ರಭುತ್ವವನ್ನ ಅಸಮಾನತೆಯಿಂದ ಬೆಳಸುತ್ತಾ ಬಂದವರು ಧೂಳೀಪಟ ಮಾಡಿಯಾರು"[೩೦] ಎಂದು ಎಚ್ಚರಿಕೆಯನ್ನು ನೀಡಿದರು.

ಸ್ವಾತಂತ್ರ್ಯವು ದೇಶದ ಜನರೆಲ್ಲರೂ ಆಲೋಚನೆ ಅಭಿವೃದ್ಧಿಗೆ ನಂಬಿಕೆ, ವಿಶ್ವಾಸ ಹಾಗೂ ಆರಾಧನೆಗಳಿಗೆ ಧಕ್ಕೆ ತರುವಂತಹ ಹಕ್ಕು ಯಾರೊಬ್ಬರಿಗೂ ಇಲ್ಲ. ಸಮಾನತೆಯ ಘನತೆ ಮತ್ತು ಅವಕಾಶಗಳೊಂದಿಗೆ ಎಲ್ಲರೂ ಅದನ್ನು ಧಾರಣ ಮಾಡುವುದು.

"ಭ್ರಾತೃತ್ವದ ವ್ಯಕ್ತಿ ಸ್ವಾಭಿಮಾನ ಮತ್ತು ದೇಶದ ಐಕ್ಯತೆ ಹಾಗೂ ಭಾವೈಕ್ಯತೆಗಳನ್ನು ಸಾರುವಂತೆ ಹಾಗೂ ಬಿತ್ತುವಂತೆ ಮಾಡುವುದು" ಈ ಮೂಲ ಧ್ಯೇಯಾತ್ಮಕ ಬೀಜ ಮಂತ್ರಗಳಲ್ಲಿರುವ ವಸ್ತು ನಿಷ್ಠ ಸೊಗಡು ಸಂವಿಧಾನದ ಪ್ರತಿಯೊಂದು ಪರಿಚ್ಛೇದದಲ್ಲೂ ಅಡಕಗೊಂಡಿದೆ. ನ್ಯಾಯ,

ಸ್ವಾತಂತ್ರ್ಯ ಮತ್ತು ಸಮಾನತೆಗಳು ವ್ಯಕ್ತಿ ಹಾಗೂ ಸಮಾಜದ ನಡುವೆ ಸಾರ್ವತ್ರಿಕ ಜೀವನ ಕಲೆಗಳನ್ನು ಕಲಿಸಿಕೊಟ್ಟಾಗ, ದೇಶದಲ್ಲಿ ಭ್ರಾತೃತ್ವವು ವೃದ್ಧಿಸಿ ಏಕತೆಗೆ ಅಗತ್ಯವಾದ ವಾತಾವರಣಗಳನ್ನು ಸೃಷ್ಟಿಸುತ್ತವೆ. ಎಂಬ ಗಾಢ ನಂಬಿಕೆಗಳು ಸಂವಿಧಾನದಲ್ಲಿತ್ತು. ಈ ದೇಶದಲ್ಲಿ ಅಸ್ಪೃಶ್ಯತೆಯನ್ನು ಕೊನೆಗಾಣಿಸಬೇಕೆಂಬ ಸಂಕಲ್ಪದಿಂದ ಸಂವಿಧಾನದಲ್ಲಿ ಅದರ ನಿರ್ಮೂಲನೆಗೆ ಅವಕಾಶ ನೀಡಿದರು. ತನ್ಮೂಲಕ ಜಾತಿ ವಿನಾಶವಾಗುತ್ತದೆ ಎಂಬ ಆಶಾಭಾವನೆಯನ್ನು ಹೊಂದಿದ್ದರು. ವಿವಿಧ ಸಮಾನತೆಯ ಸ್ವಾತಂತ್ರ್ಯ ಮತ್ತು ನ್ಯಾಯಿಕ ಹಕ್ಕುಗಳನ್ನು ದಯಪಾಲಿಸಿದರು. ಅವುಗಳೊಂದಿಗೆ ನಿಕೃಷ್ಟವಾಗಿ ಕಡೆಗಣಿಸಲ್ಪಟ್ಟಿರುವ ಭಾರತದ ಸಂಪತ್ತಿನಲ್ಲಿ ಅಲ್ಪವನ್ನಾದರೂ ಭೋಗಿಸಲು ಕಾನೂನು ಬದ್ಧ ಹಕ್ಕುದಾರರೆಂಬ ಮೀಸಲಾತಿಗಳನ್ನು ಅಳವಡಿಸಿ ವಿದ್ಯಾಭ್ಯಾಸ, ರಾಜಕೀಯ, ಆರ್ಥಿಕ ಸಹಾಯಗಳಿಗೆ ಕಾರಣಕರ್ತರಾದರು.

ಅಸ್ಪೃಶ್ಯತೆಯು ಕಾನೂನು ಬದ್ಧವಾಗಿ ತೊಡೆದು ಹಾಕಿದರೂ ಅದರ ಕರಾಳ ಛಾಯೆ ಸಮಾಜದಲ್ಲಿ ಹಾಗೆ ಉಳಿದಿದೆ. ಈ ಅಸ್ಪೃಶ್ಯತೆಯನ್ನು ಕೇವಲ ಈ ಜನಾಂಗದಿಂದ ಹೋಗಲಾಡಿಸಲು ಅಸಾಧ್ಯ. ಅದನ್ನು ಆಚರಿಸುವ ಜನವರ್ಗ ಮತ್ತು ಸಮುದಾಯಗಳ ಜನರ ಮಾನಸಿಕ ಮನೋಧರ್ಮ ಬದಲಾಗಬೇಕು. ಅದಕ್ಕೆ ಗುಣಾತ್ಮಕ ಜನರ ಹುಟ್ಟಿನಿಂದ ಅಸ್ಪೃಶ್ಯತೆಯ ನಿರ್ಮೂಲನೆಯು ಸಾಧ್ಯವೆಂದು ಹೇಳಿದ್ದರು ರಾಷ್ಟ್ರಪ್ರೇಮಿ ಬಾಬಾ ಸಾಹೇಬ್ ಡಾ.ಅಂಬೇಡ್ಕರ್‌ರವರು.

ಪ್ರಪಂಚದ ಚರಿತ್ರೆಗಳೊಳಗೆ ಸ್ತ್ರೀ ಅಷ್ಟೇ ವಿಭಿನ್ನವಾಗಿ ಶೋಷಣೆಗಳಿಗೆ ಒಳಗಾದವಳು. ಅವಳನ್ನು ಲಿಂಗಭೇದದ ಮೇಲೆ 'ಅಬಲೆ' ಎಂಬ ಹಣೆ ಪಟ್ಟಿ ಕಟ್ಟಿ ಬಾಲ್ಯದಿಂದ ಸಾಯುವತನಕ ಪುರುಷನ ಅಧೀನದಲ್ಲಿರುವಂತೆ ಮಾಡಿದೆ. ಅದರಲ್ಲೂ ಏಷ್ಯಾ ಮತ್ತು ಆಫ್ರಿಕಾ ಖಂಡದಲ್ಲಿ ಸ್ತ್ರೀಯರನ್ನು ಅತ್ಯಂತ ಕೀಳು ಅಭಿರುಚಿಗಳಿಂದ ನೋಡಲಾಗುತ್ತಿದೆ. ಭಾರತದಂತಹ ಭವ್ಯ ಪರಂಪರೆಯ ರಾಷ್ಟ್ರದಲ್ಲಿ ಅವಳ ಸ್ಥಿತಿ ಚಿಂತಾಜನಕವಾಗಿದೆ. ವೈಜ್ಞಾನಿಕವಾಗಿ ಸ್ತ್ರೀಯು ಪುರುಷನಿಗಿಂತಲೂ ಶಕ್ತಿವಂತಳು. ಆದರೆ ಅವಳಿಗಿರುವ ಸಾಮಾಜಿಕ ಬಂಧನಗಳು ಅವಳನ್ನು ಮಾನಸಿಕವಾಗಿ ಕುಬ್ಜಳನ್ನಾಗಿಸಿದೆ. ಭಾರತೀಯ ಸ್ತ್ರೀಯು ಪ್ರತಿಯೊಂದು ಜಾತಿಯೊಳಗೆ ಆಯಾ ವರ್ಗದಲ್ಲಿ ಇಂದಿಗೂ ಅಸ್ಪೃಶ್ಯರಂತೆ ಬಾಳುತ್ತಿರುವಳು. ಡಾ.ಅಂಬೇಡ್ಕರ್ ತಮ್ಮ ವಿಚಾರಲಹರಿಗಳಿಂದ ಈ ದೇಶದ ಕಾನೂನುಗಳನ್ನು ಸುಧಾರಿಸಬೇಕಾದರೆ ಮೊದಲು ಸ್ತ್ರೀವರ್ಗಕ್ಕೆ ಸಾಮಾಜಿಕ ನ್ಯಾಯ ನೀಡಬೇಕೆಂಬ ಹಂಬಲ ಹೊಂದಿದ್ದರು. ಸ್ತ್ರೀವಿಚಾರದಲ್ಲಿ ಭಾರತೀಯ ಇತರ ಸಾಮಾಜಿಕ ಚಿಂತಕರಿಗಿಂತ ಮೇಲ್ಪಂಕ್ತಿ ಹಾಕಿದವರು. ಅವರು ಸ್ಥಾಪಿಸಿದ ಬಹಿಷ್ಕೃತ ಹಿತಕಾರಿಣಿ ಮಹಾಸಭಾದ ಮೂಲಕ ಮೊದಲು ದಲಿತ ಕೇರಿಗಳಲ್ಲಿ ವಾಸಿಸುತ್ತಿದ್ದ ಸ್ತ್ರೀಯರಿಗೆ ನಾಗರೀಕ ಸಮಾಜದಲ್ಲಿ ಅವರಿರುವ ಸ್ಥಿತಿಯನ್ನು ಮನವರಿಕೆಯನ್ನು ಮಾಡಿಕೊಳ್ಳುತ್ತಾ, ತಿಳುವಳಿಕೆಯ ಜೊತೆಗೆ ಜಾಗೃತಿಯನ್ನು ಮೂಡಿಸುತ್ತಾ ಬಂದರು.

ಬೌದ್ಧ ಕಾಲದಲ್ಲಿ ಭಾರತೀಯ ನಾರಿಗೆ ದೊರೆತ ಸ್ವಾತಂತ್ರ್ಯವನ್ನು ಮನು ನಾಶಪಡಿಸಿದ ಎಂದು ಹೇಳುತ್ತಾ "ಬುದ್ಧನು ಸ್ತ್ರೀಗೆ ಪರಿವ್ರಾಜಕ (ಭಿಕ್ಷುಣಿ)ಯಾಗಲು ಸಮ್ಮತಿ ನೀಡಿದ ಕಾರಣ ಅವಳಿಗೆ ವಿದ್ಯಾ ಸಂಪಾದನೆಯ ಸ್ವಾತಂತ್ರ್ಯ ದೊರಕಿತು. ಅದರಂತೆ ಆತ್ಮೋನ್ನತಿಯ ಸ್ವಾತಂತ್ರ್ಯವೂ ಅವಳಿಗಿತ್ತು. ಅದರಿಂದಾಗಿ ಬುದ್ಧನು ಸಂಪೂರ್ಣ ಸಮಾಜದಲ್ಲಿ ಕ್ರಾಂತಿಯನ್ನುಂಟು ಮಾಡಿದ ಮತ್ತು ಸ್ತ್ರೀಯರಿಗೆ ಸ್ವಾತಂತ್ರ್ಯದೊಡನೆ ಗೌರವ ಪ್ರತಿಷ್ಠೆಯೂ ದೊರೆಯುವಂತೆ ಮಾಡಿದ. ಆದರೆ ಮನು ಸ್ತ್ರೀಯರು ಬೌದ್ಧಧರ್ಮಕ್ಕೆ ಸೇರದಂತೆ ಅವರ ಮೇಲೆ ನಾನಾ ತರಹ ಕಟ್ಟು ನಿಟ್ಟುಗಳನ್ನು ಹೇರಿದ ಹಾಗೂ ಅವರನ್ನು ಗುಲಾಮರನ್ನಾಗಿ ಮಾಡಿದ್ದ"[೩೧] ಎಂದು ಹೇಳಿದರು. ಅದಕ್ಕೆ ಡಾ.ಅಂಬೇಡ್ಕರ್ ಅವರೇ ಸ್ಥಾಪಿಸಿದ ಸ್ವಯಂ ಸೇವಕ ಸಂಘಗಳ ಮುಖಾಂತರ ಸ್ತ್ರೀಯರಿಗೆ ಅಗತ್ಯ ಶಿಕ್ಷಣ, ಕುಟುಂಬ ನಿರ್ವಹಣೆಯ ಕೌಶಲ್ಯ, ಮಕ್ಕಳ ಮತ್ತು ಸಾಮಾಜಿಕ ಜವಾಬ್ದಾರಿಗಳ ಬಗ್ಗೆ ಅರಿವುಮೂಡಿಸಲು ಮುಂದಾದರು. ಬಾಂಬೆ ಶಾಸಕಾಂಗ ಸಭೆಯಲ್ಲಿ ಸ್ತ್ರೀ ಸಮಾಜ ಅಭ್ಯುದಯ ಹೊಂದಲು ಹೆರಿಗೆ ಆಸ್ಪತ್ರೆಗಳ ಸೌಕರ್ಯ, ದುಡಿಯುವ ಸ್ತ್ರೀಯರಿಗೆ ಹೆರಿಗೆ ಭತ್ಯೆ ಮತ್ತು ರಜೆ ಸೌಲಭ್ಯಗಳನ್ನು ನೀಡಲು ಅಗ್ರಹಿಸಿದರು. ಅವರ "ಸಮತಾ ಸಮಾಜ ಸಂಘ"ದ ಮೂಲಕ ಇತರ ವರ್ಗದ ಸ್ತ್ರೀಯರನ್ನು ಮನವೊಲಿಸಲು ಪ್ರಯತ್ನ ಆರಂಭಿಸಿದರು. ೧೯೩೬ರಲ್ಲಿ ಹಿಂದು ಸಂಪ್ರದಾಯಗಳ ಕರಾಳ ಅವಕೃಪೆಗಳಿಗೆ ಸಿಕ್ಕಿದ ದೇವದಾಸಿಯರು, ಜೋಗತಿಯರು, ಪತ್ರಜೆ, ಅರಾಧಿ ಮತ್ತು ವಿಧವೆಯರನ್ನು ಸಮಾಜದ ಮುಖ್ಯವಾಹಿನಿಯಲ್ಲಿ ಬಂದು ಜೀವಿಸಬಹುದು ಎನ್ನುವುದನ್ನು ಅರ್ಥೈಸಿಕೊಟ್ಟರು. ಹಾಗೂ ಅವರ ಅಸಾಮಾಜಿಕ ಪ್ರವೃತ್ತಿಗಳಿಗೆ ತೆರೆ ಎಳೆಯಬೇಕೆಂದು ಆಗ್ರಹ ಪಡಿಸಿದರು. ಮಹಿಳೆಯೊಬ್ಬಳು ಎಚ್ಚೆತ್ತುಕೊಂಡರೆ, ಒಂದು ಕುಟುಂಬ ನಾಗರೀಕತೆಯನ್ನು ರೂಪಿಸಿಕೊಂಡಾಗ ಸಮಾಜದ ಸಮಗ್ರ ಸಾಮಾಜಿಕತೆಯಲ್ಲಿ ಸಾರ್ವತ್ರಿಕತೆ ಮೂಡುತ್ತದೆ. ಜೊತೆಗೆ ಹೆಣ್ಣಿಗೆ ತನ್ನ ಸ್ಥಿತಿಯನ್ನು ಆತ್ಮವಿಮರ್ಶೆಯೊಂದಿಗೆ ಈ ಧರ್ಮ ಮೂಢನಂಬಿಕೆಗಳನ್ನು ಪ್ರಶ್ನಿಸುವ ಶಕ್ತಿಯನ್ನು ತುಂಬಿದರು.

೨೦ ಜುಲೈ ೧೯೪೨ರ ನಾಗಪುರ ಅಖಿಲ ಭಾರತ ಹಿಂದುಳಿದ ವರ್ಗಗಳ ಮಹಿಳೆಯರ ಸಮಾವೇಶದಲ್ಲಿ "ಮಹಿಳೆಯರ ಸಂಘಟನೆ ಅತ್ಯಗತ್ಯ, ಮಹಿಳೆಯರಿಗೆ ಪ್ರತ್ಯೇಕ ಸಮಸ್ಯೆಗಳಿವೆ. ಇವುಗಳನ್ನು ಮಹಿಳಾ ಸಂಘಟನೆಯೇ ಹೆಚ್ಚು ಸಮರ್ಥವಾಗಿ ನಿಭಾಯಿಸಬಲ್ಲದು. ಮಹಿಳೆಯರಿಗೆ ಮನದಟ್ಟಾದರೆ ಯಾವುದೇ ಬದಲಾವಣೆ ಬೇಗನೇ ಬರುವುದು. ಮಹಿಳೆಯರು ಒಟ್ಟು ಸಮಾಜದ ಮುಂಚೂಣಿಗೆಬಂದಲ್ಲಿ ಈ ಸಮಾಜ ಬಹು ಶೀಘ್ರವಾಗಿ ಸುಧಾರಿಸುತ್ತದೆ"[೩೨] ಎಂದು ಪ್ರತಿಕ್ರಿಯಿಸಿದರು.

ಡಾ.ಅಂಬೇಡ್ಕರ್‌ಗೆ ಕೇವಲ ದಲಿತರ ಹೆಣ್ಣುಮಕ್ಕಳ ಉದ್ಧಾರವಾದರೆ ಸಾಕೆಂಬ ಚಿಂತನೆಗಳಿರಲಿಲ್ಲ. ಭಾರತೀಯ ಸಮಾಜದ ಎಲ್ಲಾ ಧರ್ಮಿಯರ ಸ್ತ್ರೀಯರ ಸುಧಾರಿಸಬೇಕೆಂಬ ಉತ್ಕಟ ಬಯಕೆ ಅವರಲ್ಲಿದ್ದವು. ಅವರು ಕಾರ್ಮಿಕ ಸಚಿವರಾಗಿದ್ದಾಗ ಸ್ತ್ರೀಯರಿಗೆ ಪ್ರತ್ಯೇಕ ನಾಗರಿಕ

ಸವಲತ್ತುಗಳನ್ನು ಒಳಗೊಂಡ ಕಾಯಿದೆಗಳನ್ನು ಜಾರಿಗೊಳಿಸಿದರು. ಗಣಿಗಾರಿಕೆ ಮತ್ತು ದುರ್ಗಮ ಕೈಗಾರಿಕೆಗಳಲ್ಲಿ ದುಡಿಯುವ ಸ್ತ್ರೀಯರಿಗೆ ಪ್ರತ್ಯೇಕ ಆರೋಗ್ಯ ಪಾಲಿಸಿಗಳನ್ನು ಅಳವಡಿಸಿದರು. ಹಿಂದೂ ವಿವಾಹ ಕಾಯಿದೆಯನ್ನು ಮಾರ್ಪಡಿಸಿ ದೇಶದ ಎಲ್ಲಾ ಜಾತಿ, ಧರ್ಮ ಮತ್ತು ವರ್ಗಗಳಿಗೂ ಅನ್ವಯವಾಗುವಂತಹ ವಿವಾಹ ಮಸೂದೆಯನ್ನು ಅಕ್ಟೋಬರ್ ೧೯೪೮ರಂದು ಸಂಸತ್ತಿನಲ್ಲಿ ಮಂಡಿಸಿದರು. ಡಾ.ಅಂಬೇಡ್ಕರ್‌ರವರು ಹಿಂದೂ ವಿವಾಹ ಕಾಯಿದೆಯನ್ನು ಮಾರ್ಪಡಿಸಲು ಮುಂದಾದಾಗ ಭಾರತದ ಜನರಲ್ಲಿ ವಾದ ಪ್ರತಿವಾದಗಳು ಸೃಷ್ಟಿಯಾದವು. ಹಿಂದೂ ಸಂಸ್ಕೃತಿಯನ್ನು ಮಾನ್ಯ ಮಾಡುವವರು ಸ್ತ್ರೀ ಮತ್ತು ಪುರುಷದಲ್ಲಿನ ಪ್ರಭೇದಗಳ ವೈರುದ್ಯವನ್ನು ಯಥಾಸ್ಥಿತಿಯಲ್ಲಿರಿಸಿ ಕೊಳ್ಳಲು ಇಚ್ಛಿಸಿದರು. ಇದನ್ನು ವಿರೋಧಿಸಿದ ಗುಂಪು ಡಾ.ಅಂಬೇಡ್ಕರ್‌ರವರ ವೈಜ್ಞಾನಿಕ ಸೂತ್ರಗಳಿಂದ ರಾಷ್ಟ್ರೀಯ ಐಕ್ಯತೆಯನ್ನು ಕಾಪಾಡಿಕೊಳ್ಳಬಹುದೆಂಬ ತೀರ್ಮಾನಕ್ಕೆ ಬಂದರು.

ಡಾ.ಅಂಬೇಡ್ಕರ್‌ರವರು ತಮ್ಮ ವಿಧೇಯಕದಲ್ಲಿ ಪ್ರಮುಖ ಅಂಶಗಳನ್ನು ಅಳವಡಿಸಿದರು. ೧. ಮಹಿಳೆಯ ತಂದೆ – ತಾಯಿಯ ಆಸ್ತಿಯಲ್ಲಿ ಮತ್ತು ಗಂಡನ ಆಸ್ತಿಯಲ್ಲಿ ಪಾಲು ಪಡೆಯುವ ಹಕ್ಕು. ೨. ಪತ್ನಿಯು ಗಂಡನೊಡನೆ ವೈವಾಹಿಕ ಜೀವನ ನಡೆಸಲು ಅಸಾಧ್ಯವಾದಾಗ ವಿಚ್ಛೇದನ ಪಡೆಯುವುದು ಹಾಗೂ ೩. ಪತಿಯು ದತ್ತು ಸ್ವೀಕರಿಸುವಾಗ ಹೆಂಡತಿಯ ಪೂರ್ವ ಒಪ್ಪಿಗೆ ಪಡೆಯಬೇಕೆನ್ನುವ ಅಂಶಗಳು ಸೇರಿದವು. ೧೭ ಸೆಪ್ಟೆಂಬರ್ ೧೯೫೧ರಂದು ಸಂಸತ್ತಿನಲ್ಲಿ ಈ ವಿಧೇಯವು ಚರ್ಚೆಗೆ ಒಳಗಾಯಿತು. ಮಸೂದೆಯನ್ನು ಹಿಂದೂ ಧರ್ಮದ ಪರವಾಗಿದ್ದ ಸಂಸದರೆಲ್ಲರೂ ವಿರೋಧಿಸಿದರು. ಅಂದು ಸಂಸತ್‌ಭವನದ ಸುತ್ತಲೂ ಮಹಿಳೆಯರು ಮಾನವನ ಸರಪಳಿ ನಿರ್ಮಿಸಿ ಅಂಗೀಕಾರಕ್ಕೆ ಆಗ್ರಹಿಸಿದ್ದರು. ಸಂಸತ್ತಿನೊಳಗೆ ಎನ್.ವಿ.ಗಾಡ್ಗಿಳ್ ಮತ್ತು ಪಂಡಿತ್ ಕುಂಜ್ರು ಅಂತಹವರು ಬೆಂಬಲಿಸಿದರು. ಕೊನೆಗೆ ಮಸೂದೆ ಸಂಸತ್ತಿನಲ್ಲಿ ಬಿದ್ದು ಹೋಯಿತು. ಅತ್ಯಂತ ದುಃಖಿತರಾದ ಡಾ.ಅಂಬೇಡ್ಕರ್ ನೈತಿಕತೆಯ ಆಧಾರದ ಮೇಲೆ ಸೆಪ್ಟೆಂಬರ್ ೨೭, ೧೯೫೧ರಂದು ತಮ್ಮ ಕಾನೂನು ಮಂತ್ರಿ ಪದವಿಗೆ ರಾಜಿನಾಮೆ ಕೊಟ್ಟರು. ಡಾ.ಅಂಬೇಡ್ಕರ್‌ರವರ ಈ ಆಲೋಚನೆ ಎಷ್ಟು ಮಹತ್ವದ ಚಿಂತನೆಗಳಾಗಿದ್ದವು ಎಂಬುದಿಲ್ಲಿ ತಿಳಿಯಬೇಕಾಗಿದೆ. ಭಾರತದಂಥ ಅತಿ ದೊಡ್ಡ ಪ್ರಜಾಪ್ರಭುತ್ವದಲ್ಲಿ ರಾಷ್ಟ್ರದಲ್ಲಿ ಸ್ತ್ರೀಯರ ಶೋಷಣೆ ಯಾವುದೇ ಅಡೆತಡೆಗಳಿಲ್ಲದೇ ಜರುಗುತ್ತಿವೆ. ಬಹುಶಃ ಅಂಬೇಡ್ಕರ್ ಕಂಡಿದ್ದ ಅಂದಿನ ಕನಸು ಇಂದು ಸಾಕಾರಗೊಳ್ಳಬೇಕಾದರೆ ಸ್ತ್ರೀಯರಲ್ಲಿ ಗುಣಾತ್ಮಕ ಬದಲಾವಣೆಗಳಾಗಬೇಕಾಗಿದೆ. ಅದರಲ್ಲೂ ಇಂದಿನ ಮಹಿಳಾ ವಾದಿಗಳು, ಸ್ತ್ರೀವಾದಿ ಚಿಂತಕಿಯರು ಅಂಬೇಡ್ಕರ್‌ರವರು ಭಾರತೀಯ ಸ್ತ್ರೀಯರ ಸಬಲೀಕರಣಕ್ಕೆ ನೀಡುವ ಮಹತ್ವದ ಕೊಡುಗೆಯನ್ನು ತುಲಾನಾತ್ಮಕವಾಗಿ ವಿಚಾರ ಮಾಡಿಕೊಂಡು ತಮ್ಮ ಮುಂದಿನ ಹೆಜ್ಜೆಗಳನ್ನಿಟ್ಟರೆ ಪರಿವರ್ತನೆಯ ಗಾಳಿ ಸ್ತ್ರೀ ಲೋಕದಲ್ಲಿ ಬೀಸಬಹುದು ಎಂದೆನಿಸುತ್ತದೆ.

ಹಿಂದೂ ಧರ್ಮವನ್ನು ಆಳವಾಗಿ ಅಧ್ಯಯನ ಮಾಡಿ ಅವನ್ನು ವೈಜ್ಞಾನಿಕ ಮನೋಧರ್ಮದಡಿ ರಕ್ಷಿಸಬೇಕೆಂದವರಲ್ಲಿ ಡಾ.ಅಂಬೇಡ್ಕರ್‌ರವರೇ ಮೊಟ್ಟಮೊದಲಿಗ ವ್ಯಕ್ತಿಯಾಗಿ ನಿಲ್ಲುತ್ತಾರೆ. ಅದಕ್ಕಿಂತ ಮೊದಲು ಅನೇಕ ಸಾಧುಸಂತರು ಈ ಧರ್ಮವನ್ನು ತಮ್ಮ ಮನೋಧರ್ಮಕ್ಕೆ ತಕ್ಕಂತೆ ಬದಲಾಯಿಸಿಕೊಂಡರು. ಅಧರ್ಮದ ಮತ್ತೊಂದು ನೆರಳಿನ ಹಾಗೆ ಬೋಧಿಸಿದರು. ಆದರೆ ಡಾ.ಅಂಬೇಡ್ಕರ್‌ರವರು ಹಿಂದೂ ಧರ್ಮದ ಅಸಮಾನತೆಯನ್ನು ತೀಕ್ಷ್ಣವಾಗಿ ಟೀಕಿಸುತ್ತಿದ್ದರು. ಅದರಲ್ಲೂ ಅದರ ಸೈದ್ಧಾಂತಿಕ ಸ್ವರೂಪಗಳೆಲ್ಲವೂ ಬದಲಾಗಬೇಕೆಂದು ಭಾವಿಸಿದ್ದರು. ಬಹುಶಃ ಈ ನಿಟ್ಟಿನಲ್ಲಿ ಹಿಂದೂಧರ್ಮದ ಪುನರ್ ನವೀಕರಣಕ್ಕೆ ಕೈ ಹಾಕಿದ ಮಹಾನ್ ವ್ಯಕ್ತಿ. ಅದರ ಸ್ವರೂಪ ಹೇಗಿರಬೇಕೆಂದು ಸಲಹೆಗಳನ್ನು ನೀಡಿದ ಮಹಾಪುರುಷರು ಯಾರೂ ಇಲ್ಲ. ಎಲ್ಲರೂ ಹಿಂದೂ ಧರ್ಮವನ್ನು ಕೇವಲ ಅದನ್ನು ವೈಭವೀಕರಿಸುತ್ತಲೇ ಅಲ್ಲಾಗುತ್ತಿರುವ ಶೋಷಣೆ, ಶೋಷಿತರ ಮೇಲಿನ ಅನ್ಯಾಯಗಳ ಬಗ್ಗೆ ಅವರ್‍ಯಾರೂ ಅಷ್ಟೊಂದಾಗಿ ತೀಕ್ಷ್ಣವಾಗಿ ಚಿಂತಿಸಿರಲಿಲ್ಲವೇನೋ. ಆದರೆ ಡಾ.ಅಂಬೇಡ್ಕರ್‌ರವರು ಈ ದೇಶದ ಸಮಸ್ತ ಜನಕುಲಗಳೆಲ್ಲರೂ ನೆಮ್ಮದಿಯಿಂದ ಬಾಳಬೇಕಾದರೆ ಅದೊಂದು ಸಾರ್ವತ್ರಿಕವಾಗಿ ಒಪ್ಪಿಗೆಯಾಗುವ ವಿಶ್ವಧರ್ಮವಾಗಬೇಕೆಂಬ ಅಭಿಲಾಷೆಯನ್ನು ಹೊಂದಿದ್ದರು. ಆದರೆ ಇದ್ಯಾವುದನ್ನು ಒಪ್ಪದ ಹಿಂದೂತ್ವ ವಾದಿಗಳು ನಾವೆಲ್ಲರೂ ಧರ್ಮಕ್ಕಾಗಿ ಇದ್ದೇವೆ ಅದನ್ನು ಮೀರುವ ಹಾಗೆ ಇಲ್ಲ ಎಂದು ನಿಲುವಿಗೆ ಬಂದಿದ್ದರು. ಇದರಿಂದ ಬೇಸತ್ತ ಅಂಬೇಡ್ಕರ್‌ರವರು "ಮನುಷ್ಯ ಧರ್ಮಕ್ಕಾಗಿ ಅಲ್ಲ; ಧರ್ಮವು ಮನುಷ್ಯನಿಗೆ ಇದೆ. ಮಾನವನ ಒಳಿತಿಗಾಗಿ ಧರ್ಮ" ಎಂದು ತೀರ್ಮಾನಿಸಿ. ಎಲ್ಲಾ ಧರ್ಮ, ಧರ್ಮಗ್ರಂಥಗಳನ್ನು ಕೂಲಂಕುಷವಾಗಿ ಅಧ್ಯಯನ ಮಾಡಿ ಕೊನೆಗೆ ಬೌದ್ಧಧರ್ಮವನ್ನು ಆಯ್ಕೆ ಮಾಡಿಕೊಂಡರು. "ಸ್ವಾತಂತ್ರ್ಯ, ಸಮಾನತೆ ಮತ್ತು ಬಂಧುಭಾವ(ಭ್ರಾತೃತ್ವ) ಇವು ನನ್ನ ಜೀವನದ ಆಧಾರಭೂತವಾದ ತತ್ವತ್ರಯಗಳು. ಇವುಗಳ ಮೂಲಬೀಜ ಫ್ರೆಂಚ್ ರಾಜ್ಯ ಕ್ರಾಂತಿಯಲ್ಲಿದೆ ಮತ್ತು ಬೌದ್ಧ ಧರ್ಮದಲ್ಲಿದೆ. ನಮ್ಮ ಸಂವಿಧಾನದ ಮೂಲಕ ರಾಜಕಾರಣದಲ್ಲಿ ಈ ತತ್ವಗಳನ್ನು ಅಳವಡಿಸಲಾಗಿದ್ದರೂ ಅದನ್ನು ಕಾರ್ಯಾಚರಣೆಗೆ ತರಬೇಕಿದೆ"[೩೩] ಎಂದರು. ನಾನು ಏಕೆ ಮತಾಂತರವನ್ನು ಕೈಗೊಳ್ಳುತ್ತಿದ್ದೇನೆಂದರೆ "ದಲಿತರ ಹಾಗೂ ಹಿಂದುಳಿದವರ ದೃಷ್ಟಿಕೋನಗಳು ಎಷ್ಟೇ ಬದಲಾದರೂ ಅದನ್ನು ಮಾನ್ಯ ಮಾಡುವ ಸ್ಥಿತಿಯಲ್ಲಿ ಹಿಂದುಗಳಿಲ್ಲ. ಕೊನೆಗೆ ಹಿಂದುಗಳಿಗೆ ದಲಿತರು ಎಷ್ಟೇ ಕೋರಿಕೆ ಸಲ್ಲಿಸಿದರೂ. ಅವರ ಮನೋಧರ್ಮಗಳು ಬದಲಾಗುವುದಿಲ್ಲ, ಎಂದು ತಿಳಿದು ಧರ್ಮದ ದಾಸ್ಯದ ವಿಮೋಚನೆಗೆ ನಾವೇ ಅಂತ್ಯ ಹಾಡುತ್ತೇವೆಂದರು. ೧೯೩೬ರ ಇಯೋ ಸಮ್ಮೇಳನದಲ್ಲಿ "ನೀವೀಗ ಹಿಂದೂ ಧರ್ಮವನ್ನು ತ್ಯಜಿಸಿ ಬೇರೆ ಧರ್ಮವನ್ನು ಸ್ವೀಕರಿಸಿ ಆತ್ಮ ಗೌರವವನ್ನು ಕಾಪಾಡಿಕೊಂಡು ಆತ್ಮ ತೃಪ್ತಿಯನ್ನು ಸಂಪಾದಿಸಿಕೊಳ್ಳಿ. ಹೊಸ ಧರ್ಮವನ್ನಾರಿಸಿಕೊಳ್ಳುವಾಗ ಭೇದಭಾವಕ್ಕೆ ಎಡೆಯಿರದ ಧರ್ಮವನ್ನು ಹಿಡಿಯಿರಿ. ಎಚ್ಚರಿಕೆಯಿಂದಿರಿ.

ಸಮಾನಾವಕಾಶ, ಸಮಾನಸ್ಥಾನಮಾನ, ಸಮಾನಪುರಸ್ಕಾರಗಳು ದೊರೆಯುವುದಿಲ್ಲ. ಈ ಹಿಂದೂ ಧರ್ಮದಲ್ಲಿ ಹುಟ್ಟಿದ್ದೇ ತಪ್ಪು. ಆದರೆ ಹಿಂದೂವಾಗಿ ಸಾಯುವುದಿಲ್ಲವೆಂದು ನಿಮ್ಮ ಮುಂದೆ ಪ್ರಮಾಣ ಮಾಡಿ ನುಡಿಯುತ್ತೇನೆ. ಇನ್ನು ಮುಂದೆ ದೇವಾಲಯ ಪ್ರವೇಶ ಆಂದೋಲನದ ಕಡೆಗೆ ಗಮನ ನೀಡಬೇಡಿ. ಹಿಂದೂ ಧರ್ಮದ ಹೊರಗೆ ನೀವು ನಿಮ್ಮ ಭವಿಷ್ಯ ರೂಪಿಸಿಕೊಳ್ಳಿ. ಈಗ ನೀವು ನಿಮ್ಮ ಶಕ್ತಿ ಸಾಮರ್ಥ್ಯಗಳನ್ನು ಅನ್ಯಥಾ ಪೋಲು ಮಾಡದೆ ರಾಜಕೀಯ, ಆರ್ಥಿಕ, ಅಧಿಕಾರ ಪಡೆಯಲು ವಿನಿಯೋಗಿಸಿ"[೩೪] ಎಂದರು.

ತಮ್ಮ ಬಾಲ್ಯದಿಂದಲೂ ಸಹನೆ, ಕರುಣೆ, ಮೈತ್ರಿ ಹಾಗೂ ಸ್ನೇಹ ಮನೋಭಾವದ ಗುಣಗಳನ್ನು ಹೊಂದಲು ಹೇಗೆ ಸಾಧ್ಯವಾಯಿತೆಂಬ ಚಿಂತನೆ ಬಂದಾಗ ಪ್ರೌಢ ವ್ಯವಸ್ಥೆಯಲ್ಲಿ ಬೌದ್ಧ ಸಾಹಿತ್ಯ ಚೆನ್ನಾಗಿ ಓದಿ, ಮನವರಿಕೆ ಮಾಡಿಕೊಂಡ ಕಾರಣ ಅದನ್ನು ಅಧ್ಯಯನ ಮಾಡಿ, ಜಗತ್ತಿನ ಅತಿ ಪ್ರಾಚೀನ ಮಾನವೀಯ ಧರ್ಮವಾದ ಬೌದ್ಧಧರ್ಮವನ್ನು ಅಪ್ಪಿಕೊಳ್ಳಲು ಮುಂದಾದರು. ಬೌದ್ಧಧರ್ಮ ಬೇರೆಯದೇ ಧರ್ಮವಾಗಿರದೆ, ಪ್ರಾಚೀನ ಭಾರತದ ಮಣ್ಣಿನಲ್ಲಿ ಧರ್ಮ ಎನ್ನುವುದಕ್ಕಿಂತ ಭಿನ್ನವಾಗಿ ಜನ್ಮ ತಾಳಿದ ಸಹಜ ನೈಸರ್ಗಿಕ ಜೀವನಶೈಲಿಯ ಧರ್ಮವಾಗಿತ್ತು. ಈ ಮಣ್ಣಿನಲ್ಲೇ ಹುಟ್ಟಿ ಬೆಳೆದು ನೆರೆಹೊರೆ ರಾಷ್ಟ್ರಗಳಲ್ಲಿ ಸಾರ್ವತ್ರಿಕ ಧರ್ಮವಾಗಿದೆ. ಶೋಷಿತರಿಗೆ ನಿಜವಾದ ದಾರಿ ತೋರುವ ಧರ್ಮವೆಂದು ಬುದ್ಧ ಸಾರಿದ ಮಾನವ ಪಥದಲ್ಲಿ ನಿಂತು ಅವರ ರಥವನ್ನು ಭಾರತದಲ್ಲಿ ಮತ್ತೊಮ್ಮೆ ಚಲಿಸುವಂತೆ ಮಾಡಲು ನಿಶ್ಚಯಿಸಿದರು. ಅದರಂತೆ ೧೯೫೬ರ ಅಕ್ಟೋಬರ್ ೧೪ರಂದು ನಾಗಪುರದ ದೀಕ್ಷಾ ಭೂಮಿಯಲ್ಲಿ ಬೌದ್ಧ ಧರ್ಮ ಬಿಕ್ಷುಗಳ ಮಧ್ಯದಲ್ಲಿ ನಿಂತು ಅದರ ಲಾಂಛನವನ್ನು ಹಿಡಿದು ತಾವು ರೂಢಿಸಿದ್ದ ೨೨ ನಿಯಮಗಳನ್ನು ಉಚ್ಚರಿಸುತ್ತಾ ವಿದ್ಯುಕ್ತವಾಗಿ ಬೌದ್ಧ ಧರ್ಮ ಸೇರಿದರು. ಸುಮಾರು ೮ ಲಕ್ಷ ಶೋಷಿತ ಜನರು ಅವರ ಹಿಂದೆ ಬೌದ್ಧ ಧರ್ಮಕ್ಕೆ ಧರ್ಮಾಂತರವಾದರು. ಈ ನಿಟ್ಟಿನಲ್ಲಿ ಡಾ.ಅಂಬೇಡ್ಕರ್‌ರವರು ಕೈಗೊಂಡ ನಿರ್ಣಯದಿಂದ ಈ ದೇಶದ ಪ್ರಾಚೀನ ಮಾನವೀಯ ಧರ್ಮವನ್ನು ಪುನರ್ ನವೀಕರಿಸಿದಂತಾಯಿತು.

ಅಂದು ಅಂಬೇಡ್ಕರ್ ತೆಗೆದುಕೊಂಡ ನಿರ್ಧಾರದಿಂದ ಭಾರತದಲ್ಲಿ ಬೌದ್ಧ ಧರ್ಮ ಹೊಸ ಚಿಗುರುಗಳನ್ನು ಕಟ್ಟಿಕೊಂಡು ತನ್ನ ಬೌದ್ಧ ಯುಗಕ್ಕೆ ನಾಂದಿಯಾಡಿದೆ. ಅಲ್ಲಿ "ಬಾಬಾ ಸಾಹೇಬರ ಸಿಂಹಘರ್ಜನೆಯನ್ನು ಕೇಳಿಕೊಳ್ಳಿರಿ; ಬೌದ್ಧ ಧರ್ಮವನ್ನು ಸೇರಿಕೊಳ್ಳಿರಿ ಎಂದು ಕೂಗುತ್ತಿದ್ದರೆ. ಮತ್ತೊಂದು ಕಡೆ ಹಿಂದೂಧರ್ಮದ ನರಕದಿಂದ ಹೊರಬೀಳಿರಿ. ಬೌದ್ಧಧರ್ಮವನ್ನು ಸೇರಿಕೊಳ್ಳಿರಿ"[೩೫] ಎಂಬ ಘೋಷಣೆಗಳು ಕೇಳಿ ಬರುತ್ತಿದ್ದವು.

ಆಗ ಅಂಬೇಡ್ಕರ್ "ಅಸಮಾನತೆಯನ್ನು ಮತ್ತು ಶೋಷಣೆಯನ್ನು ಎತ್ತಿ ಹಿಡಿಯಲು ನನ್ನ ಹುಟ್ಟಿನ ಧರ್ಮವನ್ನು ತಿರಸ್ಕರಿಸಿ, ನಾನು ಇಂದು ಬೌದ್ಧಧರ್ಮವನ್ನು ಒಪ್ಪಿಕೊಂಡಿರುವೆ. ನನಗೆ

ಮರುಹುಟ್ಟು ದೊರಕಿದೆ. ಬುದ್ಧನು ವಿಷ್ಣುವಿನ ಅವತಾರ ಎಂಬುದು ಕುಚೋದ್ಯದ ಕಟ್ಟುಕತೆ. ದುರುದ್ದೇಶದಿಂದ ಇಂಥ ಕತೆ ಪ್ರಚಾರ ಮಾಡಲಾಗಿದೆ. ನಾನು ಇನ್ನು ಮುಂದೆ ಹಿಂದೂ ದೇವ-ದೇವತೆಗಳನ್ನು ಪೂಜಿಸುವುದಿಲ್ಲ. ಶ್ರಾದ್ಧ-ಕರ್ಮಾದಿಗಳನ್ನು ಮಾಡುವುದಿಲ್ಲ. ಬುದ್ಧ ಬೋಧಿಸಿದ ಅಷ್ಟಾಂಗ ಮಾರ್ಗವನ್ನು ನಾನು ಕಟ್ಟುನಿಟ್ಟಾಗಿ ಅನುಸರಿಸುತ್ತೇನೆ"[೩೬] ಎಂದು ನುಡಿದರು. ಡಾ.ಅಂಬೇಡ್ಕರ್ ಬೌದ್ಧ ಧರ್ಮಕ್ಕೆ ಸೇರ್ಪಡೆಯಾದ ಮೇಲೆ ಅವರ ದೇಹ ಸ್ಥಿತಿಹದಗೆಡುತ್ತಾ ಬಂದಿತ್ತು. ಬಾಲ್ಯದಿಂದಲೂ ರೂಢಿಸಿಕೊಂಡಿದ್ದ ನಿರಂತರ ವ್ಯಾಸಂಗವನ್ನು ಸಾಯುವತನಕ ನಿಲ್ಲಿಸಲಿಲ್ಲ. ಅಂತಿಮ ದಿನವೂ ಕೂಡ ತಮ್ಮ "ಬುದ್ಧ ಮತ್ತು ಆತನ ಧರ್ಮ" ಕೃತಿಗೆ ಮುನ್ನುಡಿಯನ್ನು ಬರೆದು ಕೃತಿಯು ಸಾರ್ವಜನಿಕರಿಗೆ ಸೇರುವ ಮುನ್ನವೇ ಡಿಸೆಂಬರ್ ೬, ೧೯೫೬ರಂದು ದಲಿತ ಸೂರ್ಯ ಅಸ್ತಂಗತರಾದರು.

ಡಾ.ಅಂಬೇಡ್ಕರ್‌ರವರು ಆಪ್ತಸಹಾಯಕ ರತ್ತುಗೆ ತನ್ನ ಕೊನೆಯ ಆಸೆಯನ್ನು ವ್ಯಕ್ತಪಡಿಸಿದ್ದಾರೆ. "ನಮ್ಮ ಜನರಿಗೆ ಹೇಳು, ಅಸಡ್ಡೆ ಅವಮಾನಗಳನ್ನು ಅನುಭವಿಸಿ ನಾನು ಅಧ್ಯಯನ ಮಾಡಿದೆ. ಚಿಂತನೆಯನ್ನು ಬೆಳೆಸಿಕೊಂಡೆ. ನನ್ನ ಜನರಿಗಾಗಿ ನನ್ನ ಶಕ್ತಿಮೀರಿ ಶ್ರಮಿಸಿದೆ. ವೈಯಕ್ತಿಕ ಜೀವನವನ್ನು ಉತ್ತಮವಾಗಿ ರೂಪಿಸಿಕೊಳ್ಳುವ ಸಂಕುಚಿತ ಮನೋಭಾವನೆಯಲ್ಲೇ ನಾನು ಉಳಿದು ಬಿಡಲಿಲ್ಲ. ಸಮುದಾಯ ಹಿತಕ್ಕಾಗಿ ನಾನು ಘಟಾನುಘಟಿಗಳನ್ನು ಎದುರು ಹಾಕಿಕೊಂಡೆ. ಸವರ್ಣ ಹಿಂದೂಗಳಿಗೆ, ಬ್ರಿಟಿಷರಿಗೆ ಏಕ ಕಾಲಕ್ಕೆ ಸವಾಲು ಹಾಕಿದೆ. ನನ್ನ ಜೀವನದಲ್ಲಿ ನಾನು ಇನ್ನೂ ಹೆಚ್ಚಿನದನ್ನು ಸಾಧನೆ ಮಾಡಬಯಸಿದ್ದೆ. ಆದರೆ ನನ್ನ ಕಾಲ ಮುಗಿಯುತ್ತ ಬಂದಂತೆ ಕಾಣುತ್ತಿದೆ. ನಾನು ಇದುವರೆಗೆ ನಮ್ಮ ಸಮುದಾಯಕ್ಕಾಗಿ ಸಾಧಿಸಿರುವುದೇನೂ ಕಡಿಮೆಯಿಲ್ಲ. ಅವರ ಬದುಕು ಉತ್ತಮಗೊಳ್ಳುವ ಅವಕಾಶವನ್ನು ನಾನು ಕಲ್ಪಿಸಿದ್ದೇನೆ. ಪ್ರಗತಿ ರಥವನ್ನು ಇಲ್ಲಿಯವರಿಗೆ ನಾನು ಎಳೆದು ತಂದಿರುವೆ. ಈ ರಥವನ್ನು ನನ್ನ ನಂತರ ಮುಂದುವರಿಸಿಕೊಂಡು ಹೋಗುವುದು ಸಾಧ್ಯವಾದರೆ ಒಳ್ಳೆಯದೇ, ಇಲ್ಲದಿದ್ದರೆ ಈ ರಥವನ್ನು ಇಲ್ಲೇ ಬಿಟ್ಟು ಬಿಡಲಿ. ಆದರೆ ಯಾರೂ ಈ ರಥವನ್ನು ಮತ್ತೆ ಹಿಂದಕ್ಕೆ ತಳ್ಳುವ ದುಸ್ಸಾಹಸಕ್ಕೆ ಕೈ ಹಾಕುವುದು ಬೇಡ. ಇದೇ ನನ್ನ ಸಂದೇಶ. ಇದನ್ನು ನೀನು ನಮ್ಮ ಜನತೆಯಲ್ಲಿ ಪ್ರಸಾರ ಮಾಡು"[೩೭] ಎಂದು ಅಂಬೇಡ್ಕರ್‌ರವರು ಅಂತಿಮವಾಗಿ ನುಡಿದಿದ್ದಾರೆ.

ಅಡಿ ಟಿಪ್ಪಣಿಗಳು

೧. ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅನುವಾದ ಬಿ.ಎ.ಸನದಿ, ಪುಟ-೧

೨. ಕ್ರಾಂತಿಕಾರ ಡಾ.ಅಂಬೇಡ್ಕರ್, ದೇಜಗೌ, ಪುಟ-೧೧

೩. ಅದೇ, ಪುಟ-೧೩

೪. ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅನುವಾದ ಬಿ.ಎ.ಸನದಿ, ಪುಟ-೩

೫. ಕ್ರಾಂತಿಕಾರ ಡಾ.ಅಂಬೇಡ್ಕರ್, ದೇಜಗೌ, ಪುಟ-೧೭

೬. ಸಂಘರ್ಷ ಅಂಬೇಡ್ಕರ್ ಜೀವನ ಸಾಧನೆ, ಮಂಗ್ಳೂರು ವಿಜಯ, ಪುಟ-೧೨

೭. ಡಾ.ಬಾಬಾಸಾಹೇಬ್ ಅಂಬೇಡ್ಕರ್, ಅನುವಾದ ಬಿ.ವಿ.ಸನದಿ, ಪುಟ-೪

೮. ಕ್ರಾಂತಿಕಾರ ಡಾ.ಅಂಬೇಡ್ಕರ್, ದೇಜಗೌ, ಪುಟ-೨೦

೯. ಅದೇ, ಪುಟ-೨೦-೨೧

೧೦. ಸಂಘರ್ಷ-ಅಂಬೇಡ್ಕರ್ ಜೀವನ - ಸಾಧನೆ, ಮಂಗಳೂರು ವಿಜಯ, ಪುಟ-೧೩

೧೧. ಡಾ.ಬಾಬಾಸಾಹೇಬ್ ಅಂಬೇಡ್ಕರ್ ಬಿ.ಎ.ಸನದಿ, ಪುಟ-೪

೧೨. ಸಂಘರ್ಷ-ಅಂಬೇಡ್ಕರ್ ಜೀವನ - ಸಾಧನೆ, ಮಂಗಳೂರು ವಿಜಯ, ಪುಟ-೧೬

೧೩. ಅದೇ, ಪುಟ-೧೭

೧೪. ಕ್ರಾಂತಿಕಾರಿ, ಅಂಬೇಡ್ಕರ್, ದೇಜಗೌ, ಪುಟ-೨೫

೧೫. ಡಾ.ಬಾಬಾಸಾಹೇಬ್ ಅಂಬೇಡ್ಕರ್, ಅನುವಾದ ಬಿ.ವಿ.ಸನದಿ, ಪುಟ-೬

೧೬. ಕ್ರಾಂತಿಕಾರಿ, ಅಂಬೇಡ್ಕರ್, ದೇಜಗೌ, ಪುಟ-೩೫

೧೭. ಅದೇ, ಪುಟ-೪೭

೧೮. ಡಾ.ಬಾಬಾಸಾಹೇಬ್ ಅಂಬೇಡ್ಕರ್, ಅನುವಾದ ಬಿ.ವಿ.ಸನದಿ, ಪುಟ-೩೨

೧೯. ಸಂಘರ್ಷ-ಅಂಬೇಡ್ಕರ್ ಜೀವನ - ಸಾಧನೆ, ಮಂಗಳೂರು ವಿಜಯ, ಪುಟ-೬೪

೨೦. ಅದೇ, ಪುಟ-೬೪

೨೧. ಅದೇ, ಪುಟ-೭೪

೨೨. ಕ್ರಾಂತಿಕಾರಿ, ಅಂಬೇಡ್ಕರ್, ದೇಜಗೌ, ಪುಟ-೬೫

೨೩. ಡಾ.ಬಾಬಾಸಾಹೇಬ್ ಅಂಬೇಡ್ಕರ್, ಅನುವಾದ ಬಿ.ವಿ.ಸನದಿ, ಪುಟ-೭೭

೨೪. ಕ್ರಾಂತಿಕಾರಿ, ಅಂಬೇಡ್ಕರ್, ದೇಜಗೌ, ಪುಟ-೯೩

೨೫. ಸಂಘರ್ಷ-ಅಂಬೇಡ್ಕರ್ ಜೀವನ - ಸಾಧನೆ, ಮಂಗಳೂರು ವಿಜಯ, ಪುಟ-೨೩೮

೨೬. ಕ್ರಾಂತಿಕಾರಿ, ಅಂಬೇಡ್ಕರ್, ದೇಜಗೌ, ಪುಟ-೯೯

೨೭. ಸಂಘರ್ಷ-ಅಂಬೇಡ್ಕರ್ ಜೀವನ - ಸಾಧನೆ, ಮಂಗಳೂರು ವಿಜಯ, ಪುಟ-೨೫೯

೨೮. ಡಾ.ಬಾಬಾಸಾಹೇಬ್ ಅಂಬೇಡ್ಕರ್, ಅನುವಾದ ಬಿ.ವಿ.ಸನದಿ, ಪುಟ-೨೦೧

೨೯. ಸಂಘರ್ಷ-ಅಂಬೇಡ್ಕರ್ ಜೀವನ - ಸಾಧನೆ, ಮಂಗಳೂರು ವಿಜಯ, ಪುಟ-೩೯೨

೩೦. ಸಂಘರ್ಷ-ಅಂಬೇಡ್ಕರ್ ಜೀವನ - ಸಾಧನೆ, ಮಂಗಳೂರು ವಿಜಯ, ಪುಟ- ೩೯೩

೩೧. ಡಾ.ಬಾಬಾಸಾಹೇಬ ಅಂಬೇಡ್ಕರ್, ಅನುವಾದ ಬಿ.ವಿ.ಸನದಿ, ಪುಟ-೨೦೭

೩೨. ಸಂಘರ್ಷ-ಅಂಬೇಡ್ಕರ್ ಜೀವನ - ಸಾಧನೆ, ಮಂಗಳೂರು ವಿಜಯ, ಪುಟ- ೩೪೪

೩೩. ಡಾ.ಬಾಬಾಸಾಹೇಬ ಅಂಬೇಡ್ಕರ್, ಅನುವಾದ ಬಿ.ವಿ.ಸನದಿ, ಪುಟ-೨೧೬

೩೪. ಕ್ರಾಂತಿಕಾರಿ, ಅಂಬೇಡ್ಕರ್, ದೇಜಗೌ, ಪುಟ-೧೧೨

೩೫. ಸಂಘರ್ಷ-ಅಂಬೇಡ್ಕರ್ ಜೀವನ - ಸಾಧನೆ, ಮಂಗಳೂರು ವಿಜಯ, ಪುಟ- ೪೪೪

೩೬. ಅದೇ, ಪುಟ-೪೪೫

೩೭. ಅದೇ, ಪುಟ-೪೪೨

ಅಧ್ಯಾಯ – ೩

ಕನ್ನಡ ಸಾಹಿತ್ಯದ ಹೊಸತೊಂದು ಪ್ರಕಾರಕ್ಕೆ ಡಾ.ಅಂಬೇಡ್ಕರ್‌ರವರ ಚಿಂತನೆ ಪ್ರೇರಣೆ, ಪ್ರಭಾವ

ಡಾ.ಬಿ.ಆರ್.ಅಂಬೇಡ್ಕರ್ ಹಾಕಿಕೊಟ್ಟ ಸಂಘರ್ಷದ ಮಾರ್ಗಗಳು ಮತ್ತು ಪ್ರಜಾಸತ್ತಾತ್ಮಕ ಹೋರಾಟದ ಪರಂಪರೆಗೆ ಒಂದು ಹೊಸ ಆಯಾಮ ಒದಗಿಬಂದಿದ್ದು ಈ ಅವಧಿಯಲ್ಲೇ ಎಂಬುದನ್ನು ನಾವೆಲ್ಲರೂ ಗಮನಿಸಬೇಕು. ಇಡೀ ದೇಶದಲ್ಲಿ ಶೋಷಿತರ ಧ್ವನಿಯಾಗಿ ಅವರಲ್ಲಿನ ಶಕ್ತಿಯಾಗಿ ತಮ್ಮ ಪ್ರಜಾಮೌಲ್ಯದ ಹಕ್ಕು ಬಾಧ್ಯತೆಗಳ ಪಡೆಯುವ ಆಂದೋಲನದ ರೂವಾರಿಯಾಗಿದ್ದವರು ಬಾಬಾಸಾಹೇಬರು. ದಲಿತ ವರ್ಗಗಳ ಪಾಲಿಗೆ ಹೋರಾಟದ ದಾರಿದೀಪವಾಗಿ ಬಂದರು. ನಮ್ಮ ಭಾರತೀಯ ಸನಾತನ ಹಿಂದೂಧರ್ಮದಲ್ಲಿ ವರ್ಣಾಶ್ರಮ ವ್ಯವಸ್ಥೆ ಗಟ್ಟಿಯಾಗಿ ಬೇರೂರಿದ್ದು ಅದರಂತೆಯೇ ಜೀವನ ಕ್ರಮಗಳು ನಡೆದುಕೊಂಡು ಬಂದಿರುವುದನ್ನು ಕಾಣಬಹುದಾಗಿದೆ. ನಾಲ್ಕು ವರ್ಗಗಳಿದ್ದರೂ ಕೂಡ ಅದನ್ನು ಮೀರಿದ ಒಂದು ವರ್ಗವೂ ಸೃಷ್ಟಿಯಾಗಿತ್ತು. ಅದೇ ಅಸ್ಪೃಶ್ಯರು/ ಪಂಚಮರು. ಇವರ ಬದುಕು ಪಶು,ಪಕ್ಷಿಗಳಿಗಿಂತ ಹೀನ್ವಾದ ಸ್ಥಿತಿಯಲ್ಲಿ ಬದುಕನ್ನು ನಡೆಸುತ್ತಿದ್ದರು.

ಈ ದೇಶದಲ್ಲಿ ಅಸ್ಪೃಶ್ಯತೆಯ ಆಚರಣೆಯ ಪಿಡುಗು ತುಂಬಾ ಭೀಕರವಾಗಿದ್ದು ಅಮಾನವೀಯವಾಗಿ ನಡೆಸಿಕೊಳ್ಳುತ್ತಿದ್ದರು. ದಕ್ಷಿಣ ಆಫ್ರಿಕಾ, ಅಮೇರಿಕ ದೇಶಗಳಲ್ಲಿದ್ದ ಕಪ್ಪು ಜನರ ವರ್ಣಬೇಧ ನೀತಿಗಿಂತಲೂ ಕ್ರೂರವಾಗಿತ್ತು. ಅಲ್ಲಿಯಾದರೆ ಕಪ್ಪು ಜನಾಂಗವನ್ನು ಕೀಳಾಗಿ ಕಂಡರೂ ಮನೆಗೆಲಸಗಳಿಗೆ ನೇಮಿಸಿಕೊಳ್ಳುತ್ತಿದ್ದರು ಆದರೆ ಭಾರತದಲ್ಲಿ ಅಸ್ಪೃಶ್ಯರನ್ನು ಕೆಲಸಕ್ಕೆ ಸೇರಿಸುವುದಾಗಲಿ, ಆಳಾಗಿ ಇಟ್ಟುಕೊಳ್ಳುವುದಾಗಲಿ ಮಾಡದೆಯೇ ಅವರನ್ನು ಸ್ಪರ್ಶಿಸುವುದಕ್ಕೂ ಅನರ್ಹರು ಅವರ ನೆರಳನ್ನು ತುಳಿಯುವುದೇ ಪಾಪ ಎನ್ನುವಷ್ಟು ಭೀಕರವಾಗಿ ಈ ಅಸ್ಪೃಶ್ಯತೆಯ ಸಮಸ್ಯೆ ಇತ್ತು. ಇಂತಹ ಸಮಸ್ಯೆಗಳ ವಿರುದ್ಧ ಅದೇ ಜನಾಂಗದಲ್ಲಿ ಹುಟ್ಟಿ, ಬಾಲ್ಯದಲ್ಲಿಯೇ ಹೆಚ್ಚು ಅಪಮಾನ, ನಿಂದನೆ ಹಾಗೂ ನೋವಿನ ಅನುಭವ ತೊಂದರೆಯನ್ನು ಉಂಡವರು, ಅವರಿಗೆ ಕುಡಿಯಲು ನೀರು ಕೊಡಲಿಲ್ಲ. ಗಾಡಿಯಲ್ಲಿ ಹೋಗುತ್ತಿದ್ದಾಗ ಅವನ ಜಾತಿ ತಿಳಿದಾಕ್ಷಣ ಅವರನ್ನು ಗಾಡಿಯಿಂದ ಹೊರಕ್ಕೆ ಎಸೆಯಲಾಯಿತು. ಕಾರಣ ಅಸ್ಪೃಶ್ಯ ಗಾಡಿಯಲ್ಲಿ ಕುಳಿತುಕೊಳ್ಳಬಾರದು. ಇದೇ ಜಾತಿಯಲ್ಲಿ ಹುಟ್ಟಿದ ಕಾರಣಕ್ಕಾಗಿ ಮಹಾರಾಜರ ರಾಜ್ಯದಲ್ಲಿ ಉನ್ನತ ಅಧಿಕಾರದಲ್ಲಿದ್ದರೂ ಉನ್ನತ ವಿದ್ಯಾಭ್ಯಾಸ ಮಾಡಿದ್ದರೂ ಕೂಡ ಅವರಿಗೆ ಬಾಡಿಗೆ ಮನೆ ಕೂಡ ಕೊಡಲಿಲ್ಲ. ಈ ಎಲ್ಲಾ ನೋವಿನ ಕಹಿಯನ್ನುಂಡು, ಹೋರಾಡಿ ಅದನ್ನು ಕಾನೂನುಬದ್ಧವಾಗಿ ನಿರ್ಮೂಲನೆ ಮಾಡಿ ಆ ಜನಾಂಗಗಳಿಗೆ

ಹೋರಾಟ, ಚಳುವಳಿ, ಆಂದೋಲನಗಳಿಗೆ ಪ್ರೇರಕ ಸ್ಫೂರ್ತಿಯಾದವರು ಡಾ.ಬಾಬಾ ಸಾಹೇಬ್ ಭೀಮರಾವ್ ಅಂಬೇಡ್ಕರ್.

ಭಾರತದ ದೇಶಕ್ಕೆ ಬಂದ ಬ್ರಿಟಿಷ್‌ರ ಆಡಳಿತ ವ್ಯವಸ್ಥೆಯಿಂದ ಇಲ್ಲಿಂದ ಅನೇಕ ಸಂಪ್ರದಾಯಿಕ ಮೂಢನಂಬಿಕೆಗಳು ನಿವಾರಣೆಯಾಗ ತೊಡಗಿತ್ತು. ಜೊತೆಗೆ ಅವರು ನೀಡಿದ್ದ ಇಂಗ್ಲೀಷ್ ಶಿಕ್ಷಣ ಪದ್ಧತಿಯಿಂದ ಇಲ್ಲಿನ ಕೆಳವರ್ಗದ ಜನಾಂಗವೂ ವಿದ್ಯಾಭ್ಯಾಸ ಪಡೆಯಲು ಸಾಧ್ಯವಾಯಿತು. ಅದರಿಂದ ಅವರಲ್ಲಿ ಅರಿವು ಮೂಡಿ ಜಾಗೃತರಾಗಲು ಸಹಾಯಕವಾಯಿತು. ಅವರ ಉದಾರವಾದದ ಪ್ರತಿಫಲವಾಗಿಯೇ ನಮ್ಮ ದೇಶದ ಜನವು ಕೂಡ ಅವರ ಆಡಳಿತದ ವಿರುದ್ಧ ಹೋರಾಡಿ ಸ್ವಾತಂತ್ರ್ಯವನ್ನು ಪಡೆಯಲು ಸಾಧ್ಯವಾಯಿತು. ಹಾಗೆಯೇ ಅಲ್ಲಿಂದ ಸಿಡಿದು ಬಂದ ಸಿಡಲೇ ನಮ್ಮ ದೇಶದಲ್ಲಿ ನಾಗರೀಕ ಹಕ್ಕುಗಳಿಗಾಗಿ ಅಸ್ಪೃಶ್ಯ ಆಚರಣೆಯ ವಿರುದ್ಧ ಹೋರಾಡಿ ಗೆದ್ದವರು ಭೀಮರಾವ್ ಡಾ.ಅಂಬೇಡ್ಕರ್. ದಲಿತ ಚಳುವಳಿಗೆ ಒಂದು ಚಾರಿತ್ರಿಕ ಹಿನ್ನೆಲೆಯನ್ನು ಕಾಣಬಹುದುದಾಗಿದೆ. "ಸ್ವಾತಂತ್ರ್ಯ ಪೂರ್ವದಲ್ಲಿ ಸುಮಾರು ೧೯೨೦ರಲ್ಲಿ ದಲಿತ ಚಳುವಳಿ ಪ್ರಾರಂಭವಾಯಿತು. ಡಾ.ಅಂಬೇಡ್ಕರ್‌ರವರು ಮಹಾರಾಷ್ಟ್ರದಲ್ಲಿ ಪ್ರಾರಂಭಿಸಿದ ಚಳುವಳಿ ಅತ್ಯಂತ ಪ್ರಬಲವಾಗಿತ್ತು. ಪಂಜಾಬ್‌ನ ಆದ್ –ಧರ್ಮ ಚಳುವಳಿ, ಬಂಗಾಳದಲ್ಲಿ ನಾಮ ಶೂದ್ರ ಚಳುವಳಿ, ತಮಿಳುನಾಡಿನಲ್ಲಿ ಆದಿ ದ್ರಾವಿಡ ಚಳುವಳಿ, ಆಂಧ್ರದಲ್ಲಿ ಆಂಧ್ರಚಳುವಳಿ ಮತ್ತು ಕೇರಳದ ಪುಲಯಾ ಮತ್ತು ಚಿರುಮಾ ಸಂಘಟನೆಯ ಚಳುವಳಿಗಳು ಮೊಳಕೆಯೊಡೆಯುತ್ತಿದ್ದರೂ ರಾಷ್ಟ್ರೀಯ ಚಳುವಳಿಯಲ್ಲಿ ದಲಿತರ ಬೇಡಿಕೆಗಳಿಗೆ ಮಾನ್ಯತೆ ದೊರೆಯದೆ ಮರೆಯಾಗಿತ್ತು. ೧೯೩೦ರಲ್ಲಿ ಅಂಬೇಡ್ಕರ್ ಅಖಿಲ ಭಾರತ ಪರಿಶಿಷ್ಟ ಜಾತಿ/ಪಂಗಡಗಳ ಸಮ್ಮೇಳನ ನಡೆಸಿ, ಎಲ್ಲ ಪ್ರಾಂತ್ಯಗಳ ದಲಿತ ಚಳುವಳಿಗೆ ನಾಯಕರಾದರು"[೧]

ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್(ಎಐಟಿಯುಸಿ); ಕಿಸಾನ್ ಸಭಾ ಸಮ್ಮೇಳನ, ಇಂಡಿಯಾದ ಕಮ್ಯುನಿಷ್ಟ ಚಳುವಳಿ. ರೈತ ಹೋರಾಟಗಳು ಯಾವುದೂ ಕೂಡ ದಲಿತರಿಗೆ, ಶೋಷಿತರಿಗೆ ಸರಿಯಾದ ರೀತಿಯ ಕಾರ್ಯ ಯೋಜನೆಗಳಾಗಲಿ ನ್ಯಾಯಸಮ್ಮತ ನೀತಿಯಾಗಲಿ ದೊರಕಿಸದೇ ಹೋದ ಕಾರಣ ದಲಿತರು, ಶೋಷಿತರು ಈ ಹೋರಾಟಗಳ ಕಡೆ ಸೇರದೇ ಹೋದರು. ಅದೇ ರೀತಿಯಾಗಿ ಜಾತಿವ್ಯವಸ್ಥೆಯ ವಿರುದ್ಧ ಮಹಾರಾಷ್ಟ್ರದ ಜ್ಯೋತಿಬಾಪುಲೆ, ತಮಿಳುನಾಡಿನ ತಂದೆ ಪೆರಿಯಾರ್ ರಾಜಕೀಯ ಪರಿಹಾರ ಕೊಡಲು ಯತ್ನಿಸಿದ ಡಾ.ರಾಮಮನೋಹರ ಲೋಹಿಯಾ ಮುಂತಾದ ಮೇಲ್ಜಾತಿಯ ನಾಯಕರು ಜಾತಿ ಪದ್ಧತಿಯ ವಿರುದ್ಧದ ಹೋರಾಟವನ್ನು ದಲಿತರ, ಬ್ರಾಹ್ಮಣೇತ್ತರ ಮುಖ್ಯ ಸಮಸ್ಯೆಯಾದ ಆರ್ಥಿಕ ಸಮಾನತೆಯನ್ನು ತರದೇ ಸೋತಿದ್ದರು.

ಬ್ರಿಟಿಷ್‌ರಿಂದ ಸ್ವಾತಂತ್ರ್ಯ ಹೊಂದಿದ ಮೇಲೆ ಭಾರತ ದೇಶವನ್ನು ಬಂಡವಾಳಗಾರರು ಮೇಲ್ವರ್ಗದವರು ಆಡಳಿತ ನಡೆಸುವುದನ್ನು ಕಂಡ ವಿಚಾರವಂತರು, ಚಿಂತಕರು, ಸಾಮಾನ್ಯ ಜನರು ಸ್ವಾತಂತ್ರ್ಯದ ಬಗ್ಗೆ ಭ್ರಮ ನಿರಸನಗೊಂಡರು. ಇದರ ಪ್ರಯುಕ್ತವೇ ೭೦ರ ದಶಕ ಬಂಡಾಯಗಾರರ ಯುಗವಾಗಿ ಮಾರ್ಪಟ್ಟಿತು. ದಲಿತ ವಿದ್ಯಾವಂತರು ಕ್ರಾಂತಿಕಾರಿ ಸಿದ್ಧಾಂತದ ಪ್ರಜ್ಞೆಯೊಂದನ್ನು ಬೆಳೆಸಿಕೊಂಡು ಹೋರಾಟದ ಮಾರ್ಗದೊಂದಿಗೆ ಚಳುವಳಿಯ ಮೂಲಕ ಹೆಜ್ಜೆಯನ್ನಿಡಲು ಪ್ರಾರಂಭಿಸಿದರು. ಸಾಮಾಜಿಕ ನ್ಯಾಯಕ್ಕಾಗಿ ನಡೆದ ಹೋರಾಟಗಳ ಪ್ರತಿಫಲವಾಗಿ ೧೯೭೦ರ ದಶಕದಲ್ಲಿ ಕರ್ನಾಟಕದಲ್ಲಿ ಜ್ವಾಲಾಮುಖಿಯಂತೆ ಹರಡಿ, ಆಳುವ ವರ್ಗಗಳ ಸಾಮಾಜಿಕ ವರ್ಗ ಹಿತಾಸಕ್ತಿಗಳ, ಜಾತಿವ್ಯವಸ್ಥೆಯ ಹರಿಕಾರರ ಪ್ರಜ್ಞೆಯನ್ನೇ ಅಲುಗಾಡುವಂತೆ ಮಾಡಿದ್ದು ದಲಿತ ಚಳುವಳಿ. ಮಹಾರಾಷ್ಟ್ರದಲ್ಲಿ ಆರಂಭವಾದ ದಲಿತ ಪ್ಯಾಂಥರ್ ಚಳುವಳಿ ದೇಶದೆಲ್ಲೆಡೆ ಡಾ.ಅಂಬೇಡ್ಕರ್ ವಾದವನ್ನು ಪ್ರಚಾರ ಪಡಿಸುವುದರಲ್ಲಿ ಯಶಸ್ವಿಯಾಗಿತ್ತು. ಮತ್ತೊಂದೆಡೆ ಆದಿವಾಸಿಗಳನ್ನು, ರೈತಕೂಲಿಗಳನ್ನು, ನಿರುದ್ಯೋಗಿ ಯುವಕರನ್ನು ಆಕರ್ಷಿಸಿದ್ದ ನಕ್ಸಲ್ ಚಳುವಳಿ. ಶೋಷಿತ ಸಮುದಾಯದ ಹೋರಾಟ ಮತ್ತು ಸಂಘಟನಾತ್ಮಕವಾಗಿ ಸಂಘರ್ಷ ನಡೆಸಲು ಮುಂದಾದ್ದು ಕರ್ನಾಟಕ ದಲಿತ ಸಂಘರ್ಷ ಸಮಿತಿಯ ದೊಡ್ಡತನ. ನಿಜವಾಗಿಯೂ ಕರ್ನಾಟಕದ ಸಾಮಾಜಿಕ ರಾಜಕೀಯ ಇತಿಹಾಸದಲ್ಲಿ ಅತ್ಯಂತ ಶೀಘ್ರಗತಿಯಲ್ಲಿ ಇಡೀ ರಾಜ್ಯವನ್ನು ವ್ಯಾಪಿಸಿ ಒಂದು ಪ್ರಬಲ ಜನಾಂದೋಲನವಾಗಿ ರೂಪುಗೊಂಡ ಚಳುವಳಿ ಎಂದರೆ ದಲಿತ ಚಳುವಳಿ ಎಂದು ಹೇಳಬಹುದು. ದಲಿತೇತರರನ್ನು ತನ್ನೊಳಗೆ ಅಡಗಿಸಿಕೊಂಡು ಹೋರಾಟದ ಹಾದಿ ಹಿಡಿದ ದಲಿತ ಚಳುವಳಿ ಸ್ವಾಭಾವಿಕವಾಗಿ ಒಂದು ಪ್ರಜಾಸತ್ತಾತ್ಮಕ ಆಂದೋಲನವಾಗಿದೆ.

ಭಿನ್ನ-ವಿಭಿನ್ನ ಚಿಂತನೆಗಳು, ಸೈದ್ಧಾಂತಿಕ ಧೋರಣೆಗಳು, ಹೋರಾಟದ ಮಾರ್ಗಗಳು ಪ್ರಾರಂಭದಲ್ಲಿಯೇ ಕಾಡಿದರೂ, ದಲಿತ ಚಳುವಳಿ ಶೂನ್ಯದಿಂದ ಪ್ರಾರಂಭಗೊಂಡು ಮಹತ್ವದ ಜನಾಂದೋಲನಕ್ಕೆ ದಲಿತ ಸಮುದಾಯಗಳ ಸಾಮಾಜಿಕ ಘನತೆಯೇ ಮುಖ್ಯ ಅಂಶವಾಗಿತ್ತು. ಯಾವುದೇ ರಾಜಕೀಯ ಉದ್ದೇಶಗಳಿಲ್ಲದೆ ರೂಪಗೊಂಡ ಈ ಚಳುವಳಿ ಗ್ರಾಮಗಳಲ್ಲಿ ದಲಿತರ ಆರ್ಥಿಕ ಸಮಾನತೆಯನ್ನು ಸಾಧಿಸುವುದೇ ಆಗಿತ್ತು. ಡಾ.ಅಂಬೇಡ್ಕರ್‌ರವರ ಚಿಂತನೆ ಮತ್ತು ಧೋರಣೆಗಳನ್ನು ವ್ಯಾಪಕವಾಗಿ ಪ್ರಚಾರ ಮಾಡಿ ಮನೆ ಮಾತಾಗಿಸಿದೆ.

ಇಂತಹ ದಲಿತ ಚಳುವಳಿ ಪ್ರಾರಂಭದಲ್ಲಿ ಭದ್ರಾವತಿಯಲ್ಲಿ ನಡೆದ ದಲಿತ ಲೇಖಕರು, ಕಲಾವಿದರ ಒಕ್ಕೂಟವೇ ಮುಂದೆ ಚಿಕ್ಕಮಗಳೂರಿನಲ್ಲಿ ಒಕ್ಕೂಟದ ಸಮ್ಮೇಳನ ನಡೆದಾಗ ಈ ಸಂಘಟನೆಯ ಹೆಸರನ್ನು ದಲಿತ ಸಂಘರ್ಷ ಸಮಿತಿಯಾಗಿ ರೂಪಾಂತರ ಹೊಂದಿತು. ಡಾ.ಅಂಬೇಡ್ಕರ್ ಸ್ಫೂರ್ತಿಯೇ ದಲಿತ ಪ್ಯಾಂಥರ್ಸ್‌ನ ಮಾದರಿಯನ್ನು ಎದುರಿಗಿಟ್ಟುಕೊಂಡು ಚಳುವಳಿಯನ್ನು ಬೆಳೆಸುವ

ಕಾರ್ಯ ಮೊದ ಮೊದಲು ನಡೆಯಿತಾದರೂ ಬೆಳೆದಂತೆಲ್ಲಾ ದಲಿತ ಸಂಘರ್ಷ ಸಮಿತಿ ತನ್ನದೇ ತಾತ್ವಿಕ-ನೆಲೆಯೊಂದನ್ನು ಕಂಡುಕೊಂಡಿತು. ಪ್ರಾರಂಭದಲ್ಲಿ ಆತ್ಮರಕ್ಷಣಾತ್ಮಕವಾಗಿದ್ದ ಚಳುವಳಿ ನಂತರದ ದಿನಗಳಲ್ಲಿ ತನ್ನ ಹಕ್ಕುಗಳಿಗಾಗಿ ಹೋರಾಟವನ್ನು ಆರಂಭಿಸಿ, ರಾಜ್ಯದೆಲ್ಲೆಡೆ ಗಟ್ಟಿಯಾಗಿ ಬೇರೂರಿ ಬೆಳೆಯಿತು. "ಡಾ.ಅಂಬೇಡ್ಕರ್ ಯಾವ ಹಿಂಸೆ ರಕ್ತಪಾತಕ್ಕೆ ಪ್ರೋತ್ಸಾಹ ಕೊಡಲಿಲ್ಲ. ದಲಿತರ ಸಮಸ್ಯೆಯನ್ನು ಸಂವಿಧಾನದ ಚೌಕಟ್ಟಿನಲ್ಲೇ ನಿವಾರಣೆ ಮಾಡಬೇಕು ಅಂತ. ಜಾಗೃತಿ ಮತ್ತು ಸಂಘಟನೆಯ ಮಾರ್ಗವನ್ನು ಹಿಡಿದು ಅಹಿಂಸಾತ್ಮಕವಾದ ಮತ್ತು ಪ್ರಜಾಸತ್ತಾತ್ಮಕವಾದ ಹೋರಾಟವನ್ನು ದೇಶದಲ್ಲಿ ಅಂಬೇಡ್ಕರ್ ನಡೆಸಿದರು"[೨] ಹಾಗೆಯೇ ಕರ್ನಾಟಕದಲ್ಲಿ ದಲಿತ ಚಳುವಳಿಗಳಿಂದು ತೀವ್ರತರದಲ್ಲಿ ಇರದಿದ್ದರೂ ಭೀಮ ಮಾರ್ಗದಲ್ಲೇ ಹೋರಾಟಗಳು ನಡೆಯುತ್ತಿದೆ.

ಕನ್ನಡದ ದಲಿತ ಬರಹಗಾರರೆಲ್ಲರೂ ಕೂಡ ಒಂದಲ್ಲ ಒಂದು ಬಗೆಯಲ್ಲಿ ಅಂಬೇಡ್ಕರ್ ವಾದದಿಂದ ಪ್ರೇರಣೆ, ಸ್ಫೂರ್ತಿ, ಪ್ರಭಾವಕ್ಕೆ ಒಳಗಾಗಿರುವವರೇ. ಏಕೆಂದರೆ ಡಾ.ಅಂಬೇಡ್ಕರ್‌ರವರು ದಲಿತರ ಸ್ವಾಭಿಮಾನದ ಸಂಕೇತವಾಗಿದ್ದಾರೆ. ಅವರು ಭಾರತೀಯ ಸಮಾಜದ ಮತ್ತು ರಾಷ್ಟ್ರದ ನ್ಯೂನತೆಗಳನ್ನು ಗುರುತಿಸಿ ನೇರವಾಗಿ ಅದನ್ನು ಟೀಕಿಸಿ, ಆಳವಾದ ಮತ್ತು ವಿಸ್ತಾರವಾದ ಅಧ್ಯಯನವನ್ನು ಕೈಗೊಂಡು ಅದಕ್ಕೆ ಪರಿಹಾರೋಪಾಯಗಳನ್ನು ಸೂಚಿಸಿದರು. ಮತ್ತೆ ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಹೋರಾಟಕ್ಕೆ ನಾಂದಿ ಹಾಡಿದರು. ಡಾ.ಅಂಬೇಡ್ಕರ್ ಬರಹಗಳು ಮತ್ತು ಭಾಷಣ, ಚಿಂತನೆಗಳೇ ಕನ್ನಡ ಸಾಹಿತ್ಯ ಲೋಕದಲ್ಲೊಂದು ಸಾಹಿತ್ಯ ಪ್ರಕಾರದ ಹುಟ್ಟಿಗೆ ಕಾರಣವಾಯಿತು. ಅದೇ ಶೋಷಿತ ಸಮಾಜದ ದಮನಿತ ಜನ ವಿದ್ಯಾಭ್ಯಾಸದಿಂದ ಎಚ್ಚೆತ್ತು ಅದೆಲ್ಲದರ ವಿರುದ್ಧ ಸಿಡಿದು ಬರೆದ ಬರವಣಿಗೆಯೇ 'ದಲಿತ ಸಾಹಿತ್ಯ' ಪ್ರಕಾರವಾಗಿದೆ.

'ದಲಿತ' ಪದದ ಬಗ್ಗೆ ಸಾಮಾನ್ಯರಲ್ಲಿ ಖಚಿತತೆ ಇಲ್ಲವಾಗಿದೆ. ಈ 'ದಲಿತ' ಪದದ ಅರ್ಥ ವಿವರಣೆಯು ಅರವಿಂದ ಮಾಲಗತ್ತಿಯವರು ೩ ವಾದಗಳನ್ನು ಮಂಡಿಸುತ್ತಾರೆ. ೧. ಶೋಷಣೆ ಎಂಬ ಪದಕ್ಕೆ ಜಾತಿಬೇಧವಿಲ್ಲ. ಆರ್ಥಿಕ, ಸಾಮಾಜಿಕ, ರಾಜಕೀಯ ರಂಗದಲ್ಲೆಲ್ಲ ಶೋಷಣೆಗೆ ಒಳಗಾದ ಎಲ್ಲಾ ಜನರೂ ದಲಿತರು.

೨. ಪಂಚಮರು/ ಬಹಿಷ್ಕೃತರು ಎಂದು ಕರೆಯಿಸಿಕೊಳ್ಳುವ ಅಸ್ಪೃಶ್ಯರೆಲ್ಲರೂ ದಲಿತರು.

೩. ಅಸ್ಪೃಶ್ಯರು ಸೇರಿದಂತೆ, ಅಸ್ಪೃಶ್ಯತೆಯ ನೋವನ್ನು ಅನುಭವಿಸದಿದ್ದರೂ ಅಸ್ಪೃಶ್ಯತೆಯ ಹಾಗೆ ಆರ್ಥಿಕ, ಸಾಮಾಜಿಕ, ರಾಜಕೀಯ ರಂಗದಲ್ಲಿ ಶೋಷಣೆಗಳಿಗೆ ಒಳಗಾದ ಜನರು ಸೇರಿ ದಲಿತರಾಗುತ್ತಾರೆ"[೩] ಎಂದು ಹೇಳುತ್ತಾರೆ.

ಇಲ್ಲಿ 'ದಲಿತ' ಎಂಬ ಪದವನ್ನು ಜಾತಿ ಮೂಲವನ್ನಾಗಿಸಿಕೊಂಡಿದೆ. ಏಕೆಂದರೆ ನಿಘಂಟಿನಲ್ಲಿ 'ದಲಿತಜನ' ಪದಕ್ಕೆ ಹಿಂದುಳಿದವರು, ಆರ್ಥಿಕವಾಗಿ, ಸಾಮಾಜಿಕವಾಗಿ

ಕೆಳ್ಳಮಟ್ಟದವರು, ದಮನಕ್ಕೆ ಒಳಗಾದವರು ಎಂಬ ಅರ್ಥಗಳಿವೆ. ದಲಿತ ಎಂಬುದಕ್ಕೆ ಎಲ್ಲಾ ಜಾತಿಯ ಬಡವರು ಎಂದೂ ಹೇಳಿದರೂ ಕೂಡ "ಭಾರತದ ಜಾತಿ ಸಮಾಜದಲ್ಲಿ ಪೂರ್ಣ ಮೈಲಿಗೆಯೆಂದು ಪರಿಗಣಿಸಲಾದ ಪಂಚಮರು/ ಅಸ್ಪೃಶ್ಯರು ಇಲ್ಲಿ ಸೇರ್ಪಡೆಯಾಗುತ್ತಾರೆ. ಶ್ರೇಣೀಕರಣದ ದೃಷ್ಟಿಯಿಂದ ಇವರು ಸಾಂಪ್ರದಾಯಿಕ ಭಾರತದಲ್ಲಿ ಅತ್ಯಂತ ಕೆಳಗಿನ ಸ್ಥಾನದಲ್ಲಿರುತ್ತಾರೆ"[4] ಅದ್ದರಿಂದ ಇರದು ಸವರ್ಣೀಯ ಹಿಂದುಗಳಿಂದ ದೂರವಿಡಲ್ಪಟ್ಟ, ಶೋಷಣೆ, ತುಳಿತಕ್ಕೆ ಒಳಗಾದ ದಮನಿತ ಜನ ಸಮೂಹವೇ ನಿಜವಾದ ದಲಿತರು ಎಂದು ಹೇಳಬಹುದಾಗಿದೆ. ಇದಕ್ಕೆ ಅರವಿಂದ ಮಾಲಗತ್ತಿಯವರು ಇನ್ನೂ ಖಚಿತತೆಯನ್ನು ಒದಗಿಸುತ್ತಾರೆ. "ಶತಮಾನಗಳಿಂದ ಜನಸಮುದಾಯದಲ್ಲಿ ಆರ್ಥಿಕ, ಸಾಮಾಜಿಕ, ರಾಜಕೀಯವಾಗಿ ಶೋಷಣೆಗೆ ಒಳಗಾದವರು. ಒಟ್ಟು ಸಮಾಜದೊಂದಿಗೆ ಬದುಕಲಾಗದೆ, ಊರ ಹೊರಗೆ ವಾಸಿಸಿ, ಕೀಳು ವೃತ್ತಿಗೆ ಅವಲಂಬಿತರಾಗಿ ತಮ್ಮ ಹೆಸರು ಹೇಳಿಕೊಳ್ಳಲು ನಾಚಿಕ ಪಡುವ ಅಸ್ಪೃಶ್ಯರು/ ಬಹಿಷ್ಕೃತರೆನಿಸಿ ಕೊಂಡವರೆಲ್ಲರೂ ದಲಿತರೆನ್ನಿಸಿ ಕೊಳ್ಳುತ್ತಾರೆ" ಎಂದು ಅರವಿಂದ ಮಾಲಗತ್ತಿಯವರು ಹೇಳುತ್ತಾರೆ.

ಇವರು ಅವಮಾನದ ನೋವುಗಳು, ನಲಿವುಗಳನ್ನು ಆಕ್ರೋಶದ ಕಿಡಿಗಳಂತೆ ಬರವಣಿಗೆಗಳನ್ನು ಜನಪರ ಕಾಳಜಿಯಲ್ಲಿ ಬರೆದು ಸಾಹಿತ್ಯ ರೂಪದಲ್ಲಿ ವ್ಯಕ್ತಪಡಿಸುತ್ತಾರೆ. "ಒಬ್ಬ ಅವಮಾನಿತ ವ್ಯಕ್ತಿ ಸ್ವಾಭಿಮಾನಿಯೂ ಆದಾಗ ಹುಟ್ಟಿದ ಸಾಹಿತ್ಯಕ್ಕೆ ಒಂದು ಗುಣವಿರುತ್ತದೆ. ಅದನ್ನು ನಾವು ಪ್ರಪಂಚದ ಎಲ್ಲಾ ಕಡೆಯೂ ಪ್ರತಿಭಟನಾ ಸಾಹಿತ್ಯವೆಂದು ಕಾಣುತ್ತೇವೆ. ಹೀಗೆ ಅವಮಾನಿತ ಸ್ವಾಭಿಮಾನಿಯಾದವನು ಅಸ್ಪೃಶ್ಯನೂ ಆಗಿದ್ದಲ್ಲಿ ನಮ್ಮ ದಲಿತ ಸಾಹಿತ್ಯ ಹುಟ್ಟಿ ಬರುತ್ತದೆ. ಆದ್ದರಿಂದ ಅವಮಾನಿತರ ಜಾಗತಿಕ ಸಾಹಿತ್ಯ ನಡುವೆ ಈ ಸಾಹಿತ್ಯಕ್ಕೊಂದು ಸ್ಪಷ್ಟ ರೂಪವಿರುತ್ತದೆ"[5] ಎಂದು ಯು.ಆರ್.ಅನಂತಮೂರ್ತಿಯವರು ಸ್ಪಷ್ಟವಾಗಿ ವಿವರಿಸಿದ್ದಾರೆ. ಹಾಗೆಯೇ ಕನ್ನಡ ದಲಿತ ಸಾಹಿತ್ಯದಲ್ಲಿ ಪ್ರತಿಮೆಗಳ ಮೂಲಕ ಸಾಹಿತ್ಯ ಕೃಷಿ ಮಾಡಿ, ಬದಲಾವಣೆಯೆಂಬುದು ಮೇಲ್ನೋಟ ಆಗದೇ ಮನಃ ಪೂರ್ವಕವಾದ ಮಾನಸಿಕ ಬದಲಾವಣೆಯಿಂದಲೇ ಪರಿವರ್ತನೆಯೆಂಬುದು ಶಾಶ್ವತವಾಗುತ್ತದೆ ಎಂಬುದನ್ನು ತನ್ನ ಬರವಣಿಗೆಯಲ್ಲಿ ವಾಸ್ತವತೆಯ ನೆಲೆಯಲ್ಲೇ ಬದಲಾವಣೆಯ ತಂಗಾಳಿಯನ್ನು ಬೀಸಿ, "ಸಂಬಂಜ ಅನ್ನೋದು ದೊಡ್ಡದು ಕನಾ" ಎಂದ ದೇವನೂರು ಮಹಾದೇವ ಈ ದಲಿತ ಸಾಹಿತ್ಯದ ಅಗತ್ಯತೆಯನ್ನು ಕುರಿತು, ಅವರದೇ ಆದ ಪರಿಭಾಷೆಯಲ್ಲಿ ಹೀಗೆ ಹೇಳುತ್ತಾರೆ. "ನಾನು ಅಂಥ ಕತ್ತಲ ರಾಜ್ಯದಿಂದ ಬಂದಂಥವನು. ಕಲಾ ಮಾಧ್ಯಮದಲ್ಲಿ ನಾನು ಕಂಡುಕೊಳ್ಳುತ್ತಿರುವುದು ಒಂದು ಆಕಸ್ಮಿಕವೇ. ನಾನು ಇದುವರೆಗೆ ಬರೆದಿರುವುದು ನಮ್ಮ ರಾಜ್ಯದ ಮನುಷ್ಯನ ಆರೇಳು ಬೆರಳುಗಳು, ಹೆಚ್ಚೆಂದರೆ ಒಂದು ಹಸ್ತ ಇದ್ದಿತು. ಅದಷ್ಟೇ ಕನ್ನಡ ಸಾಹಿತ್ಯದ ಗತಿಯನ್ನು ಅಲ್ಲಾಡಿಸುವಲ್ಲಿ ತನ್ನ ಪ್ರಮಾಣಕ್ಕಿಂತ ಹೆಚ್ಚಾಗಿ ಅಲ್ಲಾಡಿಸಿದೆ. ಒಂದೆರಡು ಬೆರಳು ಹಸ್ತಕ್ಕೆ ಇಷ್ಟಾಗುವುದಾದರೆ, ಕತ್ತಲ

ರಾಜ್ಯದ ಇಡೀ ಮನುಷ್ಯ ಮಾತಾಡುವುದಾದರೆ ಅದರಿಂದ ಉಂಟಾಗುವ ಬದಲಾವಣೆಯು ನನ್ನ ಕಲ್ಪನೆಗೆ ಎಟುಕದಷ್ಟಾಗಬಹುದು. ಆ ಬದಲಾವಣೆಗಾಗಿ ಈ ಮನುಷ್ಯನ ನುಡಿಗೆ ನುಡಿಕೊಡಲು ಜನರು ಹುಟ್ಟ ಬೇಕಾದೀತು. ಒಂದು ಆಂದೋಲನ ಇದನ್ನು ಕಾಣಿಸಬಹುದೇನೋ"[1] ಎಂದು ದಲಿತ ಸಾಹಿತ್ಯದಿಂದ ಒಂದು ಸಮುದಾಯದ ಕ್ರಾಂತಿಕಾರಕ ಬದಲಾವಣೆ ಹೇಗೆ ಸಾಧ್ಯವಾಗಿದೆ, ಮುಂದಿನ ಪೀಳಿಗೆಯು ಸಹ ಇದರತ್ತ ಗಮನ ಹರಿಸಿ ಕೈ ಜೋಡಿಸಿದೆ, ಆದರೆ ಈ ಸಮಾಜದಲ್ಲಿ ಗೌರವಯುತ ಜೀವನ, ಸಮ-ಸಮಾಜದ ಜೀವನವನ್ನು ಪಡೆಯಲು ಸಾಧ್ಯವೆಂಬುದನ್ನು ಮಾರ್ಮಿಕವಾಗಿಯೇ ನುಡಿದಿದ್ದಾರೆ.

ದಲಿತ ಸಾಹಿತ್ಯ ೧೯೭೦ರ ದಶಕದಲ್ಲಿ ಪ್ರಬಲವಾದ ಸಾಹಿತ್ಯ ಚಳುವಳಿಯಾಗಿ ಕಾಣಿಸಿಕೊಂಡಿತು. ಅದಕ್ಕೂ ಮೊದಲು ಕನ್ನಡದಲ್ಲಿ ನವ್ಯ ಸಾಹಿತ್ಯ(೧೯೫೦-೧೯೭೨) ಎರಡು ದಶಕವರೆಗೆ ಮೆರೆದು ಹೊಸ ಸಾಹಿತ್ಯ ಕೃಷಿಯನ್ನು ಮಾಡಿ ಕನ್ನಡಕ್ಕೆ ತನ್ನದೇ ಆದ ಕೊಡುಗೆಯನ್ನು ನೀಡಿತು. ಈ ಸಾಹಿತ್ಯ ಬರು ಬರುತ್ತಾ ತನ್ನ ಎಲ್ಲಾ ಸಾಧ್ಯತೆಗಳನ್ನು ಪೂರೈಸಿಕೊಂಡು ಹೇಳಿದ್ದನ್ನು ಹೇಳುವ, ಹೇಳಿದ ಹಾಗೆ ಹೇಳುವ ಕ್ರಮವನ್ನೇ ಮುಂದುವರೆಸಿತು. ಸಮಾಜ, ಸಮಾಜದಲ್ಲಿನ ಜನರ ಬದುಕಿನ ಜೀವನ, ಅಭಿವ್ಯಕ್ತಿ ಅಶೋತ್ತರಗಳು ಬದಲಾದಂತೆ ತನ್ನ ಬರವಣಿಗೆ, ಶೈಲಿ, ಸಾಹಿತ್ಯ ಅಭಿಲಾಷೆಯನ್ನು ಬದಲಾಯಿಸದೇ ಹೋದ ಪರಿಣಾಮವಾಗಿ ಹೊಸತೊಂದು ಸಾಹಿತ್ಯ ಯುಗದ ಹುಟ್ಟಿಗೆ ನಾಂದಿ ಹಾಡಿತು.

"ಒಂದು ನಿರ್ದಿಷ್ಟ ಸಾಹಿತ್ಯ ಪರಂಪರೆಯು ತನ್ನ ಸಾಧ್ಯತೆಗಳನ್ನು ತೀರಿಸಿಕೊಂಡು ಜಡವಾಗಿ ಹೋಗುವ ಹೊತ್ತಿಗೆ ಇನ್ನೊಂದು ಸಾಹಿತ್ಯ ಪರಂಪರೆಯ ಉಗಮಕ್ಕೆ ಕಾರಣವಾದ ಅಂಶಗಳನ್ನು ತನ್ನ ಒಡಲಲ್ಲಿ ಧರಿಸಿಕೊಂಡಿರುತ್ತದೆ"[2] ಎಂಬ ಮಾತಿನಂತೆ ದಲಿತ ಸಾಹಿತ್ಯ ೭೦ರ ದಶಕದಲ್ಲಿ ನವ್ಯ ಸಾಹಿತ್ಯದ ಮಿತಿಗಳನ್ನು ಅರಿತು ಅದಕ್ಕೆ ವಿರುದ್ಧವಾಗಿ ಜನ್ಮ ತಾಳಿತು. ಅದಲ್ಲದೇ ಆಂಧ್ರಪ್ರದೇಶದಲ್ಲಿ ೧೯೬೫ದಿಂದೀಚೆಗೆ ವ್ಯಾಪಕವಾಗಿ ಬೆಳೆದ "ದಿಗಂಬರ ಕಾವ್ಯ", ೧೯೬೭ರ ನಂತರ ಮಹಾರಾಷ್ಟ್ರದಲ್ಲಿ ಜನಪ್ರಿಯವಾದ ಮರಾಠೀ ದಲಿತ ಸಾಹಿತ್ಯ ಚಳುವಳಿ, ಲೋಹಿಯಾ ಸಿದ್ಧಾಂತಗಳು ಕಾರ್ಲ್‌ಮಾರ್ಕ್ಸ್‌ನ ಸಿದ್ಧಾಂತಗಳು ಕೂಡ ದಲಿತರಲ್ಲಿ ಬಂಡಾಯ, ಕ್ರಾಂತಿಕಾರಿ ಮನೋಭಾವನೆ, ಬರವಣಿಗೆ ಮೂಡಲು ಸಾಧ್ಯವಾಯಿತಾದರೂ ಅವರಿಗೆ ಪ್ರಧಾನವಾಗಿ ಪ್ರೇರಣೆ, ಪ್ರಭಾವದ ಸ್ಫೂರ್ತಿಯಾಗಿದ್ದು ಮಾತ್ರ ಬಾಬಾ ಸಾಹೇಬ್ ಭೀಮರಾವ್ ಅಂಬೇಡ್ಕರ್.

"ದಲಿತರು ಎಲ್ಲ ಸವರ್ಣೀಯರ ವಿರುದ್ಧ ಸಾಧ್ಯವಿರುವಲ್ಲೆಲ್ಲ ಘರ್ಷಣೆಗೆ ಇಳಿದರು. ದಲಿತರು ಎಚ್ಚರವಾಗುತ್ತಲೇ ತಮ್ಮೊಳಗೆ ವಿರೋಧ ಕಟ್ಟಿಕೊಂಡಿದ್ದ ಸವರ್ಣೀಯರೆಲ್ಲ ಜಾಗೃತರಾಗಿ ಸ್ನೇಹಿತರಂತೆ ವರ್ತಿಸತೊಡಗಿದರು. ಸಾಂಪ್ರದಾಯಿಕ ಮಡಿ-ಮೈಲಿಗೆಯ ಪರಿಕಲ್ಪನೆಯನ್ನು

ನಿರಂತರವಾಗಿ ಪೋಷಿಸಿಕೊಂಡು ಬರುತ್ತಿದ್ದ ಭಾರತೀಯ ಸಮಾಜಕ್ಕೆ ಮೊದಲ ಬಾರಿಗೆ ಅಘಾತ ಒದಗಿದ್ದೇ ಮೈಲಿಗೆಯೆಂದು ಸಾರಲಾದ ದಲಿತರಿಂದ, ಡಾ.ಅಂಬೇಡ್ಕರ್‌ರವರ ಸಿದ್ಧಾಂತ ಇವರ ಹಿಂದಿನ ಶಕ್ತಿ"[೮] ಎಂಬುದನ್ನು ಯಾರ ಮರೆಯುವಂತಿಲ್ಲ. ಎಲ್ಲಾ ಹೋರಾಟ, ಚಳುವಳಿ, ಬರವಣಿಗೆಗಳು ಡಾ.ಅಂಬೇಡ್ಕರ್ ಚಿಂತನೆಗಳ ನೆರಳಿನಲ್ಲೇ ಸದಾ ಪೋಷಣೆಗೊಳ್ಳುತ್ತಾ ನಿರಂತರವಾಗಿ ಸಾಗಿ ಬರುತ್ತಿದೆ.

ಹಿಂದುಳಿದ ವರ್ಗಗಳಲ್ಲದೇ ಅಲ್ಪಸಂಖ್ಯಾತ ಸಮುದಾಯಗಳಿಗೆ ಮತ್ತು ಮಹಿಳೆಯರಿಗೂ ಕೂಡ ತಮ್ಮ ಹೋರಾಟಗಳ ಮೂಲಕ ನ್ಯಾಯ ಒದಗಿಸಿದ್ದಾರೆ. ಅವರು ಮಹಿಳೆಯರಿಗಾಗಿ "ಹಿಂದೂ ವಿವಾಹ ಕಾಯಿದೆ"ಗೆ ತಿದ್ದುಪಡಿ ತರಬೇಕು. ಮಹಿಳೆ ಪುರುಷನಿಗಿಂತಲೂ ಯಾವುದರಲ್ಲಿಯೂ ಕಡಿಮೆ ಇಲ್ಲ. ಅವಳು ಪುರುಷನಂತೆ ಸಮಾನಳಾಗಿದ್ದು, ಸಮಾನ ಹಕ್ಕು ಪಡೆಯಲು ಅರ್ಹಳೆಂದು ಹೊಸತೊಂದು ಮಸೂದೆಯನ್ನು ಸೆಪ್ಟೆಂಬರ್ ೧೯೫೧ರಲ್ಲಿ ಮಂಡಿಸಲಾಯಿತಾದರೂ, ಅದು ಜಾರಿಗೆಯಾಗದ ಕಾರಣ ಮನನೊಂದ ಮಾತೃಹೃದಯಿಯಾದ ಡಾ.ಅಂಬೇಡ್ಕರ್ ತಮ್ಮ ಕಾನೂನು ಮಂತ್ರಿ ಪದವಿಗೆ ರಾಜೀನಾಮೆ ನೀಡಿದರು. ನಿಜವಾಗಿಯೂ ಸ್ತ್ರೀಯರ ಉದ್ಧಾರಕ್ಕಾಗಿ ಘನತೆಯ, ಉನ್ನತ ಹುದ್ದೆಯನ್ನು ತ್ಯಜಿಸಿದವರು ಈ ಚರಿತ್ರೆಯ ಪುಟಗಳಲ್ಲಿ ಯಾರೂ ಇಲ್ಲವೇನೋ; ಡಾ.ಅಂಬೇಡ್ಕರ್ ಬುದ್ಧನ ನಮ್ರ ಅನುಯಾಯಿಯಾಗಿದ್ದವರು. ಆದುದರಿಂದ ಮಾನವ ಕುಲ ಸ್ತ್ರೀ-ಪುರುಷರ ನಡುವೆ ಬೇಧವೆಣಿಸಲಿಲ್ಲ. ಇದು "ಮಹಿಳೆಯರಲ್ಲಿ ಮತ್ತು ಮುಸ್ಲಿಂರಲ್ಲಿ ಒಂದು ವಿಧದ ಜಾಗೃತಿ ಪ್ರಜ್ಞೆ ಮೂಡಿತಾದರೂ ಹೊಸ ವೈಚಾರಿಕತೆಯ ಸ್ಪರ್ಶಕ್ಕೆ ಆ ಎರಡೂ ವರ್ಗಗಳು ಮೈ ಒಡ್ಡಿದವು. ಪರಿಣಾಮವಾಗಿ ಬಂಡಾಯ-ದಲಿತ ಚಳುವಳಿಯುದ್ದಕ್ಕೂ ಮುಸ್ಲಿಂ ಬರಹಗಾರರು ಮತ್ತು ಮಹಿಳಾ ಲೇಖಕಿಯರು ತಮ್ಮನ್ನು ಅದರೊಂದಿಗೆ ಗುರುತಿಸಿಕೊಂಡೇ ಬಂದರು. ಶೋಷಿತರ ಪರವಾದ ಸಾಹಿತ್ಯಕ ಧೋರಣೆಯನ್ನು ಅವರು ಒಪ್ಪಿಕೊಂಡರು."[೯] ಹೀಗೆ ಗುರುತಿಸಿಕೊಂಡ ಮಹಿಳಾವಾದಿ ಸಾಹಿತಿಗಳು, ಸ್ತ್ರೀಯರ ಸಬಲೀಕರಣಕ್ಕೆ ಡಾ.ಅಂಬೇಡ್ಕರ್ ನೀಡಿರುವ ಕೊಡುಗೆಯನ್ನು, ಅವರು ಮಹಿಳೆಯರ ಬಗ್ಗೆ ಕಂಡ ಕನಸು ನನಸು ಮಾಡಬೇಕಾದರೆ ಅವರ ವಿಚಾರಧಾರೆ, ಚಿಂತನೆಗಳನ್ನು ಅಧ್ಯಯನ ಮಾಡಿ ತಮ್ಮ ಸ್ತ್ರೀವಾದಿ ಚಳುವಳಿಯಲ್ಲಿ ಹೆಜ್ಜೆಗಳನಿಟ್ಟು ಕ್ರಾಂತಿಕಾರಕವಾದ ಪರಿವರ್ತನೆ ಪಥವನ್ನು ಕಾಣಲು ಸಾಧ್ಯವಾಗುತ್ತದೆ ಎಂದು ಹೇಳಬಹುದು.

ದಲಿತಸಾಹಿತ್ಯಕ್ಕೆ ಇತಿಹಾಸವೇನಾದರೂ ಇದೆಯೇ ಎಂದೆನಿಸಿದರೆ ಖಂಡಿತವಾಗಿ ಇದೆ ಎಂದೇ ಹೇಳಬೇಕಾಗುತ್ತದೆ. ೧೨ನೆ ಶತಮಾನದ ವಚನ ಸಾಹಿತ್ಯ ಚಳುವಳಿ ಅನೇಕ ಕ್ರಾಂತಿಕಾರ ಬದಲಾವಣೆಗಳನ್ನು ತಂದಿತು. ಸಾಹಿತ್ಯವನ್ನು ಸಾಮಾನ್ಯ ಜನರ ಬಳಿಗೆ ತಂದು ನಿಲ್ಲಿಸಿತು. ಅದಕ್ಕಿಂತ ಮೊದಲು ಕೇವಲ ಪಾಮರರ ಸ್ವತ್ತಾಗಿದ್ದ ಸಾಹಿತ್ಯ ಸಾಮಾನ್ಯನ ಸನಿಹಕ್ಕೆ ಬಂದು ನಿಂತಿತು. ಜೊತೆಗೆ ಸಮಾಜದ ಕೆಲಸ್ತರದ ವ್ಯಕ್ತಿಗಳು, ವೃತ್ತಿದಾರರೂ ಕೂಡ ಸಾಹಿತ್ಯ ರಚನೆ ಮಾಡತೊಡಗಿದರು. ೧೦ನೆಯ

ಶತಮಾನದಿಂದ ೧೨ನೆ ಶತಮಾನದ ಅವಧಿಯಲ್ಲಿ ಕರ್ನಾಟಕದಲ್ಲಿ ಕೆಲವು ದಲಿತ ಲೇಖಕರು ಕಾಣಸಿಗುತ್ತಾರೆ. "ಕರ್ನಾಟಕದಲ್ಲಿ ಸಮಕಾಲೀನ ದಲಿತ ಸಾಹಿತ್ಯ, ಅದೇ ಸಾವಿರ ವರ್ಷಗಳ ಹಿಂದಿನ ದಲಿತ ಲೇಖಕ ಮಾದಾರ ಚೆನ್ನಯ್ಯನಿಂದ ತನ್ನ ಆರಂಭವನ್ನು ಕಂಡುಕೊಳ್ಳುತ್ತದೆ. ಈ ಪರಿಯಲ್ಲೇ ಹೀಗೆ ಎಂಟು ನೂರು ವರ್ಷಗಳ ಹಿಂದೆ ಕರ್ನಾಟಕದಲ್ಲಿ ಆರಂಭವಾದ ಶೈವ ಧರ್ಮದ ಜನಪರ ಆಂದೋಲನದ ಮುಂಚೂಣಿಯಲ್ಲಿ ಡೋಹರ ಕಕ್ಕಯ್ಯ, ಮಾದಾರ ಧೂಳಯ್ಯ ಮುಂತಾದ ದಲಿತ ವರ್ಗದ ಹಲವಾರು ಸಂತ ಲೇಖಕರು ಕೂಡ. ಸಾವಿರ ವರ್ಷಗಳ ಹಿಂದೆ ಸಂತ ಲೇಖಕನೇ ಆದ ಮಾದಾರ ಚೆನ್ನಯ್ಯ ಹಾಕಿಕೊಟ್ಟ ಧಾರ್ಮಿಕ, ಸಾಮಾಜಿಕ ಹಾದಿಯಲ್ಲೇ ಮುನ್ನಡೆದಿದ್ದಾರೆ."[೧೦] ಇವರು ದಲಿತ ಲೇಖಕರು ಎಂಬುದೇ ಸಂತೋಷದ ವಿಷಯವಾಗಿದೆ. ಇವರ ವಿಚಾರಧಾರೆಗಳು, ಸಾಹಿತ್ಯ ಅಷ್ಟೇನೂ ಬೆಳಕಿಗೆ ಬರದಿದ್ದರೂ ಪ್ರಸಿದ್ಧಿ ಪಡೆಯದಿದ್ದರೂ ಕೆಳವರ್ಗದ ಜನ ಸಾಹಿತ್ಯ ರಚನೆಯಲ್ಲಿ ತೊಡಗಿಸಿಕೊಂಡು ತನ್ನ ಇರುವಿಕೆಯನ್ನು ತೋರಿಸಿ ಕೊಟ್ಟಿದ್ದಾರೆ.

ನಮ್ಮ ಕನ್ನಡದ ಮಟ್ಟಿಗೆ ದಲಿತ ಸಾಹಿತ್ಯ ಚರಿತ್ರೆ ಕುರಿತು ೧೯೪೫ರ ನಂತರ ನಮಗೆ ಅಪರೂಪದ ದಾಖಲೆಗಳು ಸಿಕ್ಕಿ ಕುತೂಹಲವನ್ನು ಹೆಚ್ಚಿಸುತ್ತದೆ. "ಆಧುನಿಕ ಕನ್ನಡ ಸಾಹಿತ್ಯದ ಪ್ರಪ್ರಥಮ ಪ್ರಾಧ್ಯಾಪಕ ಪ್ರೊ.ಟಿ.ಎಸ್.ವೆಂಕಣ್ಣಯ್ಯನವರು ಎಂಬುದು ಎಷ್ಟರಮಟ್ಟಿಗೆ ಸತ್ಯವೋ ಕನ್ನಡದ ಪ್ರಪ್ರಥಮ ದಲಿತ ಲೇಖಕ ಕೂಡ, ಅದೇ ವೆಂಕಣ್ಣಯ್ಯನವರ ಶಿಷ್ಯ ಜಿ.ವೆಂಕಟಯ್ಯನವರು ಎಂಬುದು ಕೂಡ ಅಷ್ಟೇ ಸತ್ಯ ಸಂಗತಿಯಾಗಿದೆ. ಚಾರಿತ್ರಿಕವಾಗಿ ಮುಖ್ಯವೆನಿಸುವ ಇನ್ನು ಒಂದು ಸತ್ಯಸಂಗತಿ ಎಂದರೆ ಕನ್ನಡ ನವೋದಯ ಸಾಹಿತ್ಯ ಟಿ.ಎಸ್.ವೆಂಕಣ್ಣಯ್ಯನವರಿಂದ ಆರಂಭವಾದರೆ, ಆಧುನಿಕ ದಲಿತ ಸಾಹಿತ್ಯ ಜಿ.ವೆಂಕಟಯ್ಯನವರಿಂದ ಆರಂಭವಾಗುತ್ತದೆ"[೧೧] ಕನ್ನಡದ ಮೊದಲ ಲೇಖಕ ಜಿ.ವೆಂಕಟಯ್ಯನವರ 'ಮುರಿದ ಮದುವೆ' ಎಂಬ ಕಾದಂಬರಿ ೧೯೫೧ರಲ್ಲಿ ವೆಂಕಣ್ಣಯ್ಯನವರ ಗ್ರಂಥಮಾಲೆಯಲ್ಲೇ ಪ್ರಕಟವಾಗಿದೆ. ಜಿ.ವೆಂಕಟಯ್ಯನವರು ಡಾ.ಅಂಬೇಡ್ಕರ್‌ರವರ ಬದುಕು, ಬರಹ, ಚಿಂತನೆಗಳಿಂದ ಪ್ರೇರಣೆಗೊಂಡು ಆಗಿನ ಕಾಲಕ್ಕೆ, ಅಂದರೆ ಸ್ವತಂತ್ರ ಪೂರ್ವದಲ್ಲೇ ಶಾಲೆಯ ಶಿಕ್ಷಣವನ್ನು ಪಡೆದು ಸಾಹಿತ್ಯ ಕೃತಿಗಳನ್ನು ರಚಿಸಿದ್ದಾರೆ.

ಇವರು ಡಾ.ಅಂಬೇಡ್ಕರ್‌ರವರನ್ನು ಹತ್ತಿರದಿಂದ ಕಂಡಿದ್ದವರು. "ಆಧುನಿಕ ಕನ್ನಡದಲ್ಲಿ ಜಿ.ವೆಂಕಟಯ್ಯನವರಿಗಿಂತಲೂ ಮೊದಲು ಬುದ್ಧನ ಜೀವನವನ್ನು ಕುರಿತ ಕೃತಿಗಳ ರಚನೆಯಾಗಿರಲಿಲ್ಲ ಎಂಬುದನ್ನು ನೆನಪಿಡಬೇಕು. ಬಹುಶಃ ಜಿ.ವೆಂಕಟಯ್ಯನವರ ನಂತರವೇ ಬಿ.ಪುಟ್ಟಸ್ವಾಮಯ್ಯನವರು ಜಿ.ಪಿ.ರಾಜರತ್ನಂರವರು ಹಾಗೂ ಗೋವಿಂದ ಪೈರವರು ಬುದ್ಧನನ್ನು ಕುರಿತಂತೆ ತಮ್ಮ ಕೃತಿಗಳ ರಚನೆ ಮಾಡಿರುವಂತೆ ತೋರುತ್ತಾರೆ."[೧೨]

೧೯೬೦ರ ದಶಕದಲ್ಲಿ ಹಾಗೆ ಆಧುನಿಕ ಕನ್ನಡದ ಪ್ರಪ್ರಥಮ ಸೃಜನಶೀಲ ದಲಿತ ಲೇಖಕ ಜಿ.ವೆಂಕಟಯ್ಯ• ಇವರು ಕನ್ನಡದ ಮೊದಲ ರಾಷ್ಟ್ರಕವಿ. ಅಲ್ಲದೇ ಹೆಸರಾಂತ ಕವಿಗಳಿಗೂ ಮೊದಲೇ ಮಾನವೀಯತೆಯನ್ನು ಬೋಧಿಸಿದ ಜಗದ್ಗುರು ಬುದ್ಧರ ಬಗ್ಗೆ ಕೃತಿಯನ್ನು ಒಬ್ಬ ದಲಿತ ಸಾಹಿತಿ ಬರೆದಿದ್ದಾರೆಂದರೆ ದಲಿತ ಬರಹಗಾರರಿಗೆ ಹೆಮ್ಮೆಯ ವಿಷಯವಾಗಿ ಬರವಣಿಗೆಯ ಕಡೆಗೆ ನಮ್ಮನ್ನು ವೆಂಕಟಯ್ಯನವರು ಸೆಳೆಯುತ್ತಾರೆ.

ಇವರು ೨೩ ಕೃತಿಗಳ ರಚನೆ ಮಾಡಿರುವುದನ್ನು ಕಾಣಬಹುದು. ಅವುಗಳಲ್ಲಿ ಮುಖ್ಯವಾದದ್ದು 'ಮುರಿದ ಮದುವೆ', 'ನೊಂದಜೀವ.' 'ಚಂದದ ಕೊರಡು', 'ನಿಸರ್ಗದ ಮುಡಿಲು' ಕಾದಂಬರಿಗಳು. 'ಚಿನ್ನದ ಗಿರಿಯತೆ.' 'ಬನದ ಸೆರಗು' ಇವು ಪ್ರವಾಸ ಸಾಹಿತ್ಯ. 'ಮಗಳ ಮಾಂಗಲ್ಯ.' ಸಣ್ಣಕತೆಗಳು. 'ಬುದ್ಧದೇವ.' 'ಶಾರದಮಣಿದೇವಿ', ಜೀವನ ಚರಿತ್ರೆ ಬರೆದಿದ್ದಾರೆ. ಇವರು ೧೯೪೪ರಲ್ಲಿ 'ಬುದ್ಧದೇವ' ಎಂಬ ಕೃತಿಯೇ ಅವರ ಮೊದಲ ಕೃತಿಯಾಗಿದೆ. ದಲಿತ ಸಾಹಿತ್ಯ ತೀವ್ರತರವಾದ ಬರವಣಿಗೆ, ಅನೇಕ ಪ್ರತಿಭಾವಂತ ಕವಿಗಳು, ಸಾಹಿತಿಗಳು ಹುಟ್ಟಿ ಸಮಾಜದ ದಲಿತರಲ್ಲಿ ಅರಿವಿನ ಜಾಗೃತಿ, ಶಿಕ್ಷಣ, ಘಟನೆ, ಹೋರಾಟಗಳು ಇಂತಹ ಅನೇಕ ಕ್ರಾಂತಿಕಾರಕ ಪರಿವರ್ತನೆಗಳು ನಡೆದಿದ್ದು ೧೯೭೦ರ ದಶಕದ ನಂತರವೇ. ಆ ತರಹದ ಬೆಳವಣಿಗೆಯೂ ಕೂಡ ಡಾ.ಅಂಬೇಡ್ಕರ್‌ರವರ ಹೋರಾಟದ ಬದುಕು ಹಾಗೂ ಸಿದ್ಧಾಂತಗಳಿಂದ ಪ್ರೇರಣೆ ಪಡೆದುಕೊಂಡಿದೆ ಎಂಬುದನ್ನು ಈಗಾಗಲೇ ತಿಳಿಯಪಡಿಸಲಾಗಿದೆ.

"ಕನ್ನಡದಲ್ಲಿ ಮೊಟ್ಟ ಮೊದಲಿಗೆ ಡಾ.ಅಂಬೇಡ್ಕರ್‌ರವರ ಸಮಗ್ರ ಜೀವನ ಚರಿತ್ರೆಯನ್ನು ೧೯೭೦ರಲ್ಲಿ ನಾನು ಪ್ರಕಟಿಸುವುದಕ್ಕೆ ಹಿಂದೆ ಆ ಯತ್ನ ನಡೆದಿತ್ತೆಂಬುದಕ್ಕೆ ಯಾವ ದಾಖಲೆಗಳೂ ಇರುವಂತಿಲ್ಲ"[೧೩] ಎಂಬ ಮ.ನ.ಜವರಯ್ಯ ಮಾತುಗಳನ್ನು ನೆನಪಿಸಿಕೊಳ್ಳಬೇಕಾಗಿದೆ.

ಕನ್ನಡ ದಲಿತ ಸಾಹಿತ್ಯದ ಮೇಲೆ ದಲಿತ ಪ್ಯಾಂಥರ್ ಸಾಹಿತ್ಯದ ಲೇಖಕ-ಲೇಖಕಿ ಸೈದ್ಧಾಂತಿಕ ಪ್ರಭಾವ, ಮರಾಠಿ ದಲಿತ ಲೇಖಕರು ಪ್ರಭಾವ ಬೀರಿದಂತೆ ಬಸವಲಿಂಗಪ್ಪನವರ ಬೂಸಾ ಸಾಹಿತ್ಯವೂ ಕೂಡ ಅಷ್ಟೇ ಪ್ರಭಾವ ಬೀರಿದೆ. "೧೯೭೩ರಲ್ಲಿ ಶಾಸಕ ಬಿ.ಬಸವಲಿಂಗಪ್ಪನವರು 'ಕನ್ನಡ ಸಾಹಿತ್ಯ ಬೂಸಾ' ಎಂದು ಕರೆದಿದ್ದರ ಪರಿಣಾಮವಾಗಿ ಸವರ್ಣೀಯರು ಸಿಡಿದೆದ್ದರು. ಈ ಪ್ರಸಂಗ ವಿಕೋಪಕ್ಕೆ ಹೊರಟು ಹೋಗಿ ಬಸವಲಿಂಗಪ್ಪನವರು ರಾಜಿನಾಮೆ ಕೊಡಬೇಕಾಗಿ ಬಂತು. ಈ ಸಂದರ್ಭದಲ್ಲಿ ದಲಿತರ ಒಗ್ಗೂಡುವಿಕೆ, ಹೋರಾಟ ಕರ್ನಾಟಕದಲ್ಲಿ ಆರಂಭವಾಯಿತು. ಇದರ ಫಲವಾಗಿಯೇ ಕರ್ನಾಟಕದಲ್ಲಿ ದಲಿತ ಸಂಘರ್ಷ ಸಮಿತಿ ಹುಟ್ಟಿಕೊಂಡು ಹಳ್ಳಿ ಹಳ್ಳಿಗಳಲ್ಲಿಯೂ ತಲೆ ಎತ್ತಿ ನಿಂತಿತು. ಈ ಸಂದರ್ಭದಲ್ಲಿ ದಲಿತೇತರರು ಸಂಘಟನೆಯನ್ನು ಕಟ್ಟಿಕೊಂಡು ನಿರಂತರವಾಗಿ ಪ್ರತಿವರ್ಷ ಸಾಹಿತ್ಯ ಸಮ್ಮೇಳನವನ್ನು ನಡೆಸುವುದರೊಂದಿಗೆ ಕನ್ನಡ ಸಾಹಿತ್ಯ ಕ್ಷೇತ್ರದಲ್ಲೊಂದು

ಮೈಲುಗಲ್ಲಾಗಿ ನಿಂತರು. ಗಳ ಪ್ರಾರಂಭದಲ್ಲಿ ದಲಿತ ಬಂಡಾಯ ಸಾಹಿತ್ಯ ಎರಡೂ ಒಟ್ಟಿಗೆ ಕಾರ್ಯ ನಿರ್ವಹಿಸುತ್ತಿದ್ದಾಗ ಅನಂತರ ದಲಿತೇತರ ಬಂಡಾಯ ಸಾಹಿತಿಗಳು ದಲಿತರನ್ನು ಗುಮಾನಿಯಾಗಿಯೇ ನೋಡುತ್ತಾ ಬಂದರು. ಜೊತೆಗೆ ದಲಿತರು ಬಂಡಾಯ ಭಾಗವಾಗಿದ್ದಾರೆ. ಪ್ರಗತಿಗಾಮಿ ದಲಿತ ಸಾಹಿತಿಗಳು ಬಂಡಾಯದ ಸಾಹಿತಿಗಳೇ ಆದರೆ ಬಂಡಾಯ ಸಾಹಿತಿಗಳು ದಲಿತ ಸಾಹಿತಿಗಳಾಗಿರಲಿಲ್ಲ. ಹುಟ್ಟಿನಿಂದ ದಲಿತನಾಗಿದ್ದು, ಪ್ರಗತಿಪರ ಆಶಯಗಳನ್ನು ಅಭಿವ್ಯಕ್ತಪಡಿಸಿದ ಸಾಹಿತಿ ಬಂಡಾಯ ಸಾಹಿತಿಯಾಗದೇ ದಲಿತ ಸಾಹಿತಿಯೇ ಆಗುತ್ತಾನೆ. ಆದ್ದರಿಂದ ದಲಿತ ಮತ್ತು ದಲಿತೇತರ ಸಾಹಿತಿ ವರ್ಗಗಳಲ್ಲಿ ಸರಿಯಾದ ಹೊಂದಾಣಿಕೆ ತತ್ವ ಸಿದ್ಧಾಂತಗಳು ಒಂದು ಗೂಡದೆ ಇದ್ದರೂ ಕೂಡ ಬಂಡಾಯ ಸಾಹಿತ್ಯ ಹುಟ್ಟಿಕೊಂಡ ನಾಲ್ಕು ವರ್ಷಗಳ ತರುವಾಯ ೧೯೭೮ ಡಿಸೆಂಬರ್ ೧೧ರಂದು ಧಾರವಾಡದಲ್ಲಿ ದಲಿತ ಲೇಖಕರ, ಕಲಾವಿದರ ಬಳಗ ಹುಟ್ಟಿಕೊಂಡಿತು. ೧೯೭೬ರಲ್ಲಿ ಡಿಸೆಂಬರ್ ೨೧ರಂದು ಬೆಂಗಳೂರಿನಲ್ಲಿ ರಾಜ್ಯ ಮಟ್ಟದ ದಲಿತ ಸಾಹಿತ್ಯ ಸಮಾವೇಶವೂ ಜರುಗಿ ಅಲ್ಲೇ 'ಬಂಡಾಯ ಸಾಹಿತ್ಯ ಸತ್ತು ಹೋಗಿದೆ' ಎಂದು ಘೋಷಿಸಿದರು. ಇದೆಲ್ಲ ಪರಿವರ್ತನೆ, ಕ್ರಾಂತಿಕಾರಿ ಬದಲಾವಣೆಗಳು, ಚಿಂತನೆಗಳು ದಲಿತರಲ್ಲಾದ ಎಚ್ಚರದ ಪರಿಣಾಮಗಳೇ ಆಗಿವೆ.

ದಲಿತರು ಒಂದು ಕಾಲಕ್ಕೆ ಬಹಳ ಹೀನಾಯವಾದ ಬದುಕನ್ನು ಕಂಡು ತಮ್ಮ ಬಗ್ಗೆ ತಮಗೆ ಒಂದು ರೀತಿಯ ಅವಮಾನ ಉಂಟುಮಾಡುವಂತೆ ಈ ಸಮಾಜ ಮಾಡಿತ್ತು. ಇದರಿಂದ ದಲಿತರೆಂದರೆ ಕೀಳು ಎಂಬ ಭಾವನೆ ಪ್ರತಿಯೊಬ್ಬರ ಮನದಲ್ಲಿ ಬೇರೂರಿಬಿಟ್ಟಿದೆ. ಅವರು ಮಾತಿನಲ್ಲಿ ಒರಟರು, ಅವರ ವ್ಯಕ್ತಿತ್ವ ತುಂಬ ಕೆಳಮಟ್ಟದ್ದು, ಅವರ ಜೀವನ ಶೈಲಿ ಆಚಾರ ವಿಚಾರಗಳೆಲ್ಲವೂ ಹೀನವಾದದ್ದು ಎಂಬ ಮನೋಸ್ಥಿತಿಯನ್ನು ಬೆಳೆಸಿಕೊಂಡಿರುವುದಲ್ಲದೆ ಆ ಮನೋಸ್ಥಿತಿಯನ್ನು ದಲಿತರಲ್ಲೂ ಕೂಡ ಬಿತ್ತಿ ಬಿಟ್ಟಿದ್ದರು. ಆದರೆ ಡಾ.ಅಂಬೇಡ್ಕರ್‌ರವರ ಸ್ವಾಭಿಮಾನದ ಹೋರಾಟಗಳು, ಚಿಂತನೆಗಳು ತಮ್ಮ ಬಗ್ಗೆ, ತಮ್ಮ ಜನಾಂಗದ ಬಗ್ಗೆ, ಗೌರವ, ಅಭಿಮಾನ, ಆತ್ಮವಿಶ್ವಾಸಗಳು ಚಿಗುರೊಡೆಯಲಾರಂಭಿಸಿತು. ಕರ್ನಾಟಕದಲ್ಲಿ ದಲಿತ ಸಾಹಿತ್ಯ ದಲಿತರು ತಮ್ಮ ಬಗ್ಗೆ, ತನ್ನ ಜಾತಿಯ ಬಗ್ಗೆ, ಭಾಷೆಯ ಬಗ್ಗೆ, ವೃತ್ತಿಯ ಬಗ್ಗೆ, ತಮ್ಮ ಚರ್ಮದ ಬಗ್ಗೆ ಪ್ರೀತಿ-ಸ್ವಾಭಿಮಾನವನ್ನು ಬೆಳೆಸಿಕೊಳ್ಳಬೇಕು ಎಂಬ ಮನವರಿಕೆಯನ್ನು ಮಾಡಿತು. ನಮ್ಮ ಸಂಸ್ಕೃತಿ, ಆಹಾರ ಪದ್ಧತಿ, ಸಂಪ್ರದಾಯ, ಆಚಾರ-ವಿಚಾರಗಳನ್ನು ಪ್ರೀತಿಯಿಂದ ಕಾಣುವಂತೆ ನಾವು ಕೂಡ ಇತರರಿಗಿಂತ ಕಡಿಮೆ ಇಲ್ಲ. ನಾವು ಸಮಾಜದಲ್ಲಿ ಎಲ್ಲರಂತೆ ಮನುಷ್ಯರು, ನಮಗೂ ಕೂಡ ಇಲ್ಲಿ ಬದುಕುವ ಹಕ್ಕಿದೆ. ಸಮಾಜದ ಹಕ್ಕು ಪಡೆಯುವ ಈ ದೇಶದ ಸಂಪತ್ತನ್ನು ಅನುಭವಿಸುವ ಸ್ವಾತಂತ್ರ್ಯವಿದೆ ಎಂಬುದು ಅನುಭವಕ್ಕೆ ಬಂದಿದ್ದು ಡಾ.ಅಂಬೇಡ್ಕರ್‌ರ ಬದುಕು-ಬರಹ ಚಿಂತನೆಗಳಿಂದ ಎಂದರೆ ತಪ್ಪಾಗಲಾರದು.

ಅರವಿಂದ ಮಾಲಗತ್ತಿ, ಸಿದ್ಧಲಿಂಗಯ್ಯ, ಹಂಪಣ್ಣ, ಮುಳ್ಳೂರು ನಾಗರಾಜ್, ನಾಗೇಂದ್ರಪ್ಪ, ಅಗಸನಕಟ್ಟೆ, ಮುನಿವೆಂಕಟಪ್ಪ, ಗಂಗಾರಾಮ ಮುಂತಾದ ಅನೇಕ ಮತ್ತು ಬಹುತೇಕ [illegible] ಲೇಖಕರೂ ಕೂಡ ಅಂಬೇಡ್ಕರ್‌ವಾದಿ ಲೇಖಕರು ಆಗಿದ್ದಾರೆ. ಇದರಲ್ಲಿ ಮೊದಲ ತಲೆಮಾರಿನ ಅಕ್ಷರಸ್ಥ ದಲಿತರಿಂದ ಆರಂಭವಾದ ಈ ದಲಿತ ಸಾಹಿತ್ಯ ಚಳುವಳಿ ಸಾಹಿತ್ಯಕವಾಗಿ ಮೊದಲು ಕಾವ್ಯದಿಂದಲೇ ನಾಂದಿಯಾಗಿದೆ. ಬೆರಳೆಣಿಕೆಯಲ್ಲಿ ಇರುವ ದಲಿತ ಸಾಹಿತಿಗಳಲ್ಲಿ ಹೆಚ್ಚಿನವರು ಕವಿಗಳೇ ಆಗಿದ್ದಾರೆ ಎಂಬುದು ಗಮನಿಸಬೇಕಾದದ್ದು. ಡಾ.ಸಿದ್ಧಲಿಂಗಯ್ಯ, ಡಾ.ಅರವಿಂದ ಮಾಲಗತ್ತಿ, ಡಾ.ಮ.ನ.ಜವರಯ್ಯ, ಬಿ.ಸಿದ್ಧಯ್ಯ, ಮುಳ್ಳೂರು ನಾಗರಾಜ್, ಮುನಿವೆಂಕಟಪ್ಪ, ಗಂಗಾರಾಮ ಚಂಡಾಳ, ಎಲ್.ಹನುಮಂತಯ್ಯ, ನಾರಾಯಣಸ್ವಾಮಿ, ಗೋವಿಂದಯ್ಯ ಮುಂತಾದವರನ್ನು ಹೆಸರಿಸಬಹುದಾಗಿದೆ. ಇವರೆಲ್ಲರ ಆರಂಭದ ಕಾವ್ಯಗಳಲ್ಲಿ ಶತ ಶತಮಾನಗಳ ಶೋಷಣೆ ದಬ್ಬಾಳಿಕೆಯಲ್ಲಿ ನರಳಿದ ಪರಿಣಾಮವಾಗಿ ಅದರ ವಿರುದ್ಧ ಸಿಡಿದು ನಿಂತಾಗ ಸಿಟ್ಟು, ಆಕ್ರೋಶಗಳಿಂದಲೇ ಕಾವ್ಯ ಮುಡಿ ಬಂದಿರುವುದನ್ನು ಗಮನಿಸಬಹುದಾಗಿದೆ. ಹೀಗೆ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ೭೦ರ ದಶಕದಲ್ಲಿ ಅಂಬೇಡ್ಕರ್ ಬದುಕು-ಹೋರಾಟ ಚಿಂತನೆ ಬರಹ, ಭಾಷಣ ಮತ್ತು ಚಿಂತನೆಗಳು ಒಂದು ಹೊಸ ಸಾಹಿತ್ಯ ಬೆಳವಣಿಗೆ ನಾಂದಿ ಹಾಡಿತು. ದಲಿತೇತರ ಬರಹಗಾರರ ಮೇಲೆ ತನ್ನ ವಿಚಾರಧಾರೆಗಳನ್ನು ಚೆಲ್ಲಿ ಅವರಲ್ಲಿ ಕ್ರಾಂತಿಯ, ಹೋರಾಟದ ಕಿಚ್ಚನ್ನು ಹಚ್ಚಿತು. ಭಾರತೀಯ - ಸಮಾಜದ ಎರಡನೆಯ ದರ್ಜೆ ವ್ಯಕ್ತಿಯಾಗಿ ಕಾಣುತಿದ್ದ ಮಹಿಳೆಯರಿಗಾಗಿ ಕೂಡ ಸ್ತ್ರೀ ಚಿಂತನೆಗಳಿಗೂ ಅವಕಾಶ ಕಲ್ಪಿಸಿದ್ದಾರೆ ಎನ್ನಬಹುದಾಗಿದೆ.

ಕರ್ನಾಟಕದಲ್ಲಿ ದಲಿತ ಸಾಹಿತ್ಯ ಚಳುವಳಿ ಕೇವಲ ಸಾಹಿತ್ಯಕ ಚಳುವಳಿಯಾಗಿ ಮಾತ್ರ ಬೆಳೆಯದೇ, ಸಾಮಾಜಿಕ, ರಾಜಕೀಯ, ಆರ್ಥಿಕ ಚಿಂತನೆಗಳೊಂದಿಗೆ ಮಹತ್ವದ ದಿಟ್ಟ ಹೆಜ್ಜೆಗಳನ್ನು ಇಟ್ಟಿದೆ. ಸಮಾಜದ ದಲಿತರ ಸಾಮಾಜಿಕ ಸಮಸ್ಯೆಗಳಿಗೆ ರಾಜಕೀಯ ಮತ್ತು ಆರ್ಥಿಕ [illegible] ಸಾಧ್ಯ ಎಂಬುದನ್ನು ಮನಗಂಡ ದಲಿತರು ಸಂಘಟನೆಗಳ ಮೂಲಕ ಭೂಮಿಗಳನ್ನು ವಶಪಡಿಸಿಕೊಂಡು ಅದನ್ನು ದಲಿತರಿಗೆ ಹಂಚುವ ಕೆಲಸ ಮಾಡುವುದರ ಜೊತೆಗೆ ಅದಕ್ಕೆ ಅನುಗುಣವಾಗಿ ರಾಜಕೀಯ ಸಂಬಂಧವನ್ನು ಬೆಳೆಸಿಕೊಂಡಿತು. ಈ ದಲಿತ ಸಾಹಿತ್ಯ ಚಳುವಳಿಗೆ ರಾಜಕೀಯ ಕ್ಷೇತ್ರವೇ ಕೇಂದ್ರವಾಗಿರದೇ ಸಮಾಜ, ಸಮಾಜದಲ್ಲಿಯ ಮನುಷ್ಯ ಕೇಂದ್ರಿತ ಸಾಹಿತ್ಯ ಚಳುವಳಿಯಾಗಿ ರೂಪಿಸಿಕೊಂಡಿತು

ಪ್ರಸ್ತುತ ದಲಿತ ಚಳುವಳಿಗಳಲ್ಲಿ ಹಿಂದಿನ ಒಗ್ಗಟ್ಟು ಈಗ ಇಲ್ಲವಾಗಿದೆ. ಈಗ ಎಡ-ಬಲ ಮೀಸಲಾತಿ ಸಮಸ್ಯೆಗಳು, ಅಸ್ಪೃಶ್ಯತೆಯ ನಿವಾರಣೆ ಸಮಸ್ಯೆಗಳ ಜೊತೆಯಲ್ಲೇ ವಿವಿಧ ಗುಂಪುಗಳಾಗಿ ಒಡೆದು ಸ್ವಹಿತಾಸಕ್ತಿಗಳಿಗೆ ಸ್ವಪ್ರತಿಷ್ಠೆಗಾಗಿ ಹೋರಾಡುವ ಪ್ರವೃತ್ತಿ ನೆಲೆಯೂರಿರುವುದು ಕಂಡು ಬರುತ್ತಿದೆ.

ಈ ಎಲ್ಲಾ ಒಡಕುಗಳನ್ನು ಮರೆತು ಡಾ.ಅಂಬೇಡ್ಕರ್‌ರವರ ಕನಸು ಸಮುದಾಯದ ಏಳಿಗೆ ಶ್ರಮಿಸಬೇಕಾಗಿರುವ ಆದ್ಯ ಕರ್ತವ್ಯವೆಂದು ಎಲ್ಲಾ ದಲಿತರು ಪ್ರಮಾಣೀಕರಿಸಿ ಕಾರ್ಯ ಪ್ರವೃತ್ತರಾಗಬೇಕಾಗಿದೆ. ಎಲ್ಲಾ ಸಂಘಟನೆಗಳು ರಾಜಕೀಯ, ಸಾಮಾಜಿಕ, . ಸಾಂಸ್ಕೃತಿಕ, ಆರ್ಥಿಕ, ಐಕ್ಯತೆಯನ್ನು ಪ್ರದರ್ಶಿಸಬೇಕಾಗಿದೆ.

ದಲಿತರು ಡಾ.ಬಾಬಾ ಸಾಹೇಬ್ ಅಂಬೇಡ್ಕರ್‌ಗೆ ತೋರುತ್ತಿರುವ ನಿಷ್ಠೆ ಮತ್ತು ಗೌರವವನ್ನು ಅವರ ತತ್ವ ಸಿದ್ಧಾಂತ, ಚಿಂತನೆಗಳಲ್ಲಿ ತೋರಿದರೆ ಒಳಿತು. ಏಕೆಂದರೆ ಬಾಬಾ ಸಾಹೇಬರು ದಲಿತರ ವಿಮೋಚನೆಗಾಗಿ ತಮ್ಮ ಬದುಕಿನ ಪ್ರತಿಕ್ಷಣವನ್ನು ಮೀಸಲಾಗಿಟ್ಟು ದಲಿತರ ಬಿಡುಗಡೆಯೇ ಅವರ ನಿತ್ಯ ನಿರಂತರ ಚಿಂತನೆ ವಸ್ತುವಾಗಿ ದಲಿತರ ಪಕ್ಷವಹಿಸಿ ಜೀವನ ಪರ್ಯಂತ ಹೋರಾಡುವ ಏಕೈಕ ಉದ್ದೇಶಕ್ಕಾಗಿಯೇ ತನ್ನಲ್ಲೇ ಸುಖ ಭೋಗಗಳನ್ನು ತ್ಯಜಿಸಿ, ಹೆಂಡತಿ, ಮಕ್ಕಳು ಸಂಸಾರವನ್ನು ಮರೆತು ಎಲ್ಲಾ ಅಡೆತಡೆಗಳನ್ನು ಮೆಟ್ಟಿನಿಂತು ತಮ್ಮ ಸ್ಥಾನಮಾನ, ಅಧಿಕಾರ ಲಾಲಸೆಯನ್ನು ತ್ಯಜಿಸಿ ದಲಿತರ ಕೈ ಹಿಡಿದು ಮೇಲೆತ್ತಿ ಅವರಲ್ಲಿ ಆತ್ಮಗೌರವ, ಧೈರ್ಯವನ್ನು ತುಂಬಿದ ಆ ಮಹಾಚೇತನದ ಚಿಂತನೆ, ಕನಸುಗಳನ್ನು ಅರಿತು ನನಸು ಮಾಡುವ ನಿಟ್ಟಿನಲ್ಲಿ ನಾವೆಲ್ಲ ಇಂದು ದಲಿತ ಚಳುವಳಿ ಮತ್ತು ಸಾಹಿತ್ಯ ಚಳುವಳಿಯನ್ನು ರೂಪಿಸುವ ಅಗತ್ಯತೆ ಹಿಂದೆಂದಿಗಿಂತಲೂ ಇಂದು ಅತ್ಯಗತ್ಯವಾದ ಜವಬ್ದಾರಿ ನಮ್ಮ ಮೇಲಿದೆ ಎಂದು ಅರಿತು ಮುನ್ನಡೆಯಬೇಕಾಗಿದೆ.

ಅಡಿ ಟಿಪ್ಪಣಿಗಳು

೧. ದಲಿತ ಮಾರ್ಗ, ಸಂ.ಅರವಿಂದ ಮಾಲಗತ್ತಿ, ಪುಟ-೧೭೨

೨. ಜನಸಂಸ್ಕೃತಿ, ಡಾ.ಸಿದ್ಧಲಿಂಗಯ್ಯ, ಪುಟ-೧೮

೩. ದಲಿತ ಬಂಡಾಯ ಸಾಹಿತ್ಯ, ಪುರುಷೋತ್ತಮ ಬಿಳಿಮಲೆ, ೧೪

೪. ಅದೇ, ಪುಟ-೧೪

೫. ಅದೇ, ಪುಟ-೧೭

೬. ಅದೇ, ಪುಟ-೧೮

೭. ಅದೇ, ಪುಟ-೨೪

೮. ಅದೇ, ಪುಟ-೪೧

೯. ಅದೇ, ಪುಟ-೪೧

೧೦. ಪರಂಪರೆ ಹಾಗೂ ದಲಿತ ಬಂಡಾಯ ಸಾಹಿತ್ಯ, ಮ.ನ.ಜವರಯ್ಯ, ಪುಟ-೨೦೦

೧೧. ಅದೇ, ಪುಟ-೨೦೧

೧೨. ಅದೇ, ಪುಟ-೨೦೧

೧೩. ಅದೇ, ಪುಟ-೨೦೨

೧೪. ಸಾಹಿತ್ಯ ಸಂಸ್ಕೃತಿ ಮತ್ತು ದಲಿತ ಪ್ರಜ್ಞೆ, ಅರವಿಂದ ಮಾಲಗತ್ತಿ, ಪುಟ-೧೫೦

ಅಧ್ಯಾಯ – ೪

ಡಾ.ಸಿದ್ಧಲಿಂಗಯ್ಯನವರ ಸಾಹಿತ್ಯದಲ್ಲಿ ಡಾ.ಅಂಬೇಡ್ಕರ್ ಚಿಂತನೆಗಳು

ಕರ್ನಾಟಕದಲ್ಲಿ ದಲಿತ ಚಳುವಳಿ ಜನಮಾನಸವಾಗಿ ಹಳ್ಳಿಯ ಮೂಲೆ ಮೂಲೆಗೂ ತಲುಪಬೇಕಾದರೆ ದಲಿತರಲ್ಲಿನ ಸಿಟ್ಟು, ಆಕ್ರೋಶಗಳು ಹೋರಾಟದ ರೂಪದಲ್ಲಿ ವ್ಯಕ್ತವಾಗಬೇಕಾದರೆ, ತನಗೆ ಸಿಗಬೇಕಾದ ಹಕ್ಕು ಬಾಧ್ಯತೆಗಳು, ನ್ಯಾಯಕ್ಕಾಗಿ ದಲಿತ ಸಿಡಿದೇಳಬೇಕಾದರೆ ಅಂಬೇಡ್ಕರ್‌ರವರ ಚಿಂತನೆಗಳು, ಬುದ್ಧ-ಅಂಬೇಡ್ಕರ್ ಭಾವಚಿತ್ರಗಳು, ಸಂಘಸಂಸ್ಥೆಗಳು ಉದಯಿಸಬೇಕಾದರೆ ಬುದ್ಧ-ಅಂಬೇಡ್ಕರ್ ಭಾವಚಿತ್ರಗಳು ಮನೆ ಮನೆಯ ಗೋಡೆಗಳಲ್ಲಿ ರಾರಾಜಿಸಬೇಕಾದರೆ ನಮ್ಮನ್ನು ಮನೆಯಿಂದ ಬೀದಿಗಿಳಿಸಿ ನಾವು ನಮ್ಮ ಶಕ್ತಿ, ಸಾಮರ್ಥ್ಯ, ಜ್ಞಾನ, ತಿಳುವಳಿಕೆಗಳನ್ನು ವ್ಯಕ್ತಪಡಿಸಿಕೊಳ್ಳಬೇಕಾದರೆ ಹಿಂದೆ ಹೇಗೆ ಭಾರತದಲ್ಲಿನ ಅಸ್ಪೃಶ್ಯರ ಜನಾಂಗದ ಜೀವವಾಗಿ ಬಂದು ಅವರಿಗೆ ಬದುಕನ್ನು ಕೊಟ್ಟು ಹಿಂದೂ ಸಮಾಜಕ್ಕೂ ಇವರು ಕೂಡ ಮನುಷ್ಯರೇ, ಸಮಾನವಾಗಿ ಜೀವಿಸಲು ಅವಕಾಶವನ್ನು ಕಲ್ಪಿಸಿಕೊಡಿ. ನಿಮ್ಮ ಮನಸ್ಸಿನ ಅಂಧಕಾರದ ಆಚರಣೆಗಳನ್ನು ಕೈಬಿಟ್ಟು ನಮ್ಮೊಂದಿಗೆ ಕೈ ಜೋಡಿಸಿ, ಜೀವನ ನಡೆಸಿ. ಈ ದೇಶದ ಸರ್ವತೋಮುಖ ಪ್ರಗತಿಗೆ ಒಟ್ಟಾಗಿ ನಾವೆಲ್ಲ ಶ್ರಮಿಸೋಣ ಎಂದು ಮಾನವೀಯ ಪಾಠ ಹೇಳಿದ. ಕ್ರಾಂತಿಯ ಕಿಡಿ ಹೆಚ್ಚಿಸಿದವರು ಬಾಬಾಸಾಹೇಬ್ ಡಾ.ಭೀಮರಾವ್ ಅಂಬೇಡ್ಕರ್‌ರವರ ಹಾಗೆ ಕನ್ನಡ ನಾಡಿನ ಮೇಲಿನ ಎಲ್ಲ ಪರಿವರ್ತನೆಗೆ ದಲಿತ ಜನಾಂಗದಲ್ಲಿಯೇ ಹುಟ್ಟಿ ತಾನು ಅನುಭವಿಸಿದ ಬಡತನ, ಹಸಿವು, ಜಾತೀಯತೆಯ ಅನುಭವದಿಂದ ದಲಿತ ಜನಾಂಗದ ಶತಮಾನಗಳ ಆಕ್ರೋಶದ ಕಿಚ್ಚು ಕವಿತೆಯಾಗಿ ಕನ್ನಡ ಲೋಕಕ್ಕೆ ಹೊಸ ರೀತಿಯ ಆಯಾಮ ನೀಡಿದ ದಲಿತ ಸಾಹಿತ್ಯದಲ್ಲಿ ಇತಿಹಾಸ ಬರೆದು ಬಂದ ದಲಿತ ಮೂರ್ತಿ ಡಾ.ಸಿದ್ಧಲಿಂಗಯ್ಯ ಅವರ ಕಾವ್ಯದ 'ಹೋರಾಟದಸಾಗರಕ್ಕೆ ಸಾವಿರಾರು ನದಿಗಳು' ಎಂಬಂತೆ ಅವರ ಕಾವ್ಯದಿಂದ ಎಚ್ಚೆತ್ತ ಜನ ಸಾಗರದಂತೆ ಎಲ್ಲೆಡೆಯಿಂದ ಅವರ ಕಾವ್ಯದ ಕೂಗಿಗೆ ಹರಿದುಬಂತು. ಅಂತಹ ಕಾವ್ಯಶಕ್ತಿ ಸಿದ್ಧಲಿಂಗಯ್ಯನವರದು.

"ಪ್ರತ್ಯೇಕ ರಾಜ್ಯ ಕೇಳಿದ ವ್ಯಕ್ತಿ ಹೇಗಿರುತ್ತಾನೋ ನೋಡಬೇಕೆಂದಿದ್ದೆವು. ನಿಮ್ಮನ್ನು ನೋಡಿ ಬಹಳ ಆಶ್ಚರ್ಯವಾಯಿತು"[1] ಎಂದು ತಮಾಷೆ ಮಾತನಾಡಿದ್ದರು ದೇವನೂರ ಮಹಾದೇವ. ಅಂದು ತಮಾಷೆಯ ಮಾತಾದರೂ ಕೂಡ ಅದು ನಿಜವೇ. ನೋಡಿದ ಪ್ರತಿಯೊಬ್ಬರಿಗೂ ಸೌಮ್ಯವಾಗಿ ಕಾಣುವ ಸಿದ್ಧಲಿಂಗಯ್ಯ ಅವರ ಸಾಹಿತ್ಯ ಮಾತ್ರ ಬೆಂಕಿಯ ಚೆಂಡು. ವಿರೋಧಿಗಳಿಗೆ ಅವರ ನಗೆತುಂಬಿದ ಮಾತು ಬಂದೂಕಿನ ಗುಂಡು. ಇಂಥಹ ಅಸಾಮಾನ್ಯ ವ್ಯಕ್ತಿ ಸಿದ್ಧಲಿಂಗಯ್ಯನವರ ಹುಟ್ಟು ಎಂದಾಯಿತು ಎಂದು ತಿಳಿಯದಾಗಿದೆ. ಹೇಗೆ ನಮ್ಮ ಅನೇಕ ಪ್ರಾಚೀನ ಕವಿಗಳಿಗೆ ಹೇಗೆ ನಿಖರವಾದ

ದಿನವೆಂದು ಹೇಳಲಾಗದೋ ಹಾಗೆ ಇವರ ಹುಟ್ಟಿನ ದಿನದ ಬಗ್ಗೆ ಅವರಿಗೆ ತಮಾಷೆ. "ನಮ್ಮ ತಾಯಿ ವೆಂಕಮ್ಮ ಹೇಳುವ ಅಂದಾಜು ಲೆಕ್ಕಾಚಾರದ ಪ್ರಕಾರ ಮಗ ಹುಟ್ಟಿದ್ದು ಗೌರಿ ಹಬ್ಬಕ್ಕಿಂತ ನಾಲ್ಕು ದಿನ ಮುನ್ನ. ಆದರೆ ದಾಖಲಾತಿಯ ಪ್ರಕಾರ ೧೯೫೪ರ ಫೆಬ್ರವರಿ ೩. ಗೌರಿ ಹಬ್ಬ ಫೆಬ್ರವರಿ ತಿಂಗಳಲ್ಲಿ ಬರಲು ಸಾಧ್ಯವೇ?"[೨] ಎಂದು ನಗುತ್ತಾ ಡಾ.ಸಿದ್ಧಲಿಂಗಯ್ಯ ಕೇಳುವ ಪ್ರಶ್ನೆಯಾಗಿದೆ.

ಅಂದು ಓದು ಬರಹ ತಿಳಿಯದ ಎಷ್ಟೋ ಅಪ್ಪ ಅಮ್ಮಂದಿರು ಈ ಸಮಾಜದಲ್ಲಿದ್ದರು. ಅವರ ಮಕ್ಕಳ ಜನುಮ ದಿನವನ್ನು ಹೀಗೆ ಯಾವುದಾದರೂ ಹುಣ್ಣಿಮೆ, ಅಮಾವಾಸ್ಯೆ ಹಬ್ಬಗಳಿಗೆ ಅಥವಾ ಯಾವುದಾದರೂ ಘಟನೆಗೋ ತಳಕು ಹಾಕಿ ನೆನಪಿನಲ್ಲಿಟ್ಟುಕೊಳ್ಳುತ್ತಿದ್ದರು. ಆಕಸ್ಮಿಕವಾಗಿ ಶಾಲೆಗೆ ಸೇರಿಸಿದರೆ ಅಲ್ಲಿ ಶಿಕ್ಷಕರು ನೀಡುವ ದಿನವೇ ಅವರಿಗೆ ಜನುಮ ದಿನವಾಗುತ್ತದೆ. ಡಾ.ಸಿದ್ಧಲಿಂಗಯ್ಯನವರಿಗೆ ಬಾಲ್ಯದಿಂದಲೇ ಸಾಹಿತ್ಯದ ಸಂಪರ್ಕ ದೊರೆಯುವುದರ ಮೂಲಕ ಸಾಹಿತ್ಯಾಸಕ್ತಿಗೆ ಬಹುಮುಖ ಪ್ರೇರಣೆಯಾಗಿದ್ದ ದೊಡ್ಡಪ್ಪ ಆಲಯ್ಯನವರನ್ನು ನೆನಪಿಸಿಕೊಳ್ಳುತ್ತಾರೆ. "ಮಾಗಡಿಯ ಪುರಸಭೆ ಚುನಾವಣೆಯಲ್ಲಿ ಗೆದ್ದಾಗ ಜನರು ಆಲಯ್ಯನವರನ್ನು ಕುದುರೆಯ ಮೇಲೆ ಕೂರಿಸಿ ಪಟ್ಟಣದಲ್ಲೆಲ್ಲ ಮೆರವಣಿಗೆ ಮಾಡಿದ್ದರು. ಇವರು ಪುರಸಭೆಯ ಸದಸ್ಯರಾಗಿದ್ದಾಗಲೂ ದನ, ಕುರಿ ಮೇಯಿಸಲಿಕ್ಕೆ ಹೋಗುತ್ತಿದ್ದರು. ಜೊತೆಯಲ್ಲಿ ಜೈಮಿನಿಭಾರತ ಕೃತಿಯನ್ನು ತೆಗೆದುಕೊಂಡು ಹೋಗುತ್ತಿದ್ದರು. ದನ ಕುರಿಗಳನ್ನು ಮೇಯಿಸಲು ಬಿಟ್ಟು ಯಾವುದಾದರೂ ಎತ್ತರವಾದ ಬಂಡೆಯ ಮೇಲೆ ಕುಳಿತು ಏರು ದನಿಯಲ್ಲಿ ಜೈಮಿನಿ ಭಾರತವನ್ನು ಓದುತ್ತಿದ್ದರು. ದಾರಿಯಲ್ಲಿ ಹೋಗುತ್ತಿದ್ದ ಜನ ಒಂದರಗಳಿಗೆ ನಿಂತು ಇವರು ಓದುವುದನ್ನು ಕೇಳುತ್ತಿದ್ದರು. ಆಗ ನನ್ನನ್ನು ಕರೆದುಕೊಂಡು ಹೋಗುತ್ತಿದ್ದರು. ಜೊತೆಗೆ ಜೈಮಿನಿ ಭಾರತವನ್ನು ಹೇಗೆ ಓದಬೇಕೆಂದು ಹೇಳಿಕೊಟ್ಟು ನನ್ನ ಕೈಯಲ್ಲೂ ಓದಿಸುತ್ತಿದ್ದರು".[೩]

ಇವರ ಬಾಲ್ಯ ಜೀವನದುದ್ದಕ್ಕೂ ತುಂಬ ಬಡತನದ ಸ್ಥಿತಿ. ನೋವು, ಅವಮಾನ ಸಂಕಷ್ಟಗಳ ಸರಮಾಲೆಗಳ ಉಂಡು ಅದರಲ್ಲಿಯೇ ತನ್ನ ಬದುಕನ್ನು ಕಂಡುಕೊಂಡರೂ, ಅವರಲ್ಲಿನ ತುಂಟತನದ ಜೊತೆಗೆ ತುಂಬ ಚುರುಕುತನದ ವ್ಯಕ್ತಿತ್ವವನ್ನು ಹೊಂದಿದ್ದವರಾಗಿದ್ದರು. ಅವರ ಈ ಬಡತನದ ಕಾರಣವನ್ನು ಅವರ ತಂದೆ ದೇವಯ್ಯನವರು ಕೊಡುತ್ತಿದ್ದ ಕಾರಣ "ನಮ್ಮ ಪೂರ್ವಿಕ ಹೆಣ್ಣುಮಗಳನ್ನು ಮಾಗಡಿ ಕೆಂಪೇಗೌಡರ ಕೋಟೆಯ ತಳಪಾಯಕ್ಕೆ ಬಲಿಕೊಟ್ಟು ಕೋಟೆ ಕಟ್ಟಿಸಿದನಂತೆ. ಅದಕ್ಕೆ ಆ ಹೆಣ್ಣು ಮಗಳು ನಮ್ಮವರಿಗೆ 'ಇವರು ನನ್ನನ್ನು ಬಲಿಕೊಟ್ಟರು. ಇವರ ಸಂಸಾರ ಹಾಳಾಗಲಿ, ಇವರು ಸಂತೋಷದಿಂದ ಇರಬಾರದು' ಎಂದು ಶಾಪ ಕೊಟ್ಟಳಂತೆ. ಅದಕ್ಕೆ ನಮಗೆ ಬರೀ ಬಡತನ."[೪] ಅಂದರೆ ನಮ್ಮ ಈ ಬಡತನಕ್ಕೆ ಪೂರ್ವಿಕರು ಕಾರಣ ಮೇಲ್ವರ್ಗದ ಜನರಿಗೆ ಅವರ ಪೂರ್ವಿಕರು ಆಸ್ತಿ ಮನೆ, ಹೊಲಗದ್ದೆಗಳನ್ನು ಮಾಡಿಟ್ಟು ಹೋಗಿದ್ದಾರೆ. ಅದ್ದರಿಂದ ಅವರು ಶ್ರೀಮಂತರು. ನಮ್ಮ ತಂದೆ

ತಾಯಿ ನಮಗೆ ಯಾವುದೂ ಕೂಡ ಪಿತ್ರಾರ್ಜಿತವಾಗಿ ನೀಡದೆ ಈ ಬಡತನವನ್ನೇ ನೀಡಿದ್ದಾರೆ. ಇದು ಪ್ರತಿಯೊಬ್ಬ ಬಡವನ ಮನದಾಳದಲ್ಲಿರುವ ನೋವನ್ನು ತನ್ನ ಸ್ಥಿತಿಗೆ ಕಾರಣವನ್ನು ಹುಡುಕುತ್ತ ಹೊರಟಾಗ ತಮ್ಮ ಸಮಾಧಾನಕ್ಕೆ ಅಲ್ಲದಿದ್ದರೂ ಕೇಳುವವರ, ನೋಡುವವರ ಸಮಾಧಾನಕ್ಕೆ ಈ ತರಹದ ಅನೇಕ ಬೇರೆ ಬೇರೆಯ ಘಟನೆ ಸನ್ನಿವೇಶ, ವಿವರಗಳನ್ನು ನೀಡುವುದನ್ನು ಗ್ರಾಮೀಣ ಪ್ರದೇಶದಲ್ಲಿ ಸಾಮಾನ್ಯ ವಿಷಯವಾಗಿರುತ್ತದೆ ಎಂಬುದನ್ನು ಗಮನಿಸಬಹುದು.

ಡಾ.ಸಿದ್ಧಲಿಂಗಯ್ಯ ಊರಿನ ಪರಿಸರದಲ್ಲಿ ಅವರಿಗೆ ಅಸ್ಪೃಶ್ಯ ಆಚರಣೆಯ ಅನುಭವಗಳು ಮನಸ್ಸಿಗೆ ಬಂದಿದೆ. ನಾಟಕ ನಡೆದರೆ ಸವರ್ಣೀಯರಿಂದ ಪ್ರತ್ಯೇಕವಾಗಿ ದೂರದಲ್ಲಿ ಕುಳಿತುಕೊಂಡು ನಾಟಕವನ್ನು ನೋಡುವುದು, ಊಟದ ಪಂಕ್ತಿಯಲ್ಲಿ ಅವರನ್ನು ಬೇರೆ ಒಂದೆಡೆ ಕುಳ್ಳಿರಿಸಿ ಮೇಲ್ವರ್ಗದ ಊಟವಾದ ಮೇಲೆ ಕೊನೆಯಲ್ಲಿ ಇವರಿಗೆ ಊಟ ನೀಡುತ್ತಿದ್ದರು. ನೀರಿಗಾಗಿ ಪರಿತಪಿಸಿದ ದಿನಗಳು ಮೇಲ್ವರ್ಗದ ವ್ಯಕ್ತಿಯನ್ನು ಸ್ಪರ್ಶಿಸ ಕೂಡದು ಎಂಬುದು ಕೂಡ ಅವರ ಅನುಭವಕ್ಕೆ ಬಂದಿದೆ. "ಒಂದುದಿನ ಬೀದಿಯಲ್ಲಿ ನಾನು ಜೋರಾಗಿ ಓಡುತ್ತಿದ್ದೆ. ಎದುರಿಗೆ ಬರುತ್ತಿದ್ದವರ ಬಟ್ಟೆಗೆ ನನ್ನ ಕೈ ಸೋಂಕಿತು. ಆ ವ್ಯಕ್ತಿ ಕೋಪಗೊಂಡು ನಿಂತು ಬಿಟ್ಟ, ನಾನು ಗಾಬರಿಗೊಂಡು ನಿಂತುಬಿಟ್ಟೆ, ಅಜ್ಜಿ ಆ ವ್ಯಕ್ತಿಯನ್ನು ಪರಿಪರಿಯಾಗಿ ಕ್ಷಮೆ ಕೇಳಿದ ಮೇಲೆ ಆತ ಹೊರಟುಹೋದ. ಆತ ಕೋಪಗೊಂಡಿದ್ದು ಸವರ್ಣೀಯನಾದ ಆತನನ್ನು ನಾನು ಮುಟ್ಟಿದೆ ಎಂಬ ಕಾರಣಕ್ಕೆ."[3] ಹೀಗೆ ಅನೇಕ ಯಾತನೆ ನೋವಿನ ಸಂದರ್ಭಗಳ ನಡುವೆಯೂ ಕೂಡ ನಾಟಕ, ಹಾಡು, ಅಜ್ಜಿಯ ಕತೆಗಳು, ಜನಪದದ ಪಟದ ಕುಣಿತ, ರಂಗದ ಕುಣಿತಗಳೆಲ್ಲಾದರಲ್ಲಿಯೂ ಆಸಕ್ತಿಯನ್ನು ಬೆಳೆಸಿಕೊಂಡಿದ್ದರ ಪರಿಣಾಮವಾಗಿಯೇ ಇವರಲ್ಲಿ ಸಾಂಸ್ಕೃತಿಕತೆ ಮೈಗೂಡಲು ಸಾಧ್ಯವಾಗಿದೆ. ಸಿದ್ಧಲಿಂಗಯ್ಯನವರ ಬದುಕನ್ನೇ ಬದಲಾಯಿಸಿದ್ದು ಈ ಬೆಂಗಳೂರು ನಗರ. ತಮ್ಮ ಊರಾದ ಮಂಚನಬೆಲೆಯಲ್ಲಿ ಬರಗಾಲ ಸ್ಥಿತಿ ನಿರ್ಮಾಣವಾದಾಗ ಉದ್ಯೋಗ ಅರಸಿ ಬಂದ ತಂದೆಯ ಜೊತೆಯಲ್ಲೇ ಈ ಮಾಯಾನಗರಿಯ ಪ್ರವೇಶವಾಗಿ ಅವರ ಬದುಕಿನ ತಿರುವನ್ನೇ ಬದಲಾಯಿಸಿ, ಹೊಸ ವ್ಯಕ್ತಿತ್ವವನ್ನು ರೂಪಿಸಿತು. ಅದನ್ನು ಅವರ ಮಾತುಗಳಲ್ಲೇ ಕೇಳೋಣ:

"ಬೆಂಗಳೂರಿನ ಶ್ರೀರಾಮಪುರಕ್ಕೆ ಬರದೇ ಇದ್ದಿದ್ದರೆ ನಾನು ಒಬ್ಬ ಚಳುವಳಿಗಾರನಾಗಿ ರೂಪಿತನಾಗುತ್ತಿರಲಿಲ್ಲ. ಮಾಗಡಿ ಮಂಚನಬೆಲೆಯಲ್ಲಿ ಇದ್ದಾಗ ನನಗೆ ನನ್ನ ಭವಿಷ್ಯದ ಬದುಕಿನ ಬಗ್ಗೆ ಕಲ್ಪನೆ ಏನೂ ಇರಲಿಲ್ಲ. ಆದರೆ ಬೆಂಗಳೂರಿಗೆ ಬಂದ ಮೇಲೆ ಓದಿ ದೊಡ್ಡ ವ್ಯಕ್ತಿಯಾಗಬೇಕು ಎನ್ನೋ ಮನಸ್ಸು ಬಂತು. ಊರಿನಲ್ಲಿಯೇ ಇದ್ದಿದ್ದರೆ ಕಥೆ, ಹಾಡು ಹೇಳಿಕೊಂಡು ಮನೆಗೆಲಸ ಮಾಡಿಕೊಂಡು ಇದ್ದುಬಿಡುತ್ತಿದ್ದೆ ಅಷ್ಟೇ"[4] ಎನ್ನುತ್ತಾರೆ. ಬದಲಾವಣೆ ನಿತ್ಯ ಸತ್ಯವಾಗಿದ್ದು ಅದು ಪರಿಸರದ ನಿಯಮವೂ ಹೌದು. ಬದುಕಿನ ಎಡರು-ತೊಡರು, ಅವಮಾನ, ಬಡತನದ ನೋವು, ಹಸಿವಿನ ಯಾತನೆ, ಇವು

ಮನುಷ್ಯನ ಏಳ್ಗೆಗೆ ಕಾರಣವಾಗುತ್ತದೆ. ಸಿದ್ಧಲಿಂಗಯ್ಯನವರು ಬೆಂಗಳೂರಿನ ಶ್ರೀರಾಮಪುರಕ್ಕೆ ಬಂದಾಗ ಅವರಿಗೆ ಪ್ರಾರಂಭದ ದಿನಗಳಲ್ಲಿಯೇ ಅಂಬೇಡ್ಕರ್ ಪ್ರೇರಣೆ, ಸ್ಫೂರ್ತಿ, ಪ್ರಭಾವ ಇವರ ಎಳೆಯ ಮನಸ್ಸಿನ ಮೇಲಾಗತೊಡಗಿತು. ಮೂರನೆಯ ತರಗತಿ ಓದುತ್ತಿದ್ದಾಗ "ಹಾಸ್ಟೆಲ್‌ಗೆ ಬರುತ್ತಿದ್ದ ರಾಜಕಾರಣಿಗಳ ದಲಿತ ಸಮಸ್ಯೆಗಳನ್ನು ಕುರಿತು ಭಾಷಣ, ಗಾಂಧೀಜಿ, ಅಂಬೇಡ್ಕರ್ ಮುಂತಾದವರ ವಿಚಾರಧಾರೆಗಳನ್ನು ಮೈಗೂಡಿಸಿಕೊಳ್ಳಲು ಸಿದ್ಧಲಿಂಗಯ್ಯನವರಿಗೆ ಸಹಕಾರಿಯಾಗಿದೆ. ಅವರೊಬ್ಬ ಅತ್ಯುತ್ತಮ ಚರ್ಚಾಪಟುವಾಗಿ ರೂಪಿಸಲು ಕಾರಣವಾಯಿತು."[೭]

ಶಾಲೆಯಲ್ಲಿ ನಡೆಯುತ್ತಿದ್ದ ಚರ್ಚಾ ಸ್ಪರ್ಧೆಗಳಲ್ಲಿ ಭಾಗವಹಿಸಿ ತನ್ನ ಪ್ರತಿಭೆಯಿಂದ ಯಾವಾಗಲೂ ಎಲ್ಲರ ಮೆಚ್ಚುಗೆಯನ್ನು ಪಡೆಯುವುದರ ಜೊತೆಗೆ ಬಹುಮಾನವನ್ನು ತನ್ನದಾಗಿಸಿಕೊಳ್ಳುತ್ತಿದ್ದ ಪ್ರತಿಭಾವಂತರಾಗಿದ್ದರು. ಎಷ್ಟು ಪ್ರತಿಭಾವಂತರಾಗಿದ್ದರು ಎಂದರೆ ಶಾಲಾಮಟ್ಟದಲ್ಲಿಯೇ ಕವಿತೆಗಳನ್ನು ಬರೆಯುವ ಹವ್ಯಾಸವನ್ನು ಬೆಳೆಸಿಕೊಂಡಿದ್ದರು. ಶಿಕ್ಷಕರಿಂದಲೂ, ಸ್ನೇಹಿತರಿಂದಲೂ ಮೆಚ್ಚುಗೆ ಪಾತ್ರವಾಗಿ ಕವಿ ಎಂದು ಕರೆಸಿಕೊಳ್ಳುತ್ತಿದ್ದರು. ಅದರಲ್ಲೂ ಪ್ರತಿಭಟನಾತ್ಮಕ ಕವಿತೆಗಳನ್ನು ಆಗಲೇ ಬರೆಯುತ್ತಿದ್ದರು ಎಂದರೆ ಆಶ್ಚರ್ಯವಾದರೂ ಸತ್ಯವಾಗಿತ್ತು. "ವಿದ್ಯಾರ್ಥಿ ವಸತಿ ನಿಲಯಗಳೆಂದರೆ ಸಮಸ್ಯೆಗಳ ಆಗರ. ಅವರು ಹಾಸ್ಟೆಲ್‌ನಲ್ಲಿದ್ದಾಗ ವಸತಿ ನಿಲಯದಲ್ಲಿ ಸರಿಯಾದ ಊಟ, ವಸತಿಯ ವ್ಯವಸ್ಥೆ ಸರಿಯಿಲ್ಲದಿದ್ದುದೇ ಈ ರೀತಿಯ ಕವನಗಳಿಗೆ ಸ್ಫೂರ್ತಿಯಾಗಿತ್ತು. ಕವನದ ಮೂಲಕ ಸಂಬಂಧಪಟ್ಟವರನ್ನು ತರಾಟೆಗೆ ತೆಗೆದುಕೊಳ್ಳುವ ರೀತಿಯ ಕವನಗಳನ್ನು ಈ ಹುಡುಗ ಬರೆದರೆ ಬರೆದ ಹಾಡುಗಳನ್ನು ಇತರ ಹುಡುಗರು ಒಕ್ಕೊರಳಿನಿಂದ ಹಾಡುತ್ತಿದ್ದರು."[೮] ಬಾಲ್ಯದಲ್ಲಿಯೇ ಹೋರಾಟದ ಗುಣವನ್ನು ಬದುಕಿನಲ್ಲಿ ಅಳವಡಿಸಿಕೊಂಡವರು ಡಾ.ಸಿದ್ಧಲಿಂಗಯ್ಯ. ಅದಕ್ಕೆ ಆತನು ಬೆಳೆದು ಬಂದ ದಾರಿ ಪರಿಸರದ ಹಿನ್ನೆಲೆಯೂ ಕೂಡ ಮುಖ್ಯವಾದರೂ ಸಂಪೂರ್ಣವಾಗಿ ಹೋರಾಟಗಾರರನ್ನಾಗಿ ರೂಪಿಸಿದ್ದು, ಬೆಂಗಳೂರಿನ ಪರಿಸರ ಎಂಬುದು ಮಾತ್ರ ಅಷ್ಟೇ ದಿಟವಾದುದ್ದು.

ಭಾರತದ ದಲಿತರಿಗೆ ಹೋರಾಟದ ದಾರಿದೀಪವಾಗಿ ಬಂದು ಬಿಡುಗಡೆಯ ಪಥದಲ್ಲಿ ನಮ್ಮನ್ನು ಕೈ ಹಿಡಿದು ನಡೆಸಿದವರು ಕ್ರಾಂತಿಕಾರಿ ಡಾ.ಬಿ.ಆರ್.ಅಂಬೇಡ್ಕರ್. ಬಾಲ್ಯದಿಂದಲೇ ಸಿದ್ಧಲಿಂಗಯ್ಯನವರಿಗೆ ಹೋರಾಟದ ಪ್ರೇರಣೆ ಗುರುವಾಗಿದ್ದವರೂ ಕೂಡ ಅವರೇ. "ದಲಿತರಿಗೊಸ್ಕರ ನಾನು ಹೋರಾಡಬೇಕು. ಈ ಸಮಾಜದಲ್ಲಿ ದಲಿತರ ಪರವಾಗಿ ದನಿ ಎತ್ತಬೇಕು. ಎಂಬುದಾಗಿ ಅಃತಸಾಕ್ಷಿಯಾಗಿ ಪ್ರತಿಜ್ಞೆ ಮಾಡಿದ್ದರು. ಎಂಟನೆಯ ತರಗತಿಯ ವಿದ್ಯಾರ್ಥಿಯಾಗಿದ್ದಾಗಲೇ ಹಾಸ್ಟೆಲ್‌ನ ಇತರೆ ಗೆಳೆಯರೊಂದಿಗೆ ಸೇರಿ 'ಅಂಬೇಡ್ಕರ್ ಪ್ರಚಾರ ಸಮಿತಿ' ಯನ್ನು ಸ್ಥಾಪಿಸಿ. ತಾವೇ ಸ್ವತಃ ಅದರ ಅಧ್ಯಕ್ಷರಾಗಿ ಆ ಮೂಲಕ ಅನೇಕ ಪ್ರಗತಿಪರ ಕಾರ್ಯಕ್ರಮಗಳನ್ನು ಮಾಡಿದ್ದರು. ಬೆಂಗಳೂರಿನ ಎಲ್ಲ

ದಲಿತರ ಹಾಸ್ಟೆಲ್‌ಗಳಿಗೆ ಭೇಟಿಕೊಟ್ಟು ಅಂಬೇಡ್ಕರ್ ಕುರಿತಾಗಿ ಭಾಷಣ ಮಾಡುತ್ತಿದ್ದರು. ಜೊತೆಗೆ ದಲಿತರ ಹಾಸ್ಟೆಲ್‌ಗಳಲ್ಲಿ ಮಾಡುತ್ತಿದ್ದ ಸರಸ್ವತಿ ಪೂಜೆಯನ್ನು ನಿಲ್ಲಿಸಿ ಹಾಸ್ಟೆಲ್‌ಗಳಲ್ಲಿದ್ದ ದೇವರ ಫೋಟೋಗಳನ್ನು ಕಿತ್ತೆಸೆದು ಬುದ್ಧ ಅಂಬೇಡ್ಕರ್‌ರವರ ಭಾವ ಚಿತ್ರಗಳನ್ನು ಹಾಕಿಸಿದರು. ಬೆಳಗಿನ ಸಮಯ ಮಾಡುತ್ತಿದ್ದ ದೇವರ ಪ್ರಾರ್ಥನೆಗೆ ಬದಲಾಗಿ ಓ ಶ್ರೀಗುರು ಅಂಬೇಡ್ಕರಾಯನಮಃ. . . ಎಂಬುದಾಗಿ ಪ್ರಾರ್ಥನೆ ಮಾಡಬೇಕೆಂದು ತಾವೇ ಮುಂದೆ ನಿಂತು ಹೇಳಿಕೊಡುತ್ತಿದ್ದರು. ಸಿದ್ಧಲಿಂಗಯ್ಯನೆಂದರೆ ನಾಯಕ್ರ ಅವರು ಅಂಬೇಡ್ಕರ್ ಬಗ್ಗೆ ತುಂಬಾ ಚೆನ್ನಾಗಿ ಭಾಷಣ ಮಾಡುತ್ತಾರೆ ಎನ್ನುತ್ತಿದ್ದರು. ಎಲ್ಲಾ ವಿದ್ಯಾರ್ಥಿಗಳು ಅವರನ್ನು 'ಅಂಬೇಡ್ಕರ್ ಭಕ್ತ' ಎಂಬುದಾಗಿ ಕರೆಯುತ್ತಿದ್ದರು. ಇವರನ್ನು ನೋಡಲು ಬರುತ್ತಿದ್ದವರು ಕೂಡ 'ಅಂಬೇಡ್ಕರ್ ಭಕ್ತರು' ಇದ್ದಾರಾ? ಎಂದು ಕೇಳುತ್ತಿದ್ದರು. ಹಾಸ್ಟೆಲ್‌ನಲ್ಲಿದ್ದ ತಮ್ಮ ಹುಡುಗರನ್ನು ನೋಡಲು ಊರುಗಳಿಂದ ಬರುತ್ತಿದ್ದ ಹಿರಿಯರು ಸಹ 'ಬನ್ನಿ ಒಬ್ಬರೂ ಅಂಬೇಡ್ಕರ್ ಭಕ್ತರಿದ್ದಾರಂತೆ ಅವರನ್ನು ಮಾತನಾಡಿಸಿಕೊಂಡು ಹೋಗೋಣ ಎಂದು ಭೇಟಿಯಾಗುತ್ತಿದ್ದರು.'' ಈ ತರಹದ ನಡವಳಿಕೆ, ಅನುಭವಗಳು ಬೇರೆಯವರ ಉತ್ಸಾಹ ಮಾತುಗಳಿಂದ ಇವರು ಮತ್ತಷ್ಟು ಹೋರಾಟದ ಕಡೆಗೆ ಗಮನ ನೀಡಲು ಸ್ಫೂರ್ತಿಯ ಚಿಲುಮೆಯಾಗಿತ್ತು. ಆಗಾಗ ನಡೆಯುತ್ತಿದ್ದ ಸಂವಾದ, ಚರ್ಚೆ, ಚಳುವಳಿಗಳು ಇವರಲ್ಲಿ ಇನ್ನಷ್ಟು ಹೋರಾಟದ ಕಾವು ಹೆಚ್ಚಾಗುವಂತೆ ಮಾಡುತ್ತಿತ್ತು. ಜೊತೆಗೆ ಅಂಬೇಡ್ಕರ್‌ರವರ ವಿಚಾರಧಾರೆಗಳು ತೀವ್ರತರದಲ್ಲಿ ಇವರ ಮನವನ್ನು ಎಚ್ಚರಗೊಳಿಸಿತ್ತು. ಅದಕ್ಕಾಗಿಯೇ ಅಂಬೇಡ್ಕರ್ ಸ್ಥಾಪಿತ 'ರಿಪಬ್ಲಿಕನ್ ಪಕ್ಷ'ದ ಧರಣಿ, ಮೆರವಣಿಗೆ, ಸಮ್ಮೇಳನಗಳಲ್ಲಿ ಪ್ರೀತಿಯಿಂದ ಭಾಗವಹಿಸುತ್ತಿದ್ದರು. ಒಮ್ಮೆ ಇವರ ಕೇರಿಗೆ ಅಂಬೇಡ್ಕರ್ ಮಗ ಯಶವಂತ್ ಅಂಬೇಡ್ಕರ್ ಪಕ್ಷದ ಪ್ರಚಾರಕ್ಕೆ ಬಂದಾಗ ಅಂಬೇಡ್ಕರ್‌ರವರೇ ತಮ್ಮ ಕೇರಿಗೆ ಬಂದಷ್ಟು ಮೈಮನ ರೋಮಾಂಚನಗೊಂಡು ಪುಳಕಿತರಾಗಿದ್ದರು.

ಅಂಬೇಡ್ಕರ್, ಲೋಹಿಯಾ, ಪೆರಿಯಾರ್, ಕಾರ್ಲ್‌ಮಾರ್ಕ್ಸ್ ಮೊದಲಾದವರ ಚಿಂತನೆ ವಿಚಾರಗಳು ಇವರನ್ನು ರೂಪಿಸಿದವು. ಇದರ ಜೊತೆಗೆ ಸಮಕಾಲೀನ ವ್ಯಕ್ತಿಗಳಿಂದಲೂ ಕೂಡ ವೈಚಾರಿಕವಾಗಿ ಇವರು ಬೆಳೆದಿದ್ದಾರೆ, ಬೆಳೆಸಿದ್ದಾರೆ. ಕುವೆಂಪು, ಲಂಕೇಶ್, ಕಿ.ರಂ.ನಾಗರಾಜ್, ಜಿ.ಎಸ್.ಎಸ್. ಪ್ರಭಾವವನ್ನು ನೆನಪಿಸಿಕೊಳ್ಳುತ್ತಾರೆ. ಒಟ್ಟಾರೆಯಾಗಿ ಡಾ.ಸಿದ್ಧಲಿಂಗಯ್ಯನವರ ಜೀವನಶೈಲಿ ಶಾಲಾದಿನಗಳು, ಹೋರಾಟದ ಆ ದಿನಗಳೆಲ್ಲಾ ಅವರನ್ನು ಪ್ರಭಾವಕ್ಕೊಳಪಡಿಸಿದ್ದರೂ ರೂಪಿಸಿದ್ದು ಅಂಬೇಡ್ಕರ್‌ರವರ ಜೀವನ, ಹೋರಾಟ, ಅವರ ವಿಚಾರ ಲಹರಿ ಸಿದ್ಧಾಂತಗಳೆಂಬುದನ್ನು ಮನಗಾಣಬಹುದು. ಇನ್ನು ಸಿದ್ಧಲಿಂಗಯ್ಯನವರ ಕಾವ್ಯ, ನಾಟಕ, ಸದನದ ಭಾಷಣಗಳಲ್ಲಿ ಅಂಬೇಡ್ಕರ್ ಚಿಂತನೆಗಳು ವಿವಿಧ ರೂಪಗಳಲ್ಲಿ ಮೈದಳೆದು ಬಂದಿದೆ ಎಂಬುದರ ಕಡೆಗೆ ಅಧ್ಯಯನದ ಮೂಲಕ ತಿಳಿಯುವ ಪ್ರಯತ್ನ ಮಾಡಬಹುದು.

೪.೧ ಸಾಮಾಜಿಕ ಚಿಂತನೆಗಳು

ಸಾಮಾಜಿಕ ವ್ಯವಸ್ಥೆ, ಅಲ್ಲಿನ ಸ್ಥಿತಿಗತಿಗಳನ್ನು ಸೃಜನಶೀಲತೆಯ ನೆಲೆಗಟ್ಟಿನಲ್ಲಿ ನಿಂತು ಅದಕ್ಕೆ ಪ್ರತಿಸ್ಪಂದಿಸುತ್ತ ಪ್ರತಿಕ್ರಿಯೆಸುತ್ತಾ ಬರುವವನೇ ನಿಜವಾದ ಕವಿ, ಪ್ರಗತಿಪರ ಚಿಂತಕನಾಗುತ್ತಾನೆ. ಕೇವಲ ಕಲ್ಪನೆ, ಸೌಂದರ್ಯ ಕಾವ್ಯಾತ್ಮಕ ಗುಣಗಳಲ್ಲದೇ ಸಾಮಾಜಿಕ ಬದ್ಧತೆಯಿಂದ ಸಮಾಜಮುಖಿ ನಿಲುವುಗಳಿಂದ ಜನ ಜೀವನ ನಾಡಿಯಾಗಿ ಕೆಲಸ ನಿರ್ವಹಿಸುತ್ತಾ ಜನ ಸಾಮಾನ್ಯನಿಗೆ ಸರಿ ತಪ್ಪುಗಳ ತಿಳುವಳಿಕೆಯನ್ನು ನೀಡುವುದಲ್ಲದೆ ಆಲೋಚನಾ ಪ್ರಕ್ರಿಯೆಯನ್ನು ಕೂಡ ಜಾಗೃತಗೊಳಿಸುವ ಕಾರ್ಯವನ್ನು ಕವಿ ಮಾಡುತ್ತಿರುತ್ತಾನೆ. ಸಾಮಾಜಿಕ, ಧಾರ್ಮಿಕ, ರಾಜಕೀಯ, ಸಾಂಸ್ಕೃತಿಕ ಎಲ್ಲಾ ಕ್ಷೇತ್ರಗಳ ಬಗ್ಗೆ ಚಿಂತನೆಗೆ ಒಳಪಡಿಸುವುದು ಸಾಹಿತ್ಯ ಕ್ಷೇತ್ರ, ಸಮಾಜದ ಸಮಸ್ಯೆಗಳಾದ ಬಡತನ, ಅಸ್ಪೃಶ್ಯತೆ ಶೋಷಣೆ, ಅವಮಾನ ನಿಂದನೆಗಳು ಕೂಡ ಬರವಣಿಗೆಗೆ ಪ್ರೇರಣೆ ನೀಡಬಲ್ಲದು. ಕನ್ನಡ ಸಾಹಿತ್ಯದ ೧೨ನೆ ಶತಮಾನ ವಚನ ಸಾಹಿತ್ಯ ಚಳುವಳಿ ಈ ರೀತಿಯ ಸಮಸ್ಯೆಗಳಿಗೆ ಪರಿವರ್ತನೆಯ ಮಾರ್ಗವನ್ನು ತೋರಿಸಿ ನವಕ್ರಾಂತಿಯನ್ನು ಸಮಾಜದಲ್ಲಿ ಉಂಟುಮಾಡಿತು. ಇದಾದ ಮೇಲೆ ಮತ್ತೆ ಶೋಷಣೆಯ ವಿರುದ್ಧ ಸಮಾಜದ ಸ್ಥಾಪಿತ ಮೌಲ್ಯಗಳನ್ನು ಧಿಕ್ಕರಿಸಿ ಹೊಸ ಆಲೋಚನೆ, ಚಿಂತನೆ, ಸಿದ್ಧಾಂತಗಳು ಚಿಗುರೊಡೆದಿದ್ದು ಅಂಬೇಡ್ಕರ್ ನಡೆಸಿದ್ದ ಹೋರಾಟ ಕಂಡ ನವಸಮಾಜದ ಕನಸು ಹಾಗೂ ಸಂವಿಧಾನದ ಆಶೋತ್ತರಗಳ ಫಲವಾಗಿಯೇ ಸಮಾಜದಲ್ಲಿ ತುಳಿಯಲ್ಪಟ್ಟ ಸಮುದಾಯಗಳು ಶೋಷಕರ ವಿರುದ್ಧ ಮಾತನಾಡುವ ತನ್ನ ಸ್ಥಿತಿಯನ್ನು ಪ್ರಶ್ನಿಸುವ ಹಂತಕ್ಕೆ ತಲುಪಿಸಿತು.

"ಸಾಮಾಜಿಕ ಪ್ರಜ್ಞೆಯುಳ್ಳ ಸಾಹಿತಿ ಯುಗಯುಗಳಿಂದಲೂ ಮೂಕನಾದ ಮನುಷ್ಯನಿಗೆ ನಾಲಿಗೆಯಾಗಿ ಬರುತ್ತಾನೆ"[೧೦] ಎನ್ನುವ ಹಾಗೆ ದೀನ ದಲಿತರ, ಬಡವರ, ಶೋಷಿತರ, ದುರ್ಬಲರ ನೋವಿನ ಕೂಗಿಗೆ ಅವರ ಸ್ವಾಭಿಮಾನದ ಪ್ರಜ್ಞೆಯಾಗಿ ಭಾರತದಲ್ಲಿ ಡಾ.ಅಂಬೇಡ್ಕರ್, ಕರ್ನಾಟಕದಲ್ಲಿ ಡಾ.ಸಿದ್ಧಲಿಂಗಯ್ಯ ಸಾಹಿತ್ಯ ಇವರಿಬ್ಬರೂ ಕೂಡ ಬರೀ ಅಸ್ಪೃಶ್ಯರ ಪರವಾದ ಚಿಂತನೆಗಳನ್ನು ಮಾಡಿಲ್ಲ. ನಾಡಿನ ಎಲ್ಲಾ ತಬ್ಬಲಿಗಳ ಅವಮಾನಿತರ ಬೆಳಕಾಗಿ ಬಂದವರು. ೧೯೭೫ರಲ್ಲಿ ಪ್ರಕಟವಾದ "ಹೊಲೆ ಮಾದಿಗರ ಹಾಡು" ಕವನ ಸಂಕಲನದ ಮೊದಲ ಕವನವೇ "ನನ್ನ ಜನಗಳು" ಇದನ್ನು ಹೇಳುತ್ತದೆ.

"ಹಸಿವಿನಿಂದ ಸತ್ತೋರು ಸೈಜುಗಲ್ಲು ಹೊತ್ತೋರು.
ವದೆಸಿಕೊಂಡು ವರಗಿದೋರು ನನ್ನ ಜನಗಳು". (ನನ್ನ ಜನಗಳು)

ಇಲ್ಲಿ ಹೊಲವನ್ನು ಉಳುವ ರೈತ, ಮನೆ, ಹೊಲದ ಕೆಲಸವನ್ನು ಮಾಡುವ ಕೂಲಿ, ಚಮ್ಮಾರ, ಅಕ್ಕಸಾಲಿಗ, ನೇಕಾರ ಇವರೆಲ್ಲರೂ ಕೂಡ ಸಮಾಜದಲ್ಲಿನ ತಾರತಮ್ಯಕ್ಕೆ ಒಳಗಾಗಿರುವವರೇ ಇವರು ಕಷ್ಟ ಪಟ್ಟು ದುಡಿದರೂ ಕೂಡ ತಮ್ಮ ಪ್ರತಿಫಲವನ್ನು ಬೇರೊಬ್ಬರು ತಿಂದು ತೇಗುತ್ತಿರುವವರು

ಇಂತಹ ದುರಂತ ಸ್ಥಿತಿಯನ್ನು ಅನುಭವಿಸುತ್ತಿರುವವರು ನನ್ನ ಜನಗಳು ಎಂದು ಹೇಳುತ್ತಾರೆ. ಮೇಲ್ವರ್ಗದ ದಬ್ಬಾಳಿಕೆ ಶೋಷಣೆಯಿಂದ ನರಳುವ ಜನರೂ

"ಸಿಡಿತಿನಿ ಬಾಂಬ್ ಸಿಡ್ದಂಗೆ
ಇವ್ರ ಸಿಂಗಾರ, ಸೋಪ, ಗಾಜು, ಲೈಟು ಎಲ್ಲಾ
ಪುಡಿ ಪುಡಿ ಅಗಂಗೆ" (ಒಂದು ಮೂಳೆಯ ಹಾಡು)

ಎಂದು ಸಾಮಾಜಿಕ ಅಸಮಾನತೆಯ ವಿರುದ್ಧ ಕ್ರಾಂತಿಯ ಕಹಳೆಯನ್ನು ಊದಿ ಕೊನೆಗೆ ನಾನು ಕೂಡ "ಮನುಷ್ಯ ಆಯ್ತಿನಿ" ಎನ್ನುವ ಪರಿವರ್ತನೆಯ ಸೂಚನೆಯನ್ನು, ತನ್ನ ಬಿಡುಗಡೆಯನ್ನು ತಾನೇ ಮಾಡಿಕೊಳ್ಳುವ ದಾರಿಯನ್ನು ಕೂಡ ದಲಿತರು ಕಂಡುಕೊಂಡಿರುವ ಹೋರಾಟದ ಸೂಚನೆಯನ್ನು ಇಲ್ಲಿನ ಕವಿತೆಯು ಪ್ರತಿನಿಧಿಸುತ್ತದೆ. ಅಂಬೇಡ್ಕರ್‌ರವರೂ ಕೂಡ ನಿಮ್ಮ ವಿಮೋಚನೆಗೆ ಯಾರೂ ಬರಲಾರರು. ನಿಮ್ಮನ್ನು ನೀವೇ ಮುಕ್ತಿಗೊಳಿಸುವ ಚೈತನ್ಯವನ್ನು ಬೆಳೆಸಿಕೊಂಡು ಹೋರಾಟವನ್ನು ಮಾಡಿ ಎಂಬ ಅರಿವನ್ನು ಕೆಳವರ್ಗದ ಜನರಲ್ಲಿ ಸ್ವಾಭಿಮಾನವನ್ನು ಮೂಡಿಸುತ್ತಿದ್ದರು. ಅವರು ಶೋಷಣೆಗೆ ಒಳಗಾದ ಜನರು ಅಸಮಾನತೆಯಿಂದ ಸಿಡಿದೆದ್ದು ಆವ್ಯವಸ್ಥೆಯನ್ನು ಧ್ವಂಸ ಮಾಡುತ್ತಾರೆ ಎಂಬ ಮುನ್ನೆಚ್ಚರಿಕೆಯನ್ನು ಸಹ ಈ ಸಮಾಜಕ್ಕೆ ನೀಡಿದ್ದರು. ಅದಕ್ಕೆ ಅನುಗುಣವಾಗಿ ಕವಿ ಸಿದ್ಧಲಿಂಗಯ್ಯನವರು ಈ ಅಸಮಾನತೆಯ ವಿರುದ್ಧ ಶೋಷಣೆಯನ್ನು ಕುರಿತು

ಸೌದೆ ಸಿಗದಂಗ್ ಸಿಗಿತಿನಿ, ಸಾವ್ಕಾರಿಮಯ್ಯ
ಕುಡಿತಿನಿ ಗಟಗಟನೆ, ಹೆಂಡ ಕುಡ್ದಂಗೆ
ಸಾವ್ಕಾರಿರಕ್ತನ (ಒಂದು ಮೂಳೆಯ ಹಾಡು)

ಎಂದು ಸಮಾಜದಲ್ಲಿನ ಆ ಮೇಲುವರ್ಗಕ್ಕೆ ನಾನು ಹಿಂಗೆ ಇರೋದಿಲ್ಲ ನನ್ನೊಂದಿಗೆ ಅಂಬೇಡ್ಕರ್ ತತ್ವಗಳಿವೆ. ಅದ್ದರಿಂದ ಸಿಡಿದು ಬಂದು

"ಇಕ್ರಲಾ ವಡೀರ್ಲಾ
ಈ ನನ್ನ ಮಕ್ಕಳ್ ಚರ್ಮ ಎಬ್ರಲಾ" (ಒಂದು ಪದ)

ಎಂದು ಹೇಳಿ ನನ್ನ ಜನರಿಗೆ ತಮ್ಮ ಶೋಷಣೆಯ ಬಗೆ ತಿಳುವಳಿಕೆ ನೀಡಿ, ಶಕ್ತಿಯುತವಾಗಿ ಮೇಲೆದ್ದು ಬರುತ್ತೇವೆ, ಎಂಬ ಎಚ್ಚರಿಕೆಯ ಜೊತೆಗೆ ಅಂತಹವರಿಗೆ ಮಾತಿನ ಪೆಟ್ಟಿನ ಜೊತೆಗೆ ದೈಹಿಕ ಪೆಟ್ಟನ್ನು ನೀಡಲು ಹವಣಿಸುತ್ತಿರುವ ದಲಿತನ ಆಕ್ರೋಶ, ಕೋಪ, ಸಿಟ್ಟು, ರೋಷ ಎಲ್ಲವು ವ್ಯಕ್ತವಾಗಿದೆ. ಜೊತೆಗೆ ಈ ಸಮಾಜದಲ್ಲಿನ ನಿರ್ಲಿಪ್ತ ಜನಾಂಗಕ್ಕೆ ಸ್ಫೂರ್ತಿಯನ್ನು ತುಂಬುವ ಕೆಲಸವನ್ನು ಈ ಕವಿತೆಗಳು ಮಾಡಿ ಜನಾಂದೋಲನಕ್ಕೆ ಹೊಸ ಹುರುಪು ಕೆಚ್ಚನ್ನು ನೀಡುತ್ತಿತ್ತು. ಏಕೆಂದರೆ ಸಿದ್ಧಲಿಂಗಯ್ಯನವರೆ "ನನ್ನ ಕವಿತೆಗಳು ಅವು ಕವಿತೆಗಳಲ್ಲ ಹಾಡುಗಳು. ಇವು ಹಾಡುಗಳು" ಎಂದು ಮತ್ತೊಮ್ಮೆ

ಹೇಳುತ್ತಿದ್ದೇನೆ. ಗಟ್ಟಿಯಾಗಿ, ಲಯಬದ್ಧವಾಗಿ ಹಾಡಿದಾಗ, ಓದಿಕೊಂಡಾಗ ಮಾತ್ರ ನನ್ನ ರಚನೆಯ ಉದ್ದೇಶ ಸ್ಪಷ್ಟವಾಗುತ್ತದೆ"[11] ಎಂದು ಹೇಳಿದ್ದಾರೆ. ಈ ಜನಾಂಗದ ಸಮಾಜದಲ್ಲಿ ತುಂಬಾ ಹೀನಸ್ಥಿತಿಯ ಬದುಕನ್ನು ಕಂಡಿರುವುದು ಮನವರಿಕೆ ಆಗಿರಬಹುದು. ಪ್ರಾಣಿಗಳ ಜೀವನಕ್ಕಿಂತ ತುಂಬ ಅಸಹ್ಯವಾದ ಬಾಳನ್ನು ಕಂಡವರು

ಹೋಟ್ಲು, ಬಾವಿ, ಮನೆ ಯಾವುದ್ಕೊ ಸೇರ್ಸಲ್ಲಲ್ರೊ

ನಮ್ ಹೇಲ್ ತಿನ್ನೋ ನಾಯ್ನ ಕ್ವಾಣೆವಳೀಕ್ ಬುಟ್‌ಕತ್ತಾರೆ" (ಒಂದು ಪದ)

೬೪ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಿಕೊಂಡಿರುವ ಈ ದೇಶದಲ್ಲಿ ಈಗಲೂ ಕೂಡ ಕೆಲವು ಕಡೆ ಈ ಅಸ್ಪೃಶ್ಯ ಆಚರಣೆ ಚಾಲ್ತಿಯಲ್ಲಿದೆ. ಜೊತೆಗೆ ಮಲ ಹೊರುವ ಪದ್ಧತಿ ಜೀವಂತವಾಗಿದೆ ಎಂಬುದಕ್ಕೆ ಇತ್ತೀಚೆಗೆ ಮಲವನ್ನು ಮೈ ಮೇಲೆ ಸುರಿದುಕೊಂಡು ಪ್ರತಿಭಟಿಸಿದ ಘಟನೆಯೇ ಜೀವಂತ ಸಾಕ್ಷಿ. ಇದಕ್ಕೆ ನಾವೆಲ್ಲರೂ ನಾಚಿಕೆಗಳಿಂದ ತಲೆ ತಗ್ಗಿಸಬೇಕಾಗಿದೆ. ಇಷ್ಟೆಲ್ಲಾ ಕಾನೂನುಗಳಿದ್ದರೂ, ವಿದ್ಯಾವಂತ, ಪ್ರಜ್ಞಾವಂತ ಜನರಿದ್ದರೂ ಈ ಸಾಮಾಜಿಕ ಸಮಸ್ಯೆಗಳು ಇಲ್ಲವಾಗಿಸಲು ಸಾಧ್ಯವಾಗಿಲ್ಲವಲ್ಲ ಅಂತ. ಹಾಗೆ ಗ್ರಾಮೀಣ ಪ್ರದೇಶದಲ್ಲಿ ಜನರು ಅವರ ಮನೆಯ ಹೊರಗಡೆ ನಿಂತು ತಮ್ಮ ಕೆಲಸ-ಕಾರ್ಯಗಳನ್ನು ಮುಗಿಸಿಕೊಂಡು ಬರುವ ಸ್ಥಿತಿಯಲ್ಲೇ ಇದ್ದಾರೆ. ಕೆಲವೊಮ್ಮೆ ಅವರಾಗೇ ಕರೆದರೂ ಕೂಡ ನಾವು ಒಳಗೆ ಹೋಗಲು ಹಿಂಜರಿಕೆಯ ಮನಸ್ಥಿತಿಯನ್ನು ತೋರಿಸುವ ಪರಿಪಾಠಿಕೆಗಳನ್ನು ತೋರಿಸುತ್ತೇವೆ. ಕೆಲವು ಮನಸ್ಥಿತಿಗಳಲ್ಲಿ ಅದು ಅಚ್ಚೊತ್ತಿ ಬಿಟ್ಟಿದೆ. ಈ ತರಹ ಮನೋಭಾವಗಳಿಂದ ಹೊರಬಂದು ಹೊಸ ಮನುಷ್ಯರಾಗಿ, ಸ್ವಾಭಿಮಾನದಿಂದ ಬದುಕುವುದನ್ನು ಮತ್ತೆ ಅಂತಹ ಮನಸ್ಥಿತಿಯಿರುವ ಮೇಲ್ವರ್ಗದ ಜನರ ಮನಸ್ಸುಗಳನ್ನು ಪರಿವರ್ತಿಸುವ ಕಾರ್ಯವನ್ನು ನಾವೆಲ್ಲ ಮಾಡಬೇಕಾಗಿದೆ.

ಅಂಬೇಡ್ಕರ್‌ರವರು ಮೊದಲು 'ದಲಿತರು ಶಿಕ್ಷಣವನ್ನು ಕಲಿಯಬೇಕು. ತಮ್ಮ ಮಕ್ಕಳಿಗೆ ಶಿಕ್ಷಣವನ್ನು ಕೊಡಿಸಬೇಕು' ಎಂದು ಹೇಳಿದರು. ಶಿಕ್ಷಣ, ಸಂಘಟನೆ, ಹೋರಾಟ ವಿಮೋಚನೆಗೆ ಮುತ್ತಿನಂತಹ ಮೂರು ಸೂತ್ರಗಳಲ್ಲಿ ಮೊದಲ ಸೂತ್ರವೇ ಶಿಕ್ಷಣ. ಶತಮಾನಗಳಿಂದಲೂ ನಮ್ಮನ್ನು ಶಾಲೆಗೆ ಕಳಿಸದೇ ಜೀತದಾಳುಗಳನ್ನಾಗಿ ಮಾಡಿಕೊಂಡು ದುಡಿಸಿ ಕೊಳ್ಳುತ್ತಿದ್ದ ಕ್ರಮವನ್ನು ಮತ್ತು ಸಮಾಜದಲ್ಲಿ ಓಡಾಡುವಾಗ ತಲೆ ತಗ್ಗಿಸಿಕೊಂಡು ನಡೆದಾಡಬೇಕು ಎಂಬ ಸ್ವಯಂ ಘೋಷಿತ ನೀತಿಯನ್ನು ಅಚರಿಸಿಕೊಂಡು ಬರುತ್ತಿದ್ದನ್ನು ಸೂಕ್ಷ್ಮವಾಗಿ ವಿರೋಧಿಸುವುದನ್ನು ಈ ಸಾಲುಗಳಲ್ಲಿ ಕಾಣಬಹುದು.

ನಾವ್ ಮಾತ್ರ ಇಸ್ಕೊಲ್ ಹೊಂಗಾಗಿಲ್ಲ

ಜೀತಕ್ಕೋಗ್ಬೇಕು, ತಲೆ ಎತ್ತಾಂಗಿಲ್ಲ- ಬಗ್ಗಸ್ಬೇಕು. (ಒಂದು ಪದ)

ಜೊತೆಗೆ ನಾವು ವಿದ್ಯೆಯ ಅರಿವಿಲ್ಲದೆ ಎಲ್ಲವನ್ನು ಅವಮಾನದಿಂದ ತಲೆತಗ್ಗಿಸಿ ಒಪ್ಪಿಕೊಂಡು ಮೂಢರಾಗಿದ್ದೆವೆ. ಈಗ ಜ್ಞಾನ, ತಿಳುವಳಿಕೆಯಿಂದ ಆತ್ಮವಿಶ್ವಾಸ, ಸ್ವಾಭಿಮಾನದಿಂದ ತಲೆಯೆತ್ತಿ ಬದುಕುವುದನ್ನು ಕಲಿತಿದ್ದೇವೆ ಎಂಬುದರ ಸೂಚನೆಯು ಅದರಲ್ಲಿ ಅಡಕವಾಗಿದೆ. ಸರ್ಕಾರ ಈಗಲೂ ಕೂಡ ಜೀತಪದ್ಧತಿಯಿಂದ ನರಳುತ್ತಿರುವ ವ್ಯಕ್ತಿಗಳನ್ನು ಗುರುತಿಸಿ ಅವರಿಗೆ ಪುನರ್ ವಸತಿ ಕಲ್ಪಿಸಿಕೊಡುವುದರಲ್ಲಿ ಸೋಲುತ್ತಿದೆ ಎಂಬ ಬಗ್ಗೆ ಸದನದಲ್ಲೂ ಸಮರವನ್ನು ಸಾರಿದವರು ಡಾ.ಸಿದ್ಧಲಿಂಗಯ್ಯನವರು.

"ಚನ್ನಪಟ್ಟಣ ತಾಲ್ಲೂಕಿನಲ್ಲಿ ಸಿದ್ದಯ್ಯ ಎಂಬ ಜೀತದಾಳನ್ನು ಕೆಲವು ತಿಂಗಳುಗಳ ಹಿಂದೆ ಕಂಬಕ್ಕೆ ಕಟ್ಟಿ ಹೊಡೆದಿದ್ದಾರೆ. ರಾಯಚೂರು ಜಿಲ್ಲೆಯ ಗಂಗಾವತಿಯಲ್ಲಿ ಮತ್ತೊಬ್ಬ ಜೀತದಾಳನ್ನು ಹೀಗೆಯೇ ಕಂಬಕ್ಕೆ ಕಟ್ಟಿ ಹೊಡೆಯಲಾಗಿದೆ. ಈತನಿಗೆ ಮಡಿಕೆ ಚೂರಿನಲ್ಲಿ ಮಲವನ್ನು ಎತ್ತಿ ತಿನ್ನಿಸುವ ಪ್ರಯತ್ನ ಕೂಡ ಮಾಡಿದ್ದಾರೆ. ಮೈಸೂರು ಜಿಲ್ಲೆಯ ಹೆಚ್.ಡಿ.ಕೋಟೆ ತಾಲ್ಲೂಕಿನಲ್ಲಿ ಒಬ್ಬ ಜೀತದಾಳು ತಾನು ಜೀತ ಮಾಡುವುದಿಲ್ಲ ಎಂದು ಹೇಳಿದ್ದಾನೆ. ಪಂಚಾಯಿತಿ ಸೇರಿಸಿ ಅವನಿಗೆ ೨೦೦೦ರೂ. ದಂಡ ಹಾಕಿದ್ದಾರೆ. ಇದನ್ನೆಲ್ಲ ನೋಡಿದರೆ ಸಮಸ್ಯೆ ಹೇಗಿತ್ತೋ ಹಾಗೆಯೇ ಇದೆ ಅನ್ನಿಸುತ್ತದೆ. ಜೀತ ಪದ್ಧತಿ ರಾಜಾರೋಷವಾಗಿ ನಡೆಯುತ್ತಲೇ ಇದೆ"[೧೨] ಎಂಬ ಮಾಹಿತಿಯನ್ನು ನೀಡುವುದರ ಮೂಲಕ ಸರ್ಕಾರದ ಕಣ್ಣು ತೆರೆಸಿ ಅವರಿಗೆ ಪುನರ್ ವಸತಿ ಕಲ್ಪಿಸುವ ಹೋರಾಟವನ್ನು ಮಾಡಿದ್ದಾರೆ. ಹಾಗೆಯೇ ಮಂಡ್ಯ ಜಿಲ್ಲೆಯ ಹಂಗರ ಹಳ್ಳಿಯಲ್ಲಿ ೫ ಜನ ಜೀತದಾಳುಗಳಿಗೆ ೫ ವರ್ಷಗಳ ಕಾಲ ೧೫ ಕೆ.ಜಿ. ಸರಪಳಿಗಳನ್ನು ಹಾಕಿ ಬಂಧನದಲ್ಲಿಟ್ಟಿರುವುದನ್ನು ನೆನಪಿಗೆ ತರುತ್ತಾ ಇಂತಹ ಕ್ರೂರ ಪದ್ಧತಿಯಿಂದ ವಿಮುಕ್ತಿಯನ್ನು ಕೊಡಬೇಕೆಂದು ಒತ್ತಾಯಿಸಿದ್ದಾರೆ.

ಈ ಸಮಾಜದಲ್ಲಿ ಜೀತಪದ್ಧತಿ, ಮಲಹೊರುವ ಪದ್ಧತಿಯನ್ನು ಕಂಡು ಕನಿಕರ ಪಡುವುದಕ್ಕಿಂತ ಮೇಲ್ವರ್ಗದ ಜನ ಹಾಸ್ಯಾಸ್ಪದವಾಗಿ ಮಾಡಿಕೊಂಡು ನಗುವುದರ ವಿರುದ್ಧ ಸಿಟ್ಟಾಗುತ್ತಾರೆ.

ಕ್ವಳೆ ಜಾಗ್ದೇಲ್ ಮಲುಗ್ಸಿ ಕಕ್ಕಸ್ ಪೈಪ್
ಇತ್‌ಕಡೀಕ್ ತಿರುಸ್ಬ್ಯಾಡಿ
ಜೀತ್ ಸಾಲ ಬಡ್ಡಿ ಚಪ್ಪಡಿ ಏರಿ, ಅಪ್ಪಚ್ಚಿ
ಮಾಡಿ ಅಡ್ಕಂಡ್ ನಗಬ್ಯಾಡಿ" (ಗಲ್ಲಗಳು)

ಶ್ರೇಣಿಕೃತ ಸಾಮಾಜಿಕ ವ್ಯವಸ್ಥೆಯಲ್ಲಿ ತುಳಿತಕ್ಕೆ ಒಳಗಾದ ಶೋಷಣೆಯ ಶೂಲದಲ್ಲಿ ನರಳಿದ, ದನಿ ಕಳೆದುಕೊಂಡ ಅಸ್ಪೃಶ್ಯರಿಗೆ ನಿಜವಾಗಿಯೂ ಸಂತೋಷ, ಸಡಗರದ ಹಬ್ಬವನ್ನು ಆಚರಿಸುವುದು.

ಸುಲ್ದೋರ್ನ ಸುಲಿಯೋ ದಿನಾ ಅದು

ಅವತ್ತು ದಲಿತರ ಹಬ್ಬ" (ಹಬ್ಬ)

ಎಂಬ ಸಾಲುಗಳಲ್ಲಿ ವ್ಯವಸ್ಥೆಯ ವಿರುದ್ಧ ದಲಿತರೊಡಲೊಳಗೆ ಸಿಟ್ಟು ಕುದಿಯುತ್ತಿದ್ದ ಶತಮಾನ ಧ್ವಂಸ ಮಾಡಬೇಕೆಂಬ ಉತ್ಸಾಹ, ತವಕ, ಕ್ರಾಂತಿಯ ಮುನ್ಸೂಚನೆಯನ್ನು ನೀಡಿದ್ದಾರೆ. "ಇದರಲ್ಲಿನ ಕವಿತೆಗಳಲ್ಲಿ ಸ್ಫೋಟಿಸುತ್ತಿರುವ ರೊಚ್ಚು, ಈ ದೇಶದ ಇತಿಹಾಸದ ಒಂದು ಭಾಗವೆಂಬುದನ್ನು ಮರೆಯಬಾರದು. ಮತ್ತು ಆ ರೊಚ್ಚನ್ನು ಹಾಗೆ ಅಭಿವ್ಯಕ್ತಿಸಲು ಸಿದ್ಧಲಿಂಗಯ್ಯನವರಿಗೆ ಹಕ್ಕಿದೆ" ಎಂಬ ಜಿ.ಎಸ್.ಶಿವರುದ್ರಪ್ಪನವರ ಮಾತುಗಳು ದಲಿತರ ಸಾಮಾಜಿಕ ನ್ಯಾಯದ ಹಿನ್ನೆಲೆಯಲ್ಲಿ ಮಹತ್ವ ಪೂರ್ಣವಾದ ಮಾತುಗಳಾಗಿವೆ ಎಂಬುದನ್ನು ತಿಳಿಯಬಹುದಾಗಿದೆ.

ರೈತರ ಬೆವರ ನೆಕ್ಕಿ ನೆಕ್ಕೊದಿದ

ಜಮೀನುದಾರರ ಜೊತೆಗಾರೆರೆ

ಕಾರ್ಮಿಕರ ರಕ್ತದ ರೆವೆವುಂಡೆಯ ಉಂಡು ಕಾರಿನ

ಹಾರನ್ನಿನಂತೆ ತೇಗುವ ಮಾಲಿಕರ ಮಿಂಡಗಾತಿ (ಕನ್ನಡವ್ವನಿಗೆ)

ಕನ್ನಡ ತಾಯಿ ರೈತ, ಕೂಲಿ ಕಾರ್ಮಿಕರಿಗೆ ಈ ನಾಡಿನ ದಲಿತರಿಗೂ ತಾರತಮ್ಯವನ್ನು ತೋರುತ್ತಾಳೆ. ಆಕೆ ಯಾವಾಗಲೂ ಜಮೀನುದಾರರ, ಉಳ್ಳವರ ಪರವಾಗಿರುವವಳೇ ವಿನಹಃ ಇಲ್ಲದವರ ಕೈ ಹಿಡಿದು ನಡೆಸುವ ಶಕ್ತಿ ಆಕೆಗಿಲ್ಲ. ಆ ಶಕ್ತಿಯನ್ನು ಕೂಡ ಮೇಲಿನವರೇ ಕಸಿದುಕೊಂಡು ಬಿಟ್ಟಿದ್ದಾರೆ. ಇಂತಹ ಕನ್ನಡವ್ವನಿಗೆ 'ಯಂಗೆ ಕಯ್ಯೆತ್ತಿ ಮುಗಿಯಲೆ ನಿಂಗೆ? ಎಂದು ಕನ್ನಡ ತಾಯಿಯನ್ನೇ ಪ್ರಶ್ನಿಸುವ, ಅಸಮಾನತೆಗೆ ಯಾರೇ ಕಾರಣವಾದರೂ ಕೂಡ ಅವರ ವಿರುದ್ಧ ನಮ್ಮ ದನಿ ಇರುತ್ತದೆ ಎಂಬುದನ್ನು ತಿಳಿಯಪಡಿಸಿದ್ದಾರೆ.

ದಲಿತರ ಶೋಷಣೆಗೆ ದಬ್ಬಾಳಿಕೆಗೆ ಬಡತನದ ಸ್ಥಿತಿಗೆ ನಮ್ಮ ಪೂರ್ವಜನ್ಮದ ಕರ್ಮ, ಹಣೆಬರಹವೇ ಕಾರಣ ಎಂಬ ನೀತಿಯನ್ನು ಪುರೋಹಿತಶಾಹಿ ವರ್ಗ ಎಲ್ಲರ ತಲೆಗಳಲ್ಲಿ ತುಂಬಿ ಈ ಸ್ಥಿತಿಯನ್ನು ಅನುಭವಿಸುತ್ತ ಬದುಕುವ ಅವರ ದಾಸ್ಯವನ್ನು ಮಾಡುವುದು ನಮ್ಮ ಕೆಲಸವೆಂಬುದಕ್ಕೆ ತಿಲಾಂಜಲಿ ಹಾಡುವ ಹಾಗೆ "ಹಣೆ ಬರವು ಎಂಬ ನಾಟಕವು" ಕವಿತೆಯಲ್ಲಿ ವ್ಯಕ್ತಪಡಿಸಲಾಗಿದೆ.

ಅ. ಹಣೆಬರವು, ಹಣೆಬರವು

ಬ್ರಮ್ಮನು ಹಣೆವಳ್ಗೆ ಬರದವನೆ

ಬರಸ್ಕಂಡು ಬಂದಿತ್ತು ಅದೆ ಕಾಣ್ಲ

ಆ. ಕೆಂಪಿಂಕೇಲ್ ಬರುದಿರ್ಲಿ ಕಪ್ಪಿಂಕೇಲ್ ಬರುದಿರ್ಲಿ

ಅಳುಸ್ತೀನಿ ನನ್ತಾವು ರಬ್ಬರ್ರದೆ"

ಈ ಹಿಂದಿನ ಎಲ್ಲಾ ಕಂದಾಚಾರಗಳನ್ನು ನನ್ನ ಬದುಕಿನ ಹಣೆಬರಹವನ್ನು ನಾನೇ ಬರೆದು ಕೊಳ್ಳುತ್ತೇನ್ರೆ ನಮ್ಮ ಬದುಕನ್ನು ನಾವೇ ರೂಪಿಸಿಕೊಳುತ್ತೇವೆ. ಇಂತಹ ಶಕ್ತಿ, ಬುದ್ಧಿ ನಮಗಿದೆಂಬುದನ್ನು ತೋರಿಸಿದ್ದಾರೆ ಡಾ.ಅಂಬೇಡ್ಕರ್‌ರವರು. ಅವರು ಕೂಡ ಇದೇ ಮಾತುಗಳನ್ನು ಹೇಳಿದ್ದರು. ನಿಮಗೆ ನೀವೇ ಶಿಲ್ಪಿಗಳು. ನಿಮ್ಮ ಹಣೆಬರಹಗಳನ್ನು ನೀವೇ ಬರೆದುಕೊಳ್ಳಬೇಕು. ಯಾರೂ ಬರೆದಿಲ್ಲ. ಯಾರೂ ಬರೆಯುವುದಿಲ್ಲ ಎಂಬ ಆತ್ಮಸ್ಥೈರ್ಯದ ಆತ್ಮವಿಶ್ವಾಸದ ಸ್ವಾಭಿಮಾನದ ಮಾತುಗಳೇ ಕೆಳವರ್ಗದ ಜನಕ್ಕೆ ದಾರಿದೀಪಗಳಾಗಿವೆ. ತುಳಿತಕ್ಕೊಳಪಟ್ಟ ಸಮುದಾಯ ಇನ್ನೂ ಎಚ್ಚರಗೊಳ್ಳದೆ ತನ್ನ ಸ್ಥಿತಿಯನ್ನು ಒಪ್ಪಿಕೊಂಡು ಇದೇ ನನ್ನ ಬದುಕೆಂದು ಬದುಕು ನಡೆಸುತ್ತಿದೆ. ಇದೊಂದು ದುರಂತವೇ ಸರಿ. ದಮನಕ್ಕೆ ಒಳಗಾದ ಜನ ಎಚ್ಚರಗೊಳ್ಳದೇ ಹೋದರೆ ಶೋಷಕ ಸಮಾಜದ ಬದಲಾವಣೆ ಸಾಧ್ಯವಾಗುವುದಿಲ್ಲ. ಅಂಬೇಡ್ಕರ್‌ರವರ ಸಮಾನತೆಯ ಸಮಾಜದ ಕನಸಿನ ಸಾಮಾಜಿಕ ನ್ಯಾಯದ ದೃಷ್ಟಿಯಿರುವ ಸಂವಿಧಾನದಲ್ಲಿ ಕಲ್ಪಿಸಿರುವ ಮೀಸಲಾತಿಯು ಇದೇ ಉದ್ದೇಶದಿಂದ ಕೂಡಿರುವುದು. ಇಂತಹ ಮೀಸಲಾತಿಯ ವಿರುದ್ಧ ಈಗಲೂ ಅಸಮಾಧಾನದ ಹೊಗೆಯಾಡುತ್ತಿರುವುದನ್ನು ಗಮನಿಸಬಹುದಾಗಿದೆ. ಅದನ್ನೇ ಸಿದ್ಧಲಿಂಗಯ್ಯನವರು 'ಪಂಚಮ' ನಾಟಕದಲ್ಲಿ ಹಯವದನರಾವ್ ಪಾತ್ರದ ಮುಖೇನ ಅಭಿವ್ಯಕ್ತಿಪಡಿಸಿದ್ದಾರೆ. "ಕುಡಕ್ ನನ್ ಮಕ್ಳು ಬಂದ್ಬಿಟ್ಟವೆ. ನಮ್ಮ ತಲೆ ತಿನ್‌ತವೆ ಸಾರ್. ಏನೋ ರಿಜರ್‌ವೇಷನ್ ಕನ್‌ಸೇಷನ್ ಅಂತಾ ಡಿಗ್ರಿ ಮಾಡ್ಬಿಟ್ಟವೆ. ತಲೇಲಿ ಏನೂ ಇರಲ್ಲಾ . . . ಅನ್‌ಕಲ್ಚರ್ಡ್ ಜನಗಳು. ಕೊಳಕು ಛೀ . . . ಆಫೀಸ್‌ನಲ್ಲಿ ಹೆಂಗೆ ನಡ್ಕೋಬೇಕು ಅನ್ನೋ ಕಾಮನ್‌ಸೆನ್ಸ್ ಇಲ್ಲ. ಶೂದ್ರ ಮುಂಡೇವು."[೧೪] ಇಲ್ಲಿ ದಲಿತನೊಬ್ಬ ಬೌದ್ಧಿಕ ಪರಿಶ್ರಮದಿಂದ ಗಳಿಸಿದ ವಿದ್ವತ್ತು, ಸವರ್ಣೀಯರ ದೃಷ್ಟಿಯಲ್ಲಿ ಮೀಸಲಾತಿಯಿಂದ ಪಡೆದ ವಿದ್ವತ್ತು ಆಗಿರುತ್ತದೆ. ಜೊತೆಗೆ ಭಾರತೀಯರ ಜಾತಿ ವ್ಯವಸ್ಥೆಯಲ್ಲಿ ದಲಿತರ ಸ್ಥಿತಿ ಶ್ರೇಣೀಕೃತ ಪದ್ಧತಿಯನ್ನು ಸ್ಥಿರವಾಗಿಸುವ ಮೂಲಭೂತ ವಾದಿಗಳ ಹುನ್ನಾರ ಮತ್ತು ಅವರಿಗೆ ದಲಿತರ ಬಗೆಗೆ ಇರುವ ಸಿಟ್ಟು ಅಸೂಯೆಯನ್ನು ತಿಳಿಸುತ್ತದೆ. ಜೊತೆಗೆ ದಲಿತರ ಎಚ್ಚರ ಮತ್ತು ಏಳ್ಗೆಯನ್ನು ಅಧಿಕಾರಸ್ಥ ಮತ್ತು ಜಾತಿವಾದಿ ಮನಸ್ಸುಗಳು ಸಹಿಸದಿರುವ ಸ್ಥಿತಿಯನ್ನು ತಿಳಿಯಪಡಿಸುತ್ತದೆ.

'ಪಂಚಮ' ನಾಟಕದಲ್ಲಿ ಎಚ್ಚರಗೊಳ್ಳದ ದಲಿತರನ್ನು ಕುರಿತು ರೂಪಕಗಳಲ್ಲಿ ಹಯವದನರಾವ್ ನುಡಿಯುತ್ತಾರೆ. ಸಂದರ್ಶನಕ್ಕೆ ಬಂದ ೫ ಜನರಲ್ಲಿ ಮೊದಲನೆಯವಳು ಪುಟ್ಟಲಕ್ಷಮ್ಮ. ಆಕೆ ನಮ್ಮೂರಿಗೆ ಲೈಟ್ ವ್ಯವಸ್ಥೆ ಇನ್ನೂ ಬಂದಿಲ್ಲ ಎಂದು ಹೇಳಿದಾಗ ಅದಕ್ಕೆ ಹಯವದನರಾವ್ "ನೋಡ್ರಿ ನಿಮ್ಮೂರಿಗೆ ಲೈಟ್ ಬಂದಿಲ್ಲ. ಸ್ವತಂತ್ರ್ಯ ಬಂದು ೩೧ ವರ್ಷ ಆದ್ರೂ ಲೈಟ್ ಬಂದಿಲ್ಲ. ಇದೇ ತೋರ್‍ಸುತ್ತೆ ಹರಿಜನ ಗಿರಿಜನರು ಭಾರತ ದೇಶದಲ್ಲಿ ಕತ್ತಲೆಯಲ್ಲಿ ಭೂತ ಪ್ರೇತಗಳಂತೆ ವಾಸ ಮಾಡುತ್ತಾ ಇದ್ದಾರೆ. ಅನ್ನೋದನ್ನ, ಅವ್ರುಗೆ ಹಿಡಿದಿರುವಂಥ ಘೋರಾಂಧಕಾರದ

ಭೂತವನ್ನು ಬಿಡಸ್‌ಬೇಕು. ಅವರನ್ನ ಮನುಷ್ಯರನ್ನಾಗಿ ಮಾಡ್ಬೇಕು. ಅಂತ ಈ ಇಂಟ್ರವ್ಯೂ ಕರ‍್ದಿದ್ದೀವಿ"[೧೫] ಇಲ್ಲಿ ಲೈಟ್ ಜ್ಞಾನ ಬೆಳಕಿನ ಪ್ರತೀಕವಾಗಿದೆ. ಈಗಲೂ ದಲಿತರು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ತಮ್ಮ ಸ್ಥಿತಿ-ಗತಿಗಳ ಬಗ್ಗೆ ಎಚ್ಚರಗೊಳ್ಳದೆ ನಿದ್ದೆಯಲ್ಲಿದ್ದಾರೆ ಎಂಬ ವಿಡಂಬನೆಯನ್ನು ಕಾಣಬಹುದಾಗಿದೆ. ದಲಿತ ಒಮ್ಮೆ ಎಚ್ಚೆತ್ತುಕೊಂಡರೆ ಎಂತ ಕಾರ್ಯಕ್ಕೂ ಸಿದ್ಧನಾಗಿ ಅವನು ಯಾವ ರೂಪವನ್ನು ತಾಳುತ್ತಾನೆಂದರೆ

"ಎಲ್ಲಿದ್ದರೋ ಅವರು ಯಂಗಿದ್ದರೂ ಅವರು
ಎಚ್ಚೆತ್ತ ಸಿಂಹಗಳು ನನ್ನ ಜನರು
ಎಷ್ಟು ಲೋಕದ ಕನಸ ಕಾಣುತ್ತಿದ್ದರೋ ಅವರು
ಎದ್ದ ಬಿರುಗಾಳಿಗಳು ನನ್ನ ಜನರು (ಕೆಂಪು ಸಮುದ್ರ)
ಈ ಕವಿತೆಯಲ್ಲಾಗಿ ಹಾಗೆಯೇ
ಕೂಳಿಲ್ಲದೆ ಕೊರಗುವವರು
ನಾವು ಹಸಿದ ಹುಲಿಗಳು
ಮೇಲಿರುವವರ ಸುಳ್ಳು ಸುಲಿದು
ನೆಗೆಯಲಿರುವ ಕಲಿಗಳು (ನಾವು) ಈ ಕವಿತೆಯ ಜೊತೆಗೆ
ನಿಮ್ಮ ಬೇಟೆಯುತ್ಸವದಲಿ ಕುರಿಗಳಾಗಿ ಸತ್ತ ಜನರು
ಬಂದಿರುವರು ಹುಲಿಗಳಾಗಿ ಗರ್ಜನೆಯನ್ನು ಕೇಳಿರಿ (ಬಂದಿರುವುದು ಹುಲಿಗಳಾಗಿ)

ಎಂಬ ಕವಿತೆಗಳಲ್ಲಿ ದಲಿತರು ಹುಲಿ, ಸಿಂಹಗಳಾಗಿ ಜಾಗೃತಿಯಿಂದ ಎಚ್ಚೆತ್ತು ಬಂದು ನೋಡುವವರ ಎದೆ ನಡುಗುವಾಗೆ, ಶೋಷಿತರ ಕಪಟವನ್ನು ಬೀದಿಗೆಳೆದು ಸರ್ವನಾಶ ಮಾಡುವ "ಅನ್ಯಾಯಕೆ ಅನ್ಯಾಯ ಮುಯ್ಯಿಗೆ ಮುಯ್ ಮುಂದಿದೆ" ಎಂಬುದನ್ನು ತೋರಿಸುವ ವೀರತನಕ್ಕೆ ಮುನ್ನುಗುವ ಇವರು ಅಂಬೇಡ್ಕರ್ ವಂಶಸ್ಥರಾಗಿ ಅನ್ಯಾಯ, ಶೋಷಣೆ, ಮೇಲು ಕೀಳು ತಾರತಮ್ಯ ಮನೋಭಾವನೆಯನ್ನು ಖಂಡಿಸುತ್ತಾ ಸಮಾಜದಲ್ಲಿ ಸಮಾನತೆಯನ್ನು ತರುವ ಹೋರಾಟವನ್ನು ಮಾಡುತ್ತಾರೆ. ಅದಕ್ಕಾಗಿ

"ಬೀದಿಯಲ್ಲಿ ಗಲ್ಲಿಯಲ್ಲಿ
ಬೇಲಿ ಮಳೆಯ ಮರೆಗಳಲ್ಲಿ
ಯಜಮಾನರ ಹಟ್ಟಿಯಲ್ಲಿ ಧಣಿಕೊಡುವ
ಪಟ್ಟದಲ್ಲಿ
ಎಲ್ಲೆಲ್ಲೂ ನನ್ನ ಜನ ನೀರಿನಂತೆ ನಿಂತರು

ಹೀಗೆ ಜನಗಳು ಅಂದು ಅಂಬೇಡ್ಕರ್‌ರವರ ಮಾತುಗಳಿಗೆ, ಹೋರಾಟಗಳಿಗೆ, ಶೋಷಿತ ಜನ ಬಂದಂತೆ ಕರ್ನಾಟಕದಲ್ಲಿ ಸಿದ್ಧಲಿಂಗಯ್ಯನವರ ಹಾಡುಗಳಿಂದ ದಲಿತ ಸಮುದಾಯಗಳು ರೊಚ್ಚಿದ್ದು "ಹೋರಾಟದ ಸಾಗರಕ್ಕೆ ಸಾವಿರಾರು ನದಿಗಳು ಬರುವಾಗೆ ಇಲ್ಲಿನ ದಬ್ಬಾಳಿಕೆ, ಶೋಷಣೆ, ದಾಸ್ಯ, ಸಂಕೋಲೆಗಳ ವಿರುದ್ಧದ ಚಳುವಳಿಯ ಹೋರಾಟಕ್ಕೆ ಬಂದರು.

ಭಾರತದಲ್ಲಿ ಡಾ.ಅಂಬೇಡ್ಕರ್ ಕರ್ನಾಟಕದಲ್ಲಿ ದಲಿತ ಚಳುವಳಿ ಹೋರಾಟಗಳು ಹುಟ್ಟಿಗೆ ಕಾರಣ. ಈ ಸಮಾಜದ ಅಸಮಾನತೆಯಾಗು ಇದರಿಂದ ಮುಕ್ತಿ ಪಡೆದು ಸಮಾನರಾಗಿ ಬದುಕುವ ಹವಣಿಕೆಯನ್ನು ಇತಿಹಾಸದುದ್ದಕ್ಕೂ ಕ್ರಾಂತಿಯ, ಹೋರಾಟದ ಹಿನ್ನೆಲೆಗಳನ್ನು ಗಮನಿಸಿದಾಗ ನಮಗೆ ಅದರ ಅರಿವಾಗದಿರದು. "ಸರ್ವರಿಗೂ ಸಮಪಾಲು-ಸರ್ವರಿಗೂ ಸಮಬಾಳು" ಎಂಬ ನೀತಿಯನ್ನು ತಂದು ಭ್ರಾತೃತ್ವದ ನೆಲೆಗಟ್ಟಿನಲ್ಲಿ ಜೀವನ ಸಾಗಿಸುವ ಪ್ರಯತ್ನಗಳನ್ನು ಪ್ರತಿಯೊಬ್ಬ ಮಹಾತ್ಮರ ತತ್ವಗಳ ಹಿನ್ನೆಲೆಯಲ್ಲಿರುವುದನ್ನು ನಾವು ಗಮನಿಸಿರುತ್ತೇವೆ.

ಮನುಷ್ಯ ಪ್ರಕೃತಿಯ ಶಿಶು. ಅಲ್ಲಿನ ನೀರು, ಗಾಳಿ, ಬೆಳಕು, ಭೂಮಿ, ಆಕಾಶ, ಬೆಂಕಿ ಯಾವುದೂ ಕೂಡ ಮನುಷ್ಯನನ್ನು ತಾರತಮ್ಯವಾಗಿ ನೋಡದೇ ಸಮನಾಗಿ ನೋಡಿಕೊಂಡು ಕಾಪಾಡುತ್ತದೆ. ಆದರೆ ಅದರ ಕೂಸಾದ ಮನುಷ್ಯ ಮಾತ್ರ ತನ್ನ ಸ್ವಾರ್ಥಸಾಧನೆಗಾಗಿ ಮನುಷ್ಯ ಮನುಷ್ಯನ ನಡುವೆ ಜಾತಿಯ ಕಂದಕಗಳನ್ನು ಏರ್ಪಡಿಸಿ ಪ್ರಕೃತಿಗೆ ವಿರುದ್ಧವಾಗಿ ಬದುಕುವ ಪಾಠವನ್ನು ಕಲಿತಿದ್ದಾನೆ. ಇದು ಅವಮಾನವೀಯವಾದದ್ದು. ಇಂತಹ ಕೃತ್ಯದ ವಿರುದ್ಧ ಜಾತಿ, ವರ್ಣ ವರ್ಗದ ವಿರುದ್ಧ ಆಕ್ರೋಶದ ಕಿಡಿಕಾರಿದವರು ಡಾ.ಸಿದ್ಧಲಿಂಗಯ್ಯನವರು. ಅವರು ಸಾಮಾಜಿಕ ಸಮಾನತೆಯ ಬಗ್ಗೆ ಸದಾ ಯೋಚಿಸುವವರು. ಅದನ್ನು "ಕಪ್ಪು ದೇವತೆಯ ಕಣ್ಣಾಗವಲು" ಕವಿತೆಯಲ್ಲಿರುವ ತಾತ್ವಿಕ ಒಳನೋಟ ಹೀಗೆ ಹೇಳುತ್ತದೆ.

"ಪ್ರೀತಿಯ ಗಂಗೆ ಹರಿಯುತಲಿರಲಿ
ಅಂತರಂಗದ ಕಣಿವೆಯಲ್ಲಿ
ಮೈತ್ರಿಯ ಮಲ್ಲಿಗೆ ಪರಿಮಳಬೀರಲಿ
ಎದೆಯಾಳದ ಹೂದೋಟದಲಿ" (ಕಪ್ಪು ದೇವತೆಯ ಕಣ್ಣಾಗವಲು)

ಇಲ್ಲಿ ಪ್ರೇಮ, ಪ್ರೀತಿ, ಮೈತ್ರಿ, ಕರುಣೆ ಮೊದಲಾದ ಮಾನವೀಯ ಮೌಲ್ಯಗಳು ಮನುಷ್ಯ ಮನುಷ್ಯನ ಅಂತರಂಗದಲ್ಲಿ ಏರ್ಪಟ್ಟಾಗ ಈ ಕ್ರಾಂತಿ, ಹೋರಾಟ ಯಾವುದರ ಅವಶ್ಯಕತೆಯೇ ಬರುವುದಿಲ್ಲ. ಅದು ಸಮಾಜದ ಸಮಾನತೆಗಾಗಿ ಕ್ರಾಂತಿ ಅನಿವಾರ್ಯವೆಂಬುದನ್ನು ಹೇಳುತ್ತಾರೆ.

ಬಡ ಜನಗಳ ಬಂಡಾಯದಿ
ನಿನಗೆ ಮುತ್ತ ನೊ ತ್ತುವೆ

ಕ್ರಾಂತಿಯ ಜಯವ ಪಡೆಯವವರೆಗು

ನಿನ್ನ ಹಿಂದೆ ಸುತ್ತೋವೆ (ನನ್ನವಳಿಗೆ)

ಸಮಾಜದಲ್ಲಿ ಎಲ್ಲಿಯವರಿಗೆ ಬಡ ಜನರು ನೆಮ್ಮದಿಯಿಂದ ಸ್ವಾತಂತ್ರ್ಯವಾಗಿ ಬದುಕಲು ಸಾಧ್ಯವಾಗುವುದಿಲ್ಲವೋ ಅಲ್ಲಿಯವರಿಗೆ ಶ್ರೀಮಂತರು ಬಡವರನ್ನು, ಕೂಲಿ, ಕಾರ್ಮಿಕ, ರೈತರನ್ನು ಅವರು ನಮ್ಮಂತೆ ಮನುಷ್ಯರು ಎಂದು ಪ್ರೀತಿಯಿಂದ ನೋಡಲಾರರೋ ಅಲ್ಲಿಯವರಿಗೆ ಕ್ರಾಂತಿಗಳು ಸಮಾಜದ ತಿದ್ದುವಿಕೆಗೆ ಬೇಕಾಗಿದೆ ಎಂಬುದನ್ನು ತಿಳಿಸುತ್ತಾರೆ.

ಪ್ರಕೃತಿಯ ಪ್ರೀತಿ ಶಾಶ್ವತವಾಗಿದ್ದು, ಅದಕ್ಕೆ ನಮ್ಮ ಹಿಂದಿನ ಹಿರಿಯರು ಜನಪದರು ದೈವವೆಂದು ಪೂಜಿಸುತ್ತಾ ಬಂದಿದ್ದರು. ಆ ಪ್ರೀತಿಯ ಮುಂದೆ ಎಲ್ಲವೂ ಶೂನ್ಯವೇ ಆಗುತ್ತದೆ.

"ಆಕಾಶಕಾಯದಲಿ ಸೂರ್ಯ ಚಂದ್ರರು ಭೂಮಿ

ಇಲ್ಲವಾಗುವರಂತೆ ಒಂದು ದಿವಸ

ಹದಿನಾಲ್ಕು ಲೋಕಗಳು ಅಳಿದುಹೋದರು ತಾಯೆ

ನನಗೆ ಬೆಳಕಾಗುವುದು ನಿನ್ನ ಪ್ರೀತಿ (ಪ್ರಕೃತಿ)

ಅದ್ದರಿಂದ ನಾವೆಲ್ಲರೂ ಪ್ರಕೃತಿಯಿಂದ ಪಾಠವನ್ನು ಕಲಿತು ನಡೆಯಬೇಕಾಗಿದೆ. ಈ ಸಮಾಜವನ್ನು ನಡೆಸಬೇಕಾಗಿದೆ. ಅದ್ದರಿಂದ ನಮ್ಮಲ್ಲಿರುವ ದ್ವೇಷ, ಅಸೂಯೆ, ಕೋಪ, ಮೇಲು-ಕೀಳು, ಜಾತಿ-ಮತ, ಕುಲ, ಗೋತ್ರಗಳು ಇಲ್ಲವಾಗಲಿ ಅವೆಲ್ಲವೂ

"ಅಪರಿಚಿತ ಕಣಿವೆಗಳಲ್ಲಿ ಪ್ರೀತಿಯ ಪ್ರವಾಹ ಉಕ್ಕಿ

ಭೀತಿಯ ಬಂಡೆಗಳು ಕರಗಲೆಂದು

ನನ್ನ ಕವಿತೆ ಕನವರಿಸುತ್ತದೆ" (ಕನವರಿಕೆ)

ಅಸಮಾನತೆ ನಶಿಸಲಿ, ಪ್ರೀತಿ ಬೆಳೆದು, ಸಮಾನತೆ ಉಳಿಯಲಿ ಎಂದು ಕವಿ ಸದಾ ಪರಿತಪಿಸುವ ಕನವರಿಕೆಯಾಗಿದೆ. ಆದ್ದರಿಂದ ಸಮಾಜದಲ್ಲಿ ಪ್ರೀತಿ ಸ್ನೇಹದ ಬೆಸುಗೆಯಾಗಿ ಶಾಂತಿ, ಸಹಬಾಳ್ವೆಯ ವಾತಾವರಣ ನಿರ್ಮಾಣವಾಗಲಿ ಎಂಬುದು ಆಶಯವಾಗಿದೆ.

ನೋವಿನ ಹಾಡಿನ ಕತ್ತಲನಾಡಿನ

ಬೆಳಕನು ಅರಸುವ ಹಕ್ಕಿಗಳು (ಹಕ್ಕಿಗಳು)

ಈ ಕತ್ತಲೆಯ ಹಕ್ಕಿಗಳಿಗೆ ಬದುಕುವ ಅವಕಾಶವನ್ನು ನೀಡಿ, ಇವತ್ತಿನ ನಾಗರೀಕತೆಯಲ್ಲಿ ಮಾನವೀಯ ಗುಣಗಳನ್ನು ಬೆಳೆಸಿಕೊಂಡು ಮನುಷ್ಯ ಜೀವನವನ್ನು ಸಾರ್ಥಕಗೊಳಿಸಿಕೊಳ್ಳುವ ಸಂದರ್ಭವಿದೆ.

ಜಾತಿವೈರದ ಜ್ವರವು ಏರುತಿಹುದಣ್ಣ

ಕೋಮುದ್ವೇಷದ ಬೆಂಕಿ ಉರಿಯುತಿಹುದಣ್ಣ

ಈ ಬೆಂಕಿಯಾರಿಸಲು ಪ್ರೀತಿ ಗಂಗೆಯು ಬೇಕು

ಎಲ್ಲಾರೂ ಅಗ್ನಿಶಾಮಕರಿಂದು ಆಗಬೇಕು (ಅಗ್ನಿಶಾಮಕರು)

ಎಂದು ಕವಿಯ ಬಯಕೆಯಾಗಿದೆ. ಜಾತಿವೈಷಮ್ಯದಿಂದ ಜನರ ಮನಸ್ಸುಗಳು ಕೋಪದಲ್ಲುರಿಯುತ್ತಿದೆ. ಅದನ್ನು ನಂದಿಸಬೇಕಾದರೆ ಪ್ರೀತಿಯ ಗಂಗೆ ಬೇಕು. ಮೇಲಿನ ಬೆಂಕಿಯನ್ನು ನೀರಿನಿಂದ ಶಮನಮಾಡಿ ಸುಮ್ಮನಾಗಬಹುದು. ಆದರೆ ಮನದ ಕೋಮುವಾದ-ಜಾತಿವಾದದ ಬೆಂಕಿಗೆ ಪ್ರೀತಿಯ ಗಂಗೆ ಮನದಲ್ಲಿ ಮೂಡಲೇ ಬೇಕಾಗಿದೆ. ಅದ್ದರಿಂದ ನಾವೆಲ್ಲರೂ ಪ್ರೀತಿ ಮಂತ್ರವನ್ನು ಜಪಿಸುವ ಸಾಧಕರಾಗಬೇಕೆಂದು ಮೇಲಿನ ಕವಿತೆ ಅಭಿವ್ಯಕ್ತಿಪಡಿಸುತ್ತದೆ.

ಸಮಾಜದಲ್ಲಿ ನೊಂದು ಬೆಂದವರ ಬಗ್ಗೆ ಕಾಳಜಿಯನ್ನು, ಅವರ ನೋವಿಗೆ ಸ್ಪಂದಿಸುವ ಗುಣವನ್ನು ನಾವೆಲ್ಲರೂ ಮೈಗೂಡಿಸಿಕೊಂಡು ನಿಜವಾಗಿಯೂ ಮನುಷ್ಯರಾಗಬೇಕಾಗಿದೆ.

ನೊಂದವರಿಗೆ ನಲಿವು ಹಸಿದವರಿಗೆ ಅನ್ನ

ಬಸವಳಿದ ತಲೆಗೆ ಸೂರು

ಬಿದ್ದವರ ಮುಖದ ಕಂಬನಿಯ ತೊಳೆದು

ಕೈಯೆತ್ತಿ ಬರಲಿ ನೂರು (ಮಂಕಾದ ಜನ)

ಹಸಿದವನಿಗೆ ಅನ್ನವನ್ನು ನೀಡಿ, ಬೀದಿಯಲ್ಲಿ ಬಿದ್ದವನಿಗೆ ಒಂದು ಸೂರು, ದುಃಖಿತನ ಕಣ್ಣೀರನ್ನು ಒರೆಸುವ ಮನುಷ್ಯ ಸಂಬಂಧದ ಸಮಾಜ ಮತ್ತೆ ಮತ್ತೆ ಬರಲಿ, ಅದು ಹೆಚ್ಚು ಹೆಚ್ಚಾಗಲಿ. ಸಮಾಜದಲ್ಲಿ ಪ್ರೀತಿ-ಭಾವೈಕ್ಯತೆ, ಭಾವನಾತ್ಮಕ, ಸಂಬಂಧಗಳು ಗಟ್ಟಿಗೊಳ್ಳಲಿ, ಯಂತ್ರದ ಬದುಕು ಟೊಳ್ಳೆಂದು ಜನ ತಿಳಿಯಲಿ, 'ಸಂಬಂಜ ಅನ್ನೋದು ದೊಡ್ಡದು ಕನಾ' ಎಂಬ ದೇವನೂರು ಮಹಾದೇವರ ಮಾತನ್ನು ಕಲಿಯಲಿ ಎಂಬ ಆಶಯಗಳು ವ್ಯಕ್ತವಾಗಿದೆ.

ಅದಕ್ಕೆ ಪ್ರಕೃತಿಯು ಸಹ ಸಾಮರಸ್ಯದ ಬದುಕಿನ ಸಂಕೇತವಾಗಿ ವಸಂತಮಾಸ ತರುತ್ತದೆ. ನಾವು ಅದರ ಪ್ರತೀಕವಾಗಿ 'ಯುಗಾದಿ'ಯನ್ನು ಮಾಡುತ್ತೇವೆ. ಅಲ್ಲಿ ಪ್ರತಿ ಯುಗಾದಿಯು ನಮಗೆ ಹೊಸತನವನ್ನು ಚೈತನ್ಯವನ್ನು ತರುತ್ತದೆಂದು ನಂಬಿತ್ತೇವೆ. ಅದಕ್ಕೆ

ನವಭಾವದ ನವ ಬದುಕನು

ಹೊಸ ಯುಗಾದಿ ತೆರೆಯಲಿ

ಪ್ರೀತಿಯ ಬೆಳದಿಂಗಳಲಿ

ಭೂಮಿಯು ಮೈಮರೆಯಲಿ (ಯುಗಾದಿ)

ಕವಿತೆಯ ಕೊನೆಯಲ್ಲಿ ದೇಶಕ್ಕೆ ಬಿದ್ದಿರುವ ಜಾತಿ, ವರ್ಗ ವೈಷಮ್ಯಗಳು ಅಳಿಸು ದೇಶದ ಕೋಮು ಗಲಭೆಗಳನ್ನು ಸೃಷ್ಟಿಸಿ, ಸಮಾಜದಲ್ಲಿ ಅಶಾಂತಿಯನ್ನು ಉಂಟು ಮಾಡಿ ದೇಶದ ಉನ್ನತಿಗೆ ಮಾರಕವಾಗಿರುವ ಸಾಮಾಜಿಕ ಸಮಸ್ಯೆಗಳೆಲ್ಲ ಕೊನೆಗೊಂಡು, ನವ ಸಮಾಜ ನಿರ್ಮಾಣವಾಗಲಿ, ಹೃದಯಗಳಲ್ಲಿ ಪ್ರೀತಿಯ ಕನಸುಗಳು, ಪ್ರಕೃತಿ–ಮನುಷ್ಯ ಸಂಬಂಧಗಳೂ ಚಿರಕಾಲ ಬದುಕಲಿ, ಇದರಲ್ಲಿ ಉತ್ತಮ ಮೈತ್ರಿಯ, ಸಹಕಾರ, ಸಾಮರಸ್ಯ, ಸಹಬಾಳ್ವೆ, ಸೋದರತೆಗಳಿಂದ ಮನದಲ್ಲಿ ತುಂಬಿ ತುಳುಕುತಿರಲಿ ಎಂಬ ಆಶಯವನ್ನು ಈ ಸಾಲುಗಳು ಹೇಳುತ್ತವೆ

ಮರಕ್ಕೆ ಬಿದ್ದ ಉರಿಯು ಆರಿ
ಮತ್ತೆ ಬನವು ಚಿಗುರಲಿ
ದೂರವಾದ ಹೃದಯಗಳಲಿ
ಮೈತ್ರಿಭಾವ ಸುಳಿಯಲಿ (ಯುಗಾದಿ ೨)

ದಲಿತರು ವಿದ್ಯಾವಂತರಾದರೂ ಕೂಡ ಮನಸ್ಥಿತಿ ಜಾಗೃತಗೊಳ್ಳದೇ, ಶೋಷಣೆಯನ್ನು ಒಪ್ಪಿಕೊಳ್ಳುತ್ತಲೇ ಬದುಕುವ ವರ್ಗ, ಕೆಲವು ವಿದ್ಯಾವಂತ ದಲಿತರಲ್ಲಿ ಇನ್ನೂ ಮನೆ ಮಾಡಿರುವ ಕೀಳರಿಮೆ ಗುಲಾಮಗಾರಿಕೆಯ ಮನಸ್ಥಿತಿ, ಅಲ್ಪತೃಪ್ತಿಗೆ ಸಂತೋಷದಿಂದ ಸ್ವಾಭಿಮಾನವನ್ನೇ ಬಲಿಕೊಡುವ ಸಣ್ಣತನ ತಾನು ಬ್ರಾಹ್ಮಣೀಕರಣಗೊಳ್ಳುವ ಮನಸ್ಥಿತಿ, ತನ್ನ ಮೂಲ ನೆಲೆಯನ್ನು ವಿರೋಧಿಸುವ ಪ್ರವೃತ್ತಿಯನ್ನು ಕಾಣಬಹುದಾಗಿದೆ. ಮತ್ತೆ ಕೆಲವರು ಈ ರಾಜಕೀಯ ವ್ಯವಸ್ಥೆ ತೋರುವ ಕ್ಷಣಿಕ ಸುಖಗಳಿಗೆ ತಮ್ಮನ್ನು ತಾವೇ ಮಾರಿಕೊಂಡು ಗುಲಾಮರಾಗಿ ಬದುಕುವ ಮತ್ತೆ ತಮ್ಮ ಸಮುದಾಯದ ಕಡೆಗೆ ಗಮನ ನೀಡದೆ ಸ್ವಹಿತಾಸಕ್ತಿಯೇ ಮುಖ್ಯವೆಂದು ಬದುಕುವ ಜನರು. ಬಡವರು ಹೇಗೆ ಗ್ರಾಮಾಂತರ ಕುತಂತ್ರಗಳಿಗೆ ಬಲಿಯಾಗತ್ತಾರೆ ನಮ್ಮ ಬದುಕುನ್ನು ನಡೆಸುತ್ತಿರುವ ವರ್ಗ ತಾರತಮ್ಯದ ಸಮಸ್ಯೆಯ ಪ್ರತಿನಿಧಿಗಳಾಗಿದ್ದರೆಂಬುದು 'ಪಂಚಮ' ನಾಟಕದ ಸಂದರ್ಶನಕ್ಕೆ ಬರುವ ಮೊದಲ ನಾಲ್ಕು ದಲಿತ ಅಭ್ಯರ್ಥಿಗಳು ಈ ಮೇಲಿನ ಪ್ರತಿನಿಧಿಗಳಾಗಿ ಕಾಣಿಸಿಕೊಳ್ಳುತ್ತಾರೆ. ಐದನೆಯ ಅಭ್ಯರ್ಥಿ ಹೋರಾಟದ ಮನೋಭಾವವ್ಯಕ್ತಿತ್ವದ, ಸ್ವಾಭಿಮಾನದ ಸಂಕೇತವಾಗಿ ಕಾಣಿಸುತ್ತಾನೆ. ಆ ಪಂಚಮನನ್ನು ಬಲಿಪಶು ಮಾಡಲು ಪ್ರಯತ್ನಿಸಿ ಸೋತಾಗ, ಅಧಿಕಾರತ್ವದಿಂದ ಆ ವಿರೋಧವನ್ನು ತನ್ನ ವಿರೋಧಿಗಳನ್ನು ಮಟ್ಟಹಾಕಲು ಪ್ರಯತ್ನಿಸುವ ಸೂಕ್ಷ್ಮತೆಗಳು ನಾಟಕದಲ್ಲಿ ವ್ಯಕ್ತವಾಗುತ್ತದೆ.

ಈ ಅಸಮಾನತೆಯ ವ್ಯವಸ್ಥೆಯ ಬಗ್ಗೆ ಶೋಷಿತನಾದ ಪಂಚಮ ಸಿಟ್ಟು, ಆಕ್ರೋಶ, ವ್ಯಕ್ತಪಡಿಸಿದಾಗ ಭಯಭೀತನಾದ ಬ್ರಾಹ್ಮಣಶಾಹಿ–ಶೋಷಕ ಸಮುದಾಯದ ಪ್ರತಿನಿಧಿಯಾದ ಹಯವದನರಾವ್ 'ನಮ್ಮ ಇಲಾಖೆಯಲ್ಲಿ ನಿನಗೆ ಒಳ್ಳೆಯ ಕೆಲಸ ಕೊಡಿಸುತ್ತೇನೆ' ಎಂಬ ಆಸೆ ಅಮಿಷ ಒಡ್ಡುತ್ತಾನೆ. ಆದರೆ ಅಮಿಷಕ್ಕೆ ಬಲಿಯಾಗದ ಸ್ವಾಭಿಮಾನಿ, ಹೋರಾಟಗಾರ ಪಂಚಮ ಈ ರೀತಿಯಾಗಿ

ಉತ್ತರಿಸುತ್ತಾನೆ. "ನಿಮ್ ಎಂಜಲ್ ತಿಂದ್ಕಂಡು ಬಡವರನ್ನು ಸುಲಿಯೋ ಏಜೆಂಟ್‌ರಾಗಾಕೆ ನಾನ್ ತಯಾರಿಲ್ಲ . . . . ನನಗೆ ನಿಮ್ಮ ಹತ್ರ ನಾಯಿ ರೀತಿ ಇರೋ ಕೆಲ್ಸ ಬ್ಯಾಡ. ನನಗೆ ಸಮಾಜದ ಸಂಪೂರ್ಣ ಬದಲಾವಣೆ ಬೇಕು. ನಿಮ್ಮ ಭಿಕ್ಷೆ ರಾಜ್ಯ ಹೋಗ್‌ಬೇಕು. ಸಮತಾರಾಜ್ಯ ಬರಬೇಕು ಅನ್ನೋದೇ ನಮ್ಮ ಗುರಿ. . . ನಮಗೆ ಭಿಕ್ಷೆ ಬೇಡ ಆರ್ಥಿಕ ಸಮಾನತೆ ಬೇಕು. ಸಾಮಾಜಿಕ ಸಮಾನತೆ ಬೇಕು. ಎಲ್ಲೆಲ್ಲೂ ಎಲ್ಲಾದ್ರಲ್ಲೂ ಬದಲಾವಣೆ ಬೇಕು."[೯]

ಇಲ್ಲಿ ಸ್ವಾತಂತ್ರ್ಯ ಭಾರತದಲ್ಲಿ ಪ್ರತಿ ಭಾರತೀಯನಿಗೂ ಸ್ವಾತಂತ್ರ್ಯ, ಸಮಾನತೆ, ಸೋದರತೆಯ ಕಲ್ಪನೆಗಳು ಮನವರಿಕೆಯಾಗಬೇಕು. ಅದು ಎಲ್ಲರಿಗೂ ಸಿಗಬೇಕು. ಎಲ್ಲದರಲ್ಲೂ ಆತ್ಮಗೌರವ, ಆತ್ಮಾಭಿಮಾನ, ಸಮಾನ ಮನಸ್ಥಿತಿಯನ್ನು ಪ್ರಜ್ಞೆಯನ್ನು ಮೂಡಿಸಿ ಜಾಗೃತಿಗೊಳಿಸುವುದನ್ನು ಕಾಣುತ್ತೇವೆ. ಹಾಗೆಯೇ ಹಯವದನನ ವ್ಯಕ್ತಿತ್ವ ಸಮಯ ಸಾಧಕತನ, ಸಮಯ ಸಂದರ್ಭಕ್ಕೆ ತಕ್ಕಂತೆ ಬದಲಾಗುವ ಊಸರವಳ್ಳಿ ಗುಣ, ಮುಖವಾಡಗಳ ಧರಿಸುವ ವ್ಯಕ್ತಿತ್ವ ವರ್ತನೆಯಲ್ಲೇ ಪುರೋಹಿತಶಾಹಿ, ಪಟ್ಟಭದ್ರ ಹಿತಾಸಕ್ತಿಗಳ, ಮೇಲ್ವರ್ಗಗಳ ಶೋಷಕ ಸಮುದಾಯದ ವರ್ತನೆಗಳನ್ನೇ ನಾವು ಗುರುತಿಸಬಹುದಾಗಿದೆ. ಅವನ ಸಾವಿನೊಂದಿಗೆ ಸಮ ಸಮಾಜದ ನಿರ್ಮಾಣ ಸಾಧ್ಯವೆಂಬುದನ್ನು ಮನುಷ್ಯ –ಮನುಷ್ಯರ ನಡುವಿನ ಅಮಾನವೀಯ ಅಂಶಗಳನ್ನು ಇಲ್ಲವಾಗಿಸಿ ಮಾನವ ಸಮಾಜ ಕಟ್ಟುವ ಕನಸನ್ನು ನಾಟಕ ಧ್ವನಿಸುತ್ತದೆ ಎಂದು ಹೇಳಬಹುದಾಗಿದೆ.

ಈ ದೇಶದ 'ನೆಲ/ಸಂಪತ್ತು' "ಎಲ್ಲ ವರ್ಗದ ಜನ ಸಮುದಾಯಕ್ಕೆ 'ಸಮ'ನಾಗಿ ಹಂಚಿಕೆಯಾಗಬೇಕೆಂಬ ಅಂಬೇಡ್ಕರ್‌ರವರ ಕನಸಿನ ಸಮ ಸಮಾಜದ ನಿರ್ಮಾಣದ ಪರಿಕಲ್ಪನೆಯನ್ನು ರಾಜಕಾರಣ ಮಾಡಬೇಕಾಗಿದೆ. ಆದರೆ ಈ ರಾಜಕೀಯ ದೇಶದ ಬಡವರನ್ನು, ದುರ್ಬಲರನ್ನು ತಮ್ಮ ಸುಳ್ಳು ಮೌಲ್ಯಗಳಿಂದ ಮೋಸ ಮಾಡುತ್ತಾ) ಬಂದಿರುವುದನ್ನು ನಾವು ಕಾಣುತ್ತೇವೆ. ಅದಕ್ಕೆ ಸಿದ್ಧಲಿಂಗಯ್ಯನವರ 'ನೆಲಸಮ' ನಾಟಕವೂ ಅಧಿಕಾರಿಶಾಹಿಗಳ ದೌರ್ಜನ್ಯಕ್ಕೆ ಬಲಿಯಾದ ಬಡವರ ದುರಂತವನ್ನು ಈ ನಾಟಕ ಹೇಳುತ್ತದೆ. ಇಲ್ಲಿ ಬರುವ ಮಹಾರಾಣಿ ಚಂದ್ರಮ್ಮ ಇಂದಿರಾಗಾಂಧಿ ಮತ್ತು ವಿಜಯ ಸಂಜಯಗಾಂಧಿಯೊಂದಿಗೆ ಸಮೀಕರಿಸಲಾಗಿದೆ.

"ನಮ್ ಚಂದ್ರಾಮ್ಮ ಬಡವರ ಬಂಧು
ಬಡವರ ಏಳ್ಗೆಗೆ ಅವಳೇ ಮುಂದು
ಮನೆ ಇಲ್‌ದೋರ್ಗೆ ಮನೆ ಕೊಡ್ತಾಳೆ
ನೆಲ ಇಲ್‌ದೋರ್ಗೆ ನೆಲ ಕೊಡ್ತಾಳೆ
ಸಾವ್‌ಕಾರ್ ಸೊಕ್ಕು ಮುರಿತಾಳೆ
ಸಿಂಹಾಸನದ್ಮೇಲ್ ಮೆರಿತಾಳೆ" (ನೆಲಸಮ–೧೭)

ಎಂದು ನಂಬಿ, ಖುಷಿಯಲ್ಲಿದ್ದ ಜನಕ್ಕೆ ನಿರಾಶೆಯಾಗುತ್ತದೆ. ತಮ್ಮ ನಂಬಿಕೆ ಹುಸಿಯಾಗುತ್ತದೆ. ತಾವು ನಂಬಿದ್ದ ಮಹಾರಾಣಿಯೇ ತಮ್ಮ ಪೋಲಿಸರಿಂದ ಕೊಳೆಗೇರಿಯ ಗುಡಿಸಲುಗಳನ್ನು ಧ್ವಂಸಗೊಳಿಸಿ ನೆಲಸಮ ಮಾಡಿಸುತ್ತಾಳೆ. ಇಲ್ಲಿ ಸರ್ವಾಧಿಕಾರದ ಗರ್ವದಿಂದ ಕೊಳೆಗೇರಿಯ ಜನರ ಬದುಕಿನ ಮೇಲೆ ದೌರ್ಜನ್ಯ ನಡೆಸಿದ ಅಂಶಗಳು ಮತ್ತು ಪ್ರಭುಗಳು ಬಡವರ ಬದುಕುವ ಹಕ್ಕನ್ನೇ ಕಿತ್ತುಕೊಳ್ಳುವ ಪ್ರತಿನಿಧಿಸುತ್ತದೆ.

"ತುಳಿಯುವ ಜನರನ್ನು ಸುಮ್ಮನೆ ಬಿಡಲಾರೆ
ಮನೆ ಮನೆ ಮುಂದಲ ಗಿಡದಲಿ। ನಾವೆಲ್ಲ
ಬರುತೀವಿ ಕೆಂಪನೆ ಹೂವಾಗಿ" (೧೮)

ಇಲ್ಲಿ ಈ ವ್ಯವಸ್ಥೆಯ ವಿರುದ್ಧ ಕ್ರಾಂತಿಯನ್ನು ಹೂಡುವ ನೊಂದವರಲ್ಲಿ ಎಚ್ಚರದ ಪ್ರಜ್ಞೆಯನ್ನು ಮೂಡಿಸಿರುವುದು ಆ ಮೂಲಕ ಸಮ-ಸಮಾಜ ನಿರ್ಮಾಣ ಮಾಡಲು ಸಾಮಾಜಿಕ ಬದಲಾವಣೆಗೆ ಮುಂದಾಗಬೇಕೆಂಬ ಸಂದೇಶವನ್ನು ಸಿದ್ಧಲಿಂಗಯ್ಯನವರು ನೀಡಿದ್ದಾರೆ.

'ಏಕಲವ್ಯ' ನಾಟಕವನ್ನು ಕವಿ ಸಿದ್ಧಲಿಂಗಯ್ಯ ಹೊಸ ಸಾಮಾಜಿಕ ಸಂದೇಶ ಮತ್ತು ಆಲೋಚನೆಗಳನ್ನು ಪ್ರತಿನಿಧಿಸುತ್ತಾರೆ. ಇದೊಂದು ಕಾಡಿನ ಮತ್ತು ನಾಡಿನ ಜನರ ನಡುವಿನ ಹೋರಾಟವೇ ಆಗಿದೆ. ಕಾಡಿನ ಜನ ಸಹಜ, ಸಜ್ಜನಿಕೆ, ಮುಗ್ಧತೆಯ ಪ್ರತೀಕವಾದರೆ ನಾಡಿನ ಜನ ಸ್ವಾರ್ಥಿಗಳಾಗಿದ್ದು, ಅಹಂಕಾರ, ಕ್ರೌರ್ಯದ ಪ್ರತಿನಿಧಿಗಳಾಗಿರುವುದನ್ನು ಕಾಣುತ್ತೇವೆ. ಮತ್ತೆ ಈ ಸಮಾಜದ ಜಾತಿವ್ಯವಸ್ಥೆಯ ವಿರುದ್ಧ ದನಿಯಾಗಿ ಮಾತಾನ ಡುವುದನ್ನು ಕಾಣುತ್ತೇವೆ. ನಾಟಕದ ಕೊನೆಯಲ್ಲಿ ಏಕಲವ್ಯ ಹೇಳುವ ಮಾತುಗಳನ್ನು ಗಮನಿಸಬೇಕು. ನಾನು ಯಾರೊಬ್ಬರ ದಾಳ ನಾನಾಗುವುದಿಲ್ಲ. ನನ್ನ ಹೋರಾಟ ಅನ್ಯಾಯದ ವಿರುದ್ಧ ಮೌಢ್ಯ, ಶಾಸ್ತ್ರ ಸಂಪ್ರದಾಯಗಳ ವಿರುದ್ಧ, ಮೇಲು-ಕೀಳು ಎಂಬ ವರ್ಗ ತಾರತಮ್ಯದ ವಿರುದ್ಧ, ಜಾತಿವ್ಯವಸ್ಥೆಯ ವಿರುದ್ಧ ಹೋರಾಟ ನನ್ನದು ಎಂಬ ಮಾತುಗಳಲ್ಲಿ ಸಮಾನತೆಯ ಪರವಾದ ನಿಲುವು ವ್ಯಕ್ತವಾಗಿರುವುದನ್ನು ಗಮನಿಸಬೇಕು.

ಸಿದ್ಧಲಿಂಗಯ್ಯ ತಮ್ಮ ಕವಿತೆಗಳಲ್ಲಿ ಈ ಸಾಮಾಜಿಕ ವ್ಯವಸ್ಥೆಯ ವಿರುದ್ಧ ಸಿಟ್ಟು, ಆಕ್ರೋಶ, ಹತಾಶೆ, ನೋವು, ವ್ಯಕ್ತಪಡಿಸುತ್ತಲೇ ಭರವಸೆ, ಹೊಸಚಿಂತನೆಗಳೊಂದಿಗೆ ಆಲೋಚಿಸುವ ಕ್ರಮವನ್ನು ನೋಡಬಹುದು. ಜಾತಿವ್ಯವಸ್ಥೆ, ಜೀತಪದ್ಧತಿ, ದೇವದಾಸಿಯ ಮೌಢ್ಯ, ರೈತ ಕೂಲಿ, ಕಸುಬುಗಾರರ ಪರವಾದ, ಚಿಂತನೆಗಳನ್ನು ಕಾಣಬಹುದಾಗಿದೆ. ಇವೆಲ್ಲವೂ ಅಂಬೇಡ್ಕರ್‌ರ ಶಿಕ್ಷಣ, ಜಾಗೃತಿ, ಸ್ವಾಭಿಮಾನ ಸಮಾನತೆಯ ಹೋರಾಟದ ತತ್ವಗಳನ್ನೇ ಇಲ್ಲೂ ಕಂಡುಬಂದಿರುವುದನ್ನು ನೋಡುತ್ತೇವೆ. ಅವರ ನಾಟಕಗಳು ಕೂಡ ಜಾತಿ, ವರ್ಗ, ವರ್ಣ, ವ್ಯವಸ್ಥೆಯಲ್ಲಿನ ಮನುಷ್ಯ ವಿರೋಧಿಯ ನಿಲುವುಗಳನ್ನು ವಸ್ತುವನ್ನಾಗಿ ಮಾಡಿಕೊಂಡು ವಿಶ್ಲೇಷಣೆ ಮಾಡಲಾಗಿದೆ. ಅವರು ಸದನದಲ್ಲೂ ಕೂಡ

ಬಡವರ, ದಲಿತರ, ಶೋಷಿತರ ಮೇಲಿನ ದೌರ್ಜನ್ಯ ವಿರುದ್ಧವೇ ಧ್ವನಿಯೆತ್ತಿರುವುದನ್ನು ಕಾಣುತ್ತೇವೆ. ಹೀಗೆ ಸಮಾಜದ ಸಾಮಾಜಿಕ ಸಮಸ್ಯೆಗಳಿಗೆ, ಆ ಸಮಸ್ಯೆಯ ಸೋಪಾನವನ್ನಾಗಿ ಮಾಡಿಕೊಂಡು ನವ ಸಮಾಜ ನಿರ್ಮಾಣಕ್ಕೆ ದಾರಿಯನ್ನು ತೋರಿಸುತ್ತಾರೆ. ಹೊಸ ಚಿಂತನೆ, ಆಲೋಚನೆಗೆ ಮನಸ್ಸುಗಳನ್ನು ಸಿದ್ಧಗೊಳಿಸಿ ಪರಿಹಾರೋಪಾಯಗಳನ್ನು ಹುಡುಕುವ, ಆ ದಾರಿಯಲ್ಲಿ ಸಾಗುವ ಮನಸ್ಥೈರ್ಯವನ್ನು ನೀಡುತ್ತದೆ. ಇದು ಒಬ್ಬ ಸಮಾಜಮುಖಿ ಸಮಾಜಪರ ಕಾಳಜಿ ಇರುವ ಪ್ರತಿಯೊಬ್ಬರು ಈ ಪಥದಲ್ಲಿ ಸಾಗಬೇಕಾಗಿದೆ ಎಂಬುದೇ ಬಹಳ ಮುಖ್ಯವಾಗಿದೆ.

"ಅಸಮಾನತೆ, ಅನ್ಯಾಯವೇ ಕತ್ತಲು ಸಮಾನತೆ ಸಾಮಾಜಿಕ ನ್ಯಾಯವೇ ಬೆಳಕು ಎಂಬುದು ನನ್ನ ನಂಬಿಕೆ. ಈ ಸಮಾನತೆಯ ದೀಪ ಉರಿಯಲು ಪ್ರೀತಿಯ ಬತ್ತಿ ಬೇಕು. ಸೌಹಾರ್ದತೆಯ ಎಣ್ಣೆ ಬೇಕು. ಆದ್ದರಿಂದ ಸಮಾನತೆ, ಸಾಮಾಜಿಕ ನ್ಯಾಯಕ್ಕೆ ಮಾನವ ಪ್ರೀತಿ, ಜನಾಂಗೀಯ ಸೌಹಾರ್ದವೇ ಮೂಲ ಆಧಾರ!"

ಡಾ.ಸಿದ್ಧಲಿಂಗಯ್ಯನವರ ಈ ಮಾತುಗಳು ನಮ್ಮೆಲ್ಲರಿಗೂ ತಿಳುವಳಿಕೆ, ವಿವೇಕವನ್ನು ತಿಳಿಸುವ ಮಹತ್ವ ಪೂರ್ಣವಾದ ನುಡಿಮುತ್ತುಗಳಾಗಿವೆ.

೪.೨ : ರಾಜಕೀಯ ಚಿಂತನೆಗಳು

"ಒಂದು ಜನಾಂಗವನ್ನು ಎರಡು ರೀತಿಗಳಲ್ಲಿ ಕಟ್ಟಲು ಸಾಧ್ಯ. ಒಂದು ರಾಜಕೀಯ ಸಂಕಲ್ಪದ ಮೂಲಕ, ಎರಡು ಸಾಹಿತ್ಯದ ಪ್ರತಿಭಾ ಸಂಕಲ್ಪದ ಮೂಲಕ. ಇವೆರಡೂ ಒಂದರೊಳಗೊಂದು ಹರಿಯತ್ತವೆ ಎನ್ನುವುದು ಸತ್ಯ. ರಾಜಕೀಯ ಸಂಕಲ್ಪದ ಮೂಲಕ ನಿರ್ಮಾಣವಾದ ಜನಾಂಗ ತನಗೆ ಅಗತ್ಯವಿರುವ ಸಾಂಸ್ಕೃತಿಕ ರೂಪಗಳನ್ನು ಸೃಷ್ಟಿಸಿಕೊಳ್ಳುತ್ತದೆ. ಹಾಗೂ ಸಾಹಿತ್ಯ ಸಂಕಲ್ಪ ಕೂಡ ತನಗೆ ಸಾಧ್ಯವಿರುವ ರಾಜಕೀಯ ಕ್ರಿಯೆಯ ಮಾದರಿಗಳನ್ನು ಸೃಷ್ಟಿಸಿಕೊಳ್ಳುತ್ತದೆ. ಈ ತತ್ವದ ಹಿನ್ನೆಲೆಯಲ್ಲಿ ಸಿದ್ಧಲಿಂಗಯ್ಯನವರ ಕಾವ್ಯದ ರೂಪು ರೇಖೆಗಳು ಇನ್ನಷ್ಟು ಉಜ್ವಲವಾಗುತ್ತದೆ"[೨೦] ಎಂದು ಸಿದ್ಧಲಿಂಗಯ್ಯನವರ ಸಾಹಿತ್ಯದ ಹಿನ್ನೆಲೆಯನ್ನು ಡಿ.ಆರ್.ನಾಗರಾಜುರವರು ಬಹಳ ಮಹತ್ವಪೂರ್ಣವಾಗಿ ಕಟ್ಟಿಕೊಟ್ಟಿರುವುದನ್ನು ಕಾಣಬಹುದಾಗಿದೆ. ನಾವು ಸಿದ್ಧಲಿಂಗಯ್ಯನವರ ಸಾಹಿತ್ಯ ಅವಲೋಕಿಸಿದಾಗ ರಾಜಕೀಯದ ಅವ್ಯವಸ್ಥೆಯನ್ನು ರಾಜಕಾರಣಿಗಳ ರೀತಿ–ನೀತಿಗಳನ್ನು ತರಾಟೆ ತೆಗೆದುಕೊಳ್ಳುವುದರ ಮೂಲಕ ವಿಡಂಬನಾತ್ಮಕವಾಗಿ [illegible]ಒಳಪಡಿಸುತ್ತಾರೆ. ರಾಜಕಾರಣಿಗಳ ನಿಜವಾದ ಮುಖವಾಡದ ಬದುಕನ್ನು ವ್ಯಕ್ತಿತ್ವಗಳನ್ನು ಬಯಲು ಮಾಡುತ್ತಾರೆ. ನಮ್ಮ ಇಂದಿನ ಈ ಸ್ಥಿತಿಗೆ ಇವರೇ ಕಾರಣಕರ್ತರು. ಇವರು ನಮ್ಮನ್ನು ಈಗಿರುವ ಸ್ಥಿತಿಯಲ್ಲೇ ನೋಡಬಯಸಿ ತಮ್ಮ ಸ್ವಾರ್ಥ ಸಾಧನೆಗಳನ್ನು ಮಾಡಿಕೊಳ್ಳುತ್ತಾರೆ. ಅದ್ದರಿಂದ ದಲಿತರು, ಬಡವರು, ಶೋಷಿತರು, ದಮನಕ್ಕೆ ಒಳಗಾದ ಜನರು ನಮ್ಮ ನಿಜ ಸ್ಥಿತಿಯನ್ನು ತಿಳಿದು ನಮ್ಮ ಸಮಸ್ಯೆಗಳಿಗೆ ಸ್ಪಂದಿಸುವವರು ನಾವೇ ಆದರೆ ನಮ್ಮ ಎಲ್ಲಾ ಸಮಸ್ಯೆಗಳಿಗೆ ಕೀಲಿಕೈ ರಾಜಕೀಯ ಅಧಿಕಾರ ಅದನ್ನು ಪಡೆಯಲು ಮುನ್ನುಗ್ಗಿ; ಈ ರಾಜಭವನವನ್ನು ಪ್ರವೇಶಿಸಿ ನಿಮ್ಮ ಹಕ್ಕುಗಳನ್ನು ಪಡೆದು ಸಮಾನತೆಯನ್ನು ಸಾಧಿಸಿ ಎನ್ನುವಂತೆ ಸಂಸತ್ತು, ವಿಧಾನಸೌಧಗಳ ಮುಂಭಾಗದಲ್ಲಿ ಡಾ.ಅಂಬೇಡ್ಕರ್ ಕೈ ತೋರಿಸುತ್ತಾ ನಿಮ್ಮ ವಿಮುಕ್ತಿಗೆ ರಾಜಕೀಯ ಅಧಿಕಾರವೇ ಮೂಲಮಂತ್ರ ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ರಾಜ್ಯಾಡಳಿತದಲ್ಲಿ ತಮ್ಮ ಪಾತ್ರವನ್ನು ಮತಚಲಾವಣೆ ಮಾಡುವುದರ ಮೂಲಕ ಭಾಗವಹಿಸುವ ಸಾಮರ್ಥ್ಯವನ್ನು, ಹಕ್ಕನ್ನು ದೊರಕಿಸಿ ಕೊಟ್ಟ ರಾಜಕೀಯ ಸಮಾನತೆಯನ್ನು ಸಾಧಿಸಿದ ರಾಜಕೀಯ ಮುತ್ಸದ್ಧಿ ಡಾ.ಅಂಬೇಡ್ಕರ್ ಅವರ ಚಿಂತನೆಗಳ ಹಿನ್ನೆಲೆಯಿಂದ ಬಂದ ಡಾ.ಸಿದ್ಧಲಿಂಗಯ್ಯನವರ ಸಾಹಿತ್ಯದಲ್ಲೂ ಅದನ್ನು ಕಾಣಬಹುದು.

ರಾಜಕೀಯ ಎಂದರೆ ರಾಜ್ಯದ ಜನರನ್ನು ಕೀಳುಮಟ್ಟದಿಂದ ಯಶಸ್ಸಿನ ಉತ್ತುಂಗಕ್ಕೆ ಕರೆದೊಯ್ಯುವ ಮಾರ್ಗವಾಗಿರಬೇಕೇ ವಿನಹಃ ಅವರ ಹೀನ ಸ್ಥಿತಿಯನ್ನು ಬದಲಾಯಿಸುವಂತೆ ನಾಟಕದ ಮಾತನಾಡುತ್ತಾ ತಮ್ಮ ರಾಜಕೀಯ ವೃತ್ತಿಯನ್ನು ಗಟ್ಟಿ ಮಾಡಿಕೊಳ್ಳುವ ಕುತಂತ್ರಗಾರಿಕೆಯನ್ನು

ಅವರನ್ನು ಮತ್ತಷ್ಟು ದುಃಸ್ಥಿತಿಗೆ ತಳ್ಳುವ, ಗುಲಾಮಗಿರಿಗೆ ನೂಕುವ ಪ್ರಜಾಪ್ರತಿನಿಧಿಗಳೇ ಇಂದು ತುಂಬಿ ತುಳುಕುತ್ತಿದ್ದಾರೆ ಎಂಬುದನ್ನು ಸಿದ್ಧಲಿಂಗಯ್ಯನವರ 'ಒಂದು ಪದ' ಕವಿತೆಯಲ್ಲಿ ನಿರೂಪಿಸುತ್ತಾರೆ.

"ನಮ್ಯಾಲ್ ಮಿಂಟಿಂಗ್ ಮಾಡ್ತಾರೆ, ಕಾನೂನ್ ಮಾಡ್ತಾರೆ
ನಮ್ಮಯಸ್ರೇಳಿ ಹಾರಹಾಕ್ತಾರೆ, ಹಾಕುಸ್ಕತ್ತಾರೆ
ನಮ್ಮನ್ನ ಉದ್ಧಾರ ಮಾಡ್ತೀವಿ ಅಂತ ಪೇಪ್ರೇಲಿ
ಮೈಕೇಲಿ ಜೋರಾಗಿ ಕೂಗ್ತಾ ಅವ್ರಲ್ಲಪ್ಪೋ" (ಒಂದು ಪದ)

ಅಸ್ಪೃಶ್ಯತೆಯನ್ನು ತೊಲಗಿಸಿ ದಲಿತರ, ಬಡವ ಉದ್ಧಾರ ಮಾಡುತೀವಿ ಎನ್ನುವ ಇವರೆಲ್ಲರೂ ಕೂಡ ಭಾಷಣ ಶೂರರೇ. ಆದರೆ ವಾಸ್ತವದಲ್ಲಿ ತಮ್ಮ ಜೀವನದಲ್ಲೇ ಅದನ್ನು ನಡೆಸಿಕೊಂಡು ಬರುವ ಧೀರರು. ಅದಕ್ಕೆ ಉದಾ: ಈಗಲೂ ಕೂಡ ಮಲ ಹೊರುವ ಪದ್ಧತಿ ಜಾರಿಯಲ್ಲಿರುವುದು ಮತ್ತು ಕೆಳವರ್ಗದ ಜನರು ಮೇಲ್ವರ್ಗದ ಮನೆ, ಮನಗಳನ್ನು ಪ್ರವೇಶಿಸದೇ ಉಳಿದಿರುವುದು. ಜೀತಪದ್ಧತಿ, ದಲಿತರ ಮೇಲೆ ನಿರಂತರವಾಗಿ ನಡೆಯುತ್ತಿರುವ ದೌರ್ಜನ್ಯಗಳೇ ನಮ್ಮ ಮುಂದೆ ಜೀವಂತ ಸಾಕ್ಷಿಯಾಗಿದೆ. ಅದಕ್ಕೆ ಅದರ ವಿರುದ್ಧ ಸಾತ್ವಿಕ ಸಿಟ್ಟನ್ನು ಆಕ್ರೋಶವನ್ನು ಕವಿತೆ ವ್ಯಕ್ತಪಡಿಸುತ್ತದೆ. ಜೊತೆಗೆ ರಾಜಕಾರಣ ಇಂದೂ ಜಾತಿಯ ಹಿನ್ನೆಲೆಯಲ್ಲೇ ನಡೆಯಲು ಪ್ರಾರಂಭಿಸಿದೆ. ಜಾತಿ ಕೇಂದ್ರಿತ ಚುನಾವಣೆಗಳಾಗಿ, ಜಾತಿಗಳು ಮತಬ್ಯಾಂಕ್‌ಗಳಾಗಿ ಪರಿವರ್ತನೆಗೊಂಡು ಅಲ್ಲಿ ಬಡವರು, ನಿರ್ಗತಿಕರು, ಶೋಷಿತರು, ಅಸ್ಪೃಶ್ಯರು ಅವರ ಜೀವನ ಇವರಿಗೆ ಕಾಣದಾಗಿದೆ. ಇದರಿಂದ ರಾಜಕೀಯದ ಮೌಲ್ಯಗಳೇ ಕುಸಿದುಬೀಳುತ್ತಿರುವ ಹಂತಕ್ಕೆ ತಲುಪಿದೆ ಎಂಬ ಎಚ್ಚರಿಕೆಯನ್ನು ಈ ಕವನ ಸಾರುತ್ತದೆ.

ಈಗಿನ ಜನಪ್ರತಿನಿಧಿ ರಾಜಕಾರಣಿಗಳು ಜನವಿರೋಧಿ ರಾಜಕಾರಣಿಗಳಾಗಿ ಕಾರ್ಯ ಮಾಡುತ್ತಿದ್ದಾರೆ. ಅವರ ವ್ಯಕ್ತಿತ್ವಗಳನ್ನು ಅವರ ಅಧಿಕಾರದ ಲಾಲಸೆಗಳನ್ನು ಅದರಲ್ಲಿರುವ ಕೊಲೆಗಡುಕತನ, ಮೋಸ, ವಂಚನೆ, ಸ್ವಾರ್ಥ ಚಿಂತನೆಗಳೇ ರಾಜಕೀಯದಲ್ಲಿ ತುಂಬಿ ತುಳುಕಿದೆ ಎಂಬುದನ್ನು ಜೊತೆಗೆ ಇಂದಿನ ವಾಸ್ತವತೆಯನ್ನು ಕೂಡ ಕಣ್ಣಿಗೆ ರಾಚುವಂತೆ ತಿಳಿಸುತ್ತಾರೆ.

"ಪಾರ್ಲಿಮೆಂಟು ಅಸೆಂಬ್ಲೀಲಿ ಮೃತ್ಗಿರೋ ಸೀಟ್ನ
ಮ್ಯಾಲ್ ಕುಂತು
ಪಾನ್‌ಬೀಡಾ ಅಗ್ಯೋ ನಾಯಕ್ರಾ
ನಿಮ್ಗ್ ಕೇಳ್ಸಲ್ವೇನ್ನಲೇ ನಮ್ ಕೋಳಿಲ್ಲದ್ ಕೂಗು......
ಡೆಳ್ಳೀಗೂ ಬೆಂಗ್ಳೂರ್ಗ್ಗು ಆಕಾಶ್ದೇಲಾರಡೋರಾ
ದಿನ್ದ್ನ್ಕು ಕುಬೇಕ್ರಾಗಿ ....

ನಿಮ್ಗೆ ಬಂಗ್ಲೆ ಕಟ್ಟುಸ್ಕತ್ತೀರೇನ್ರೋ.........

ನೀವು ಎಮ್ಮೆಲ್ಲೆಗಳು, ಮಿನೀಸ್ಟ್ರುಗಳು (ಸತ್ತೋಗೋರಾ)

ಬೋಳ್ ಮುದುಕ್ರಾ

ಹಲ್ ಉದ್ರೋದೋಕಾ ಹಲ್ ಕಟ್ಟುಸ್ಕೊಂಡೋರಾ

ಜನ್ದೆದ್ರು ಮೈಕ್ನ ಮುಂದೆ ತಂದ್ ವಿಚಾರ್ಸುದ್ರೆ

ಪ್ರಾಣಾ ಪ್ರಯಾಣ ಎಳ್ಳೂ ಇಲ್ದೆ

ತಡೇ ನಡ್ಗ ಸತ್ತೋಗೋರಾ (ಸತ್ತೋಗೋರಾ)

ಇಲ್ಲಿ ರಾಜಕಾರಣಿಗಳ ಬಣ್ಣಬಯಲು ಮಾಡುತ್ತಾ ಅವರ ಐಷಾರಾಮಿಯ ಬದುಕಿನ ರೀತಿ ನೀತಿಗಳು, ಅವರ ಗೋಮುಖ ವ್ಯಾಘ್ರದ ವ್ಯಕ್ತಿತ್ವದ ಬಗ್ಗೆ ಬೆಳಕು ಚೆಲ್ಲುತ್ತಲೇ ಅದನ್ನು ಪ್ರಶ್ನಿಸಿ, ವಿರೋಧಿಸುವುದರ ಜೊತೆಗೆ ಇಂದಿನ ರಾಜಕೀಯ ದೈಹಿಕ, ಮಾನಸಿಕ ವೃದ್ಧರಿಂದಲೇ ತುಂಬಿ ತುಳುಕುತ್ತಿದೆ. ಇದರಿಂದ ಹೊಸ ತಲೆಮಾರಿನ ಯುವ ಶಕ್ತಿಯ ಆಲೋಚನೆ, ರೀತಿ–ನೀತಿಗಳಿಗೆ ಸರಿ ಹೊಂದದೇ ಹೋಗಿದೆ. ಆದ್ದರಿಂದ ಸಮಾನತೆಯ ಮನಸ್ಸಿರುವ ಪ್ರಬುದ್ಧ ಯುವ ರಾಜಕಾರಣಿಗಳ ರಾಜಕೀಯ ಪ್ರವೇಶ ಆಗಬೇಕು. ಅದ್ದರಿಂದ ಆ ರಾಜಕೀಯದಲ್ಲಿರುವ ಕೊಳಕನ್ನು ಸ್ವಚ್ಛಗೊಳಿಸಬೇಕೆಂಬ ಅಭಿಲಾಷೆಯೂ ಜೊತೆಗೆ ಬಡವರ ಬಗ್ಗೆ ಕಾಳಜಿ ಮತ್ತು ತಮ್ಮ ರಾಜಕೀಯ ಜವಾಬ್ದಾರಿಗಳನ್ನು ಎಚ್ಚರಿಸುವ ಕವಿತೆಯಾಗಿಯೂ ರೂಪಗೊಂಡಿದೆ.

ರಾಜಕಾರಣಿಗಳು ಕೂಡ ಹಿಂದೆ ಪುರೋಹಿತಶಾಹಿಗಳ ಪುರಾಣಗಳಲ್ಲಿ ಹೇಗೆ ಈ ನೆಲದ ಮೂಲಸಂಸ್ಕೃತಿ, ಮೂಲಜನಾಂಗವನ್ನು ರಾಕ್ಷಸರಂತೆ ಬಿಂಬಿಸಿ ಅವರನ್ನು ಸಂಹಾರ ಮಾಡಲು ಅವತಾರ ಪುರುಷರನ್ನು ಸೃಷ್ಟಿಸುತ್ತಾ ದಶಾವತಾರದ ಪುರಾಣ ದಂತ ಕಥೆಯನ್ನು ನಮ್ಮ ಮುಂದಿಡುತ್ತಾರೋ ಹಾಗೆಯೇ ಇವರು ಕೂಡ ಬಡವರ ಉದ್ಧಾರ, ಸಮಾಜ, ಜನಸೇವೆ ಎಂದು ಘಳಿಗೆಗೊಂದು ಅವತಾರ ತಾಳುತ್ತಲೇ ಅಭಿವೃದ್ಧಿಯ ಮುಖವಾಡವನ್ನು ತೋರುತ್ತಲೇ ನಾನೊಬ್ಬ ಸಮಾಜ ಸೇವಕ ಎಂದು ಹೇಳುವ ಇವರು ಇಂದು ದೇಶದ ಅಸಮಾನತೆ, ಜಾತಿಯತೆ, ಕೋಮುವಾದ, ಮತ್ತಿತರ ಸಮಸ್ಯೆಗಳ ವಿಷವನ್ನು ಕಾರುವ, ಅದನ್ನು ಹರಡುವ ವಿಷಜಂತುಗಳಾಗಿದ್ದಾರೆಂಬುದನ್ನು "ದಶಾವತಾರ" ಕವಿತೆ ಹೇಳುತ್ತದೆ.

"ದಶಾವತಾರ ಹಾಕುವ ಮಂತ್ರಿ

ದೇಶದ ಮಾರುವ ದಳ್ಳಾಳಿ

ಸಮಾಜ ಸೇವೆಯ ಸೋಗಿನ ಧಣಿಯು

ಮತ್ತೊಂದು ವಿಷಯವನ್ನು ಗಂಭೀರವಾಗಿ ಆಲೋಚಿಸುವಂತೆ ಮಾಡುತ್ತದೆ. ಸಾವಿರಾರು ಲಕ್ಷಾಂತರ ಸಾಮಾನ್ಯ ಜನರ ಪ್ರಾಣ ಬಲಿದಾನದಿಂದ ಈ ದೇಶವನ್ನು ಬ್ರಿಟಿಷ್‌ರಿಂದ ಪಡೆದುಕೊಂಡಿದ್ದನ್ನು ಇವರು ಇಂದು ಜಾಗತೀಕರಣ, ಖಾಸಗೀಕರಣ, ಉದಾರೀಕರಣದ ನೆಪದಲ್ಲಿ ಮತ್ತೆ ಈ ದೇಶವನ್ನು ಮಾರಲು ಹೊರಟಿರುವ ಈ ರಾಜಕಾರಣಿಗಳ ವರ್ತನೆಯನ್ನು ಯುವಜನತೆ ಎಚ್ಚೆತ್ತು ಪಾಠ ಕಲಿಯುವ, ಇಂತಹ ರಾಜಕಾರಣಿಗಳಿಗೆ ಪಾಠ ಕಲಿಸುವ ಅವಶ್ಯಕತೆ ಇದೆ ಎಂಬುದನ್ನು ಹೇಳುತ್ತದೆ.

"ಬಡಜನರ ಗುಡಿಸಲಿಗೆ ಬೆಂಕಿಯನ್ನು ಇಟ್ಟವರು

ರಾಜರಾದರು ದೆಹಲಿ ನಾಡಿನಲ್ಲಿ (ಸಂಪಿಗೆಯ ಮರದಲ್ಲಿ)

ಕಡುಬಡಜನರನ್ನು, ಸಾಮಾಜಿಕವಾಗಿ, ಆರ್ಥಿಕವಾಗಿ ಉದ್ಧಾರ ಮಾಡಬೇಕೆಂಬುದೇ ರಾಜಕಾರಣದ ಉದ್ದೇಶವಾದರೂ ಕೂಡ ಸಮಾಜದಲ್ಲಿ ಅಧಿಕಾರಿಶಾಹಿ ವ್ಯವಸ್ಥೆಯು ಬಡವರನ್ನು ದುರ್ಬಲರನ್ನು ಹುಸಿಮಾತುಗಳಿಂದ ಮೌಲ್ಯಗಳಿಂದ ವಂಚನೆ ಮಾಡುತ್ತಲೇ ಬಂದಿದೆ. ಒಡುಗೆಂಡ ನಮಗೆ ಸಿದ್ಧಲಿಂಗಯ್ಯನವರ 'ನೆಲಸಮ' ನಾಟಕವು ಇದನ್ನೇ ತಿಳಿಸುತ್ತದೆ.

"ಬಡವರ ಉದ್ಧಾರದ ಹೆಸರಿನಲ್ಲಿ ಬಡವರನ್ನು ನಿತ್ಯವೂ ಬಲಿ ತೆಗೆದುಕೊಳ್ಳುತ್ತಿರುವ ಆಳುವ ವರ್ಗದ ವಂಚನೆ 'ನೆಲಸಮ' ನಾಟಕದವಸ್ತು. ತಮ್ಮ ಗುಡಿಸಲು ನೆಲಸಮವಾದಾಗ ಈ ದಲಿತರಲ್ಲಿ ಸತ್ಯದ ಅರಿವು ಶುರುವಾಗುತ್ತದೆ. ಸುಳ್ಳು ಭರವಸೆ, ಹೆಂಡ ಹಣವನ್ನು ಚುನಾವಣೆಯ ಕಾಲದಲ್ಲಿ ಚೆಲ್ಲಿ ಸುಲಿಗೆಯ ರಾಜಕಾರಣದಲ್ಲಿ ತೊಡಗಿರುವವರ ಬಣ್ಣವನ್ನು ಬಯಲು ಮಾಡುವ ನಾಟಕ ನೆಲಸಮ."

ಇಲ್ಲಿ ರಾಜಕಾರಣ ಮತ್ತು ಅಧಿಕಾರಶಾಹಿ ನಿರಂಕುಶಶಾಹಿಗಳಂತೆ ಸ್ವಲ್ಪವೂ ಕೂಡ ಬಡವರ ಅಂತರಂಗವನ್ನು ಅವರ ನೋವು-ಯಾತನೆ ಕಷ್ಟಗಳನ್ನು ತಿಳಿಯದೇ ತನ್ನ ಕಣ್ಣ ದೃಷ್ಟಿಯಂತೆ ನಡೆದುಕೊಳ್ಳುವ ರಾಜಕಾರಣಿಗಳು ನಮಗೆ ಕಾಣಸಿಗುತ್ತಾರೆ. ಈ ಮಣ್ಣಿನ ಮಕ್ಕಳನ್ನು, ಬಡವರನ್ನು ಕೂಲಿಗಳನ್ನು ಯಾವ ರೀತಿ ನೋಡುತ್ತಾರೆಂಬುದು "ನೆಲಸಮ" ನಾಟಕದ ವಿಜಯ ಪಾತ್ರದ ಮುಖಾಂತರ ಬಿಚ್ಚಿಡುವ ಪ್ರಯತ್ನವನ್ನು ಸಿದ್ಧಲಿಂಗಯ್ಯನವರು ಮಾಡಿದ್ದಾರೆ.

"ವಿಜಯ : "ಏನೇ ಆಗಲಿ, ನಮ್ಮ ದೇಶದ ಸೌಂದರ್ಯವನ್ನು ಗುಡಿಸಲುಗಳು ಹಾಳು ಮಾಡುತ್ತಿವೆ. ವಿದೇಶಿಯರು।

ಇಂಡಿಯಾದ ಅಂದ ಚೆಂದವನ್ನು ನೋಡಲು ಬಂದರೆ
ಅವರ ಕಣ್ಣಿಗೆ ಮೊದಲು ಬೀಳುವ ಈ ಮೂಟೆ
ಹೊರುವ ಕೊಳಕು ನಮ್ಮಕ್ಕಿಂದ ಇಡೀ ದೇಶಕ್ಕೆ
ಅವಮಾನ. ಮೊದಲು ನಾವು ಇವರನ್ನು ಮುಗಿಸಬೇಕು""

ಹಾಗೆಯೇ

"ಅಮ್ಮ ಈ ಬಡವರಿಂದ ಇಡೀ ದೇಶಕ್ಕೆ ಕಳಂಕ ಬಂದಿದೆ.
ಅವರ ಕೊಳಗೇರಿಗಳು ಗಂಗಾ ಯಮುನೆಯಂಥ ಪವಿತ್ರ
ನದಿಗಳು ಹರಿಯುವ ನಾಡಿನಲ್ಲೇ ಇರಲೇಬಾರದು"[13]

ಅಂದರೆ ಈ ಮೇಲ್ವರ್ಗದ ರಾಜಕಾರಣಿಗಳಿಗೆ ಬಡವರು ಅಂದರೆ ತುಚ್ಛ, ತಾತ್ಸಾರ ಕೀಳರಿಮೆಗಳನ್ನು ವ್ಯಕ್ತಪಡಿಸುಬಿಟಬುಅಧಿಕಾರಶಾಹಿಗಳು ಹೇಗೆ ಬಡವರನ್ನು ಶೋಷಿಸುತ್ತಾ ರಾಜಕೀಯ ವ್ಯವಸ್ಥೆಯು ಜನವಿರೋಧಿ ಧೋರಣೆಗಳನ್ನು ತಾಳುತ್ತದೆ ಎಂಬುದನ್ನು ಹೇಳುತ್ತದೆ. ಇಂದಿನ ರಾಜಕೀಯ ಸ್ಥಿತಿಯೂ ಕೂಡ ಇದೇ ರೀತಿಯ ವ್ಯವಸ್ಥೆಯನ್ನು ನಡೆಸುತ್ತಿದೆ. ರಾಜಕೀಯದ ಕಪಿಮುಷ್ಠಿಯಲ್ಲಿ ಸಿಕ್ಕಿರುವ ಬಡವರು–ಶೋಷಿತರ ಬದುಕು ಇಂದಿಗೂ ಈ ಪರಿಸ್ಥಿತಿಯೇ ಇದೆ.

"ಪಂಚಮ" ನಾಟಕದಲ್ಲೂ ಕೂಡ ರಾಜಕೀಯ ಚಿಂತನೆಗಳ ಕಡೆಗೆ ಗಮನಹರಿಸಿದ್ದಾರೆ. ಆ ನಾಟಕದಲ್ಲಿ ಸಂದರ್ಶನಕ್ಕೆ ಬರುವ ಹಿನೇ ವ್ಯಕ್ತಿ 'ಗಾಂಧಿದಾಸ್' ಪಾತ್ರದ ಮುಖೇನ ಕೆಳವರ್ಗದ ದಲಿತರ ರಾಜಕೀಯ ಜಾಗೃತಿಯ ಕಡೆ ಗಮನ ಹರಿಸುತ್ತಾರೆ. ಇಂದಿನ ದಲಿತರಿಗೆ ರಾಜಕೀಯ ಅರಿವು, ತಿಳುವಳಿಕೆ ಎಷ್ಟು ಮುಖ್ಯವೆಂದೂ, ಜೊತೆಗೆ ರಾಜಕೀಯ ಆಧಿಕಾರ ಎಂತಹ ಮಹತ್ವವುಳ್ಳ ಕ್ಷೇತ್ರ ಎಂಬುದನ್ನು ತಿಳಿಸಲು ಪ್ರಯತ್ನಿಸಿದ್ದಾರೆ. ಹಾಗೆಯೇ ಇಂದು ರಾಜಕೀಯ ಈ ಬಡವರನ್ನು ದಲಿತರನ್ನು ಶೋಷಿತರನ್ನು ಕೇವಲ ಗಾಳವಾಗಿ ಬಳಸಿಕೊಳ್ಳುತ್ತಿದೆ ಎಂಬ ಅಂಶವನ್ನು ಸೂಕ್ಷ್ಮವಾಗಿ ವಿಶ್ಲೇಷಿಸಿದ್ದಾರೆ. ಅಂಬೇಡ್ಕರ್‌ರವರ ಅಧಿಕಾರದ ಚಿಂತನೆಯನ್ನು ತಿಳಿಯದೇ ಈ ವ್ಯವಸ್ಥೆ ಹೇಗೆ ಬಲಿಯಾಗುತ್ತಿದೆ ಎಂಬುದನ್ನು ಸಹ ತಿಳಿಸುತ್ತಾರೆ.

"ಮಹಾತ್ಮಗಾಂಧಿ ನಮ್ಮೂರಿಗೆ ಬಂದಿದ್ದಾಗ ನಮ್ಮ ತಾತಾ ಅವರ್ನ ಖುದ್ದಾಗಿ ಕಂಡು ನಾವು ಮಾಂಸ ಮುಟ್ಟಲ್ಲ. ಹೆಂಡ ಮುಟ್ಟಲ್ಲ ಅಂತ ಅವರ ಕೈಮುಟ್ಟಿ ಬಲಗೈ ಭಾಷೆ ಕೊಟ್ರಂತೆ ಸಾರ್"[14] ಎಂದು ಗಾಂಧೀದಾಸ್ ಉತ್ತರಿಸುವ ಮಾತುಗಳನ್ನು ಗಮನಿಸಿದಾಗ ಆಹಾರ ವ್ಯವಸ್ಥೆಯ ಮನುಷ್ಯನ ಸಾಮಾಜಿಕ ಸ್ಥಾನಮಾನಗಳನ್ನು ನಿರ್ಧರಿಸುತ್ತದೆ ಎಂಬ ವ್ಯಂಗ್ಯದ ಜೊತೆಗೆ ಆಹಾರ ಪದ್ಧತಿಯ ಬದಲಾವಣೆಯಿಂದ ಕೆಳವರ್ಗದ ಜನರ ಸ್ಥಿತಿಗತಿಗಳು ಬದಲಾಗುತ್ತದೆಂಬುದು ಕೂಡ ಎಂತಹ ಸುಳ್ಳು ನಂಬಿಕೆ ಎಂಬ ಸತ್ಯವನ್ನು ಬಯಲಿಗೆಳೆದಿದ್ದಾರೆ.

"ಹಯವದನರಾವ್ : ಯವಾಗಾದ್ರೂ ಓಟ್‌ಗೆ ನಿಂತಿದ್ರೇನ್ರೀ?

ಗಾಂಧಿದಾಸ್– ಛೇ... ಛೇ... ಛೇ... ನನ್ನ ಲೈಫ್‌ನಲ್ಲಿ ಕ್ಯಾನ್ ವಾಸ್
ಮಾಡಿದ್ದೇನೇ ವರ್ರ್ತೊ ನಾನೇ ಕಂಟೆಸ್ಟ್ ಮಾಡಿಲ್ಲ ಸಾರ್. ನೋಡಿ
ಸಾರ್ ನಮ್ಮ ಜನಾಂಗ ಬಡವರಾಗಿರೋದ್ರಿಂದ ಗಂಡಸ್ರು ಗಾದ್ರೆ

ಪಂಚೆ ಕೊಡಬೇಕು ಹೆಂಗಸ್ರಾದ್ರೆ ಸೀರೆ ಕೊಡಬೇಕು ಇದರಿಂದ
ನಮ್ ಬಟ್ಟೆ ಸಮಸ್ಯೆ ಬಗೆಹರೀತು. ಮನ್ ಮನೆಗೂ ಒಂದೊಂದು
ಬಾಟಲ್ ಹೆಂಡ ಕೊಟ್ರೆ ನಮ್ ಹೊಟ್ಟೆ ಸಮಸ್ಯೆನೂ ಬಗೆಹರಿತು
ಇದರಿಂದ ಶತಮಾನಗಳ ನೋವನ್ನು ಮರೆತು ಸ್ವಲ್ಪ
ಹೊತ್ತಾದ್ರು ಕುಣೀಬೋದು"[39]

ಇಲ್ಲಿನ ಮಾತುಗಳನ್ನು ಕೇಳುತ್ತಿದ್ದರೆ ದಲಿತರಿಗೆ ರಾಜಕೀಯ ಪ್ರಜ್ಞೆಯ ಅರಿವಾಗದೇ ಇರುವುದು ತಿಳಿಯುತ್ತದೆ. ರಾಜಕೀಯದ ಕುತಂತ್ರಗಳಿಗೆ, ಹಣ, ಹೆಂಡ, ಮಾಂಸ, ಬಟ್ಟೆ, ಒಡವೆಗಳ ಆಸೆ-ಅಮಿಷಗಳಿಗೆ ಮರುಳಾಗಿ ರಾಜಕೀಯ ಸಮಾನತೆಗಾಗಿ ಅಂಬೇಡ್ಕರ್ ಹೋರಾಟದಿಂದ ತಂದುಕೊಟ್ಟ ಓಟಿನ ಹಕ್ಕನ್ನು ಕ್ಷಣಿಕ ಆಸೆಗಳಿಗೆ ಬಲಿಕೊಟ್ಟು ನಿರಂತರ ಶೋಷಣೆಗೆ ಅಣಿಯಾಗುತ್ತಿರುವ ದುರಂತವನ್ನು ತಿಳಿಸುತ್ತದೆ.

"ಗಾಂಧಿದಾಸ; ಸೆಂಟ್ ಪರ್ಸೆಂಟ್ ಕರೆಟ್ಟ್ ಸಾರ್. ಇದೆನ್ನೆಲ್ಲಾ ಸಪ್ಲೈ ಮಾಡೋಕೆ ನಾನೆ ಸಾರ್ ಏಜೆಂಟು. ಏನೋ ಸಾರ್ ಶೋಷಿತ ಜನಕ್ಕೆ ನಂದೂ ಒಂದು ಅಳಿಲು ಸೇವೆ ಆಗ್ತಾ ಇದೆ ಸಾರ್"[40] ಎನ್ನುವ ಮಾತುಗಳಲ್ಲಿ ವಿದ್ಯಾವಂತ ಪ್ರಜ್ಞಾವಂತ ದಲಿತರೂ ಕೂಡ ಈ ಕುತಂತ್ರ ರಾಜಕೀಯದ ಬಲೆಯಲ್ಲಿ ಬಿದ್ದು ಅವರ ಸ್ವಹಿತಾಸಕ್ತಿಗಾಗಿ ತಾನು ಬಲಿಯಾಗದೇ, ಇಡೀ ಸಮುದಾಯವನ್ನು ಶೋಷಣೆಯ ಕೂಪದಲ್ಲೇ ಉಳಿಯುವಂತೆ ಮಾಡುತ್ತಿದೆ. ಅವರೂ ಅಧಿಕಾರವನ್ನು ಪಡೆಯದೇ ಹಾಗೆ ಮಾಡಿ ಗುಲಾಮರಾಗಿಯೇ ಬದುಕುವ ಹುನ್ನಾರವೂ ಕೂಡ ದಲಿತರಲ್ಲಿಯೇ ದಲಿತರನ್ನು ತುಳಿಯುತ್ತಾ ದಲಿತರು ದಲಿತರನ್ನೇ ಮಟ್ಟಹಾಕಿ ತನ್ನ ಸಮುದಾಯವನ್ನು ಏಣಿಯಾಗಿ ಬಳಸಿಕೊಂಡು ಕೆಳಕ್ಕೆ ತಳ್ಳುವ ನೈಜ ಚಿತ್ರಣವನ್ನು ಕಟ್ಟಿಕೊಡುತ್ತದೆ. ಇಂದಿಗೂ ಈ ಸ್ಥಿತಿಯೇ ಮುಂದುವರೆದಿರುವುದನ್ನು ಕಾಣುತ್ತೇವೆ. ಈ ಆಧುನಿಕ ಯುಗದಲ್ಲಿ ಹೆಂಡ, ಬಟ್ಟೆಗಳಿಗೆ ಬದಲಾಗಿ ಹಣ, ಒಡವೆ, ಗೃಹೋಪಯೋಗಿ ಸಾಮಾಗ್ರಿಗಳು ಬಂದಿವೆ ಅಷ್ಟೇ.

'ಏಕಲವ್ಯ' ನಾಟಕ ಜಾತಿ, ವರ್ಗ, ವರ್ಣ ವ್ಯವಸ್ಥೆಯ ವಿರುದ್ಧ ಕ್ರಾಂತಿಯಾಗಿದ್ದರೂ ಕೂಡ, ನಾಟಕದ ೮ನೇ ದೃಶ್ಯ ಸೈನಿಕರ ನಡುವಿನ ಸಂಭಾಷಣೆಯನ್ನು ಹಾಸ್ಯದ ಹಿನ್ನೆಲೆಯಲ್ಲೇ ಚಿತ್ರಿಸಿದ್ದಾರೆ. ಹೆಂಡತಿಯ ಭಯದಿಂದ ಸೈನಿಕ ಅವಳ ಹೊಡೆತದಿಂದ ತಪ್ಪಿಸಿಕೊಳ್ಳಲು ಆತನು ಮಾವಿನ ಮರವನ್ನು ಆಶ್ರಯಿಸಿಕೊಂಡು ಕುಳಿತುಕೊಳ್ಳುವ ಪ್ರಸಂಗ ಬಂದಿದೆ. ಅಂದಿನ ರಾಜಮಹಾರಾಜರು ರೈತರು, ಕೂಲಿಕಾರ್ಮಿಕರನ್ನು, ಕಸುಬುದಾರರಲ್ಲಿ ಧಾರ್ಮಿಕ ಮೌಢ್ಯವನ್ನು ತುಂಬಿ ಬಲಿಕೊಟ್ಟು ತಮ್ಮ ರಾಜಕೀಯ ವ್ಯವಸ್ಥೆ ಹೇಗೆ ಕಾಪಾಡಿಕೊಂಡು ವಿಸ್ತರಿಸಿಕೊಂಡು ಹೋಗುತ್ತಿದ್ದಾರೆಂದರೆ "ಸೈನಿಕರು ಗೆದ್ದು ಬಂದರೆ ರಾಜಮರ್ಯಾದೆ, ಘನತೆ, ಗೌರವ ಇಲ್ಲಿ ಸಿಕ್ಕುತ್ತದೆ. ಸತ್ತರೆ ವೀರಸ್ವರ್ಗ ಸ್ವರ್ಗಲೋಕಕ್ಕೆ ರಂಭೆ

ಉರ್ವಶಿಯರೇ ಬಂದು ಕರೆದೊಯ್ಯುತ್ತಾರೆ ಎಂಬ ಪೂರಕ ವಿಷಯ ನಮಗೆ ವೀರಗಲ್ಲುಗಳಲ್ಲೂ ಸಿಗುತ್ತವೆ. ಅದೇ ಚಿತ್ರಣವನ್ನು ಕೆತ್ತುತ್ತಾರೆ. ಇದೆಲ್ಲವೂ ಕೂಡ ಮೇಲ್ವರ್ಗದ ರಾಜರು ತಮ್ಮ ಸ್ವಾರ್ಥಸಾಧನೆಗೆ ಈ ರೀತಿಯಾಗಿ ಅವರಿಗೆ ಪ್ರಚೋದನಕಾರಿ ಅಂಶಗಳನ್ನು ತುಂಬಿ, ತಮ್ಮ ಉಳಿವಿಗಾಗಿ ಎಲ್ಲರನ್ನು ಬಲಿತೆಗೆದುಕೊಳ್ಳುತ್ತಿದ್ದರು ಎಂಬುದನ್ನು ಸೂಕ್ಷ್ಮವಾಗಿ ನಾಟಕ ತಿಳಿಯ ಪಡಿಸುತ್ತದೆ.

ಭಾರತ ದೇಶ ಬ್ರಿಟಿಷ್‌ರಿಂದ ಸ್ವಾತಂತ್ರ್ಯವನ್ನು ಪಡೆದರೂ ಈ ದೇಶದ ದಲಿತರಿಗೆ, ಬಡವರಿಗೆ, ಶೋಷಿತರಿಗೆ ಇಂದಿಗೂ ಬರದೇ ಹಾಗೆ ಉಳಿದಿದೆ. '೪೭ರ ಸ್ವಾತಂತ್ರ್ಯ' ಎಂಬ ಕವಿತೆ ಇದನ್ನ ತಿಳಿಸುತ್ತದೆ. ಸ್ವಾತಂತ್ರ್ಯ, ಸಮಾನತೆ, ಸೋದರತೆಯ ಉದ್ದೇಶ ಇಂದಿಗೂ ನೇರವೇರದೆ ಕನಸಾಗಿ ಸ್ವಾತಂತ್ರ್ಯದ ಪ್ರತಿಯೊಂದು ಬಾರಿಯೂ ಸಂಭ್ರಮದಿಂದಲೇ ಆಚರಿಸಿಕೊಂಡು ಬರುತ್ತಿರುವುದು ವಿಪರ್ಯಾಸವಾದರೂ ಸತ್ಯವಾಗಿದೆ. ನಿಜವಾಗಿಯೂ ಬ್ರಿಟಿಷರಿಂದ ಸ್ವಾತಂತ್ರ್ಯವನ್ನು ಪಡೆದಿರುವವರು ಯಾರು, ಯಾರಿಗೆ ಸ್ವಾತಂತ್ರ್ಯವೆಂಬುದು ಬಂದಿದೆ ಎಂಬುದನ್ನು ಈ ಕವಿತೆಯ ಮೂಲಕ ಪ್ರತಿಪಾದಿಸುತ್ತಾರೆ.

> **"ಯಾರಿಗೆ ಬಂತು ಎಲ್ಲಿಗೆ ಬಂತು**
> **ನಲವತ್ತೇಳರ ಸ್ವಾತಂತ್ರ್ಯ**
> **ಟಾಟಾಬಿರ್ಲಾ ಜೋಬಿಗೆ ಬಂತು**
> **ಜನಗಳ ತಿನ್ನುವ ಬಾಯಿಗೆ ಬಂತು**
> **ನಲವತ್ತೇಳರ ಸ್ವಾತಂತ್ರ್ಯ"(ನಲವತ್ತೇಳರ ಸ್ವಾತಂತ್ರ್ಯ)**

ಈ ಸ್ವಾತಂತ್ರ್ಯಕ್ಕೆ

> **"ಸಾವಿರಾರು ಜನ ಗೋರಿಯಾದರು**
> **ಲಕ್ಷ ಲಕ್ಷ ಜನ ಗಲ್ಲಿಗೇರಿದರು**
> **ರೈತ ಕಾರ್ಮಿಕರು ರಕ್ತವ ಕೊಟ್ಟರು" (೪೭ರ ಸ್ವಾತಂತ್ರ್ಯ)**

ಅದರ ನಿಜವಾದ ಪ್ರತಿಫಲವನ್ನು ಉಣ್ಣುತ್ತಿರುವವರು ಧಣಿಗಳು, ಉಳ್ಳವರು, ಪುರೋಹಿತಶಾಹಿಗಳು, ರಾಜಕಾರಣಿಗಳು, ಅಧಿಕಾರಸ್ಥರೇ ವಿನಹಃ ಸಾಮಾನ್ಯರ ಬಳಿಗೆ ಸ್ವಾತಂತ್ರ್ಯವೆನ್ನುವುದು ಇನ್ನೂ ಮರೀಚಿಕೆಯಾಗಿ ಉಳಿದಿದ್ದು, ಕರಾಳ ಬದುಕನ್ನು ನಡೆಸುತ್ತಲೇ ಬರುತ್ತಿದ್ದಾರೆ. ಸ್ವಾತಂತ್ರ್ಯದ ಕನಸು ಈಡೇರದೇ ಹೋಗಿರುವುದು ದುರಂತವೇ ಸರಿ. ಇದು ಬರಬೇಕಾದವರಿಗೆ ಬರದೇ ಹೋಯಿತೆಂಬ ನೋವು ದುಃಖವನ್ನು ಕವಿಯ ಈ ಸಾಲುಗಳನ್ನು ಹತಾಶಯ ಜೊತೆಯಲ್ಲೆ ಆಳದಲ್ಲಿ ಸಿಟ್ಟುಯಿರುವುದನ್ನು ಹೇಳುತ್ತದೆ.

"ಬಡವರ ಮನೆಗೆ ಬರಲಿಲ್ಲ

ಬೆಳಕಿನ ಕಿರಣ ತರಲಿಲ್ಲ

ಗೋಳಿನ ಕಡಲನು ಬತ್ತಿಸಲಿಲ್ಲ

ಸಮತೆಯ ಹೂವನು ಅರಳಿಸಲಿಲ್ಲ" (೪೭ರ ಸ್ವಾತಂತ್ರ್ಯ)

ಹಿಂದೂಗಳಿಂದ, ಪುರೋಹಿತಶಾಹಿ ರಾಜಕೀಯ ಅಧಿಕಾರಸ್ಥರಿಂದ ಶೋಷಿತರು, ಬಡವರು, ರೈತರು, ದಲಿತರು ನ್ಯಾಯವನ್ನು ಹಕ್ಕನ್ನು ಕೇಳುತ್ತಾ ತಮ್ಮ ನೋವನ್ನು ತೋಡಿಕೊಂಡರೆ ಬಂಗಾರದ ಭರವಸೆಗಳನ್ನು ನೀಡಿ ಕಾಲ ನೂಕುವ ಅಧಿಕಾರದ ಮಿಂಡರು ಜನಸಾಮಾನ್ಯರ ಮೇಲೆಯೇ ದೌರ್ಜನ್ಯ ಮಾಡುತ್ತಿದ್ದಾರೆ. ಹಿಂದೆ ನಾವು ಬ್ರಿಟಿಷರ ಹತ್ತಿರ ಸ್ವಾತಂತ್ರ್ಯವನ್ನು ಕೇಳಿದಾಗ ಅವರು ನಡೆದುಕೊಳ್ಳುತ್ತಿದ್ದ ರೀತಿಯಲ್ಲೇ ಈಗ ಇವರು ನಡೆದುಕೊಳ್ಳುವ ರೀತಿಯ[illegible]. ಪ್ರಜಾಪ್ರಭುತ್ವದ ಹೆಸರಿನಲ್ಲಿ ನಿರಂಕುಶ ಮನಸ್ಥಿತಿಯ ಆಡಳಿತವನ್ನು ನಡೆಯುತ್ತಿದ್ದಾರೆ ಎಂಬುದಕ್ಕೆ ಈ ಕವಿತೆ ಉದಾಹರಣೆಯಾಗಿದೆ.

"ಜನಗಳ ಬಡಿಯಿತು ದನ ಬಡಿದಂತೆ

ಅನ್ನ ಕೇಳಿದಾಗ ನೋವ ಹೇಳಿದಾಗ

ರೈತ ಕಾರ್ಮಿಕರು ನ್ಯಾಯ ಕೇಳಿದರೆ

ಗುಂಡೇಟಿನ ಪಾಠ" (ಕಪ್ಪು ಹಾಡಿನ ಹಾಡು)

ಹೀಗೆ ಶತ-ಶತಮಾನಗಳಿಂದ ಈ ಅಧಿಕಾರಿಶಾಹಿಗಳ ಮೋಸ, ವಂಚನೆ, ಆಮಿಷಗಳಿಗೆ ತುತ್ತಾಗಿ ತಮ್ಮನ್ನೇ ಮಾರಿಕೊಂಡರು. ಅಧಿಕಾರಿಗಳ ಮದಕ್ಕೆ ತಮ್ಮ ರಕ್ತವನ್ನು ಹರಿಸಿ, ಸುಳ್ಳು ಭಾಷಣಗಳ ಹಳ್ಳಕ್ಕೆ ಬಿದ್ದು ನೊಂದು ಕೋಪಗೊಂಡು ಕೆರಳಿದ ಜನರು ಎಚ್ಚೆತ್ತು ಕೊಂಡಿದ್ದಾರೆ. ಕ್ರಾಂತಿಯನ್ನು ಮಾಡುತ್ತಾ ಬರುತ್ತೇವೆ ನಾವು ಅಧಿಕಾರಕ್ಕೆ ಬರುತ್ತೇವೆ ಎಂಬ ಮಾತುಗಳು 'ನೆಲಸಮ' ನಾಟಕ ಕೊನೆಯಲ್ಲಿ ಹಾಡುಗಾರರ ಹಾಡಿನಲ್ಲಿದೆ.

"ತುಳಿಯುವ ಜನರನ್ನು ಸುಮ್ಮನೆ ಬಿಡಲಾರೆ

ಮನೆ ಮನೆಯ ಮಂಡಲ ಗಿಡದಲ್ಲಿ / ನಾವೆಲ್ಲ

ಬರುತ್ತೀವಿ ಕೆಂಪನೆ ಹೂವಾಗಿ"

ಹೀಗೆ ವೇದಿಕೆಗಳಲ್ಲಿ ಚುನಾವಣೆಗಳ ಸಮಯದಲ್ಲಿ ಹೊಸ ಕನಸಿನಸೌಧಗಳನ್ನು ಬಡವರ ಮನಸ್ಸಿನಲ್ಲಿ ನಿರ್ಮಿಸುವ ರಾಜಕಾರಣಗಳು, ಬಡವರ ಹಕ್ಕನ್ನು ಕಸಿದುಕೊಂಡು ಇವರು ಬಂಗಲೆಗಳಲ್ಲಿ ವಾಸಿಸುವ ಇವರು ನಿಜವಾದ ಸತ್ಯಗಳಿಂದ ನಮ್ಮನ್ನು ದೂರಮಾಡಿ ಕತ್ತಲೆಯ ಬದುಕಿನಲ್ಲೇ ವಾಸಿಸುವಂತೆ ಮಾಡಿದವರ ವಿರುದ್ಧ ಇಂದು ಸಿಡಿದು ನಿಂತಿದ್ದಾರೆ. ಹೊಸಕ್ರಾಂತಿಯನ್ನು ಮಾಡಲು ಹೊರಟಿದ್ದಾರೆ.

ಅದರ ಪರಿಣಾಮವಾಗಿಯೇ ಗುಡಿಸಲುಗಳು ಗುಡುಗುತಿವೆ ಬಂಗಲೆ ಗಳು ನಡುಗುತ್ತಿವೆ ಎಂಬ 'ಕ್ರಾಂತಿಪರ' ಕವಿತೆ ಕ್ರಾಂತಿಯ ಸಂದೇಶ ಸಾರುತ್ತದೆ.

ನಮ್ಮ ಇಷ್ಟು ದಿನದ ನೋವಿನ ಯಾತನೆಯೇ ನಮ್ಮನ್ನು ಎಚ್ಚರ ಗೊಳಿಸಿದೆ ಎಂಬ ಮಾತುಗಳು ಇಲ್ಲಿ ಕೇಳಿಬರುತ್ತದೆ.

"ನಿಮ್ಮ ಬೇಟೆಯುತ್ಸವದಲಿ ಕುರಿಗಳಾಗಿ ಸತ್ತ
ಜನರು ಬಂದಿರುವರು ಹುಲಿಗಳಾಗಿ ಗರ್ಜನೆಯನ್ನು
ಕೇಳಿರಿ" (ಬಂದಿರುವರು ಹುಲಿಗಳಾಗಿ)

ಇಲ್ಲಿ ಅವಮಾನದಲ್ಲಿ ಬೆಂದು- ನೊಂದವರು ಸಿಡಿದರೆ ಅದನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ ಎಂಬ ಎಚ್ಚರಿಕೆಯನ್ನು ಸಹ ವ್ಯಕ್ತಪಡಿಸಲಾಗಿದೆ. ಅಧಿಕಾರದ ಮದದಿಂದ ಮೆರೆಯುತ್ತಿರುವ, ಕುಣಿಯುತ್ತಿರುವ ಅಧಿಕಾರಶಾಹಿಗಳು ಬಡವರ ಜೀವನವನ್ನು ಹಿಂಡಿ ಹಿಪ್ಪೆ ಮಾಡಿದವರು. ಅವರ ಓಟುಗಳನ್ನು ಮಾರಿಕೊಂಡು ಹೆಂಡ ಕುಡಿದು ಬೀದಿಗಳಲ್ಲಿ ಬಿದ್ದು ಒದ್ದಾಡುವ ಜನರು ತಮ್ಮ ತನು ಮನ ಧನವನ್ನೇಲ್ಲಾ ಕಳೆದುಕೊಂಡು ಅನಾಥರಾಗಿದ್ದ ಜನರಿಗೆ ಆಶಾಕಿರಣವಾಗಿ ಬಂದು ದಾರಿದೀಪವಾದವರು ಡಾ.ಅಂಬೇಡ್ಕರ್‌ರವರು ಅವರ ಹೋರಾಟ, ಚಿಂತನೆಗಳಿಂದ ಚಿಂತಿಸಿ, ಜಾಗ್ರತರಾಗಿ ಒಂದಾಗಿ ಕ್ರಾಂತಿಯನ್ನು ಮಾಡಲು ಮೊದಲು ಮಾಡಿದರು.

"ಬಡ್ಡಿಯನ್ನು ತೆತ್ತೋರು ಭಾಷಣಗಳ ಬೆಂಕಿಯಲ್ಲಿ
ಬೆಂದು ಬೂದಿಯಾದೊರು ನನ್ನ ಜನಗಳು"(ನನ್ನ ಜನಗಳು)

ಇಂದು ಶಿಕ್ಷಣ ಪಡೆದು ರಾಜಕಾರಣಿಗಳ ರಾಜಕೀಯ ಮರ್ಮವನ್ನು ಗೋಸುಂಬಿತನವನ್ನು ಕಂಡು, ಬೇಸತ್ತು ನಮ್ಮ ಉದ್ಧಾರ ನಿಮ್ಮಿಂದ ಸಾಧ್ಯವಿಲ್ಲ, ನಮ್ಮ ಉದ್ಧಾರವನ್ನು ನಾವೇ ಮಾಡಿಕೊಳ್ಳುತ್ತೇವೆ. ನಮ್ಮನ್ನು ಇಲ್ಲಿಯ ತನಕ ನಮ್ಮನ್ನು ಆಳ್ವಿಕೆ ಮಾಡಿದ್ದು ಸಾಕುಮಾಡಿ ಈಗ ನಾವು ಆಳಿಸಿಕೊಳ್ಳಲು ಸಿದ್ಧವಿಲ್ಲ. ನಾವೇ ನಿಮ್ಮೆಲ್ಲರನ್ನು ಆಳಲು ಅಣಿಯಾಗಿ ಬರುತ್ತಿದ್ದೇವೆ. ನಮಗೆ ಬುದ್ಧ, ಬಸವ, ಅಂಬೇಡ್ಕರ್, ಜ್ಯೋತಿಬಾಪುಲೆ, ಪೆರಿಯಾರ್‌ರ ಮಾರ್ಗದಲ್ಲಿ ಸಾಗುತ್ತ ಸ್ವಾಭಿಮಾನಿ ಶೂರರಾಗಿ, ಸಮಾನತೆಯ ಸಮಾಜ ನಿರ್ಮಾಣ ಮಾಡಲು ಮುನ್ನುಗ್ಗಿ ಬರುತ್ತಿರುವೆವು. ಅಧಿಕಾರದ ಗದ್ದುಗೆಯನ್ನು ಬಿಟ್ಟು ಸರಿದು ನಿಲ್ಲಿ ಇಲ್ಲವಾದರೆ ನಮ್ಮ ರೊಚ್ಚಿನ ಕೆಚ್ಚಿಗೆ ಕೊಚ್ಚಿ ಹೋಗುತ್ತೀರ ಎಂಬಂತೆ ಬರುತ್ತಿರುವರು ದಲಿತರು.

"ದಲಿತರು ಬರುವರು ದಾರಿ ಬಿಡಿ
ದಲಿತರ ಕೈಗೆ ರಾಜ್ಯ ಕೊಡಿ
ಕೋಟಿ ಕೋಟಿ ಕನಸುಗಳೊಂದಿಗೆ

ಹತ್ತಿ ಉರಿಯುವ ಮನಸುಗಳೊಂದಿಗೆ
ಗುಡುಗುಮಿಂಚಿನ ಘೋಷಣೆಯಲ್ಲಿ
ಭೂಕಂಪನ ಭಾಷೆಗಳಲ್ಲಿ
ಬಂತೋ ದಲಿತರ ಮೆರವಣಿಗೆ
ನೆಲಕ್ಕೆ ಕಾಲುಗಳ ಬರವಣಿಗೆ" (ದಲಿತರು ಬರುವರು)

ಇಡೀ ಕವಿತೆ ದಲಿತರ ರಾಜಕೀಯ ಹೋರಾಟದ ದಾರಿಯನ್ನು ತಮ್ಮ ಹಿಂದಿನ ಬದುಕಿನ ನೋವುಗಳಿಗೆ ಪ್ರತೀಕಾರವಾಗಿ ತಮ್ಮದೇ ದಾರಿಯಲ್ಲಿ ವಿಮೋಚನಾ ಮಾರ್ಗದಲ್ಲಿ ಸಾಗುತ್ತಿದೆ. ಆ ಪಥದಲ್ಲಿ ನವಕ್ರಾಂತಿಯನ್ನು ಬಿತ್ತಿ ಜಾತಿ ಮತಗಳ ಸಂಕೋಲೆಯನ್ನು ಮುರಿದು ತಮ್ಮನ್ನು ಹುರಿದು ತಿಂದ ಜಮೀನುದಾರರ ಹಣವಂತರ ಗುಂಡಿಗೆ ಒದ್ದು ಪ್ರಾಣವನ್ನು ಲೆಕ್ಕಿಸದೇ ಪ್ರವಾಹದಂತೆ ನುಗ್ಗಿಬರುತ್ತಿರುವ ಇವರುಗಳು...

"ದೇವರು ಗುರುಗಳ ತಿಪ್ಪೆಗೆ ತಳ್ಳಿ
ಮಂತ್ರಿಶಾಸಕರ ಮೋರಿಗೆ ನೂಕಿ
ತಾವೇ ಕಂಡ ಹೊಸ ದಾರಿಯಲಿ
ಹೊಂಟರು ದಲಿತರು ಮೆರವಣಿಗೆ
ಉರಿಯುವ ಪಂಜು ಕೈಯಲ್ಲಿ
ಕ್ರಾಂತಿಯ ಕಿಡಿಗಳು ಕಣ್ಣುಗಳಲ್ಲಿ
ಸಿಡಿದರು ಕೆಂಡದ ಉಂಡೆಗಳು (ದಲಿತರು ಬರುವರು)

ಹಾಗೆ ಬಂದ ದಲಿತರು ತಾವು ಇಲ್ಲಿಯವರೆಗೂ ತೋರುತ್ತಿದ್ದ ಹತಾಶೆ, ನೋವು, ದುಃಖಗಳಿಗೆ ಚೈತನ್ಯವನ್ನು ತುಂಬಿ ನವ ಭಾರತದ ಇತಿಹಾಸವನ್ನು ಬರೆಯಲು ಭಾರತದ ಶ್ರಮಿಕ, ಭೂಮಿತಾಯಿಯ ಮಕ್ಕಳ ಮೂಲನಿವಾಸಿಗಳ ಸಂಸ್ಕೃತಿಯನ್ನು ಮರಳಿ ಕಟ್ಟುವ ಪ್ರಯತ್ನದಲ್ಲಿಯೇ ಮತ್ತೆ ಪ್ರಕೃತಿಯ ಪಾಲಕರಾಗಿ, ಸಮಾನತೆಯ ಮನಸ್ಥಿತಿಗೆ ಸೋದರತೆಯ ಪ್ರೀತಿಯಿಂದ, ಬುದ್ಧ ಭೂಮಿಯಲ್ಲಿ ಅಶೋಕನ ನಾಡಲ್ಲಿ ಮತ್ತೆ ಮಾನವೀಯ ಮೌಲ್ಯಗಳುಳ್ಳ ನಿಜವಾದ ಪ್ರಜಾಪ್ರಭುತ್ವವನ್ನು ಅವರ ಆಶಯಗಳನ್ನು ಈಡೇರಿಸುವ ನಿಟ್ಟಿನಲ್ಲಿ ಸಾಗುತ್ತಿರುವ ದಲಿತರ ಮೆರವಣಿಗೆಯಿಂದ ಸಮಾಜದಲ್ಲಿ ಹೊಸಬೆಳಕು ಮೂಡುತ್ತಿದೆ. ಬಡವ, ಶೋಷಿತ, ಅಸ್ಪೃಶ್ಯನ ಮನದಲ್ಲಿ ಬೆಳಕಿನ ಬುಗ್ಗೆ ಚಿಮ್ಮಲಾರಂಭಿಸಿದೆ. ಅವರ ಎದೆಗಳಲ್ಲಿ ತುಂಬುತ್ತಿದೆ ಉತ್ಸಾಹ, ಮನಸ್ಸಿನ ಕಣ ಕಣದಲ್ಲೂ ನವ ಉಲ್ಲಾಸ ಹರಿಯತೊಡಗಿದೆ.

"ದಲಿತ ಭಾರತದ ಬಾವುಟದಲ್ಲಿ
ನಿಂತರು ರೈತರು ಕಾರ್ಮಿಕರು
ಬಿರಿವವು ಹೂವು ಬನಬನದಲ್ಲಿ
ಹಾರಿದೊ ಹಕ್ಕಿ ನೂರಾರು
ಕಂಡಿತು ಕೆಂಪು ಮೂಡಣದಲ್ಲಿ
ಬೆಳಕಾಯಿತು ಬಡವರಿಗೆ" (ದಲಿತರು ಬರುವರು)

ಡಾ.ಸಿದ್ಧಲಿಂಗಯ್ಯನವರಿಗೆ ರಾಜಕಾರಣದ ಒಳಹೋಗುಗಳನ್ನು ಸೂಕ್ಷ್ಮವಾಗಿಯೇ ತಿಳಿದಿದ್ದವರು. ರಾಜಕೀಯ ಪ್ರಜ್ಞೆಯದೃಷ್ಟಿಕೋನದಿಂದಲೂ ಅವರ ಸಾಹಿತ್ಯ ರಾಜಕೀಯ ರಾಜಕಾರಣಿಗಳ ಹುಚ್ಚುಕೋಡಿಯ ಮನಸ್ಸನ್ನು ಅವರ ಊಸರವಳ್ಳಿಯ ಅವತಾರಗಳನ್ನು ತಾವು ವಿಧಾನಪರಿಷತ್ತು ಸದಸ್ಯರಾಗಿದ್ದಾಗ ಸ್ವತಃ ತಾವು ನೋಡಿದ ರಾಜಕಾರಣಿಗಳ ಗೋಸುಂಬಿತನ, ಕುತಂತ್ರ, ಕಪಟ ರಾಜಕೀಯದಿಂದ ನನ್ನ ಜನಗಳ ವಿಮೋಚನೆ ಸಾಧ್ಯವಿಲ್ಲವೆಂದು ತಿಳಿದು ಜನರಲ್ಲಿ ಜಾಗೃತಿಯನ್ನು ಮೂಡಿಸಿ ನವಕ್ರಾಂತಿಗೆ ಸೋಪಾನವನ್ನು ಹಾಕಿ ರಾಜಕೀಯ ಅಧಿಕಾರದ ಕೀಲಿಕೈಯಿಂದ ನಮ್ಮ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳೋಣ ಎಂಬ ದಿಟ್ಟತನ ಮನೋಭಾವದಿಂದ, ತಲೆಬಾಗಿದ್ದ ದಲಿತರು ಸ್ವಾಭಿಮಾನದಿಂದ ಧೈರ್ಯದಿಂದ ತಲೆಯೆತ್ತಿ ಹೋರಾಟವನ್ನು ಮಾಡುತ್ತಿದ್ದಾರೆ. ಇಲ್ಲಿಯ ತನಕ ನೀವು ಅಧಿಕಾರ ಮಾಡಿದ್ದು ಸಾಕುಮಾಡಿ. ನಾವು ಅಲ್ಲಿಗೆ ಬರುತ್ತೇವೆ ಎಂಬ ಎಚ್ಚರಿಕೆಯ ಮಾತುಗಳನ್ನಾಡಿದ್ದಾರೆ.

"ದಲಿತರು ಬರುವರು ದಾರಿ ಬಿಡಿ
ದಲಿತರು ಬಂದರು ರಾಜ್ಯಬಿಡಿ".

ಇಡೀ ದಲಿತ ಸಮುದಾಯ ರಾಜಕೀಯ ಅಧಿಕಾರವನ್ನು ಪಡೆದು ತೀರಲೇಬೇಕೆಂಬ ಛಲದಿಂದ ಹೋರಾಡಿರುವ ಕ್ರಮ ಕ್ರಾಂತಿಕಾರಕ. ಏಕೆಂದರೆ ದಲಿತರು ಯಾವುದೇ ರೀತಿಯ ಆಸೆ ಆಕಾಂಕ್ಷೆಗಳಿಗೆ ಮನಸೋಲದೇ ಸಮುದಾಯದ ಏಳ್ಗೆಯೇ ಮುಖ್ಯವೆಂಬ ರಾಜಕೀಯ ಪ್ರಜ್ಞೆಯ ಅವಶ್ಯಕತೆ ಜವಾಬ್ದಾರಿಯನ್ನು ತಿಳಿದುಕೊಂಡು ಭೀಮಮಾರ್ಗದಲ್ಲಿ ರಾಜಕೀಯದ ಅಧಿಕಾರವನ್ನು ಪಡೆಯಬೇಕು ಎಂಬ ಗಂಭೀರ ಆಲೋಚನೆ ದಲಿತ ಸಮೂಹಕ್ಕೆ ಬಂದರೆ ಇಡೀ ಶೋಷಿತರ ಬದುಕಿನ ತಮ್ಮ ಸಮಸ್ಯೆಗಳಿಗೆ ತಾವೇ ಪರಿಹಾರವನ್ನು ಕಂಡುಕೊಳ್ಳಲು ಸಾಧ್ಯವಾಗುತ್ತದೆ. ಆಗ ನಮ್ಮ ಪ್ರಜಾಪ್ರಭುತ್ವದ ಮೌಲ್ಯಗಳು ಸಕಾರಗೊಳ್ಳುತ್ತದೆ. ಅದಕ್ಕಾಗಿ ನಾವು ರಾಜಕೀಯ, ರಾಜ್ಯಾಧಿಕಾರದ ಮಹತ್ವವನ್ನು ತಿಳಿಸಿ ನಮಗೆ ಇರುವ ಓಟಿನ ಶಕ್ತಿಯ ಬಗ್ಗೆ ಜಾಗೃತಿ ಮೂಡಿಸಿ ಅಂಬೇಡ್ಕರ್ ಕನಸಿನಂತೆ ಈ ದೇಶವನ್ನು ಆಳುವವರು ನಾವೆಂದು ತಿಳಿದು ದಲಿತರ; – ಬಡವರ ರೈತ ಕಾರ್ಮಿಕರ ಸಮಸ್ಯೆಗಳ ವಿಮೋಚನೆ

ರಥವನ್ನು ಸಮಾನತೆಯ ಹಾದಿಯಲ್ಲಿ ನಡೆಸಲು ಸಾಧ್ಯವಾಗುತ್ತದೆ ಎಂಬುದನ್ನು ಡಾ.ಅಂಬೇಡ್ಕರ್‌ರವರ ಚಿಂತನೆಯ ನೆಲೆಗಟ್ಟಿನ ಮೇಲೆ ಡಾ.ಸಿದ್ಧಲಿಂಗಯ್ಯನವರ [illegible]ರಾಜಕೀಯ ಚಿಂತನೆಯನ್ನು ತಮ್ಮ ಸಾಹಿತ್ಯದಲ್ಲಿ ಮೂಡಿಸುತ್ತ ಜನಸಮುದಾಯದ ಆಂದೋಲನಕ್ಕೆ ಬೆಂಬಲವಾಗಿ ನಿಂತಿದೆ. ಅದನ್ನು ನಾವು ಧನಾತ್ಮಕವಾಗಿ ಗ್ರಹಿಸಿ ಮುನ್ನಡೆಯುವ. ಮುನ್ನಡೆಸುವ ಜವಾಬ್ದಾರಿಗಳು ಇಂದಿನ ಮುಂದಿನ ಯುವ ದಲಿತರಲ್ಲಿ ಮೂಡಬೇಕಾಗಿದೆ ಎಂಬುದು ಇಂದಿನ ವಾತಾವರಣವನ್ನು ಗಮನಿಸಿದಾಗ ತಿಳಿದುಬರುತ್ತದೆ.

೪.೩ : ಧಾರ್ಮಿಕ ಚಿಂತನೆಗಳು

"ಮನುಷ್ಯನಿಗಾಗಿ ಧರ್ಮವಿದೆ, ಧರ್ಮಕ್ಕೋಸ್ಕರ ಮನುಷ್ಯನಿಲ್ಲ"[೭೭] ಎಂಬ ಡಾ.ಅಂಬೇಡ್ಕರ್‌ರವರ ಮಾತು ಎಷ್ಟು ಅರ್ಥಗರ್ಭಿತವಾಗಿದೆ. ಈಗಿನ ಮತಾಂಧರಿಗೆ ಸರಿಯಾಗಿ ತಿಳಿಯಬೇಕಾಗಿದೆ, ಕಲಿಯಬೇಕಾಗಿದೆ. ಧರ್ಮ ಎನ್ನುವುದು ಮನುಷ್ಯ ಮನುಷ್ಯರ ನಡುವಿನ ಮನುಷ್ಯತ್ವವನ್ನು ಗಟ್ಟಿಗೊಳಿಸಬೇಕು. ಮಾನವೀಯ ಮೌಲ್ಯಗಳನ್ನು ಮೈಗೂಡಿಸಿಕೊಳ್ಳುವಂತೆ ಮಾಡಿ ಈ ಸಮಾಜದಲ್ಲಿನ ಎಲ್ಲ ಜನರನ್ನು ಪ್ರೀತಿ, ಪ್ರೇಮ, ಕರುಣೆ, ಮಮತೆಯಿಂದ ನೋಡಿ, ಅವರೊಂದಿಗೆ ಕೂಡಿ ಬಾಳುವುದನ್ನು ಕಲಿಸುವುದು ಧರ್ಮವಾಗಿದೆ. ಆದರೆ ಹಿಂದು ಧರ್ಮದಲ್ಲಿ ಧರ್ಮ ಎನ್ನುವುದು ಚತುವರ್ಣಗಳ ಆಧಾರದ ಮೇಲೆ ನಿರ್ಮಾಣವಾಗಿರುವುದನ್ನು ಕಾಣುತ್ತೇವೆ. ಇಲ್ಲಿ ಅಸಮಾನತೆ, ಶೋಷಣೆ, ತಾರತಮ್ಯ, ಮೇಲು-ಕೀಳು ಎಂಬ ಮನೋಭಾವನೆಗಳನ್ನು ಮನುಷ್ಯನಲ್ಲಿ ಹುಟ್ಟಲು ಪ್ರೇರೆಪಿಸುತ್ತದೆ. ಅದಕ್ಕಾಗಿಯೇ ಮೇಲ್ವರ್ಗದ ಜನ ಇವರ ವಿರುದ್ಧ ಮಾತಾನಾಡಿದರೆ, ತಿರಸ್ಕಾರ ಮಾಡಿದರೆ ಅದು ಅಧರ್ಮ, ಅನೀತಿ, ಎಂಬ ಪಾಪ-ಪುಣ್ಯದ ಪರಿಕಲ್ಪನೆಗಳನ್ನು ಹುಟ್ಟುಹಾಕಿ ಧರ್ಮ, ಮತ್ತು ದೇವರ ಹೆಸರಿನಲ್ಲಿ ಮನುಷ್ಯರ ನಡುವೆ ಅಂತರವನ್ನು ಕಾಯ್ದುಗೊಳ್ಳುವಂತೆ ಮಾಡಿದರು.

ಮನುಷ್ಯ ಸ್ವತಂತ್ರ್ಯವಾಗಿ ಬದುಕುವುದನ್ನೇ ಕಸಿದುಕೊಂಡು ನೀನು ಧರ್ಮದ ಪ್ರಕಾರ ಹೀಗೆಯೇ ಬದುಕಬೇಕು. ಹೀಗೆ ನಿನ್ನ ನಡೆ-ನುಡಿ ಜೀವನ ಸಾಗಿಸಬೇಕೆಂದು ಕಟ್ಟಲೆಗಳನ್ನು ನಿರ್ಮಿಸಿ ಬಂಧನದಲ್ಲಿರಿಸಿದರು. ಇದರಿಂದ ಕೆಲವು ಜನಾಂಗಗಳಿಗೆ ಶಿಕ್ಷಣ, ಉದ್ಯೋಗ, ಆಸ್ತಿ ಹೊಂದುವುನ್ನು ನಿರಾಕರಿಸಿ ಹೆಜ್ಜೆ ಹೆಜ್ಜೆಗೂ ಅವಮಾನ, ದಬ್ಬಾಳಿಕೆ, ಶೋಷಣೆಯನ್ನು ಮಾಡುತ್ತಾ ಸ್ಪರ್ಶಿಸಲು ಅನರ್ಹರೆಂದೂ, ಇವರು ಮೇಲ್ವರ್ಗದ ಬೀದಿಗಳಲ್ಲಿ, ದೇವಾಲಯಗಳಿಗೆ ಪ್ರವೇಶ ಮಾಡಬಾರದೆಂದು, ಊರ ಹೊರಗೆ ಕೀಳುಮಟ್ಟದ ಕೆಲಸ ಮಾಡಿಕೊಂಡು ಬದುಕನ್ನು ಸಾರ್ಥಕಗೊಳಿಸಿಕೊಳ್ಳಬೇಕು. ಇಲ್ಲವಾದರೆ ಧರ್ಮ ನಿನ್ನನ್ನು ಶಿಕ್ಷಿಸುತ್ತದೆ. ಇದು ಪ್ರತಿಯೊಬ್ಬರಿಗೂ ದೇವರು ನೀಡಿರುವ ಆದೇಶ ಅದರಂತೆ ನಡೆದುಕೊಳ್ಳಬೇಕೇ ವಿನಹಃ ದೇವರ ವಾಕ್ಯವನ್ನು ಮೀರಿ ನಡೆಯಬಾರದು ಎಂಬುದನ್ನು ನೀತಿಯ ರೀತಿಯಲ್ಲೇ ಅನೀತಿಯ ಸಂಸ್ಕೃತಿಯನ್ನು ಇದೇ ಸತ್ಯವೆಂದು ಅಸತ್ಯವನ್ನು ಎಲ್ಲರ ಮನಗಳಲ್ಲೂ ಭಿತ್ತಿ ಬೆಳೆಸತೊಡಗಿದರು. ಅದು ಬೆಳೆದು ಮರವಾಗಿ ಆಳವಾದ ಬೇರೂರಿ ಬಿಟ್ಟಿದೆ. ಅದರಿಂದ ಈ ದೇಶದಲ್ಲಿ ಧರ್ಮವೆನ್ನುವುದು ಶೋಷಣೆಯ ಅಸ್ತ್ರವಾಗಿ ಜನಾಂಗೀಯ ದ್ವೇಷವಾಗಿ ಮಾರ್ಪಟ್ಟಿರುವುದು ಸೋಜಿಗವೇ ಸರಿ. ಈ ಧರ್ಮ ಭಾರತದಲ್ಲಿ ಕೋಮುವಾದಿ ಶಕ್ತಿಗಳು ಬೆಳೆಯಲು, ಅಸ್ಪೃಶ್ಯತೆ, ಅಸಮಾನತೆ ಜಾತಿ ವ್ಯವಸ್ಥೆಯ ಬೇರುಗಳನ್ನು ಭದ್ರಗೊಳಿಸುತ್ತಾ ಬಂದಿದೆ. ಅದರ ಜೊತೆಯಲ್ಲಿ ಕುರುಡು ನಂಬಿಕೆ, ಆಚರಣೆಗಳನ್ನು ಬೆಳೆಸುತ್ತಾ ಮೌಢ್ಯತೆಯ ಪರಮಾವಧಿಗೂ

ತಲುಪಿರುವುದನ್ನು ಕಾಣುತ್ತೇವೆ. ಅದಕ್ಕಾಗಿಯೇ ನಮ್ಮ ಈ ಸ್ಥಿತಿಗೆ ಧರ್ಮ, ದೇವರು ಕೂಡ ಒಂದು ರೀತಿಯಲ್ಲಿ ಕಾರಣವೇ. ಮನುಷ್ಯ ತನ್ನ ಸ್ವಾರ್ಥಕ್ಕಾಗಿ ಈ ರೀತಿಯ ತತ್ವ ಸಿದ್ಧಾಂತಗಳನ್ನು ಧರ್ಮದ ಮೂಲಕ ಹೇಳಲು ಹೊರಟಿದ್ದಾನೆ ಎಂಬುದನ್ನು ಡಾ.ಅಂಬೇಡ್ಕರ್ ಮನಗಂಡರು. "ಈ ಧರ್ಮ ಮತ್ತು ಈ ಸಾಮಾಜಿಕ ವ್ಯವಸ್ಥೆ ನಮ್ಮನ್ನು ಧ್ವಂಸಮಾಡಿದೆ. ಆದರೆ ಅದು ಇಲ್ಲಿಗೆ ನಿಲ್ಲುವುದಿಲ್ಲ. ಇದು ಹಿಂದುಗಳನ್ನು ಧ್ವಂಸಮಾಡುತ್ತದೆ. ಅಂತಿಮವಾಗಿ ಭಾರತವನ್ನು ಧ್ವಂಸ ಮಾಡುತ್ತದೆ"[೨೮] ಎಂದು ಎಚ್ಚರಿಕೆಯನ್ನು ನೀಡಿದರು. ಇದರಿಂದ ಜಾಗೃತರಾದವರು ಈ ಧರ್ಮ, ದೇವರುಗಳನ್ನು ಧಿಕ್ಕರಿಸಿ ತಮ್ಮ ಹಕ್ಕುಗಳಿಗೆ, ಸ್ಥಾನಮಾನಗಳಿಗೆ ಬೆಲೆ ಸಿಗಬೇಕು. ಸ್ವಾತಂತ್ರ್ಯ, ಸಮಾನತೆ ಅಂಬೇಡ್ಕರ್ ಆಶಯದಂತೆ ಸಿಗಬೇಕೆಂದು ಆಗ್ರಹಪಡಿಸಿದರು.

"ಬಾಲ್ಯದಲ್ಲಿಯೇ ನನ್ನ ಕಣ್ಣಿಗೆ ಬಿದ್ದು ನನ್ನ ಮನಸ್ಸನ್ನೇ ಬದಲಾಯಿಸಿದ ಪುಸ್ತಕ 'ದೇವರು ಸತ್ತ', ಇದನ್ನು ಓದಿ ಮೆಚ್ಚಿಕೊಂಡಿದ್ದೆ. ಕೆಲವರಿಗೆ ಓದಿಸಿ ಜ್ವರಬರಿಸಿದ್ದೇ. ಶಿಷ್ಟ ದೇವತೆಗಳು; ವೇದ ಪುರಾಣಗಳನ್ನು ಇದರ ಲೇಖಕ ಲೇವಡಿ ಮಾಡಿದ್ದಾನೆ. 'ದೇವರು ಸತ್ತ' ಎಂಬ ಕೃತಿಯ ಹೆಸರೇ ಕುತೂಹಲಕಾರಿ. ಅಧ್ಯಯನದ ಶೀರ್ಷಿಕೆಗಳು ಅಷ್ಟೇ ಗಮನ ಸೆಳೆಯುತ್ತದೆ. ದೇವರ ಬ್ಲಾಕ್‌ಮಾರ್ಕೆಟ್, ದೇವರಿಗೆ ಬುದ್ಧಿ ಇದೆಯೇ? ತಲೆ ಸಮನಿಲ್ಲದ ಕೈಲಾಗದ ದೇವರು ಸೃಷ್ಟಿಕರ್ತನೇ? ಇವು ಶೀರ್ಷಿಕೆಗಳು"[೨೯] ಹೀಗೆ ಡಾ.ಸಿದ್ಧಲಿಂಗಯ್ಯನವರು ಅಂಬೇಡ್ಕರ್ ಚಿಂತನೆಗಳಿಂದ ಪ್ರೇರಣೆಗೊಂಡು ದೇವರ ಸ್ಥಾನದಲ್ಲಿ ಅಂಬೇಡ್ಕರ್‌ರವರನ್ನು ದೇವರೆಂದು ಪೂಜಿಸುವ, ಪ್ರಾರ್ಥನೆ ಮಾಡುವ ಮನಸ್ಥಿತಿಯನ್ನು ತಮ್ಮ ಉದ್ಧಾರವನ್ನು ಮಾಡದ ದೇವರು ದೇವರೇ ಅಲ್ಲ ಎಂಬ ನಾಸ್ತಿಕವಾದಿಗಳಾಗಿದ್ದರು. ಇವರು ಪೆರಿಯಾರ್‌ರ "ದೇವರಿಲ್ಲ, ದೇವರಿಲ್ಲ, ದೇವರಿಲ್ಲವೇ ಇಲ್ಲ, ದೇವರನ್ನು ಸೃಷ್ಟಿಸಿದವನು ಮುಠ್ಠಾಳ. ದೇವರನ್ನು ಪ್ರಚಾರ ಮಾಡುವವನು ಅಯೋಗ್ಯ, ದೇವರಿಗೆ ನಮಸ್ಕರಿಸುವವನು ಕಾಡುಮೃಗ"[೩೦] ಮಾತುಗಳಿಂದ ಪ್ರೇರಣೆಯಾಗಿ ಸಭೆಯಲ್ಲಿ ಭಾಗವಹಿಸಿ ಒಡೆತಗಳನ್ನು ತಿದ್ದಿದ್ದಾರೆ. ಹಾಗೆಯೇ "ಬೂಸ ಚಳುವಳಿ"ಯ ಬಿ.ಬಸವಲಿಂಗಪ್ಪನವರು 'ದೇವರುಗಳನ್ನು ಚರಂಡಿಗೆ ಎಸೆಯಿರಿ" ಎಂಬ ಕರೆಯನ್ನು ಕೊಟ್ಟಿದ್ದರು. ಇವೆಲ್ಲ ಮಾತುಗಳನ್ನು ಚಿಂತನೆಗಳನ್ನು ಗಮನಿಸಿದಾಗ ದೇವರು ಧರ್ಮಗಳು ಮನುಷ್ಯನನ್ನು ಮೂಢನನ್ನಾಗಿ ಮಾಡಿದೆ ಎಂದು ಅರಿವಿಗೆ ಬಂದೇ ಬರುತ್ತದೆ. ಅದರಿಂದ ಆದ ತಮ್ಮ ಸ್ಥಿತಿಗತಿಗಳನ್ನು ತಿಳಿಸುತ್ತಲೇ ಅದರ ವಿರುದ್ಧ ನಿಂತು ಧಾರ್ಮಿಕವಾಗಿಯೂ ಸ್ವಾತಂತ್ರ್ಯದೆಡೆಗೆ ಸಾಗಿರುವುದನ್ನು ನಾವು ಗಮನಿಸಬಹುದು.

"ದೇವರು ಆತ್ಮ ಕಂಡವರಿಲ್ಲ
ಶಾಸ್ತ್ರ ಪುರಾಣ ಸುಳ್ಳಿನ ಕಂತೆ
ಅರಮನೆ ಗುರುಮನೆ ಮೋಸದ ಜಾಲ

ಮುಗಿಯಲಿ ಶೋಷಣೆ ಮಾಡುವ ಕಾಲ" (ಭೂಮಿ ಗುಂಡುಗಿದೆ)

ದೇವರು –ದಿಂಡರು, ಶಾಸ್ತ್ರಪುರಾಣಗಳೆಲ್ಲವೂ, ಅರಮನೆ, ಪುರೋಹಿತಶಾಹಿಗಳು ಹೆಣೆದ ವ್ಯೂಹದಲ್ಲಿ ಸಿಕ್ಕಿ ನರಳುತ್ತಿರುವ ಈ ನಮ್ಮ ದಲಿತರ ಧಾರ್ಮಿಕ ಶೋಷಣೆಯು ಕೊನೆಗಾಣಲಿ. ಸಮತೆಯ ರಾಜ್ಯ ಮೆರೆಯಲಿ. ನಾಡಿನಲ್ಲಿ ಪ್ರೀತಿ, ಸಹಕಾರ, ಸಾಮರಸ್ಯಗಳೇ ತುಂಬಿ ತುಳುಕುತ್ತಿರಲಿ. ಅಸ್ಪೃಶ್ಯತೆ, ಅಸಮಾನತೆಗಳೆಲ್ಲ ನಶಿಸಿ ಹೋಗಬೇಕೆಂದು ಆಶಿಸುತ್ತದೆ. ನರಕ – ಸ್ವರ್ಗ, ಪಾಪ – ಪುಣ್ಯ, ದೇವರು – ಧರ್ಮ ಗುರುಗಳ ನಡುವೆ ಸಿಲುಕಿ ಯಾತನೆ ನೋವುಗಳನ್ನು ಉಂಡಿದ್ದು ಜೀವವಿಲ್ಲದ ದೇವರ ಹೆಸರಲ್ಲೇ ಜೀವ ಇರುವವರನ್ನು ಹಿಂಡಿ ಹಿಪ್ಪೆ ಮಾಡಿ ಬದುಕುತ್ತಿರುವ ಪುರೋಹಿತಶಾಹಿಗಳ ಜ್ಞಾನದ ಬುದ್ಧಿವಂತಿಕೆಯಿಂದಲೇ ಅನ್ಯಾಯ, ದಬ್ಬಾಳಿಕೆಗಳನ್ನು ಕಟ್ಟಿ ಅದಕ್ಕೆ ಧರ್ಮ, ದೇವರ ಪಟ್ಟಿ ಹಚ್ಚಿ ಸುಖವಾಗಿರುವವರೇ ನೀವುಗಳು......

ದೇವ್ರು ಒಬ್ನೇ ಅಂತಾರೆ
ಓಣಿಗೊಂದೊಂದ್ ತರಾ ಗುಡಿ ಕಟ್ಸವ್ರೆ
ಎಲ್ಲಾರು ದೇವರು ಮಕ್ಳು ಅಂತಾರೆ
ಹೊಲೇರ್ನ ಕಂಡ್ರೆ ಹಾವ್ ಕಂಡಂಗಾಡ್ತರೆ" (ಒಂದು ಪದ)

'ಮಾತಿನಲ್ಲಿ ರಾಮನಾಮ ಹಾಕುವುದು ಪಂಗನಾಮ' ಎನ್ನುವ ಹಾಗೆ ಇವರು ಹೇಳುವುದು ಒಂದು, ಮಾಡುವುದು ಮತ್ತೊಂದು. ನುಡಿಯೊಂದು ನಡೆ ನಾನಾಪರಿಯಾಗಿದೆ. ಇವರು ಕೆಳವರ್ಗದ ಹೊಲೆಯರು, ಮಾದಿಗರನ್ನು ಹಾಗೆ ಕರೆಯದೇ 'ಹರಿಜನ' ಎಂದು ಕರೆಯುವುದನ್ನು ವಿರೋಧಿಸುತ್ತಾರೆ. ಪಂಚಮ ನಾಟಕದಲ್ಲಿ "ಹಯವದನರಾವ್ ಹರಿಜನ ಅಂತ ಗಾಂಧೀಜಿಯವರು ನಿಮ್ಮನ್ನು ಕರೆದಿದ್ದು ಏನಾಗಬೇಕು? ಯಾಕಿಷ್ಟು ದುಗುಡ? ನೀವು ಖಂಡಿತವಾಗಿಯೂ ದೇವರ ಮಕ್ಕಳು

ಪಂಚಮ : ನಾವು ಖಂಡಿತವಾಗಲೂ ದೇವರ ಮಕ್ಕಳಲ್ಲ. ನಾವು ನಮ್ಮ ತಂದೆ ತಾಯಿ ಮಕ್ಕಳು. ಆದ್ದರಿಂದ ನಾವು ಹರಿಜನರಲ್ಲ. ಹರಿಜನ ಅನ್ನೋ ಹೆಸರನ್ನು ನೀವು ನಮಗೆ ಇಟ್ಟಿದ್ದೀರ ಆದರೆ ಇವತ್ತು ನಮ್ಮ ಜನರ ಪರವಾಗಿ ಹರಿಜನ ಅನ್ನೋ ಹೆಸರನ್ನು ನಿಮಗೆ ವಾಪಾಸು ಕೊಡುತ್ತೀನಿ ನೀವೆ ಇಟ್ಟಕೊಳ್ಳಿ"[31] ಎನ್ನುವಲ್ಲಿ ಸ್ವಾಭಿಮಾನ, ಸ್ವಾವಲಂಬನೆ ಸಂಕೇತವಾಗಿದೆ. ತಾವು ಕೀಳಲ್ಲ ಎಂಬ ಕೀಳರಿಮೆ ನಾಶವಾಗಿ ವಾಸ್ತವ ಸ್ಥಿತಿಯಲ್ಲಿ ನಿಂತು ಭವಿಷ್ಯವನ್ನು ಕಂಡುಕೊಳ್ಳುವ ಪ್ರಯತ್ನದಲ್ಲಿ ದಿಟ್ಟ ಹೆಜ್ಜೆಗಳನ್ನು ಇಡುತ್ತಿರುವುದನ್ನು ಇದು ಗೋಚರಿಸುತ್ತದೆ.

"ಪರಮಾತ್ಮನ ಹೆಸರು ಹೇಳಿ ಪರಮಾನ್ನ ಉಂಡ ಜನಕೆ
ಬೂಟುಮೆಟ್ಟು ಹೊಲೆದೋರು ನನ್ನ ಜನಗಳು" (ನನ್ನ ಜನಗಳು) .

ದೇವರನ್ನು ತೋರಿಸಿಕೊಂಡೇ, ಇಲ್ಲಸಲ್ಲದ ಮಂತ್ರ ಪಠನೆ ಮಾಡಿಕೊಂಡು ದಲಿತರನ್ನು ತುಳಿಯುತ್ತಾ ಅವರ ದುಡಿಮೆಯ ಫಲದಲ್ಲಿ ಉಂಡು ಮೈಕೈ ತುಂಬಿಕೊಂಡು ಹೊಟ್ಟೆ ಬೆಳೆಸಿಕೊಂಡು ಇವರನ್ನೇ ಸೇವಕರನ್ನಾಗಿ ದುಡಿಸಿಕೊಂಡ ಈ ಬ್ರಾಹ್ಮಣಶಾಹಿ ವರ್ಗದ ಕಳ್ಳಾಟ ಇನ್ನು ನಡೆಯೋದಿಲ್ಲ ಎಂಬುದನ್ನು ಸಾರಿ ಹೇಳಿದರು. ಎಲ್ಲೆಡೆಗೂ ಗಾಳಿಯಲ್ಲಿ ಸುಂಟರಗಾಳಿಯಾಗಿ ಇವರ ಢಾಂಬಿಕತನವನ್ನು, ಧಾರ್ಮಿಕ ರೀತಿ ನೀತಿಗಳನ್ನು, ಸಂಪ್ರದಾಯದ ಆಚರಣೆಗಳಿಗೆ ಸಂಸ್ಕೃತಿ ಪೋಷಕ ಮಾಡುವುದನ್ನು ವಿರೋಧಿಸಿ ಧರ್ಮದ ತಿರುಳನ್ನು ಹೊಸದಾಗಿ ಬರೆಯಲಾರಂಭಿಸಿದರು. ಇಂದಿನ ಚತುರ್ವರ್ಣ, ಜಾತಿವ್ಯವಸ್ಥೆ, ಅಸಮಾನತೆಗಳೆಲ್ಲವು ಗಳನ್ನು ಸುಂಟರಗಾಳಿಯಲ್ಲಿ ತೂರಿಬಿಟ್ಟರು.

"ದಕ್ಷಿಣೆಯ ರುಚಿಯುಂಡು ಉಬ್ಬಿರುವ ಒಡಲಿನಲಿ
ಜುಟ್ಟು ಜನಿವಾರದಲಿ ಧರ್ಮವಿಲ್ಲ
ಊದುಕಡ್ಡಿಯ ಅರೆದು ಮೇಲೆದ್ದು ಧೂಮದಲ್ಲಿ
ಧರ್ಮಸುಳಿ ಸುಳಿಯಾಗಿ ಸುಳಿಯುವುದಿಲ್ಲ" (ಸುಂಟರಗಾಳಿ)

ಸಮಾಜದಲ್ಲಿ ಕೆಳಜಾತಿಯ ಜನರ ಸೇವೆಯನ್ನು ಪಡೆದು ಅವರಿಗೆ ಧರ್ಮ, ದೇವರ ಮುಸುಕುಗಳನ್ನು ಹಾಕಿಕೊಂಡು ನಿರಂತರ ವಂಚನೆ ಮಾಡುತ್ತಿದ್ದಾರೆ. ಮತ್ತೆ ದುಡಿಯುವವರ ನರಳಿ ಹೊರಳಿ ನೋವನ್ನು ಅನುಭವಿಸಿದರೆ ಸುಖವಾಗಿಯೇ ಮೈಬಗ್ಗಿಸದೇ ಉನ್ನತ ಮಟ್ಟದ ಜೀವನವನ್ನು ನಡೆಸುತ್ತಿರುತ್ತಾನೆ ಎಂಬುದು "ಪಂಚಮ" ನಾಟಕದಲ್ಲಿ ಪಾಪಣ್ಣ ಮತ್ತು ಹಯವದನರಾವ್ ಮಾತುಗಳಲ್ಲಿ ತಿಳಿಯುತ್ತದೆ.

"ಪಾಪಣ್ಣ : ಇಂಥಹ ಮಹಡಿ ಕಟ್ಟುವಾಗಲೇ ಸರ್ ನಮ್ಮಪ್ಪ ಮೇಲಿಂದ ಬಿದ್ದು, ತಲೆ ಹೊಡೆದು ಸತ್ತಿದ್ದು(ದುಃಖಿಸುತ್ತಾನೆ)

"ಹಯವದನರಾವ್: ಏನ್ಮಾಡಕ್ಕಾಗುತ್ತಯ್ಯಾ, ನಿಮ್ಮಪ್ಪ ಮಹಡಿ ಕಟ್ಟೋಕ್ಕೋಗಿ ತಲೆ ಹೊಡ್ಕೊಂಡು ಸತ್ತ. ಇಲ್ಲಿ ನನಗೆ ಪ್ರಮೋಷನ್ ಸಿಗ್ತು,ಇದೆಲ್ಲ ದೇವರ ಇಚ್ಛೆ ಕಣಯ್ಯಾ ಹ್ಹಾ. . . .(ನಗು)"[31] ಅದೇ ಎಲ್ಲಾದಕ್ಕೂ ಎಲ್ಲಾ ಕಾರಣಗಳಿಗೂ ನಮ್ಮ ಎಲ್ಲಾ ಆಗು–ಹೋಗುಗಳಿಗೂ ಇಂದಿನ ಸ್ಥಿತಿಗತಿಗಳಿಗೆ ನಮ್ಮ ನಮ್ಮ ಜನುಮದ ಪಾಪದ ಕೂಸು ಅದನ್ನು ಅನುಭವಿಸಬೇಕು. ಇದಕ್ಕೆಲ್ಲ ನಮ್ಮ ಹಣೆ ಬರಹ ಎಂಬ ಮಾತುಗಳನ್ನು ಮಾತನಾಡಿ ತಮ್ಮ ಕ್ರೌರ್ಯಕ್ಕೆ ಧರ್ಮದ ದೈವದ ಸಹಾಯವನ್ನು ಪಡೆಯುವುದು. ಅದನ್ನು ಮುಂದುವರೆಸಿಕೊಂಡು ತಮ್ಮ ಈ ಶ್ರೇಣಿಕೃತ ಜಾತಿ ವ್ಯವಸ್ಥೆಯನ್ನು ಭದ್ರವಾಗಿ ರಕ್ಷಿಸಿಕೊಂಡು ಹೋಗುವ ಹುನ್ನಾರವೇ ಅಡಗಿದೆ.

ಹಾಗೆಯೇ ನೀವು ಇರುವುದು ನಮ್ಮ ಸೇವೆಗಾಗಿಯೇ ಭಗವಂತ ನಿಮ್ಮನ್ನು ಭೂಮಿಯ ಮೇಲೆ ತಂದಿದ್ದಾನೆ. ಮೇಲ್ವರ್ಗ, ಬ್ರಾಹ್ಮಣಶಾಹಿಗಳೇ ನಿಮ್ಮ ಆಳುವವರು ನಾವೇ ನಿಮಗೆ ಎಲ್ಲವು. ಅದರಿಂದ ನಮ್ಮ ಪಾದದಡಿಯಲ್ಲಿ ಧೂಳಾಗಿರಬೇಕೆಂಬುದನ್ನು 'ನೆಲಸಮ' ನಾಟಕದಲ್ಲಿ

ಗೋಚರಿಸುತ್ತದೆ. ತಮ್ಮ ಸಹಜವಾದ ಬದುಕನ್ನು ಕಸಿದುಕೊಂಡು ಸ್ವಾತಂತ್ರ್ಯದಿಂದ ವಂಚಿತರನ್ನಾಗಿ ಮಾಡಿ ಗುಲಾಮತನದ ಜೀತದ ತುತ್ತುಗಳಾಗಿಯೇ ನೋಡುವ ದೃಷ್ಟಿಕೋನಗಳಲ್ಲಿ ಬದಲಾವಣೆ ಇಲ್ಲ. "ಗೌರ್ನಮೆಂಟ್ ಅಂದರೆ ದೇವರು ಈ ದೇಶದ ದೇವರು"[೩೩] ಎನ್ನುವುದರಲ್ಲಿಯೇ ಪುರೋಹಿತಶಾಹಿಗಳು ಈ ದೇಶವನ್ನು ಧರ್ಮ, ದೇವರು ಎಂಬ ಧಾರ್ಮಿಕ ನೆಲೆಗಟ್ಟಿನಲ್ಲಿ ಪಟ್ಟಭದ್ರ ಹಿತಾಸಕ್ತಿಗಳ ಕೈಗೊಂಬೆಯಾಗಿ ಸಾಮಾನ್ಯನ ಬದುಕು ಊರ ಬಟ್ಟೆಯಾಗಿ ಬೀದಿಯಲ್ಲಿಯೇ ಬಿದ್ದು ನರಳುವ ಸ್ಥಿತಿಗೆ ಧಾರ್ಮಿಕ ವ್ಯವಸ್ಥೆಯೂ ಕೂಡ ಕಾರಣವಾಗಿದೆ.

"ದೇವ ಮತವ ಮುಂದೆ ಮಾಡಿ
ನಮಗೆ ಮೋಸ ನಡೆದಿದೆ"(ನಾವು)

ಇತಿಹಾಸದುದ್ದಕ್ಕೂ ದಲಿತರಿಗೆ, ಶೋಷಿತರಿಗೆ, ಮಹಿಳೆಯರಿಗೆ, ಬಡವರಿಗೆ ಒಂದಿಲ್ಲ ಒಂದು ರೀತಿಯಲ್ಲಿ ಮೋಸ ನಡೆಯುತ್ತಲೇ ಬರುತ್ತಿದೆ. ಈ ಬ್ರಾಹ್ಮಣಶಾಹಿಗಳು ಸಮಾಜದಲ್ಲಿ ಇವರ ಸ್ವಾರ್ಥವನ್ನು ಮೇಲು ಮಾಡಲು ಸಮಾಜದ ಅಸಮಾನತೆಯೂ ಶಾಶ್ವತವಾಗುವಂತೆ ಮಾಡಲು ಜಾತಿವ್ಯವಸ್ಥೆಯ ಅಂತರವನ್ನು ಸೃಷ್ಟಿಸಿ ಅದರಲ್ಲಿ ಮೂಢನಂಬಿಕೆಗಳನ್ನು ಜೀವಂತಗೊಳಿಸಿ ಮನುಷ್ಯನ ಅಂತರವನ್ನು ಕಾಪಾಡಿಕೊಳ್ಳಲು, ಬೇಧಭಾವಗಳನ್ನು ಮನಸ್ಸಿನಲ್ಲಿ ಬೆಳೆಸಿಕೊಂಡು ಜಾತಿಯ ಕಲ್ಮಶದ ಮನಸ್ಸನ್ನು ಸೃಷ್ಟಿಸುವುದೇ ಈ ದೇವರ ಕಾರ್ಯ ಚಟುವಟಿಕೆಗಳು

"ಚಾಮುಂಡಿಯಿಂದ ಹತನಾದ ಮಹಿಷನೇ
ನಮ್ಮೂರಿನಲ್ಲಿ ಕದಿರನಾಗಿ ಹುಟ್ಟಿ
ಮಾರಮ್ಮನ ಗಂಡನಾಗಿ ತಲೆದಂಡವ ತೆತ್ತ
ಕದಿರನಾಗಿ ಹುಟ್ಟಿದ್ದು, ಅದನ್ನು ಮುಚ್ಚಿಟ್ಟಿದ್ದು
ಅವನ ಅಪರಾಧ
ಯಾಕೆಂದರೆ ಈ ದೇವತೆಗಳು
ಜಾತಿ ಜಾತಿಯ ನಡುವೆ ನಿಂತ ಎತ್ತರದ ಗೋಡೆಗಳು(ವಿಜಯೋತ್ಸವ)

ಈ ಜಾತಿ ವ್ಯವಸ್ಥೆಯೇ ಹಿಂದೂಧರ್ಮದ ಜೀವಾಳ. ಇದು ಸರ್ವನಾಶವಾದರೆ ಹಿಂದೂಧರ್ಮವೆನ್ನುವುದು ಇರಲಾರದು ಎಂಬುದನ್ನು ಡಾ.ಅಂಬೇಡ್ಕರ್ ನಮ್ಮ ಹೋರಾಟದ ಸಮಯದಲ್ಲೇ ಹೇಳಿದ್ದರು. ಅದನ್ನೇ ಇಲ್ಲಿಯೂ ಅಮರಗೊಳಿಸಲು ಧಾರ್ಮಿಕ ನೆಲೆಗಟ್ಟನ್ನು ನಿರ್ಮಿಸಿ ಅದನ್ನು ಕಾಪಾಡಿಕೊಳ್ಳುವ ತಂತ್ರಗಾರಿಕೆಯೂ ಅಡಗಿದೆ. ವೈದಿಕ ಧರ್ಮದ ಪುರಾಣಗಳು ಕೂಡ ಹುಸಿ ಮೌಲ್ಯಗಳನ್ನೇ ಸಾರುತ್ತದೆ. ಅದೇ ನಿಜವಾದ ಮೌಲ್ಯ, ಕರ್ಮ ಎಂದು ಹೇಳುತ್ತದೆ. ಸಾವಿರ ವರ್ಷಗಳಿಂದಲೂ ಅಸಹ್ಯವಾದ ಜೀವನವನ್ನು ಉಂಡವರು ಕೆಳವರ್ಗದ ಜನ. ಅದಕ್ಕೆ ಧರ್ಮದಸಮ್ಮತಿ.

ಅವರ ಕರ್ಮಾನುಸಾರ ಪ್ರತಿಯೊಬ್ಬನ ಹುಟ್ಟು ನಡೆಯುತ್ತದೆ. ಅದರಂತೆ ಅವನು ತನ್ನ ಜೀವನವನ್ನು 'ಪಾಲಿಗೆ ಬಂದಿದ್ದು ಪಂಚಾಮೃತ' ಎಂದು ತಿಳಿದು ಅನುಭವಿಸಬೇಕೆ ವಿನಹ ಬೇರೆ ಮಾರ್ಗಗಳೇ ಇಲ್ಲ ಎಂದು ಹೇಳುತ್ತಾರೆ. ಜಾತಿ ವ್ಯವಸ್ಥೆ, ವರ್ಣಾಶ್ರಮ ವ್ಯವಸ್ಥೆ, ದೇವರು-ಗುರುಗಳಿಗೆ ನಾವು ಬದ್ಧರಾಗಿ ಬದುಕ ನಡೆಸಬೇಕು. ಎಂತಹ ಹೀನಸ್ಥಿತಿಯನ್ನಾದರೂ ಕೂಡ ಸ್ವೀಕರಿಸಿ ಬದುಕಬೇಕು. ತಾನು ಬ್ರಾಹ್ಮಣರಂತೆ ವಿದ್ಯೆಯನ್ನು ಕಲಿಯುವಂತಿಲ್ಲ. ಕೇಳುವಂತಿರಲಿಲ್ಲ ಕೂಡ ಅದನ್ನು ನಿರೀಕ್ಷೆ ಮಾಡುವುದೇ. ದೊಡ್ಡ ಅಪರಾಧದ ಪಾಪದ ವಿಷಯವಾಗುತ್ತಿತ್ತು. ಡಾ.ಅಂಬೇಡ್ಕರ್ ಸಂಸ್ಕೃತವನ್ನು ಕಲಿಯಬೇಕೆಂದು ಹಂಬಲಿಸಿದಾಗಲೂ ಈ ವ್ಯವಸ್ಥೆ ಅದನ್ನು ನಿರಾಕರಿಸುತ್ತದೆ. ಸಂಸ್ಕೃತವನ್ನು ಕೇಳಿದ ಕಿವಿಗೆ ಸೀಸ ಕಾಯಿಸಿ ಬಿಡಲಾಗುತ್ತಿತ್ತು ಎಂಬುದು ಅವರನ್ನು ಹೇಗೆ ನಡೆಸಿಕೊಳ್ಳುತ್ತಿತ್ತು ಎಂಬುದಕ್ಕೆ ಸಾಕ್ಷಿ. ಶೋಷಿತರು, ಅಸ್ಪೃಶ್ಯರು, ಕೆಳಜಾತಿಯವರು, ವಿದ್ಯೆ ಕಲಿಯಬೇಕೆಂದು ಆಸೆ ಪಟ್ಟರೆ ಅದಕ್ಕೆ ಪುರೋಹಿತಶಾಹಿಗಳು ಹೇಗೆ ವರ್ಣಾಶ್ರಮ ಧರ್ಮವನ್ನು ಮುಂದುಮಾಡಿಕೊಂಡು ಈ ಶ್ರೇಣಿಕೃತ ವ್ಯವಸ್ಥೆಯ ಧರ್ಮಾನುಸಾರ ಬದುಕುವಂತದ್ದು, ಅದನ್ನು ಮೀರುವಂತಿಲ್ಲ. ಅದನ್ನು ಮೀರುವ ಪ್ರಯತ್ನವಾದರೆ ಅದು ಅಧರ್ಮ, ಅನೀತಿ, ಪಾಪದಕಾರ್ಯವಾಗುತ್ತದೆ. ಅದರಿಂದ ನಿನ್ನ ಸ್ಥಿತಿಯಲ್ಲಿಯೇ ನೀನು ಬದುಕು ಎಂದು ಹೇಳಿ ಹೇಗೆ ಜಾತಿವ್ಯವಸ್ಥೆಯನ್ನು ಗಟ್ಟಿಗೊಳಿಸುವಂತಹ, ಅಸಮಾನತೆ, ಮೇಲು-ಕೀಳು, ತಾರತಮ್ಯ ಧರ್ಮಬದ್ಧವಾಗಿರುವುದಾಗಿದೆ ಎಂಬುದನ್ನು 'ಏಕಲವ್ಯ' ನಾಟಕದಲ್ಲಿ ಏಕಲವ್ಯ ಮತ್ತು ದ್ರೋಣರ ಸಂಭಾಷಣೆಯಲ್ಲಿ ಕಾಣಬಹುದಾಗಿದೆ.

"ದ್ರೋಣ : ಏಕಲವ್ಯ ನಿನ್ನ ಕನಸು ನನಸಾದರೆ ಲೋಕ ದುರಂತಕ್ಕೆ ನಾಂದಿಯಾಗುತ್ತದೆ. ನಿನಗೆ ಗುರುಮುಖೇನ ವಿದ್ಯೆ ಕಲಿಸಲು ಶಾಸ್ತ್ರದ ಸಮ್ಮತಿಯಲ್ಲಿ ನಿನ್ನನ್ನು ಶಿಷ್ಯನನ್ನಾಗಿ ಸ್ವೀಕರಿಸಲು ನನಗೆ ಸಾಧ್ಯವಿಲ್ಲ. . . . .

ಏಕಲವ್ಯ : ಪೂಜ್ಯರೇ . . . . ಕೀಳು ಕುಲದಲ್ಲಿ ಹುಟ್ಟಿದ ತಪ್ಪಿಗೆ ಜೀವನ ಪೂರ್ತಿ ನಾನು ಈ ವಿದ್ಯೆಯಿಂದ ದೂರವಾಗಬೇಕೆ?

ದ್ರೋಣ : ಈ ಬಗೆಯ ಅಸಮಾನತೆ ನಿಸರ್ಗದಷ್ಟೇ ಸಹಜ. ಏಕಲವ್ಯ ಎಲ್ಲ ಮರಗಳು ಸಮ ನಾದ ಎತ್ತರಕ್ಕೆ ಬೆಳೆಯಲಾರವು. ಎಲ್ಲ ಬಂಡೆಗಳೂ ಒಂದೇ ಗಾತ್ರ ಇರಲಾರವು. ಪೂರ್ವ ಜನ್ಮದ ಪಾಪ-ಪುಣ್ಯಗಳಿಗೆ ಅನುಗುಣವಾಗಿ ಮನುಷ್ಯ ಮೇಲು-ಕೀಳು ಜಾತಿಗಳಲ್ಲಿ ಹುಟ್ಟುತ್ತಾನೆ. ಈ ಜನ್ಮದಲ್ಲಿ ಪಾಲಿಗೆ ಬಂದ ವೃತ್ತಿಯನ್ನು ನಿಷ್ಕಾಮದಿಂದ ನಿರ್ವಹಿಸಿದರೆ ಮುಂದಿನ ಜನ್ಮದಲ್ಲಿ ಒಳ್ಳೆಯದಾಗುತ್ತದೆ"[೩೪]

ಹಿಂದೂಧರ್ಮದ ಬ್ರಾಹ್ಮಣಶಾಹಿಗಳು ಧರ್ಮದ ಹೆಸರಿನಲ್ಲೇ ಅನೇಕ ತಳ ಸಮುದಾಯಗಳ ಮೂಲಭೂತ ಹಕ್ಕುಗಳನ್ನೇ ಕಿತ್ತುಕೊಂಡು ಅದಕ್ಕೆ ಧರ್ಮ, ದೇವರು, ಶಾಸ್ತ್ರ-ಪುರಾಣ

ಪುಣ್ಯಕಥೆಗಳ ಸಮಜಾಹಿಸಿ ನೀಡಿ ನಿರಂತರ ಶೋಷಣೆಗೆ ಸಿದ್ಧವಾಗಿ ನಿಂತಿದೆ. ಇದನ್ನು ಒಂದು ವರ್ಗ ಬೇಕಾಗಿಯೇ ತನ್ನ ಕರ್ಮ ಸಿದ್ಧಾಂತವನ್ನು ಸೃಷ್ಟಿಸಿ ಪ್ರಜ್ಞಾಪೂರ್ವಕವಾಗಿಯೇ ಅದನ್ನು ಹೇರಲಾಗಿದೆ. ಈ ಬ್ರಾಹ್ಮಣಶಾಹಿಗಳು ಕೆಳವರ್ಗದ ದಲಿತರನ್ನು ಶಿಕ್ಷಣದಿಂದ ದೂರಮಾಡಿ ಕತ್ತಲೆಯ ಕೂಪಕ್ಕೆ ನೂಕಿ, ಅದಕ್ಕೆ ಜಾತಿ-ಧರ್ಮದ ಹುಸಿಯ ಲೇಪನ ಹಾಕಿ ಕುತಂತ್ರದಿಂದ ವರ್ಣಾಶ್ರಮ ವ್ಯವಸ್ಥೆ ಗಟ್ಟಿಯಾಗಿ ತಳವೂರಲು ಸತತ ಪ್ರಯತ್ನದಲ್ಲಿರುತ್ತದೆ ಎಂಬುದನ್ನು ತಿಳಿಸುತ್ತದೆ.

"ಗಾಳಿ ಮಳೆ ಚಳಿಯಿಂದ ದೇವರುಳಿಯಲಿ ಎಂದು
ಗುಡಿಯ ಕಟ್ಟಲು ಹೋದ ಭಕ್ತರು ತಡೆದು
ಊರ ಜನರೆಲ್ಲರಿಗೂ ಸೂರು ಸಿಕ್ಕುವವರೆಗೂ
ತನಗೆ ಗುಡಿ ಬೇಡೆಂದ ಈ ಕೆಂಚರಾಯ
ಕುಸಿದ ಕಂದನ ಕಣ್ಣು ಬೆಳಕಾಗಿರುವುದು ಕಂಡು
ಹಸು ಗೂಸ ನೊಯ್ಯಿರೋ ಅಸ್ಪತ್ರೆಗೆಂದು
ಕಳೆದ ಕಂದನ ಜೀವ ಮರಳಿ ತಂದಾಕೆ
ಎಲ್ಲಮ್ಮ ತಾಯಿ ಅವಳೆಲ್ಲಿಯವಳು" (ಈ ದೇವರುಗಳು)

ಇಲ್ಲಿ ಕವಿ ಹಳ್ಳಿಯ ಗ್ರಾಮ ದೇವತೆಗಳಲ್ಲಿ ಮನುಷ್ಯ ಸಹಜ ಪ್ರೀತಿ, ನಡವಳಿಕೆಯನ್ನು ಗುರುತಿಸಿದ್ದಾರೆ. ನಮ್ಮ ಪೂರ್ವಿಕರು ಸೃಷ್ಟಿಸಿದ ಜನಪದ ಗ್ರಾಮ ದೇವರುಗಳಲ್ಲಿ ಹೇಗೆ ಮಾನವೀಯ ಮೌಲ್ಯಗಳನ್ನು ಕಂಡು ಕೊಂಡಿದ್ದರು ಎಂಬುದನ್ನು ತೋರ್ಪಡಿಸುತ್ತದೆ. ಆದರೆ ಶಿಷ್ಟ ಸಾಹಿತ್ಯ, ಹಿಂದೂ ಸಂಸ್ಕೃತಿಯು ಮನುಷ್ಯನ ನಡುವಿನ ನಡುವೆಯೇ ದೊಡ್ಡ ಗೋಡೆಯಾಗಿ ಸಂಬಂಧಗಳನ್ನೇ ಕಸಿದುಕೊಂಡು ಅಸಮಾನತೆ, ತಾರತಮ್ಯ ತಾಂಡವವಾಡುವಂತೆ ಮಾಡಿದೆ. ನಮ್ಮ ಗ್ರಾಮೀಣ ಜನರಲ್ಲಿ ಮನುಷ್ಯ-ದೇವರು ನಡುವೆಯೂ ಕೂಡ ಅಂತರವಿಲ್ಲದೇ ಒಂದಾಗಿದ್ದಾರೆ. ದೇವರು ಸದಾ ಜೊತೆಯಲ್ಲಿಯೇ ಇದ್ದು ನಮ್ಮ ಎಲ್ಲ ಕಷ್ಟ ಕಾರ್ಪಣ್ಯಗಳನ್ನು ಬಗೆಹರಿಸುವವರು ಎಂಬ ನಂಬಿಕೆಯಲ್ಲೇ ಬದುಕ ಪ್ರೀತಿಯ ಚೈತನ್ಯವನ್ನು ತುಂಬಿರುವುದನ್ನು ಕಾಣುತ್ತೇವೆ. ಮೌಖಿಕ, ಶಿಷ್ಟಸಾಹಿತ್ಯ, ಸಂಸ್ಕೃತಿಗಳಲ್ಲಿ ಅಗಾಧವಾದ ಬೇಧಭಾವಗಳಿರುವುದು ಗೊತ್ತಾಗುತ್ತದೆ. "ಭಕ್ತಾದಿಗಳ ಬವಣೆ ಪರಿಹರಿಸದಿದ್ದರೆ ಉರಿವ ಮೆಣಸಿನ ಘಾಟು" ಹಾಕುವಷ್ಟರ ಮಟ್ಟಿಗೆ ಅನ್ಯೋನ್ಯವಾದ ಸಂಬಂಧವಾಗಿರುವುದನ್ನು ಕಾಣುತ್ತೇವೆ. ಯಾವಾಗಲೂ ಕೂಡ ದೇವರು, ಧರ್ಮಗಳು ಮಾನವ ಪರವಾದ, ಮಾನವೀಯ ಮೌಲ್ಯಗಳ ಪರವಾದ ಚಿಂತನೆಯ ನೆಲೆಯಲ್ಲಿಯೇ ಧಾರ್ಮಿಕತೆಯ ಪರಿಶೀಲನೆ ಸೃಷ್ಟಿಯಾದರೆ ಮನುಷ್ಯ-ಮನುಷ್ಯ ನಡುವೆ ಸಾಮರಸ್ಯದ ಸಹಬಾಳ್ವೆಯ ಬದುಕು ಸಾಧ್ಯವಾಗಿ ಸಂತೋಷ ನೆಮ್ಮದಿ ಸಾಧ್ಯವಾಗುತ್ತದೆ. ಅದಕ್ಕೆ ಗ್ರಾಮೀಣ ಕೆಳವರ್ಗದ ಜನರು ತಮ್ಮ ಸಮಸ್ಯೆಗಳಿಗೆ, ಮೂಲಭೂತ ಈಡೇರಿಕೆಗೆ ತಮ್ಮ ದೇವತೆಗಳ

ಮೊರೆಹೋಗಿ ಅವರನ್ನು ಕೂಡ ಮನುಷ್ಯರಂತೆ ಕಾಣುವ ಆತ್ಮೀಯತೆ, ಪ್ರೀತಿ ದೇವರಲ್ಲಿ ಕಂಡು ಕೊಂಡಿರುವುದನ್ನು ಕಾಣುತ್ತೇವೆ.

"ಸಂಸ್ಕೃತ ತಿಳಿಯದ ಸ್ವರ್ಗದಲಿ ನೆಲೆಸದ
ಕಪ್ಪು ದೇವತೆಗಳ ಬರಿಗಾಲಿನವರು
ಬೆರಗೆ ಸಿರಿಯಾಗಿದ್ದ ನಮ್ಮ ಹಿರಿಯರ ಕನಸು
ಮೈಯ್ಯಾಗಿ ನಮ್ಮೊಡನೆ ಬಾಳುವವರು" (ಈ ದೇವರುಗಳು)

"ಈ ನಮ್ಮ ಕೆಳಜಾತಿಯವರಲ್ಲಿ 'ಭಾವದ' ಅಂಶ ಜಾಸ್ತಿ. ಎಲ್ಲದರ ಬಗ್ಗೆ ಅವರು ಭಾವನಾತ್ಮಕವಾಗಿ ಯೋಚಿಸುತ್ತಾರೆ. ಆದರೆ ಮೇಲ್ವರ್ಗದವರಿಗೆ ಬುದ್ಧಿ ಚುರುಕು! ಎಲ್ಲವನ್ನು ವ್ಯವಹಾರಿಕವಾಗಿ ಚಿಂತಿಸುತ್ತಾರೆ. ಕೆಳಜಾತಿಯವರ ಭಾವನೆಗಳು ಸದಾ ಜಾಗೃತ ಆಗಿರುತ್ತದೆ. ಭಕ್ತಿ ಭಾವಪರವಶತೆಗೆ ಹತ್ತಿರವಾಗಿರುತ್ತದೆ."[31] ಅದರಿಂದ ಕರ್ನಾಟಕ ದೇವಸ್ಥಾನಗಳಲ್ಲಿ ಪರಿಶಿಷ್ಟ ಜಾತಿಯ ಅರ್ಚಕರನ್ನು ನೇಮಕ ಮಾಡಿ, ಮಂತ್ರ ಎಲ್ಲರಿಗೂ ಅರ್ಥವಾಗುವ ಕನ್ನಡದಲ್ಲಿಯೇ ಮಂತ್ರ ಪಠನೆ ಮಾಡುತ್ತಾ ಪೂಜೆ ಮಾಡುವ ಒಂದು ಧಾರ್ಮಿಕ ಪರಿವರ್ತನೆಯಿಂದ ಪುರೋಹಿತಶಾಹಿಗಳೇ ಪೂಜೆ ಮಾಡಬೇಕು ಎನ್ನುವ ಸನಾತನ ಧರ್ಮಕ್ಕೆ ತಿಲಾಂಜಲಿ ಹಾಡಿ ಧಾರ್ಮಿಕ ಸಮಾನತೆಯನ್ನು ಕಲ್ಪಿಸಿಕೊಡಬೇಕೆಂದು ಸದನಗಳಲ್ಲೂ ಕೂಡ ಹೋರಾಟವನ್ನು ಮಾಡಿದ್ದಾರೆ ಡಾ.ಸಿದ್ಧಲಿಂಗಯ್ಯನವರು.

ಈ ಸಮಾಜದಲ್ಲಿ ಧಾರ್ಮಿಕ ಪ್ರತಿನಿಧಿಗಳೆಂದು ಮಠ ಮಾನ್ಯಗಳನ್ನು ನಿರ್ಮಿಸಿಕೊಂಡು ಕಾವಿತೊಟ್ಟು ವೈಭವಯುತ ಜೀವನ ನಡೆಸುತ್ತ, ಐಹಿಕ ಸುಖಭೋಗಗಳಲ್ಲಿ ತೊಡಗಿರುವುದು ದುರಂತವೇ ಸರಿ. ಸನ್ಯಾಸಿಗಳು ಎಲ್ಲವನ್ನು ತ್ಯಜಿಸಿ ಅಲೌಕಿಕ ಚಿಂತನೆಯಲ್ಲಿ ತೊಡಗಿರಬೇಕು. ಅದಕ್ಕೆ ಬದಲಾಗಿ ಆಸ್ತಿಗಳನ್ನು ಪಡೆದು ರಾಜಕೀಯದ ಜೊತೆ ಒಡನಾಟ ಗಟ್ಟಿಗೊಳಿಸಿಕೊಂಡು ಶೋಷಣೆ ಅವ್ಯವಹಾರ, ಜಾತಿವ್ಯವಸ್ಥೆಯನ್ನು ನಿರಂತರವಾಗಿ ನಡೆಸಿಕೊಂಡು ಹೋಗುವ ವಾರಸುದಾರರಾಗಿ ನಡೆದು ಕೊಳ್ಳುತ್ತಿರುವುದು ವಿಪರ್ಯಾಸವಾದರೂ ಸತ್ಯವಾಗಿದೆ.

ದೃಢ ಭಕ್ತರಿಗೆ ಚಿನ್ನ ಕೊಟ್ಟೋನು
ದಡ್ಡ ಭಕ್ತರಿಗೆ ಬೂದಿ
ಇವನು ಮಾಡುವನು ಬಿದ್ದೋರ ಉದ್ಧಾರ
ಕಾಯಿರಪ್ಪ ಕಾಯ್ರಿ (ಮಹಾವ್ಯಕ್ತಿವಬ್ಬ)

ಇಲ್ಲಿ ಸಮಾಜಕ್ಕೆ ಮಾರ್ಗದರ್ಶನವನ್ನು ನೀಡಿ, ಮುಂದಾಳುಗಳು ತಪ್ಪು ದಾರಿಯಲ್ಲಿ ನಡೆದರೆ ತಿದ್ದುವ ಕೆಲಸ ಮಾಡದೇ ಅವರ ಜೊತೆ ಶಾಮೀಲಾಗಿ ಸೌಮ್ಯತನವನ್ನು ತೋರ್ಪಡಿಸಿ, ಆ ವ್ಯಕ್ತಿತ್ವದಿಂದಲೇ ಸಾಮಾನ್ಯ ಜನರ ಬುದ್ಧಿಗೆ ಮಣ್ಣು ಎರಚಿ ಸಮಾಜದಲ್ಲಿ ತಾರತಮ್ಯ, ಮೇಲು-ಕೀಳು, ಬಡವ-ಬಲ್ಲಿದ

ಎಂದು ಸಮಾಜದ ಆರೋಗ್ಯ ಸ್ಥಿತಿಯನ್ನೇ ಹಾಳು ಮಾಡುತ್ತಿದ್ದಾರೆ ಎಂಬ ಸೂಕ್ಷ್ಮತೆಯನ್ನು ಈ ಕವಿತೆಯಲ್ಲಿ ತಿಳಿಯ ಪಡಿಸುತ್ತದೆ. ಜೊತೆಗೆ ಸಮಾಜದಲ್ಲಿ ಶಿಕ್ಷಣ ವ್ಯವಸ್ಥೆಯ ಮೇಲೆ ತನ್ನ ಧರ್ಮದ ಕರಿನೆರಳನ್ನು ಬೀರುವ ಸಲುವಾಗಿ ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಿ ಅದರ ಮೂಲಕ ಸಮಾಜದಲ್ಲಿ ಜಾತಿ, ಅಸಮಾನತೆ, ಶೋಷಣೆಯನ್ನು ಬೋಧಿಸುವ ಹಿಂದೂ ವರ್ಣಾಶ್ರಮ ಪದ್ಧತಿಯ ಸಂಸ್ಕೃತಿಯನ್ನು ಸಾರಿ ಹೇಳಿ, ಇದೇ ನಮ್ಮ ಸಂಸ್ಕೃತಿ ಅದನ್ನು ನಾವೇ ಕಾಪಾಡಬೇಕು. ಅದಕ್ಕೇ ನಾವು ಧರ್ಮಕ್ಕೆ ವಿರುದ್ಧವಾಗಿ ನಡೆದುಕೊಳ್ಳಬಾರದು ಎಂಬ ಕುತಂತ್ರದ ಮೇಲೆ ಬೆಳಕು ಚೆಲ್ಲುತ್ತದೆ. 'ಪಂಚಮ' ನಾಟಕದಲ್ಲಿ ಪುಟ್ಟಲಕ್ಷ್ಮಮ್ಮಳನ್ನು ನೀನು ಯಾವ ಶಾಲಾ-ಕಾಲೇಜಿನಲ್ಲಿ ಓದಿದ್ದು ಎಂದು ಪ್ರಶ್ನಿಸಿದಾಗ "ಆಕೆ ಸಾಯಿಬಾಬ ಬಾಲಕ, ಬಾಲಕಿಯರ ಪ್ರಾಥಮಿಕ ಪಾಠಶಾಲೆ, ಮಾತೆ ಮಹಾದೇವಿ ಹೈಸ್ಕೂಲ್, ಗುರುಬಾಲ ಲೀಲ ಕಾಲೇಜು" ಎಂಬುದಾಗಿ ಉತ್ತರಿಸುತ್ತಾಳೆ. ಇದು ನಮ್ಮ ಶಿಕ್ಷಣ ಪದ್ಧತಿಯು ಸಂಪ್ರದಾಯಸ್ಥರ, ಮಠಗಳ ಅಧೀನದಲ್ಲಿರುವುದನ್ನು ತಿಳಿಸುತ್ತದೆ.

ಧರ್ಮ ಬಗೆಗಿನ ಅವರ ಸಿಟ್ಟು, ಆಕ್ರೋಶಗಳು ಆಳದಲ್ಲಿ ಮತ್ತು ಈ ಧರ್ಮ ಎನ್ನುವುದು ಹೇಗೆ ನಗೆಪಾಟಲಾಗಿ ಸೃಷ್ಟಿಯಾಗಿದೆ ಎಂಬ ತಿಳುವಳಿಕೆಗೆ ದಾರಿ ಮಾಡಿಕೊಡುತ್ತದೆ. ಧರ್ಮದ ಹೆಸರಿನಲ್ಲಿ ಜನ ಹೇಗೆ ಮೋಸ ಮಾಡುತ್ತಾರೆಂಬುದು ಕೂಡ ವ್ಯಕ್ತವಾಗುತ್ತದೆ. 'ಕತ್ತೆಯ ಸಮಾಧಿ'ಯನ್ನೇ ದೇವರ ಗುಡಿಯಾಗಿ ಮಾರ್ಪಡಿಸುವ ಈ ಧರ್ಮದ ಪುರಾಣ ಕಥೆಗಳಂತೆ ಗೋಚರಿಸುತ್ತದೆ. 'ಕತ್ತೆ ಮತ್ತು ಧರ್ಮ' ಕವಿತೆಯಲ್ಲಿ ಯಾರಿಗಾದರೂ ಒಳ್ಳೆಯದಾದರೆ ಅದು ದೇವರ ದಯೆಯಿಂದ ಆಗುತ್ತದೆ. ಅಂದಿನಿಂದ ನಾವೆಲ್ಲ ದೇವರು ಬಗ್ಗೆ ನಂಬಿಕೆ ಇಡಬೇಕು. ಅದರಿಂದ ನಮ್ಮಲ್ಲಿ ಪ್ರತಿಯೊಂದು ಕಲ್ಲಿಗೂ ಕುಂಕುಮ ಹಚ್ಚಿ ಊದುಬತ್ತಿ ಹಚ್ಚಿ ಪೂಜೆ ಮಾಡುತ್ತೇವೆ. ಈ ಕವಿತೆ ಧರ್ಮದ ವಿಡಂಬನೆಯನ್ನು ತೋರುತ್ತದೆ. ಇಲ್ಲಿ ಭಿಕ್ಷಕರು, ಸೂಳೆಯರು, ವೈದಿಕರು, ದಾನದತ್ತಿ ನೀಡಲು ಶ್ರೀಮಂತರು, ರಾಜರಾಣಿಯರು ಬಂದಿದ್ದಾರೆ. ಜೊತೆಗೆ ಬಿಳಿಯ ಟೋಪಿಯವರ ವಿಷಯವೂ ಬರುತ್ತದೆ. ಇಲ್ಲಿ ಮೂಢರು, ಧರ್ಮಾಂಧರು ಈ ಸಮಾಜದ ಮೇಲೆ ಹಕ್ಕು ಸಾಧಿಸಲು ಪ್ರಯತ್ನಿಸುತ್ತಾರೆ. ಈ ಸಮಾಧಿ ಯಾವ ಮಹಾತ್ಮ ಸಂತನದೂ ಅಲ್ಲ, ಕತ್ತೆಯ ಸಮಾಧಿ ಮಾತ್ರ ಅಷ್ಟೇ.

"ದೇಸಾಂತ್ರ ಹೋಗಿದ್ದ ಸಿದ್ಧಯ್ಯ ಕತ್ತೆಯ
ಹೂತ ಜಾಗವ ನೋಡೋ ಅಸೇಲಿ । ಬಂದವ್ನೆ
ಹುಡುಕುತ ನಿಂತವ್ನೆ ಹೂತ ಜಾಗ ॥ (ಕತ್ತೆ ಮತ್ತು ಧರ್ಮ)

ಮೇಲ್ವರ್ಗ, ರಾಜಕಾರಣಿಗಳು ತಮ್ಮ ಸ್ವಾರ್ಥ ಸಾಧನೆಗಾಗಿ ಪರಿತಪಿಸುವ ರಾಜಕೀಯ ಮತ್ತು ಧರ್ಮಗಳ ತಿಕ್ಕಾಟ, ಅಬ್ಬರಗಳಲ್ಲಿ ಸಾಮಾನ್ಯ ಅಗಸನ ದನಿ ಅಡಗಿ ಮತೀಯ ಶಕ್ತಿಗಳೇ ಮೇಲಾಗುವುದನ್ನು ಕಾಣುತ್ತೇವೆ. ಧರ್ಮದಲ್ಲಿ ಸಾಮಾನ್ಯನ ಪಾತ್ರ ಹೇಳತೀರದಾಗಿದೆ. ಒಂದೊಂದು

ಕಾರಣಕ್ಕೆ ಒಂದೊಂದು ದೇವರು ಹೀಗೆ ನಮ್ಮ ಮುಕ್ಕೋಟಿ ದೇವರುಗಳು 'ಗೋರಿದೇವ್ರು' ಹಾಗೆ ಸೃಷ್ಠಿಯಾದರೋ ಏನೋ ಎಂಬ ಅನುಮಾನ ಕಾಡುತ್ತದೆ. ಈ ಧರ್ಮ, ದೇವರು, ಸೃಷ್ಠಿಯೇ ಒಂದು ಸೋಜಿಗ, ವಿಸ್ಮಯ, ಆಶ್ಚರ್ಯವೆಂದೆನ್ನಿಸುತ್ತದೆ.

ರಾಜ ರಾಣಿಯರು ಈ ವ್ಯವಸ್ಥೆಯನ್ನು ಪ್ರತಿನಿಧಿಸುವವರು. ಇವರು ಕೂಡ ಮೂಢನಂಬಿಕೆಗಳಲ್ಲಿ ಮುಳುಗುವುದಲ್ಲದೇ ಇಡೀ ಜನ ಸಮುದಾಯಕ್ಕೆ ಮೌಢ್ಯತೆಯ ಬೀಜ ಬಿತ್ತಿ ಬೆಳೆಸಿ, ಪೋಷಿಸುವುದನ್ನು ತಿಳಿಸುತ್ತದೆ. ಸಿದ್ಧಯ್ಯ ವಾಪಸ್ಸು ಬಂದು ತನ್ನ ಪ್ರೀತಿಯ ಕತ್ತೆಯ ಸಮಾಧಿಯನ್ನು ಹುಡುಕುವಾಗ ರಾಜನ ತಳವಾರ ಅವನನ್ನೇ ಹೊರ ನೂಕುತ್ತಾನೆ. ದಲಿತರು ಅನುಭವಿಸುತ್ತಿರುವ ಚಿಂತಾಜನಕ, ಹೀನಾಸ್ಥಿತಿಯ ವ್ಯವಸ್ಥೆಯನ್ನು ನೀಡುತ್ತಿದೆ. ಕಷ್ಟಪಟ್ಟು, ಬೆವರು ಸುರಿಸಿ, ತಳಪಾಯಗಳಿಗೆ ಸಿಕ್ಕಿ ರಕ್ತ ಬಸಿದು ದೇವಸ್ಥಾನಗಳನ್ನು, ಮನೆಗಳನ್ನು ಕಟ್ಟಿರುವವರೇ ಈ ದೇವಾಲಯ ಮತ್ತು ಮನೆಗಳನ್ನು ಪ್ರವೇಶ ಮಾಡಕೂಡದು. ಇಂತಹ ಮೂಢನಂಬಿಕೆಯೇ ತುಂಬಿ ತುಳುಕಾಡುತ್ತಿರುವ ಈ ದೇಶದಲ್ಲಿ ಅದರ ವಿರುದ್ಧ ಚಳುವಳಿ – ಹೋರಾಟಗಳನ್ನು ಮಾಡಿದವರು ಡಾ.ಅಂಬೇಡ್ಕರ್. ಇವರಂತೆ ಹಿಂದೆ ಕನಕದಾಸರು ಕೂಡ ದೇವಾಲಯ ಪ್ರವೇಶದ ಹೋರಾಟ ಮಾಡಿದ್ದರು. ನಾವು ಹಿಂದುಗಳಾಗಿದ್ದರೂ ನಮಗೆ ಹಿಂದೂಗಳ ಸ್ಥಾನಮಾನ ನಮಗೆ ಸಿಗದಿದ್ದರೆ ಅಂತಹ ಧಾರ್ಮಿಕ ಆಚರಣೆ, ಸಂಪ್ರದಾಯಗಳನ್ನು ಧಿಕ್ಕರಿಸಿ ಧಾರ್ಮಿಕವಾಗಿಯೂ ಸ್ವಾತಂತ್ರ್ಯ ಹೊಂದಿರಬೇಕೆಂದು ಅದಕ್ಕೆ ಪರಿಹಾರವನ್ನು ಕಂಡುಕೊಂಡು ಧಾರ್ಮಿಕ ಸ್ವಾತಂತ್ರ್ಯದೆಡೆಗೆ ದಿಟ್ಟ ಹೆಜ್ಜೆಯನ್ನಿಟ್ಟರು. ಆ ದಾರಿಯಲ್ಲೇ ಸಾಗಿ ಬಂದ ಡಾ.ಸಿದ್ಧಲಿಂಗಯ್ಯ ಈ ದೇವರು, ಧರ್ಮದ ಹೆಸರನಲ್ಲಿ ನಡೆಸುತ್ತಿರುವ ಶೋಷಣೆ, ಅದರ ಅಡಿಯಲ್ಲೇ ಅಸಮಾನತೆ, ಜಾತಿವ್ಯವಸ್ಥೆಯ ತಾರತಮ್ಯಗಳನ್ನು ತಿರಸ್ಕರಿಸಿ ಅಂಬೇಡ್ಕರ್‌ರವರ ದಾರಿಯನ್ನೇ ತುಳಿದರು. ದಲಿತರಿಗೆ ಧಾರ್ಮಿಕ ಚಿಂತನೆಗಳಲ್ಲಿ ತೊಡಗುವಂತೆ ಪ್ರೇರಣೆ ನೀಡಿ ಮಾರ್ಗದರ್ಶಕರೂ ಆಗಿದ್ದಾರೆ. ಕೊನೆಯದಾಗಿ ಡಾ.ಅಂಬೇಡ್ಕರ್ ಈ ಹಿಂದೂಧರ್ಮ ತಂತ್ರ, ಚಿಂತನೆಗಳನ್ನು ಕುರಿತು "ಹಿಂದೂ ಧರ್ಮವನ್ನು ಮನುಷ್ಯ ಧರ್ಮ ಎನ್ನಲಾಗದು. ಹಿಂದೂ ಮತದಲ್ಲಿ ಸಾಮಾನ್ಯರಿಗೆ ಆಸರೆಯಿಲ್ಲ. ಸಂತ್ರಸ್ತರಿಗೆ ಸಾಂತ್ವನವಿಲ್ಲ, ನತದೃಷ್ಟರಿಗೆ ನೆರವಿಲ್ಲ. ಇದೇ ಹಿಂದೂ ಧರ್ಮದ ಚಿಂತನೆ. ಅತಿ ಮಾನವರ ಸ್ವರ್ಗ, ಹುಲುಮಾನವರ ನರಕ"[೩೬] ಎಂದು ಹೇಳಿದ್ದಾರೆ. ಡಾ.ಸಿದ್ಧಲಿಂಗಯ್ಯನವರಿಗೂ ಕೂಡ ಧರ್ಮದಲ್ಲಿ ನಂಬಿಕೆ ಇಲ್ಲ. ಮಾನವೀಯತೆಯಲ್ಲಿ ವಿಶ್ವಾಸವುಳ್ಳವರಾಗಿದ್ದಾರೆ. ಅದನ್ನೇ ತಮ್ಮ ಜೀವನದಲ್ಲಿ, ತಮ್ಮ ವ್ಯಕ್ತಿತ್ವದಲ್ಲೂ ಅಳವಡಿಸಿಕೊಂಡಿದ್ದಾರೆ. ಅದನ್ನೇ ತನ್ನ ಸಾಹಿತ್ಯದಲ್ಲಿ ಬಿತ್ತರಿಸಿದ್ದಾರೆ.

೪.೪ ಜಾತಿ ವಿನಾಶ ಮತ್ತು ಮತಾಂತರ

ಭಾರತದಲ್ಲಿರುವ ಎಲ್ಲಾ ಸಮಸ್ಯೆಗಳಿಗೂ ಮೂಲ ಬೇರು ಈ ಜಾತಿಪದ್ಧತಿ ಎಂದರೆ ತಪ್ಪಾಗಲಾರದು. ಅಷ್ಟರಮಟ್ಟಿಗೆ ಜಾತಿಯ ಬೇರು ಮಾನವರ ಮನಗಳಲ್ಲಿ ಬೇರೂರಿದೆ. ಯಾವುದೇ ಕೆಲಸ ಕಾರ್ಯಗಳನ್ನು ಮಾಡಿದರು ಅದಕ್ಕೆ ಜಾತಿಯ ಹಿನ್ನೆಲೆಯನ್ನು ಹೊಂದಿರುತ್ತದೆ ಎನ್ನುವಷ್ಟರ ಮಟ್ಟಿಗೆ, ಹಿಂದೂಗಳ ಕಣ ಕಣಗಳಲ್ಲೂ ಜಾತಿಯ ಭೂತವೇ ಹರಿದಾಡುತ್ತದೆ. ಈ ಜಾತಿವ್ಯವಸ್ಥೆಯನ್ನು ಕಸುಬುಗಳ ಆಧಾರ ಮೇಲೆ ಸೃಷ್ಠಿಸಲಾಗಿದೆ. ಜಾತಿಗಳಲ್ಲಿ ಉಪ ಜಾತಿಗಳು ಹೀಗೆ ೩ ಸಾವಿರಕ್ಕೂ ಹೆಚ್ಚು ಜಾತಿಗಳಿವೆ. ಜಗತ್ತಿನ ಯಾವ ದೇಶದಲ್ಲಿಯೂ ಇಷ್ಟು ಜಾತಿಗಳಲ್ಲಿ ಜಾತಿವ್ಯವಸ್ಥೆಯ ಕ್ರೂರತೆಯಾಗಲಿ ಇಲ್ಲ. ಇದು ಸಾಮಾಜಿಕವಾಗಿ ಮಾರಕವಾಗಿದ್ದು, ಅಸಮಾನತೆ, ಮೇಲು-ಕೀಳಿನ ತಾರತಮ್ಯಕ್ಕೆ ಮೂಲವಾಗಿದೆ. ಈ ವ್ಯವಸ್ಥೆಯಿಂದ ಕೆಲವೊಂದು ಸಮುದಾಯಗಳು ತಮ್ಮ ಮೂಲ ಸಹಜ ಕ್ರಿಯೆಗಳಿಂದಲೇ ವಂಚಿತರನ್ನಾಗಿ ಮಾಡಿ ಅವರಿಗೆ ಸ್ವಾತಂತ್ರ್ಯ, ಆರ್ಥಿಕ ಸ್ವಾವಲಂಬನೆ, ಶಿಕ್ಷಣ ಸಮಾನ ಜೀವನದಿಂದಲೇ ದೂರ ಮಾಡಲಾಗಿದೆ. ವರ್ಣಾಶ್ರಮ ಪದ್ಧತಿಯಲ್ಲಿ ಒಂದು ಜಾತಿ ಮೇಲೆ ಇನ್ನೊಂದು ಜಾತಿಯನ್ನಿಟ್ಟು ಶ್ರೇಣೀಕೃತ ವ್ಯವಸ್ಥೆಯನ್ನು ಸೃಷ್ಟಿಸಿ ಮೇಲಿನ ಜಾತಿಯವರು ಉನ್ನತವರ್ಗದವರು ತಳ ಭಾಗದಲ್ಲಿರುವವರು ಕೀಳು ಜಾತಿಯವರು ಇವರು ಯಾವುದೇ ಮೂಲಭೂತ ಸೌಕರ್ಯಗಳಿಗೆ ಅನರ್ಹವೆಂಬ ನೀತಿಯನ್ನು ತಂದು ಸಾಮಾಜಿಕ ಅಸಮಾನತೆ ಸಿದ್ಧಾಂತವನ್ನು ಜಾರಿಗೆ ತಂದರು.

"೧.ಜಾತಿಯು ಶ್ರಮಿಕರನ್ನು ವಿಭಜಿಸುತ್ತದೆ. ೨. ಜಾತಿಯು ವೃತ್ತಿಯನ್ನು ಆಸಕ್ತಿಯಿಂದ ಬೇರ್ಪಡಿಸುತ್ತದೆ. ೩.ಜಾತಿಯು ಬೌದ್ಧಿಕ ಮತ್ತು ದೈಹಿಕ ಶ್ರಮಗಳನ್ನು ಬೇರ್ಪಡಿಸುತ್ತದೆ. ೪. ಜಾತಿಯು ಆಳವಾದ ಆಸಕ್ತಿಯನ್ನು ಬೆಳೆಸಿಕೊಳ್ಳುವ ವ್ಯಕ್ತಿಯ ಹಕ್ಕನ್ನು ಕಸಿದುಕೊಳ್ಳುವುದರ ಮೂಲಕ ಅವನನ್ನು ನಿಸ್ಸತ್ವಗೊಳಿಸುತ್ತದೆ. ೫. ಜಾತಿಯು ಚಲನಶೀಲತೆಗೆ ಭಂಗ ತರುತ್ತದೆ"[೩೭]

ಈ ಮೇಲಿನ ಅಂಶಗಳಿಂದ ಜಾತಿವ್ಯವಸ್ಥೆ ಎಷ್ಟು ಕ್ರೂರ, ಘೋರವಾದ ಅಂಶಗಳನ್ನು ಹೊಂದಿದೆ ಎಂಬುದು ಅರಿವಿಗೆ ಬರುತ್ತದೆ. ಇದರಿಂದ ದೇಶದ ಅಭಿವೃದ್ಧಿ, ದೇಶ ಶಾಂತಿಯನ್ನು ಪಡೆಯಲು, ಕಾಪಾಡಲು ಅಸಾಧ್ಯವಾಗಿದೆ. "ಜಾತಿ ಪದ್ಧತಿಯ ವಿರುದ್ಧ ನಾನು ಹೋರಾಟ ಮಾಡುತ್ತಿರುವುದು ಕೇವಲ ದಲಿತರ ಉನ್ನತಿಗಾಗಿ ಅಲ್ಲ. ಈ ದೇಶದ ಅಧಃಪತನಕ್ಕೆ ಹೋಗಿರುವಂತಹದು. ಈ ದೇಶ ಪರಕೀಯರ ದಾಳಿಗೆ ತುತ್ತಾಗಿ ಜರ್ಜರಿತವಾಗಿರುವಂತಹದು. ಜನತೆಗೆ ಶಕ್ತಿ ಇರಲಿಲ್ಲ. ಅಂತ ಅಲ್ಲ; ಸೈನ್ಯ ಇರಲಿಲ್ಲ ಅಂತ ಅಲ್ಲ, ನಮ್ಮ ಜನತೆಯ ಮನಸ್ಸು ಜಾತೀಯತೆಯ ಕಾರಣದಿಂದ ಮುದುಡಿ

ಹೋಗಿತ್ತು. ಈ ದೇಶಕ್ಕೆ ಈ ರೀತಿ ಆಗಬಾರದು. ನಮ್ಮ ಪ್ರಾಣ, ಮಾನ, ಸಂಪತ್ತು, ಘನತೆ ಮಣ್ಣುಪಾಲು ಆಗುವಾಗ ಚತುರ್ವರ್ಣ ಪದ್ಧತಿಯನ್ನು ಬದಿಗಿಟ್ಟು ಹೋರಾಟ ಮಾಡಿ ಈ ದೇಶದ ಮರ್ಯಾದೆಯನ್ನು ಉಳಿಸಿಕೊಳ್ಳಬೇಕೆ ಹೊರತು, ದೇಶಕ್ಕಿಂತ ನಮ್ಮ ಈ ಜಾತಿಪದ್ಧತಿ ಶ್ರೇಷ್ಠ ಅಂತ ತಿಳಿದುಕೊಂಡದ್ದು ನಿಜವಾಗಿಯೂ ಕೂಡ ದೇಶದ್ರೋಹದ ಕೆಲಸ"[೩೮] ಅದಕ್ಕಾಗಿ ಈ ದೇಶದ ಐಕ್ಯತೆಗೆ ಉಳಿವಿಗೆ, ದಲಿತರ ಉದ್ಧಾರಕ್ಕೆ ಈ ಜಾತಿಯನ್ನು ಮೂಲ ಬೇರುಗಳಿಂದಲೇ ಕಿತ್ತೊಗೆಯಬೇಕು ಎಂಬುದನ್ನು ಒತ್ತಿ ಒತ್ತಿ ಹೇಳುತ್ತಿದ್ದಾರೆ. ಅದರಿಂದ ಈ ಜಾತಿಪದ್ಧತಿಯು ಸಮಾಜದ ಜನರಲ್ಲಿರುವ ಮನೋರೋಗ. ಇದರಿಂದ ಅವನ ಆರೋಗ್ಯಪೂರ್ಣ ಮನಸ್ಸಿಗೂ ಭಂಗ ತರುತ್ತದೆ. ಈ ಮನೋವ್ಯಾಧಿಯನ್ನು ವೈಚಾರಿಕ ವೈಜ್ಞಾನಿಕ ಚಿಂತನೆಗಳಿಂದ ವಾಸಿ ಮಾಡಲು ಸಾಧ್ಯವಿದೆ. ಅದಕ್ಕೆ ವಿದ್ಯಾವಂತ ಜನಾಂಗ ಈ ಜಾತೀಯತೆಯನ್ನು ತಿರಸ್ಕರಿಸಬೇಕು. ಇದಕ್ಕೆ ಮನುಷ್ಯತ್ವವಿಲ್ಲ ಶಾಸ್ತ್ರ, ಧರ್ಮದ ಆಸರೆಯು ಇಲ್ಲವಾಗಿಸಬೇಕು. ಏಕೆಂದರೆ ಈ ಜಾತಿಪದ್ಧತಿಯು ಅಧರ್ಮವಾದುದು. ಇದಕ್ಕೆ ಮಹಾತ್ಮರದು, ಸಮಾಜದ ಪರಿವರ್ತಕರ ಚಿಂತನೆಗಳಿಂದ ಪರಿಹಾರವನ್ನು ಕಂಡುಕೊಳ್ಳುವ ಜವಾಬ್ದಾರಿ ಇಂದು ಯುವಜನಾಂಗದ ಮೇಲಿದೆ ಎಂದಾಯಿತು.

ಅಂಬೇಡ್ಕರ್‌ರವರ ತತ್ವ, ಸಿದ್ಧಾಂತಗಳಿಂದ ಪ್ರೇರಣೆಗೊಂಡ ಡಾ.ಸಿದ್ಧಲಿಂಗಯ್ಯನವರು ತಮ್ಮ ಸಾಹಿತ್ಯ ಬರವಣಿಗೆ, ಸದನದಲ್ಲಿ ಸದಸ್ಯರಾಗಿದ್ದಾಗ ಕೂಡ ಅವರು ಜಾತಿಯಿಂದ ಜಾತ್ಯಾತೀತದೆಡೆಗೆ ನಡೆಯುವಂತಹ, ನಡೆಸುವಂತಹ ಕ್ರಮಗಳ ಬಗ್ಗೆ, ಜಾತಿ ವಿನಾಶದ ಬಗ್ಗೆ ತನ್ನದೇ ರೀತಿಯ ಆಲೋಚನೆ, ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. "ಜಾತಿ ಹೆಸರಿನಲ್ಲಿರುವ ವಿದ್ಯಾರ್ಥಿನಿಲಯಗಳನ್ನು ಮೊದಲು ರದ್ದು ಮಾಡಬೇಕು. ಎಲ್ಲ ಜಾತಿಯ ವಿದ್ಯಾರ್ಥಿಗಳು ಒಂದು ಕಡೆ ಸೇರಿ ಅಭ್ಯಾಸ ಮಾಡುವುದು, ಒಡನಾಡುವುದು, ಪರಸ್ಪರ ಸ್ನೇಹಿತರಾಗುವುದು ಸಾಧ್ಯವಾಗುತ್ತದೆ. ಇದಕ್ಕಾಗಿ ಪರಿಶಿಷ್ಟರ ವಿದ್ಯಾರ್ಥಿ ನಿಲಯದಲ್ಲಿ ಪರಿಶಿಷ್ಟರಲ್ಲದವರು ಕೂಡ ಇರಬೇಕು. ಪರಿಶಿಷ್ಟರಲ್ಲದ ವಿದ್ಯಾರ್ಥಿನಿಲಯದಲ್ಲಿ ಪರಿಶಿಷ್ಟರಿಗೆ ಅವಕಾಶ ಮಾಡಿಕೊಡಬೇಕು. ಅದರಿಂದ ಮೊದಲು ಜಾತಿ ಸೂಚಕ ಫಲಕಗಳನ್ನು ತೆಗೆದುಹಾಕಬೇಕು. ವಿದ್ಯಾರ್ಥಿಗಳು ಬೆಳೆಯುವ ಮೊಳಕೆಗಳು. ಅದರಲ್ಲಿ ನಾವು ಜಾತೀಯತೆಯ ವಿಷವನ್ನು ಬಿತ್ತುತ್ತಿದ್ದೇವೆ. ಅದರ ಮತ್ತೇರಿದಾಗ ಯಾವಾಗ, ಯಾರಿಗೆ, ಯಾರಿಂದ, ಯಾರಿಗೆ, ಏನೇನು ಅನಾಹುತ ಆಗುತ್ತದೆ ಎಂದು ಹೇಳಲಾಗುವುದಿಲ್ಲ. ಈ ಸಮಸ್ಯೆಗೆ ಇರುವ ಮುಖ್ಯ ಪರಿಹಾರವೆಂದರೆ ಜಾತಿಸೂಚಕ ವಿದ್ಯಾರ್ಥಿನಿಲಯಗಳನ್ನು ಕೂಡಲೇ ರದ್ದು ಮಾಡುವುದು. ಜೊತೆಗೆ ಎಲ್ಲಾ ಜಾತಿಯವರು ಒಟ್ಟಾಗಿ ಜೀವಿಸುವಂತಹ ವಾತಾವರಣ ಮತ್ತು ವ್ಯವಸ್ಥೆಯನ್ನು ರೂಪಿಸುವುದು"[೩೯]

ಹೀಗೆ ಅಮೂಲಾಗ್ರವಾಗಿ ಜಾತಿಯವಿಷಬೇರನ್ನು ತೆಗೆಯಬೇಕಾಗಿದೆ. ಅದಕ್ಕೆ ಶಿಕ್ಷಣವೇ ಮದ್ದು. ದಲಿತರ ಕಾಲೋನಿಗಳನ್ನು ನಿರ್ಮಿಸುವಾಗಲೂ ಕೂಡ ಜಾತಿಗಿಂತ ಜಾತ್ಯಾತೀತ ತತ್ವವನ್ನು ಪರಿಪಾಲಿಸಿ. ಎಲ್ಲ ಜಾತಿಯ ಜನರು ಒಟ್ಟಿಗೆ ವಾಸಿಸುವಂತೆ ಮಾಡುವ ವಾತಾವರಣ ಸೃಷ್ಟಿಮಾಡಿ ಬೇಕಾದ ಅನಿವಾರ್ಯತೆ ಇದೆ ಎಂಬುದನ್ನು ಸದನದಲ್ಲಿ ಸರ್ಕಾರದ ಗಮನಕ್ಕೆ ತರುವ ಪ್ರಯತ್ನವನ್ನು ಮಾಡಿದ್ದಾರೆ. ಈ ದೇಶದ ಒಳಿತಿಗೆ, ಮುನ್ನಡೆಗೆ ಜಾತೀಯತೆ, ಅಸ್ಪೃಶ್ಯತೆ, ಮೌಢ್ಯಗಳು ತೊಲಗಬೇಕು. ಅದಕ್ಕೆ ಅನುಗುಣವಾದ ಶಿಕ್ಷಣ ಪದ್ಧತಿಯನ್ನು ಜಾರಿಗೆ ತಂದು ಬೆಳೆಯುವ ಮೊಳಕೆಯಲ್ಲೇ ಜಾತ್ಯಾತೀತ ತತ್ವದ ಪರಿಸರವನ್ನು ಒದಗಿಸಿ ದೇಶದ ಸತ್ಪ್ರಜೆಗಳಾಗಿ ನಿರ್ಮಿಸುವ ಜವಾಬ್ದಾರಿ ಆಡಳಿತ ವ್ಯವಸ್ಥೆಯ ಜೊತೆಗೆ ಹಿರಿಯರ ಪ್ರಯತ್ನ, ತಿಳುವಳಿಕೆ ಪ್ರಜ್ಞಾವಂತ ವರ್ಗವೂ ಜೊತೆಗೂಡಬೇಕಾಗಿದೆ.

"ಇವತ್ತಿನ ಸಂಘರ್ಷ ಇರುವುದು ಜಾತಿಪದ್ಧತಿ ಮತ್ತು ಪ್ರಜಾಪ್ರಭುತ್ವದ ನಡುವೆ. ಸಂಘರ್ಷ ಉಂಟಾಗಿರತಕ್ಕದ್ದು ಈ ಎರಡು ದೊಡ್ಡ ಶಕ್ತಿಗಳ ನಡುವೆ. ನೀವು ಜಾತಿಯನ್ನು ಆಯ್ಕೆ ಮಾಡಿಕೊಳ್ಳಿರಿ. ಇಲ್ಲ ಪ್ರಜಾಪ್ರಭುತ್ವವನ್ನು ಆಯ್ಕೆ ಮಾಡಿಕೊಳ್ಳಿರಿ"[೪೦] ಈ ಮಾತುಗಳ ಸತ್ಯಾಂಶ ಮತ್ತು ವಾಸ್ತವತೆಯನ್ನು ಬಿಂಬಿಸುತ್ತದೆ. ಒಂದು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಸ್ವೀಕರಿಸಿರುವ ನಾವು ಅದನ್ನು ಉಳಿಸಿಕೊಳ್ಳಬೇಕಾದರೆ ಜಾತಿಪದ್ಧತಿ ನಾಶವಾಗಬೇಕು. ದೇಶದಿಂದಲ್ಲದೇ ಜನರ ಮನಸ್ಸು, ಆಲೋಚನೆಗಳಿಂದ ಇದನ್ನು ದೂರ ಮಾಡಿದರೆ ಪ್ರಜಾಪ್ರಭುತ್ವಕ್ಕೆ ಜಯ ಸಿಗುತ್ತದೆ. ಈ ಜಾತಿಪದ್ಧತಿಯ ವಿರುದ್ಧ ಮೊದಲ ದನಿ ಮಾನವೀಯತೆಯನ್ನು ಬೋಧಿಸಿದ ಬುದ್ಧನದು. ಆತ ಮನುಷ್ಯರನ್ನು ಮನುಷ್ಯರಂತೆ ನೋಡಿದವರು. ನೋಡುವಂತೆ ಉಪದೇಶಿಸಿರುವವರು. ೧೨ನೆಯ ಶತಮಾನ ಕರ್ನಾಟಕದಲ್ಲಿ ಸಾಹಿತ್ಯ ಲೋಕದಲ್ಲಿ ಕ್ರಾಂತಿಕಾರಕ ಬದಲಾವಣೆ ತಂದದ್ದು ವಚನ ಚಳುವಳಿ. ಬಸವಣ್ಣ ಜಾತಿವ್ಯವಸ್ಥೆಯನ್ನು ಧಿಕ್ಕರಿಸಿದ್ದಲ್ಲದೇ ಜಾತಿವಿನಾಶಕ್ಕೆ ನಾಂದಿ ಹಾಡಿ ಅಂತರ್ಜಾತಿ ವಿವಾಹ ಮಾಡುವುದರ ಮೂಲಕ ಕ್ರಾಂತಿಯನ್ನೇ ಮಾಡಿದರು. ವೇದಗಳ ಕಾಲದಲ್ಲಿ ಈ ಜಾತೀಯತೆ ಇರಲಿಲ್ಲ. ಅದಕ್ಕೆ ಕಾರಣ ಭಿನ್ನಗೋತ್ರ ವಿವಾಹ ಪದ್ಧತಿ. ಆದರೆ ಪುರಾಣಗಳ ಕಾಲದಲ್ಲಿ ಹುಟ್ಟು ಸಗೋತ್ರ ವಿವಾಹ ಪದ್ಧತಿ ಇದರ ಆರಂಭವಾಗಿದೆ. ವಿವಾಹಪದ್ಧತಿಯಿಂದಲೇ ಉಗಮವಾದ ಈ ಜಾತಿಪದ್ಧತಿಯನ್ನು ವಿವಾಹ ಪದ್ಧತಿಯಿಂದಲೇ ನಿರ್ಮೂಲನೆ ಮಾಡಬೇಕೆಂದು ಗಾಂಧೀಜಿ, ಸ್ವಾಮಿವಿವೇಕಾನಂದ, ರಾಮಮನೋಹರ ಲೋಹಿಯಾ ಮತ್ತು ಅಂಬೇಡ್ಕರ್‌ರವರು ಅಂತರ್ಜಾತಿಯ ವಿವಾಹದಿಂದ ಮಾತ್ರ ಸಾಧ್ಯವೆಂದು ಹೇಳಿದ್ದಾರೆ.

"ಜಾತಿಯನ್ನು ಹೂತು ಬಿಡಲು
ಲಕ್ಷ ಲಕ್ಷ ಜನರನು
ಕಟ್ಟಿ ಕ್ರಿಯಾರಂಗಕಿಳಿದ

ಸ್ವಾಭಿಮಾನ ಸಮುದ್ರ" (ಅಂಬೇಡ್ಕರ್)

ಅಂಬೇಡ್ಕರ್‌ರವರು ಈ ಸಮಾಜದಅಸಮಾನತೆಗೆ ಜಾತಿಪದ್ಧತಿಯೇ ಮೂಲ ಎಂದು ಹೇಳಿದವರು. ಅದನ್ನು ನಾಶ ಮಾಡುವ ನಿಟ್ಟಿನಲ್ಲಿ ಹೊಸ ಚಿಂತನೆಯನ್ನು ಅವರ 'ಜಾತಿವಿನಾಶ' ಪುಸ್ತಕದಲ್ಲಿ ಕಾಣಬಹುದಾಗಿದೆ. ಶಿಕ್ಷಣ ಪಡೆದು ವೈಜ್ಞಾನಿಕ ದೃಷ್ಟಿಕೋನ ಬೆಳೆಸಿಕೊಳ್ಳಬೇಕು. ಅಂತರ್ಜಾತಿ ವಿವಾಹ ಆಗಬೇಕು ಎಂಬ ಆಲೋಚನೆಯಿಂದ ಯುವ ಪಡೆಗಳಿಗೆ ಸಲಹೆಯನ್ನು ನೀಡಿ ಜಾಗೃತಗೊಳಿಸಿದವರು. ಅಂಬೇಡ್ಕರ್ ಅನುಯಾಯಿಗಳು ಅಂತರ್ಜಾತಿಯವಿವಾಹಗಳನ್ನು ಮಾಡಿಕೊಂಡಿದ್ದಾರೆ. ಅಂಬೇಡ್ಕರ್ ದಲಿತರಿಗೆ ಸ್ವಾಭಿಮಾನದ ಸಂಕೇತವಾಗಿದ್ದಾರೆ. ಸ್ವತಃ ಸಿದ್ಧಲಿಂಗಯ್ಯನವರು ಕೂಡ ಅಂತರ್ಜಾತಿಯ ವಿವಾಹವಾಗುವುದರೊಂದಿಗೆ ಜಾತಿವಿನಾಶಕ್ಕೆ ದಿಟ್ಟ ಹೆಜ್ಜೆಯನ್ನಿಟ್ಟು ಮುನ್ನಡೆದು ಮಾರ್ಗದರ್ಶಕರಾಗಿದ್ದಾರೆ.

'ಪಂಚಮ' ನಾಟಕದಲ್ಲಿ ಕೊನೆಯದಾಗಿ ಹೇಳುವ 'ಈ ದೇಶದಲ್ಲಿ ಮಾನಮರ್ಯಾದೆಯಿಂದ ಬದುಕಬೇಕು ಅನ್ನೋ ಆಸೆ' ಅದಕ್ಕಾಗಿ ಸಮಾಜ ಬದಲಾವಣೆ ಮಾಡಬೇಕು ಎನ್ನುವ ಮಾತುಗಳಲ್ಲಿ ಹಾಗೆಯೇ 'ನೆಲಸಮ' ನಾಟಕದಲ್ಲಿ ಕೊನೆಯದಾಗಿ ಬರುವ 'ಮನೆ ಮನೆ ಮೂಲ ಗಿಡದಲ್ಲಿ ನಾವೆಲ್ಲ ಬರುತೀವಿ ಕೆಂಪನೆ ಹೂವಾಗಿ' ಎನ್ನುವಲ್ಲಿ ಮತ್ತು 'ಏಕಲವ್ಯ' ನಾಟಕದಲ್ಲಿ ಕೊನೆಯದಾಗಿ ಏಕಲವ್ಯ ಹೇಳುವ 'ನನ್ನ ಹೋರಾಟ ಅನ್ಯಾಯದ ವಿರುದ್ಧ ಮತ್ತು ಮಾನವ ವಿರೋಧಿ ಶಾಸ್ತ್ರ-ಸಂಪ್ರದಾಯಗಳ ವಿರುದ್ಧ, ಜಾತಿ-ಮೇಲು-ಕೀಳು ಎಂಬ ತಾರತಮ್ಯದ ವಿರುದ್ಧ ನನ್ನ ಬಂಡಾಯ' ಈ ಎಲ್ಲಾ ಮಾತುಗಳಲ್ಲಿ ಹೋರಾಟದ ಕ್ರಾಂತಿಯ ಮೂಲಕ ಈ ಸಮಾಜ ಜಾತಿವ್ಯವಸ್ಥೆ ಅಸಮಾನಕ್ಕೆ ತಾರತಮ್ಯಗಳನ್ನು ಸಂಪೂರ್ಣವಾಗಿ ತೊಡೆದು ಹಾಕಿ ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳಿನ ಸರ್ವ ಸಮಾನತೆಯ ಸಮಾಜ ನಿರ್ಮಾಣ ಸಾಧ್ಯವೆಂದು ಗೋಚರಿಸುತ್ತದೆ. ಡಾ.ಅಂಬೇಡ್ಕರ್‌ರವರು ಕೂಡ ಒಟ್ಟು ಸಮಾಜ ಬದಲಾವಣೆಯ ಕಡೆಗೆ ಹೋಗಬೇಕು. ಈ ಬದಲಾವಣೆ ಉತ್ತಮವಾದ, ಗುಣಾತ್ಮಕವಾದ ಬದಲಾವಣೆಯಾಗಿರಬೇಕೆಂದು ನಂಬಿದ್ದರು. ಅದನ್ನೇ ಜೀವನವನ್ನಾಗಿಸಿಕೊಂಡವರು ಡಾ.ಸಿದ್ಧಲಿಂಗಯ್ಯನವರು.

"ಈ ಜಾತಿವ್ಯವಸ್ಥೆ ಮತ್ತು ಅಸ್ಪೃಶ್ಯತೆಯನ್ನು ತೊಡೆದು ಹಾಕಲು ಮೊದಲ ಬಾರಿಗೆ ಡಾ.ಅಂಬೇಡ್ಕರ್ ಅವರು ಈ ಸಮಸ್ಯೆಯನ್ನು ರಾಜಕೀಯ ನೆಲೆಯಿಂದ ಬಗೆಹರಿಸಲು ಪ್ರಯತ್ನಿಸಿದರು. ಹಾಗಾಗಿ ರಾಜಕೀಯ ವ್ಯವಸ್ಥೆಯಲ್ಲಿ 'ಮೀಸಲಾತಿ' ಎಂಬ ಸೂತ್ರ ಬಂತು"[೮೧] ಈ ಮೀಸಲಾತಿಯಿಂದ ಕೆಳವರ್ಗದ ಜನ ಆರ್ಥಿಕವಾಗಿ ಬಲಿಷ್ಠರಾದಾಗ, ಅವರು ಸಾಮಾಜಿಕವಾಗಿಯೂ ಅವರ ಅಂತಸ್ತು ಘನತೆ ಬದಲಾಗಿ ಸಮಾನತೆಯನ್ನು ತರಲು ಸಾಧ್ಯವೆಂದು ನಂಬಿದ್ದರು. ಆದರೆ ರಾಜಕೀಯ ಪಕ್ಷಗಳು, ರಾಜಕಾರಣಿಗಳು ಅದನ್ನು ದುರುಪಯೋಗ ಪಡಿಸಿಕೊಳ್ಳುತ್ತಿರುವುದರಿಂದ ಈ ಸಮಸ್ಯೆ ಮತ್ತಷ್ಟು

ಜಟಿಲಗೊಳ್ಳುತ್ತಿರುವುದನ್ನು ನಾವು ಗಮನಿಸಬಹುದಾಗಿದೆ. "ಶತ ಶತಮಾನಗಳಿಂದ ಜಾತಿಪದ್ಧತಿಯ ಕರಾಳ ಮುಷ್ಠಿಗೆ ಸಿಕ್ಕಿ ಈ ಸಮಾಜದಲ್ಲಿ ಪ್ರೀತಿ ಮತ್ತು ಮಾನವೀಯತೆಗಳು ಕಾಣೆಯಾಗಿವೆ. ಇಂತಹ ಪ್ರೀತಿ ಮತ್ತು ಮಾನವೀಯತೆಗಳಿಗೆ ಕೊಡಲಿ ಪೆಟ್ಟು ಹಾಕಿರತಕ್ಕಂಥ ಜಾತಿಪದ್ಧತಿ ವಿರುದ್ಧವಾಗಿ ಒಂದು ದೊಡ್ಡ ಸಮರವನ್ನೇ ಮಾಡಬೇಕಾಗಿದೆ. ಈ ಕೆಲಸಕ್ಕೆ ದೊಡ್ಡದಾದ, ಮುಖ್ಯವಾದ ಸಾಧನ ಎಂದರೆ ಅಂತರ್ಜಾತೀಯ ವಿವಾಹಗಳು. ಅಂತರ್ಜಾತೀಯ ವಿವಾಹ ಮಾತ್ರ ಈ ಜಾತಿಪದ್ಧತಿಯನ್ನು ಭಗ್ನಗೊಳಿಸಬಲ್ಲದು ಮತ್ತು ನಮ್ಮ ಸಮಾಜಕ್ಕೆ ಸಮಾನತೆಯನ್ನು, ಸಂತೋಷವನ್ನು, ಸೌಂದರ್ಯವನ್ನು ತರಬಲ್ಲದು. ಅದಕ್ಕಾಗಿ ನಮ್ಮ ಭಾರತದ ಸಂವಿಧಾನದ ೧೪, ೧೫, ೧೬ನೆಯ ಕಾಲಂಗಳಲ್ಲಿ ಯಾವ ಒಂದು ನಿರ್ದೇಶನ ಇದೆ, ನವ ಸಮಾಜ ನಿರ್ಮಾಣ ಆಗಬೇಕು. ವರ್ಗರಹಿತ, ವರ್ಣರಹಿತವಾದ ಒಂದು ಸಮಾಜ ಆಗಬೇಕೆಂದು ಹೇಳುತ್ತದೆ"[೪೨] ಎಂದು ಡಾ.ಸಿದ್ಧಲಿಂಗಯ್ಯನವರು ಹೇಳುತ್ತಾರೆ. ಅದ್ದರಿಂದ ನಾವು ಅಂತರ್ಜಾತಿ ವಿವಾಹಗಳಿಗೆ ಹೆಚ್ಚು ಹೆಚ್ಚು ಪ್ರೋತ್ಸಾಹವನ್ನು ಕೊಡಬೇಕು. ಮತ್ತೆ ಯುವ ಜನತೆಯು ಕೂಡ ಜಾತಿಗಳಲ್ಲೇ ವಿವಾಹವಾಗುವುದನ್ನು ಬಿಟ್ಟು ಅಂತರ್ಜಾತಿ, ಅಂತರ್‌ಧರ್ಮಗಳಲ್ಲಿ ಸಂಬಂಧವನ್ನು ಬೆಳೆಸುವುದರಿಂದ ನಮ್ಮ ನಡುವಿನ ಜಾತಿಯ, ಮತದ ಗೋಡೆ ಒಡೆದು ಚೂರಾಗುತ್ತದೆ. ಅದಕ್ಕೆ ನಮಗೆ ನಮ್ಮ ದೇವತೆಗಳನ್ನೇ ಸ್ಫೂರ್ತಿಯನ್ನಾಗಿ ಮಾದರಿಯಾಗಿ ತೆಗೆದುಕೊಳ್ಳಬೇಕು ಎಂದು ಹೇಳುತ್ತಾರೆ.

"ನಮ್ಮ ಎಲ್ಲ ದೇವತೆಗಳು ಅಂತರ್ಜಾತಿ ವಿವಾಹ ಆಗಿರುವುದು. ಸ್ವಜಾತಿ ವಿವಾಹ ಅಗಿರುವ ದೇವರುಗಳು ತುಂಬಾ ಕಡಿಮೆ. ಶಿವ, ಕೃಷ್ಣ ಅಂತರ್ಜಾತಿ ವಿವಾಹ ಆಗಿದ್ದಾರೆ. ವೆಂಕಟರಮಣ ಅಂತರ್ಜಾತಿ ವಿವಾಹ ಆಗಿದ್ದಾನೆ. ಮೇಲುಕೋಟೆ ಚೆಲುವನಾರಾಯಣ ಸ್ವಾಮಿ ಕೇವಲ ಅಂತರ್ಜಾತಿ ಅಲ್ಲ, ಅಂತರ್ಮತೀಯ ವಿವಾಹ ಆಗಿದ್ದಾನೆ. ಚೆಲುವ ನಾರಾಯಣ ಸ್ವಾಮಿ ಮುಸ್ಲಿಂ ಮಹಿಳೆಯನ್ನು ಮದುವೆ ಆದುದನ್ನು ನಾವು ನೋಡಿದ್ದೇವೆ. ಬಿಳಿಗಿರಿ ರಂಗಯ್ಯ ಕೂಡ ಅಂತರ್ಜಾತಿ ಮದುವೆ ಆಗಿದ್ದಾನೆ. ಅಂದರೆ ದೇವತೆಗಳೆಲ್ಲರೂ ಅಂತರ್ಜಾತಿ ಮದುವೆ ಆಗಿರುವಾಗ, ಆ ದೇವತೆಗಳನ್ನು ನಾವು ಪೂಜೆ ಮಾಡುವುದಕ್ಕೆ ಮಾತ್ರ ಇಟ್ಟುಕೊಂಡು ಅವರ ಆದರ್ಶಗಳನ್ನು ತಿರಸ್ಕಾರ ಮಾಡಿದ್ದೇವೆ"[೪೩] ಇನ್ನು ಮುಂದಾದರೂ ದೇವರುಗಳನ್ನು ಪೂಜೆ ಮಾಡುವ ನಾವುಗಳು ಅವರ ಈ ರೀತಿಯ ಸಮಾಜ ಪರಿವರ್ತನೆಯ ಆದರ್ಶಗಳನ್ನು ಪಾಲಿಸುವುದರೊಂದಿಗೆ ಅವರಿಗೆ ಗೌರವವನ್ನು ಸೂಚಿಸೋಣ. ಅದನ್ನೇ ಸಮಾಜಕ್ಕೆ ಸಾರೋಣ. ಆಗ ಈ ಅಸಮಾನತೆ ತೊಲಗಿ ಸಮಾನತೆಯ ಹೂವನ್ನು ಕಾಣಬಹುದಾಗಿದೆ. ಅದಕ್ಕಾಗಿ ಈ ಸಮಾಜದಲ್ಲಿರುವ ನಾವುಗಳು ಜಾತಿಯನ್ನು ಬಿಟ್ಟು ಪ್ರೀತಿಯಿಂದ, ಸಹಕಾರದಿಂದ ಸಹಬಾಳ್ವೆ ನಡೆಸುವ ಸಮಾಜವನ್ನು ಎಲ್ಲ ಜಾತಿಯವರು ಸೇರಿ

ನವನಾಡನೊಂದನ್ನು ಕಟ್ಟಬೇಕಾಗಿದೆ. ಅದಕ್ಕೆ ಮುಂದಿನ ಸತ್ಪ್ರಜೆಗಳಾದ ಯುವ ಜನತೆ ಅಜ್ಞಾನದ ಅಂಧಕಾರವನ್ನು ತೊಳಗಿಸಿ ಜ್ಞಾನ ಬೆಳಕಿನಲ್ಲಿ ನಡೆಯುವುದಕ್ಕೆ ಮುಂದಾಗಬೇಕಾಗಿದೆ.

ಭಾರತಮಾತೆ ತನ್ನಲ್ಲಿ ಜಾತಿಯ ಅಸಮಾನತೆ, ಅಸ್ಪೃಶ್ಯತೆಯ ಆಚರಣೆಗಳನ್ನಿಟ್ಟುಕೊಂಡು ಮೈಲಿಗೆಯಾಗಿದ್ದಾಳೆ. ಈ ಅಸ್ಪೃಶ್ಯತೆ ಎನ್ನುವುದು ಸಾಮಾಜಿಕ ಸಮಸ್ಯೆಯಾಗಿದೆ ವಿನಹಃ ಅದು ಅಸ್ಪೃಶ್ಯರ ಸಮಸ್ಯೆ ಅಲ್ಲ ಎಂದು ತಿಳಿದವರು ಡಾ.ಅಂಬೇಡ್ಕರ್‌ರವರು. ಈ ಅಸ್ಪೃಶ್ಯತೆ ಎನ್ನುವುದು ಹುಟ್ಟಿದ ಕಾರಣದಿಂದಲೇ ಸಮಾಜದಿಂದ ದೂರದಲ್ಲಿಟ್ಟು ಕೆಳಮಟ್ಟದ ಕೆಲಸ ಮಾಡುತ್ತಿರುವುದರಿಂದ ಅವರಿಗೆ ಕೆಲವು ನಿರ್ಬಂಧಗಳನ್ನು ವಿಧಿಸಿದೆ. ಇದಕ್ಕೆ ಕಾರಣ ಭಾರತದ ವರ್ಣಾಶ್ರಮ ಧರ್ಮ. ಚಾತುವರ್ಣ ವ್ಯವಸ್ಥೆಯಿಂದಲೂ ಜಾತಿವ್ಯವಸ್ಥೆಯಿಂದ ಹೊರಬಂದು ಸ್ವತಂತ್ರ್ಯವಾದ ಜೀವನ ನಡೆಸಲು ಆ ಸಮುದಾಯಕ್ಕೆ ಮೂಲಭೂತ ಹಕ್ಕು-ಬಾಧ್ಯತೆಗಳನ್ನು ದೊರಕಿ ಎಲ್ಲರಂತೆ ಸಮಾನವಾಗಿ ಮನುಷ್ಯರಂತೆ ಬದುಕಬೇಕೆಂದು ತೀರ್ಮಾನಿಸಿ ಧಾರ್ಮಿಕವಾಗಿ ಮತಾಂತರ ಹೊಂದಲು ನಿರ್ಧಾರ ಕೈಗೊಂಡರು. ಇದು ಡಾ.ಅಂಬೇಡ್ಕರ್ ಏಕಾಏಕಿ ಆಕಸ್ಮಿಕವಾದ ಘಟನೆಯಾಗಿರಲಿಲ್ಲ. "೧೯೩೬ರಲ್ಲಿ 'ದಿ ಬಾಂಬೆ ಪ್ರೆಸಿಡೆನ್ಸಿ ಮಹರ್‌ರವರ ಸಮ್ಮೇಳನದಲ್ಲಿ' ನಾನು ಹಿಂದೂ ಅಸ್ಪೃಶ್ಯನಾಗಿ ಹುಟ್ಟಿದ್ದು ನನ್ನ ದುರದೃಷ್ಟ. ಇದನ್ನು ತಡೆಗಟ್ಟುವುದು ನನ್ನ ಶಕ್ತಿಗೆ ಮೀರಿದ್ದಾಗಿತ್ತು. ಆದರೆ ಈಗ ನಾನು ಅಪಮಾನಕರವಾದ ಸ್ಥಿತಿಯಲ್ಲಿ ಜೀವಿಸುವುದನ್ನು ಧಿಕ್ಕರಿಸುವ ಶಕ್ತಿಯನ್ನು ಹೊಂದಿದ್ದೇನೆಂದು ಘೋಷಿಸುತ್ತೇನೆ. ನಾನು ನಿಮಗೆ ಪ್ರಮಾಣ ಮಾಡಿ ಹೇಳುತ್ತೇನೆ. ನಾನು ಒಬ್ಬ ಹಿಂದೂವಾಗಿ ಮಾತ್ರ ಸಾಯಲಾರೆ"[೪೪] ಎಂದು ಘೋಷಣೆ ಮಾಡಿದರು. ನಂತರ ಅವರು ಎಲ್ಲಾ ಧರ್ಮ, ಧರ್ಮಗ್ರಂಥಗಳನ್ನು ಕೂಲಂಕುಷವಾಗಿ ಅಧ್ಯಯನ ಮಾಡಿದರು. ಕ್ರೈಸ್ತಧರ್ಮದಲ್ಲಿ ಸತ್ಯ, ಸಮಾನತೆ, ಸೋದರತೆ, ದಯೆ, ಕರುಣೆ, ಕ್ಷಮೆಗಳಿಗೆ ಹೆಸರುವಾಸಿಯಾಗಿದೆ. ಆದರೆ ಇಂದೂ ಆ ಧರ್ಮದಲ್ಲಿ ವರ್ಣಬೇಧ ನೀತಿ, ತಾರತಮ್ಯ ಅದರ ಕಾರ್ಯವೈಖರಿ, ಹಾಗೆಯೇ ಅನೇಕ ಸಮಸ್ಯೆಗಳ ಉದ್ಭವಿಸುವ ಕಾರಣದಿಂದ ಅದನ್ನು ಕೈಬಿಟ್ಟರು. ಸಿಖ್ ಧರ್ಮ ಇಸ್ಲಾಂ ಧರ್ಮಗಳನ್ನು ಒಲ್ಲೆಯೆಂದರು. ಕೊನೆಗೆ ಡಾ.ಅಂಬೇಡ್ಕರ್‌ರವರಿಗೆ ಬೌದ್ಧಧರ್ಮ ಎನ್ನುವುದು ತಮ್ಮ ಹೋರಾಟಕ್ಕೆ, ನಮ್ಮ ಬದಲಾವಣೆ ಸಿಕ್ಕಿರುವ ಚರಿತ್ರೆಯ ದಾಖಲೆಯಾಗಿದೆ. ಇತಿಹಾಸದ ಸ್ಥಿತಿಯೊಂದನ್ನು ವರ್ತಮಾನಕ್ಕೆ ತರುವ ಮೂಲಕ ತಮ್ಮ ಹೋರಾಟ, ಸಾಮಾಜಿಕ ಪರಿವರ್ತನೆ, ಚಳುವಳಿಗೆ ದೊಡ್ಡ ಪರಂಪರೆಯನ್ನು ಹೇಳುವ ಪ್ರಯತ್ನವಾಯಿತು. ಮತ್ತು ದಲಿತರಿಗೆ ಸಾಂಸ್ಕೃತಿಕ ಪರಂಪರೆ ಇತಿಹಾಸವನ್ನು ಕಟ್ಟಿಕೊಡುವ ಉನ್ನತವಾದ ಪ್ರಯತ್ನವೇ ಮತಾಂತರ.

ಹಿಂದೂ ಧರ್ಮದ ಪೊಳ್ಳು ಪವಾಡಗಳು, ಅಲೌಕಿಕತೆ, ಅಸಮಾನತೆ, ತಾರತಮ್ಯ ವಿರುದ್ಧ ಮೊದಲಿಗೆ ಸಮರವನ್ನು ಸಾರಿದವರು ಬುದ್ಧ. ಆ ವ್ಯವಸ್ಥೆಯನ್ನೆಲ್ಲ ತನ್ನ ಜೀವನನಿಷ್ಠ ಸತ್ಯದ, ತರ್ಕದ

ಆಧಾರದಿಂದ ಬಯಲಿಗೆ ಎಳೆದರು. ಒಂದು ಮಾನವೀಯ ಸಂಬಂಧಗಳಿರುವ, ಸ್ವಾತಂತ್ರ್ಯ ಸಮಾನತೆ, ಸೋದರತೆಯೇ ಧರ್ಮದ ಜೀವಾಳವಾಗಿತ್ತು. ಸಮಸ್ತ ದಲಿತ, ಅಸ್ಪೃಶ್ಯ, ಕೆಳವರ್ಗದ ಶೋಷಿತ ಸಮುದಾಯದ ವಿಮೋಚನೆ ಪ್ರೀತಿ, ಮತ್ತು ಸಹಾನುಭೂತಿಗಳಿಂದ ಹುಟ್ಟಿದ ಧರ್ಮದಿಂದ ಸಾಧ್ಯವೆಂದು ತಿಳಿದರು. ತಾನು ಮತಾಂತರ ಹೊಂದುತ್ತೇನೆಂದು ಪ್ರಕಟಿಸಿದ ಮೇಲೂ ಈ ಹಿಂದೂ ಧರ್ಮದಲ್ಲಿ ಪರಿವರ್ತನೆಯಾಗಿ ದಲಿತರ ಬಗ್ಗೆ ಕಾಳಜಿ, ಅಸ್ಪೃಶ್ಯರ ಸ್ಥಿತಿ–ಗತಿಗಳ ಬಗ್ಗೆ ಬದಲಾವಣೆ, ಸಮಾನತೆ, ಸೋದರತೆಗಳ ಪುರೋಹಿತಶಾಹಿ ವರ್ಗದಲ್ಲಿ ಮನಃಪರಿವರ್ತನೆ ಗೊಳ್ಳಬಹುದೆಂದು ನಿರೀಕ್ಷೆ ಮಾಡಿದ್ದರು. ಅದು ಶಾಶ್ವತವಾಗಿ ಸಾಧ್ಯವಾಗುವುದಿಲ್ಲ ಎಂದು ತಿಳಿದೇ ೧೯ ವರ್ಷಗಳ ನಂತರ ೧೯೫೬ರಲ್ಲಿ ಬೌದ್ಧಧರ್ಮಕ್ಕೆ ಸೇರುತ್ತಾರೆ. "ನಾನು ಕ್ರೈಸ್ತ ಮತಕ್ಕೆ ನನ್ನ ಈ ಸಮುದಾಯವನ್ನು ಮತಾಂತರಗೊಳಿಸಿದರೆ ಬಹುಶಃ ನಮ್ಮ ಜನಗಳ ದೇಶಭಕ್ತಿಯನ್ನು ಉಳಿದವರು ಶಂಕಿಸುವ ಕಾಲ ಬರಬಹುದು. ನಾನು ಇಸ್ಲಾಂ ಧರ್ಮಕ್ಕೆ ನನ್ನ ಜನ ಸಮುದಾಯವನ್ನು ಮತಾಂತರಗೊಳಿಸಿದ್ದೇ ಆದ ಪಕ್ಷದಲ್ಲಿ ನಮ್ಮ ಜನಗಳ ರಾಷ್ಟ್ರೀಯ ಭಾವನೆಯನ್ನೇ ಈ ಸಮಾಜದ ಜನ ಶಂಕಿಸುವ ಕಾಲ ಬರಬಹುದು. ಅದರಿಂದ ಭಾರತೀಯ ಸಂಸ್ಕೃತಿಯಲ್ಲೇ ಬೇರು ಬಿಟ್ಟಿರುವ, ಭಾರತೀಯ ಸಂಸ್ಕೃತಿಯ ಪ್ರತೀಕವಾದ ಬೌದ್ಧಧರ್ಮವನ್ನೇ ಆಯ್ಕೆ ಮಾಡಿಕೊಳ್ಳುತ್ತೇನೆ"[೪೫] ಎಂದು ಬೌದ್ಧಧರ್ಮವನ್ನೇ ಏಕೆ ಆಯ್ಕೆ ಮಾಡಿಕೊಂಡೆ ಎಂಬುದನ್ನು ತಿಳಿಯಪಡಿಸುತ್ತಾರೆ.

"ಕಪ್ಪಕ್ಕಿನ ಕೋಳಗಳನು
ಕಡಿದು ಎಸೆದ ವಜ್ರವೆ
ಬಂಗಾರದ ಕೋಳವೊಕ್ಕ
ಮಹಾಬೌದ್ಧ ಭಿಕ್ಷುವೆ" (ಅಂಬೇಡ್ಕರ್)

ಧರ್ಮದ ಅಂಧಕಾರದ ಬಂಧನದಲ್ಲಿದ್ದ ಅಸ್ಪೃಶ್ಯರು, ಶೋಷಿತ, ದಲಿತರನ್ನು ರಕ್ಷಿಸುವ ಸಲುವಾಗಿ ಆ ಬಂಧನವನ್ನು ಬೇಧಿಸಿ ಧಿಕ್ಕರಿಸಿ ಬಂದು ಒಂದು ನೆಮ್ಮದಿಯ, ಬದುಕಿಗೆ ಮೆರಗು ಕೊಡುವ ಗೌರವವನ್ನು ತಂದು ಕೊಡುವ ಧರ್ಮವನ್ನು ಪಡೆದು ಏಷ್ಯಾ ಖಂಡದಲ್ಲೇ ಮಹಾನ್ ಬೌದ್ಧ ಭಿಕ್ಷುವಾಗಿದ್ದಾರೆ. ಇದರ ಮೂಲಕ ದಲಿತರಿಗೆ ದಾರಿ ದೀಪವಾಗಿದ್ದಾರೆ. ಬಡವರ, ದಮನಿತರ ಪರವಾಗಿ ಈ ನಾಡಿನಲ್ಲಿ ಸಿಡಿದು ಬಂದು, ಅವರ ನೋವಿನ ಕೂಗಿಗೆ ಸ್ಪಂದಿಸಿ, ಅವರಿಗೆ ಆಶ್ರಯವನ್ನು ನೀಡುವ ಶಾಶ್ವತತೆಯ ಸಂಕೇತ. ವಿಸ್ತಾರತೆಯ ಪ್ರತೀಕವಾಗಿ ಡಾ.ಅಂಬೇಡ್ಕರ್ ಆಸರೆಯಾಗಿ ನಿಂತು ಒಂದು ಸ್ವಾಭಿಮಾನದ ಬದುಕನ್ನು ನೀಡಿದ್ದಾರೆ ಎಂಬುದು ಡಾ.ಸಿದ್ಧಲಿಂಗಯ್ಯನವರು ಅಂಬೇಡ್ಕರ್‌ರವರ ಬಗ್ಗೆ ನಿಲುವು ಹೊಂದಿದ್ದಾರೆ ಎಂಬುದನ್ನು ಅವರ ಸಾಹಿತ್ಯದಿಂದ ತಿಳಿಯಬಹುದಾಗಿದೆ.

ಪ್ರೀತಿ, ಕರುಣೆ, ಮಮತೆ, ವಾತ್ಸಲ್ಯ ಗುಣಗಳೊಂದಿಗೆ ನಿಸ್ವಾರ್ಥ, ನಿಷ್ಕಳಂಕ ಪ್ರೇಮವನ್ನು ನೀಡುವ ಮನಸ್ಥಿತಿ ಇರುವವಳು ಈ ಜಗತ್ತಿನಲ್ಲಿ ತಾಯಿ ಒಬ್ಬಳೇ. ಅಂತಹ ಮನಸ್ಸು, ತತ್ವಸಿದ್ಧಾಂತಗಳನ್ನು ಹೊಂದಿರುವವನು, ಅಂತಹದೇ ಗುಣ-ಸ್ವಭಾವವಿರುವ ಧರ್ಮದಲ್ಲಿ ತಾನು ಸೇರಿಕೊಂಡು ನೆಮ್ಮದಿಯ ಹರ್ಷದ ಬದುಕನ್ನು ಜ್ಞಾನಾತ್ಮಕವಾಗಿ ಸಮಾಜವನ್ನು ಪರಿಶೋಧಿಸುತ್ತಾ ಜೀವನ ಪ್ರೀತಿಯಿಂದ ಬಾಳ್ವೆ ನಡೆಸುವುದನ್ನು ಕಲಿಯುತ್ತಾನೆ ಎಂದು ಸಿದ್ಧಲಿಂಗಯ್ಯನವರ ಕಾವ್ಯ ಹೇಳುತ್ತದೆ.

ನಾಗ ಜನಾಂಗವೇ ಈ ದೇಶದ ಮೂಲನಿವಾಸಿಗಳು. ಆರ್ಯರು ಇಲ್ಲಿಗೆ ವಲಸೆ ಬಂದು ಜೀವಿಸಹೊರಟವರು. ಈ ಮೂಲ ನಿವಾಸಿಗಳು-ಆರ್ಯರು ನಡುವೆ ಆಗಾಗ ಜಗಳ, ವೈರುತ್ವವಿತ್ತು. ಬ್ರಿಟಿಷರು ನಮ್ಮ ದೇಶಕ್ಕೆ ಬಂದು ನಮ್ಮನ್ನೇ ಗುಲಾಮರನ್ನಾಗಿ ಮಾಡಿಕೊಂಡು ನಮಗೆ ನಾನಾಪರಿಯಾಗಿ ತೊಂದರೆ ನೀಡಿದರೋ ಹಾಗೆ ಆರ್ಯರು ನಾಗಾ ಜನಾಂಗಕ್ಕೆ ತೊಂದರೆಗಳನ್ನು ಕೊಡುತ್ತಿದ್ದರು. ಆಗ ಅವರನ್ನು ಮುಕ್ತಿದಾತ, ಮಾನವತವಾದಿ ಭಗವಾನ್ ಗೌತಮಬುದ್ಧ ಅವರಿಂದ ವಿಮುಕ್ತಿಗೊಳಿಸಿದನು. ಬೌದ್ಧ ಧರ್ಮವನ್ನು ನಾಗಾಗಳು ವಿಶ್ವದೆಲ್ಲೆಡೆಗೂ ಹರಡಿದರು. ಈ ಮೂಲನಿವಾಸಿ ನಾಗಗಳೇ ಇಂದಿನ ಹೊಲೆ-ಮಾದಿಗರು, ದಲಿತರು, ಅಸ್ಪೃಶ್ಯರು, ಶೋಷಿತರು. ಅದ್ದರಿಂದ ತಮ್ಮ ಮೂಲ ಧರ್ಮವಾದ ಪ್ರಕೃತಿಯನ್ನು ಪೂಜಿಸುವ, ಮಾನವೀಯ ಗುಣಗಳುಳ್ಳ ಸಮನಾದ ಬದುಕು ಕಂಡುಕೊಂಡಿದ್ದು ಬೌದ್ಧಧರ್ಮಕ್ಕೆ "ಮರಳಿ ಮನೆಗೆ" ಎಂಬಂತೆ ತಮ್ಮ ಮೂಲನೆಲೆಗೆ ವಾಪಸ್ಸು ಆಗಿದ್ದಾರೆ, ಡಾ.ಅಂಬೇಡ್ಕರ್ ಮೂಲಕವಾಗಿ. ಅದರಿಂದ ಇದು ಧರ್ಮಾಂತರ. ಮತಾಂತರ ಅಲ್ಲ ಎಂದೇ ಹೇಳಬೇಕಾಗುತ್ತದೆ. ಆದ್ದರಿಂದ ಅಸ್ಪೃಶ್ಯನು ಸಂಸ್ಕೃತಿ ಹೀನನಲ್ಲ. ಆತನು ದೀರ್ಘವಾದ, ಉತ್ತಮವಾದ ಸಂಸ್ಕೃತಿಯನ್ನು ಹೊಂದಿದ್ದವನು. ಉತ್ತಮ ಪುರುಷನೇ ಆಗಿದ್ದನು. ಆದರೆ ಈ ಆರ್ಯ ಸಂಸ್ಕೃತಿಗೆ ಅವನನ್ನು ಹೀನಾಯ ಸ್ಥಿತಿಗೆ ತಂದಿತ್ತು. ಈಗ ಮತ್ತೆ ತಾನು ಸ್ವತಂತ್ರ್ಯನಾಗಿ ತನ್ನ ಮನೆಗೆ ತಾನು ಸಂತೋಷದಿಂದ ಹಿಂದಿರುಗಿದ್ದಾನೆ ಎಂಬುದು ಡಾ.ಸಿದ್ಧಲಿಂಗಯ್ಯನವರ ಅಭಿಮತದಂತೆ ಎಲ್ಲ ಪ್ರಜ್ಞಾವಂತ ದಲಿತರ ಅಭಿಮತವಾಗಿದೆ.

ಭಾರತದಲ್ಲಿ ಸಾವಿರಾರು ವರ್ಷಗಳಿಂದಲೂ ಧರ್ಮಕ್ಕೆ ಅನುಗುಣವಾಗಿ ಶ್ರೇಣೀಕೃತ ಹಿಂದೂ ಜಾತಿ ಪದ್ಧತಿಯು ನಡೆದುಕೊಂಡು ಬರುತ್ತಿದೆ. ಇಲ್ಲಿ ಸಾಮಾಜಿಕ ಅಸಮಾನತೆ, ಶೋಷಣೆ, ತಾರತಮ್ಯ, ಅವಮಾನೀಯ ನೀತಿ-ನಿಯಮಗಳೇ ತಾಂಡವವಾಡುತ್ತಿತ್ತು. ಅಂತಹ ಸಂದರ್ಭದಲ್ಲಿ ವ್ಯವಸ್ಥೆಯ ತಾರತಮ್ಯ ಮನೋಭಾವನೆ, ಗೌರವಯುತ ಜೀವನಕ್ಕಾಗಿ ಸಮಾನತೆಯ ಜೀವನಕ್ಕಾಗಿ, ಧಾರ್ಮಿಕ ಸ್ವಾತಂತ್ರ್ಯವನ್ನು ಕಂಡುಕೊಂಡು ನವ ಬಾಳಿಗೆ ಸತ್ಯ, ಶಾಂತಿ, ಮಾನವೀಯತೆಯಿಂದ

ಮಧ್ಯಮ ಮಾರ್ಗದಲ್ಲಿ ನಡೆಯುವ ಸಮಾಜದಲ್ಲಿ ಸಾಮಾಜಿಕ ಸಮಸ್ಯೆಗಳನ್ನು ತೊಡೆದುಹಾಕಲು ಈ ಭೀಮನ ಮಾರ್ಗವೇ ಉತ್ತಮವಾದದ್ದು ಎಂದು ಸಿದ್ಧಲಿಂಗಯ್ಯನವರು ಮತಾಂತರ, ಜಾತಿವಿನಾಶ, ಸಮಾನತೆಯ, ಮಾನವೀಯತೆ ನಿಲುವುಗಳಲ್ಲಿ ಈಮಹಾತ್ಮರ ದಾರಿಯಲ್ಲೇ ನಡೆದಿದ್ದಾರೆ.

೪.೫ ಪ್ರಬುದ್ಧ ಭಾರತ ನಿರ್ಮಾಣ

ಜಗತ್ತಿಗೆ ಸತ್ಯ, ಶಾಂತಿ, ಮಾನವೀಯತೆಯನ್ನು ಬೋಧಿಸಿದವರು. ಭಾರತದಲ್ಲಿರುವ ಅಸಮಾನತೆಯ ಸಮಾಜದ ವಿರುದ್ಧ ಮೊದಲು ಕ್ರಾಂತಿಯನ್ನು ಮಾಡಿದವರು. ಜಗತ್ತು ಅಜ್ಞಾನದ ಅಂಧಕಾರದಲ್ಲಿ ಮುಳುಗಿದ್ದಾಗ ಜ್ಞಾನದ ಬೆಳಕಾಗಿ ಬಂದವರು. ಪ್ರತಿಯೊಂದು ಜೀವಿಗೆ ತನ್ನ ಪ್ರಾಣದ ಮಹತ್ವವನ್ನು ಸಾರಿದವನು. ಬದುಕಿನ ಜಂಜಾಟಗಳಿಗೆ ಮಧ್ಯಮ ಮಾರ್ಗವನ್ನು ಬೋಧಿಸಿದ ಮಹಾಬೋಧಿ ಸತ್ವ ಗೌತಮಬುದ್ಧ. ಧರ್ಮದ ಅನುಸಾರವಾಗಿ ವರ್ಣಾಶ್ರಮ ಪದ್ಧತಿಯಿಂದ ಸಮಾಜದಲ್ಲಿ ಅಸಮಾನತೆ ತಲೆದೋರಿ ಮನುಷ್ಯನನ್ನು ಪ್ರಾಣಿಗಿಂತಲೂ ತುಚ್ಛವಾಗಿ ಕಾಣುವ ಸ್ಥಿತಿಗೆ ಹಿಂದೂ ಸಮಾಜ ಬಂದಿತು. ಅದಕ್ಕೆ ಧರ್ಮದ ಬೆಂಬಲವೂ ಇತ್ತು. ಅದನ್ನು ಯಾರೂ ನಿರಾಕರಿಸುವಂತಿರಲಿಲ್ಲ. ಅದನ್ನು ನಿರಾಕರಿಸಿದವರಿಗೆ ಶಿಕ್ಷೆ ಅದಕ್ಕಿಂತಲೂ ಅವಮಾನೀಯವಾಗಿರುತ್ತಿತ್ತು. ಇಂತಹ ಸಮಯದಲ್ಲಿ ಭಾರತ ಭೂಮಿಯಲ್ಲಿ ಉದಯಿಸಿದ ಜ್ಞಾನಜ್ಯೋತಿಯೇ ಬುದ್ಧ. ಇವನ ಧರ್ಮವೂ ಕೂಡ ಸಮಾಜ ಬದಲಾವಣೆಗೆ ನಾಂದಿ ಹಾಡಿತು. ಮೊದಲಿಗೆ ಬುದ್ಧ ಒಂದು ಧಾರ್ಮಿಕ ಬದಲಾವಣೆಯ ರೀತಿಯ[illegible] ಪ್ರಾರಂಭವಾದರೂ ಅದು ಆ ಚಿಂತನೆಯನ್ನು ದಾಟಿ ಸಾಮಾಜಿಕ ಮತ್ತು ರಾಜಕೀಯ ಕ್ರಾಂತಿಯಾಗಿಯೂ ಪರಿವರ್ತನೆಗೊಂಡಿತು. ಬುದ್ಧನ ಕಾಲಕ್ಕೆ ಈ ಭಾರತೀಯ ಸಮಾಜ ವ್ಯವಸ್ಥೆಯನ್ನು ಆರ್ಯರು ಸಾಮಾಜಿಕ, ಧಾರ್ಮಿಕ ಮತ್ತು ಆಧ್ಯಾತ್ಮಿಕವಾಗಿ ಅಧಃಪತನಕ್ಕೆ ಕೊಂಡೊಯ್ದಿದ್ದರು. ಜೂಜು, ಮದ್ಯಪಾನ (ಸೋಮ ಮತ್ತು ಸುರಾ) ಅನೈತಿಕತೆ, ಅದಕ್ಷ ಆಡಳಿತ, ಬರೀ ದ್ವೇಷ, ಅಸೂಯೆಗಳಿಂದ ತುಂಬಿದ ಜನರು ತುಂಬ ಅಸಹ್ಯಕರವಾದ ಬದುಕು ನಡೆಸುವ ಮಾನವರಾಗಿದ್ದರು. ನಿಜವಾದ ಶ್ರಮ ಜೀವಿಗಳಿಗೆ ಎಲ್ಲಾ ಸೌಲಭ್ಯಗಳು ದೂರದ ಮಾತಾಗಿ ಉಳಿಯಿತು. ಆಗ ಈ ಸಮಾಜಕ್ಕೆ ಕರುಣೆ, ಮಮತೆಯನ್ನು ಪಡೆದು ಶಾಂತಿಯನ್ನು ಪಡೆಯಬೇಕು. ಇದಕ್ಕೆ ಎಲ್ಲರೂ ಸಹ ಪ್ರಯತ್ನಿಸಬಹುದು. ಯಾವುದೇ ಜಾತಿ–ಬೇಧಗಳಾಗಿ, ಮೇಲು–ಕೀಳಿನ ತಾರತಮ್ಯವಿಲ್ಲದೇ ಸಮಾನತೆಯನ್ನು ಬೋಧಿಸುವ ಮುಕ್ತ ಸಮಾಜವನ್ನು ಧಾರ್ಮಿಕವಾದ ನೆಲೆಗಟ್ಟಿನಲ್ಲಿ ಅನುಸರಿಸಲು ಹೇಳಿದರು. ಜೀವನದ ಸತ್ಯ ಸಂಗತಿಗಳಿಗೆ ಸಂಬಂಧಿಸಿದಾಗೆ ಧರ್ಮವಿರಬೇಕೇ ವಿನಹಃ ಸಿದ್ಧಾಂತ–ತತ್ವಗಳಲ್ಲ ಎನ್ನುವುದನ್ನು ತಿಳಿಸಿ, ದೇವರು ಕೇಂದ್ರಿತ ಧರ್ಮವನ್ನು ನಿರಾಕರಿಸಿ, ಧರ್ಮ ಎನ್ನುವುದು ಮನುಷ್ಯನ ಹೃದಯದಲ್ಲಿರಬೇಕೆಂದು ನೈತಿಕತೆಯೇ ಕೇಂದ್ರವಾಗಿರಬೇಕೆಂದು ಜಗತ್ತಿಗೆ ಸಾರಿದರು ಗೌತಮ ಬುದ್ಧರು.

ಈ ಬೌದ್ಧಧರ್ಮವನ್ನು ಸಾಮಾಜಿಕ ವಿಮೋಚನೆಗಾಗಿ ಡಾ.ಅಂಬೇಡ್ಕರ್ ತನ್ನ ಮನೆಗೆ ಮರಳಿ ಮನೆಗೆ ಹಿಂದಿರುಗಿದರು. ಇದರಿಂದ ದಲಿತರಿಗೆ, ಶೋಷಿತರಿಗೆ, ಮಹಿಳೆಯರಿಗೆ ಒಂದು

ಸಮಾನ ಸ್ಥಾನ-ಮಾನ ದೊರಕುವಂತಹ ಅವಕಾಶ ದೊರಕಿತು. ಇಂತಹ "ಬುದ್ಧ, ಅಂಬೇಡ್ಕರ್ ಮತ್ತು ಲೋಹಿಯಾ ಇವರು ನಾವು ಯಾವ ಶತಮಾನಕ್ಕಾದರೂ ಆದರ್ಶ ಅಂತ ಒಪ್ಪಿಕೊಳ್ಳುವ ತತ್ವಜ್ಞಾನಿಗಳು, ಆದರ್ಶಪುರುಷರು. ಈ ಮೂರು ಮಂದಿಯ ಆದರ್ಶಗಳನ್ನು ಸಿದ್ಧಲಿಂಗಯ್ಯನವರು ಕಾರ್ಯಗತ ಮಾಡಿಕೊಂಡಿದ್ದಾರೆ. ಬುದ್ಧನ ಹಾಗೆ ಇರುವಂತಹ ಸಂಯಮ, ಕಾರ್ಯಕ್ಷಮತೆ, ಅಂಬೇಡ್ಕರ್ ಹಾಗೆ ಕಾನೂನು ಜ್ಞಾನ, ಅಧ್ಯಯನಶೀಲತೆ, ಸಾಂಸ್ಕೃತಿಕ, ಹಳೆಯ ಗ್ರಂಥಗಳನ್ನು, ವೇದಗಳನ್ನು ಓದುವಂತಹ, ಲೋಹಿಯಾ ತರಹ ಸ್ವಲ್ಪ ಲಘು ಪ್ರವೃತ್ತಿ, ಹುಡುಗಾಟಿಕೆ, ಪ್ರವಾಸದ ಬಗೆಗಿನ ಆಸಕ್ತಿ ಉಳ್ಳವರು"[೬೬] ಡಾ.ಸಿದ್ಧಲಿಂಗಯ್ಯನವರು. ಇವರು ಈ ಸಮಾಜದಲ್ಲಿ ಜಾತಿ ಪದ್ಧತಿಯ ಕ್ರೂರತೆ ಅರಿವಾಗಿದ್ದ ಇವರು ಎಲ್ಲಾ ಶೋಷಿತರು, ದಲಿತರು, ಬಡವರು, ಶ್ರಮಿಕರು, ಕೂಲಿಕಾರ್ಮಿಕರು, ರೈತರು ಒಂದೇ ವೇದಿಕೆಯಡಿ ಬಂದರೆ ಜಾತಿರಹಿತ ಸಮಾಜವನ್ನು ಸೃಷ್ಟಿಸಲು ಸಾಧ್ಯವೆಂದು ನಂಬಿದವರು. ಇವರಿಗೆ ದೇವರು ಮತ್ತು ಧರ್ಮ ಎರಡರಲ್ಲೂ ನಂಬಿಕೆ ಇಲ್ಲದವರು. ಮನುಷ್ಯನು ನೀತಿವಂತನಾಗಿ, ನೈತಿಕತೆಯ ಜೀವನವನ್ನು ರೂಪಿಸಿಕೊಳ್ಳಬೇಕಾದರೆ ಬುದ್ಧನ ತತ್ವಗಳನ್ನು ಪಾಲಿಸಬೇಕೆಂದು ನಂಬಿದವರು. ಡಾ.ಸಿದ್ಧಲಿಂಗಯ್ಯನವರಿಗೆ ಡಾ.ಅಂಬೇಡ್ಕರ್ ಎಷ್ಟು ಪ್ರೇರಣೆಯಾಗಿದ್ದರೋ ಹಾಗೆಯೇ ಭಗವಾನ್ ಬುದ್ಧರ ಮನುಷ್ಯಪರ ಕಾಳಜಿ, ಆದರ್ಶಗಳು ಕೂಡ ಇವರ ಜೀವನವನ್ನು ಮತ್ತು ವ್ಯಕ್ತಿತ್ವಕ್ಕೆ ಪ್ರೇರಕ ಶಕ್ತಿಯಾಗಿತ್ತು. ಅದಕ್ಕಾಗಿ ಇವರು ಯಾವಾಗಲೂ ತಮ್ಮ ಸಾಹಿತ್ಯದಲ್ಲಿ ಹಾಗೂ ಸದನದಲ್ಲಿದ್ದಾಗಲೂ ಕೂಡ ದಲಿತರ, ಬಡವರ, ಶೋಷಿತರ, ಶ್ರಮಿಕರ, ಅಸಹಾಯಕರ, ಮಹಿಳೆಯರ, ನಿರ್ಗತಿಕರ ಪರವಾಗಿ ಪ್ರಮಾಣಿಕವಾಗಿ ಹೋರಾಟವನ್ನು ಮಾಡಿಕೊಂಡು ಬಂದವರು ಡಾ.ಸಿದ್ಧಲಿಂಗಯ್ಯನವರು.

ಹೀಗೆ ಇಡೀ ಜಗತ್ತಿನಲ್ಲಿ ಮಹಾನ್ ಕ್ರಾಂತಿಯನ್ನುಂಟು ಮಾಡಿ ಪ್ರೆಂಚ್‌ನ ಮಹಾಕ್ರಾಂತಿಯಂತೆ ಸಮಾಜದಲ್ಲಿ ಹೊಸ ಅಲೆಯನ್ನೇ ಸೃಷ್ಟಿಸಿತು. ಇಂತಹ ಬೌದ್ಧಧರ್ಮದ ತತ್ವಗಳ ಕಡೆಗೆ ಸ್ವಲ್ಪ ಗಮನ ಹರಿಸೋಣ. ಈ ಧರ್ಮ ಬಹಳ ಸರಳ ತತ್ವಗಳನ್ನು ಹೊಂದಿದ್ದರೂ ಉನ್ನತ ಆಲೋಚನಾ ತತ್ವಗಳನ್ನು ಒಳಗೊಂಡಿದೆ.

- ಸಮಾಜದ ಎಲ್ಲಾ ಮಾನವರು ಸಮಾನರು.
- ಮನುಷ್ಯನನ್ನು ಅರ್ಹತೆಯಿಂದ ಅಳೆಯಬೇಕು ಮತ್ತು ಉನ್ನತ ಆದರ್ಶಗಳ ಮುಖ್ಯವಾಗಬೇಕು. ಅವನ ಹೊರತು ಜನ್ಮವನ್ನಲ್ಲ.
- ದುಃಖವನ್ನು ಹೋಗಲಾಡಿಸಬೇಕಾದರೆ ಅದರ ಕಾರಣವನ್ನು ಹೋಗಲಾಡಿಸುವುದು ಅವಶ್ಯಕ
- ಸತ್ಯ ಮತ್ತು ನ್ಯಾಯಕ್ಕಾಗಲಿಲ್ಲವೆಂದರೆ ಯುದ್ಧ ವಿನಾಶಕಾರಿ

- ಎಲ್ಲವೂ ಕಾರ್ಯ-ಕಾರಣ ಸಂಬಂಧ ಹೊಂದಿದೆ. ಯಾವುದೂ ಅಂತಿಮವಲ್ಲ. ಪ್ರತಿಯೊಂದು ಪರಿವರ್ತನಶೀಲವಾಗಿರುವುದು
- ಶೀಲವಿಲ್ಲದ ಜ್ಞಾನ ಅಪಾಯಕಾರಿ. ಎಲ್ಲರಿಗೂ ಆಹಾರ ಎಷ್ಟು ಮುಖ್ಯವೋ ಅಷ್ಟೇ ಮುಖ್ಯವಾದುದು ಶಿಕ್ಷಣದ ಹಕ್ಕು.
- ದ್ವೇಷವನ್ನು ತ್ಯಜಿಸಿ, ಸ್ನೇಹ, ಮೈತ್ರಿಯಿಂದ ಕೂಡಿರಬೇಕು.
- ಧರ್ಮ, ದೇವರು, ಆತ್ಮ, ಸ್ವರ್ಗ, ಹಿಂಸೆಯ ಕೇಂದ್ರವಲ್ಲದೇ ಜೀವನದ ಸತ್ಯ ಸಂಗತಿಗಳಿಗೆ ಸಂಬಂಧಿಸಿದಾಗ ಮಾನವನ ಎದೆಯಲ್ಲಿರಬೇಕಾದದ್ದು.
- ಖಾಸಗಿ ಒಡೆತನದ ಆಸ್ತಿಯು ತಾರತಮ್ಯ ಉಂಟಾಗಲು, ದುಃಖವನ್ನು ತರಲು ಕಾರಣವಾಗುತ್ತದೆ.
- ಜಗತ್ತಿನಲ್ಲಿ ದುಃಖ, ನೋವುಗಳ ವಿವಿದ ಆಸಕ್ತಿಗಳ ಘರ್ಷಣೆಯ ಕಾರಣಕ್ಕಾಗಿ ಬರುತ್ತದೆ. ಅದರಿಂದ ಬಿಡುಗಡೆ ಹೊಂದಲು ಇರುವ ಮಾರ್ಗ ಒಂದೇ ಅಷ್ಟಾಂಗ ಮಾರ್ಗ.

ಇವೆಲ್ಲವೂ ಬಹಳ ಸಂಕ್ಷಿಪ್ತ ರೂಪದಲ್ಲಿರುವ ಬೌದ್ಧಧರ್ಮದ ತತ್ವಗಳು ತುಂಬಾ ಪ್ರಾಚೀನವಾದರೂ ಇಂದಿನ ಜಗತ್ತಿಗೆ, ಮಾನವನಿಗೆ ಎಷ್ಟು ಅಗತ್ಯವಾದುದು ಎಂಬ ಅರಿವಾಗುತ್ತದೆ. ಇಂದು ಧರ್ಮಗಳು ತಮ್ಮ ಉಳಿವಿಗಾಗಿ ಹಿಂಸೆ ಮೋಸದ ಹಾದಿಯನ್ನು ಹಿಡಿದಿರುವ ಕಾಲಕ್ಕೆ ಧರ್ಮವೆನ್ನುವುದು ಪ್ರತಿಯೊಬ್ಬನಲ್ಲೂ ಇರಬೇಕಾದ ಧರ್ಮವನ್ನು ಮರೆತಿದ್ದಾರೆ. ಜನರನ್ನು ಎಚ್ಚರಗೊಳಿಸುವ ತತ್ವಗಳೇ ಬುದ್ಧನ ಉಪದೇಶದ ತತ್ವಗಳು. ಇವು ಬಹಳ ಮೌಲ್ಯವಾಗಿದ್ದು, ತುಂಬ ಗಾಢವಾಗಿರುವ ತತ್ವ-ಸಿದ್ಧಾಂತಗಳಾಗಿರುವುದನ್ನು ಕಾಣಬಹುದಾಗಿದೆ.

ಈ ಜಗತ್ತು ಬರೀ ದುಃಖ, ಅಶಾಂತಿಯಿಂದ ತುಂಬಿದೆ. ಇದರ ವಿಮೋಚನೆಯನ್ನು ತನ್ನ ತತ್ವದ ಆರಂಭವನ್ನಾಗಿ ಮಾಡಿಕೊಂಡರು. ನಮ್ಮ ಸ್ಪಷ್ಟವಾದ ಗುರಿಯನ್ನು ಮುಟ್ಟಬೇಕಾದರೆ ದುಃಖ ಮತ್ತು ಅಶಾಂತಿ ತೊಲಗಲೇ ಬೇಕು ಎಂಬುದೇ ಬುದ್ಧನ ಮೂಲ ಗುರಿ. ಈ ದುಃಖ, ಅಶಾಂತಿಗೆ ಮನುಷ್ಯನ ದುರ್ನಡತೆಯೇ ಕಾರಣ. ದುಃಖದ ಮೂಲ ಕಾರಣವನ್ನು ನಿರ್ಮೂಲನೆ ಮಾಡಬೇಕಾದರೆ ಬುದ್ಧ ಬೋಧಿಸಿದ 'ಪಂಚಶೀಲ ಆಚರಣೆ'ಗಳನ್ನು ಅನುಸರಿಸಬೇಕು.

* ಯಾವುದೇ ಜೀವಿಯನ್ನು ಕೊಲ್ಲಬಾರದು ಅಥವಾ ಕೊಲ್ಲಲು ಸಹಕರಿಸಬಾರದು
* ಇತರರ ಆಸ್ತಿಯನ್ನು ಕದಿಯಬಾರದು, ವಶಪಡಿಸಿಕೊಳ್ಳಬಾರದು, ಮೋಸದಿಂದ ಅಥವಾ ಹಿಂಸೆಯಿಂದ ಸ್ವಾಧೀನ ಪಡಿಸಿಕೊಳ್ಳಬಾರದು
* ಸುಳ್ಳನ್ನು ಹೇಳಬಾರದು

* ಕಾಮತೃಷೆಗೆ ಒಳಗಾಗಬಾರದು
* ಮದ್ಯಪಾನ ಮಾಡಬಾರದು

ಸಮಾಜದಲ್ಲಿ ಅನ್ಯಾಯ ಅಕ್ರಮವೇ ತಾಂಡವವಾಡುತ್ತಿದೆ. ಇದರಿಂದಲೇ ಮನುಷ್ಯ ಪ್ರೀತಿಯನ್ನು ಕಳೆದುಕೊಂಡಿದ್ದಾನೆ. ದುಃಖ, ಅಶಾಂತಿಯನ್ನು ಪಡೆದುಕೊಂಡಿದ್ದಾನೆ. ಅದರಿಂದ ಈ ಅನ್ಯಾಯ, ಆಕ್ರಮಗಳನ್ನು ಕೂಡ ನಿವಾರಿಸಬಹುದು. ಅದಕ್ಕೆ ಮನುಷ್ಯ ಈ ಅಷ್ಟಾಂಗ ಮಾರ್ಗವನ್ನು ಜೀವನದಲ್ಲಿ ಅನುಸರಿಸಬೇಕು ಅಷ್ಟೇ.

- ಸಮ್ಯಕ್ ದೃಷ್ಠಿ (ಮೂಢನಂಬಿಕೆಗಳಿಂದ ಬಿಡುಗಡೆ ಹೊಂದಬೇಕು)
- ಸಮ್ಯಕ್ ಗುರಿ (ಧೀಮಂತರಿಗೂ, ಶ್ರದ್ಧಾವಂತರಿಗೂ ಯೋಗ್ಯವಾದದ್ದು)
- ಸಮ್ಯಕ್ ವಚನ (ದಯಾವಂತ, ಸತ್ಯ ಪರವಾದ ಬಿಚ್ಚು ಮಾತುಗಳನ್ನಾಡುವುದು)
- ಸಮ್ಯಕ್ ನಡೆ (ಶಾಂತಿಯುತವಾದುದು, ಪ್ರಮಾಣಿಕವಾದುದು, ಪರಿಶುದ್ಧವಾದುದು)
- ಸಮ್ಯಕ್ ಜೀವನ (ಯಾವ ಜೀವಿಗೂ ನೋವುಂಟು ಮಾಡದಿರುವುದು)
- ಸಮ್ಯಕ್ ಸಾಧನೆ (ಈ ಎಲ್ಲ ವಿಷಯಗಳಲ್ಲಿ ಸಾಧನೆ ಮಾಡುವುದು)
- ಸಮ್ಯಕ್ ಮನಸ್ಸು (ಜಾಗ್ರತ ಮತ್ತು ಕ್ರಿಯಾಶೀಲ ಮನಸ್ಸು ಹೊಂದುವುದು)
- ಸಮ್ಯಕ್ ಧ್ಯಾನ (ಜೀವನದ ಗಂಭೀರ ರಹಸ್ಯಗಳನ್ನು ಕುರಿತು ಗಾಢವಾಗಿ ಚಿಂತನೆ ಮಾಡುವುದು)

ಬುದ್ಧ ಮತ್ತು ಬುದ್ಧನ ತತ್ವಗಳನ್ನು ಪರಿಪಾಲನೆಯಾದರೆ ಈ ವಿಶ್ವದಲ್ಲಿ ಜಾತಿ ಗಲಾಟೆ, ಕೋಮುವಾದ, ಉಗ್ರರ ಅಟ್ಟಹಾಸವಿರುತ್ತಿದ್ದಿಲ್ಲಮನುಷ್ಯನ ಎಲ್ಲ ಸಮಸ್ಯೆಗಳಿಗೂ ಬುದ್ಧನಲ್ಲಿ ಉತ್ತರವಿದೆ. ಅಷ್ಟು ಮನುಷ್ಯ ಪರವಾದ ಧರ್ಮವಾಗಿದೆ. ಅದಕ್ಕೇ ಚೀನ, ಜಪಾನ್, ಬರ್ಮಾ, ಸಯಾಮ, ಅನ್ನಮ್ ಇಂಡೋಚೈನಾ, ಶ್ರೀಲಂಕಾ, ಮಲಯಾ ದ್ವೀಪಗಳಲ್ಲೂ ಪಸರಿಸಲು ಸಾಧ್ಯವಾಗಿದ್ದು, ಜೀವಂತವಾಗಿದ್ದು, ಉತ್ತಮ ಜೀವನವನ್ನು ರೂಢಿಸಿಕೊಂಡು ಬದುಕುತ್ತಿದ್ದಾರೆ. ಆದರೆ ಬುದ್ಧನ ಜನ್ಮಭೂಮಿ ಈ ಬುದ್ಧನ ನಾಡಿನಲ್ಲೇ ಬೌದ್ಧ ಧರ್ಮದ ಅಸ್ತಿತ್ವ ಇಲ್ಲವಾಗಿದೆ. ಅದಕ್ಕೆ ಈ ಭಾರತ ದೇಶ ಸ್ವತಂತ್ರ್ಯ ಬಂದು ೬೩ ವರ್ಷಗಳು ಕಳೆದರೂ ಸಮಸ್ಯೆಗಳು ಜೀವಂತವಾಗಿದೆ. ಅಶಾಂತಿ, ದುಃಖ, ನೋವುಗಳಲ್ಲಿ ಬದುಕು ಕಂಡುಕೊಳ್ಳಲು ಅನಿವಾರ್ಯ ಸ್ಥಿತಿ ನಮಗೆ ಬಂದೊದ ಗಿದೆ. ಸಾಮ್ರಾಟ್‌ನಾಗಬೇಕೆಂದು ಹಿಂಸಾ ಮಾರ್ಗವನ್ನು ತುಳಿದಿದ್ದ ಅಶೋಕ ಮಹಾರಾಜ ಕೊನೆಗೆ ಬೌದ್ಧಧರ್ಮಕ್ಕೆ ಬಂದು ಜನಪರ ಆಡಳಿತ ನಡೆಸಲು, ಮಾನವೀಯ ಮೌಲ್ಯಗಳನ್ನು ಬೋಧಿಸಲು ಒಂದು ಆಡಳಿತಗಾರನಿಗೆ ಇರಬೇಕಾದ ಜವಾಬ್ದಾರಿ, ಕರ್ತವ್ಯವನ್ನು ಅಶೋಕನಿಂದ ತಿಳಿದರೆ ನಮ್ಮ ಇಂದಿನ ರಾಜಕಾರಣ ಇಂದೂ ಈ ಸ್ಥಿತಿಗೆ

ಬರುತ್ತಿಲ್ಲ. ಅಶೋಕನ ಉದಾತ್ತವಾದ ಕಾರ್ಯಸೇವೆಯು ನೆನಪಿಗೆ ರಾಷ್ಟ್ರಧ್ವಜದಲ್ಲಿ 'ಅಶೋಕಚಕ್ರ'ವನ್ನು ಅಳವಡಿಸಿಕೊಳ್ಳಲಾಗಿದೆ. ನಮ್ಮ ದೇಶದ ಮೂಲ ಸಂಸ್ಕೃತಿ ಮಾನವೀಯ ಗುಣಗಳನ್ನು ಬೋಧಿಸಿದ ಬುದ್ಧನ ತತ್ವಗಳು ಪ್ರತೀಕವೂ ಹೌದು. ನಮ್ಮ ಭಾರತೀಯ ಸಂವಿಧಾನದ ಆಶಯಗಳಾದ ಸ್ವಾತಂತ್ರ್ಯ, ಸಮಾನತೆ, ಸೋದರತೆ, ಭ್ರಾತೃತ್ವಗಳ ಜೊತೆಗೆ ಭೌತಿಕ ಸುಖ ಸಂಪತ್ತಿನ ಅಗತ್ಯತೆಯನ್ನು ತಿಳಿಸುವುದು ಭಗವಾನ್ ಬುದ್ಧನ ಉಪದೇಶಗಳಾಗಿದ್ದವು.

ಬುದ್ಧ ಈ ದೇಶದ ಮೊದಲ ಕ್ರಾಂತಿಕಾರಿ, ಐತಿಹಾಸಿಕ ವ್ಯಕ್ತಿ. ಈ ದೇಶದ ಸಾಮಾಜಿಕ ಅಸಮತೋಲನ, ಮೇಲು-ಕೀಳು, ಬಡವ - ಬಲ್ಲಿದ ಎಂಬ ತಾರತಮ್ಯ, ಧರ್ಮ, ದೇವರು ಹೆಸರಿನಲ್ಲಿ ನಡೆಸುತ್ತಿದ್ದ ಕಂದಾಚರಣೆಗಳು, ಜಾತಿವ್ಯವಸ್ಥೆಯ ಸಮಾಜವನ್ನು ಧಿಕ್ಕರಿಸಿ ಅದರ ವಿರುದ್ಧ ಮಾತಾನಾಡಿದ್ದು ಮೊದಲು ಬುದ್ಧನೇ. ಅವರ ಕಾಲಕ್ಕಾಗಲೇ ಜಾತಿಪದ್ಧತಿಯ ಮೂಲನೆಲೆಯಾದ ಅಸಮಾನತೆಯಿಂದ ಕಟ್ಟಿದ ಸಮಾಜದಲ್ಲಿ ಗಟ್ಟಿಯಾಗಿ ಬೇರೂರಿತ್ತು. ಬ್ರಾಹ್ಮಣ ಉತ್ತಮ ಕುಲದವನು, ಶ್ರೇಷ್ಠನೆಂದು ಹೇಳಿಕೊಂಡು ನಡೆಸುತ್ತಿದ್ದ ಕಪಟವನ್ನು ಅದರ ಢಾಂಬಿಕತನವನ್ನು ಉಗ್ರವಾಗಿಯೇ ಆರೋಪಿಸಿದರು. ಅದಕ್ಕೆ ಬದಲಾಗಿ ಮನುಷ್ಯತ್ವವನ್ನು ಹೇಳಿ ಪ್ರೀತಿ, ಪ್ರೇಮಗಳಿಂದ ಮನಸ್ಸು ತುಂಬಿರಬೇಕು. ನಮಗೆ ನಾವೇ ದಾರಿ ದೀಪಗಳಾಗಿರಬೇಕೆಂದು ತಿಳಿಸಿಕೊಟ್ಟರು. ಈ ವ್ಯವಸ್ಥೆಯಿಂದ ಮನುಷ್ಯನಾಗಿದ್ದರೂ ಮನುಷ್ಯತ್ವವಿಲ್ಲದ ರೀತಿಯಲ್ಲಿ ತಮ್ಮನ್ನು, ತಮ್ಮ ಸಮಾಜವನ್ನು ನಡೆಸಿಕೊಳ್ಳುತ್ತಿರುವ ಈ ಸಂಸ್ಕೃತಿಯ ವಿರುದ್ಧ ಸಿಡಿದೆದ್ದು ಚಳುವಳಿ, ಹೋರಾಟವನ್ನು ಮಾಡಿದವರು ಡಾ.ಅಂಬೇಡ್ಕರ್. ಮೆಟ್ರಿಕ್‌ನಿಂದಲೂ ಬುದ್ಧನ ತತ್ವಗಳನ್ನು ಓದಿಕೊಂಡಿದ್ದ ಇವರು ಶೋಷಿತರ ವಿಮೋಚನೆ ಇರುವುದೊಂದೇ ದಾರಿ ಅದು ಬುದ್ಧನ ಮಾರ್ಗದ ಜೀವನವೆಂದು ತಿಳಿದು ತನ್ನ ಜೀವಿತದ ಕೊನೆಯ ದಿನಗಳಲ್ಲಿ ಲಕ್ಷಾಂತರ ದಲಿತರ ಜೊತೆ ಬೌದ್ಧಧರ್ಮ ಸೇರಿದರು. ಇದೊಂದು ಹೋರಾಟ ಕ್ರಾಂತಿಯಾಗಿ ಅಂಬೇಡ್ಕರ್‌ರವರಿಂದ ಪ್ರೇರೇಪಿತರಾದ, ಸ್ಫೂರ್ತಿ ಪಡೆದ ಅನೇಕ ದಲಿತರು ಕೂಡ ಅವರ ದಾರಿಯನ್ನೇ ತುಳಿದರು.

ಡಾ.ಸಿದ್ಧಲಿಂಗಯ್ಯನವರು ಜಾತ್ಯಾತೀತ, ಧರ್ಮಾತೀತ ನೆಲೆಗಟ್ಟಿನಲ್ಲಿ ಚಿಂತಿಸುವ ಚಿಂತಕರು. ಬುದ್ಧನ ತತ್ವಗಳು, ಉಪದೇಶಗಳಲ್ಲಿ ನಂಬಿಕೆಯಿರುವ ಇವರು ಬೌದ್ಧಧರ್ಮವನ್ನು ಸಂಪೂರ್ಣವಾಗಿ ನಂಬುತ್ತಾರೆ. ಅದರಿಂದಲೇ ಶತ್ರುಗಳನ್ನು ಪ್ರೀತಿಸುವ ಔದಾರ್ಯ ಹೊಂದಿರುವ ಸರಳ, ಸಜ್ಜನಿಕೆಯ ವ್ಯಕ್ತಿಯಾಗಿದ್ದಾರೆ. ತಮ್ಮ ಸಾಹಿತ್ಯದಲ್ಲೂ ಕೂಡ ಮಾನವೀಯತೆ, ಸಮಾನತೆಯನ್ನು ಪ್ರತಿಪಾದಿಸ ತೊಡಗುತ್ತಾರೆ. ಬುದ್ಧನ ತತ್ವಗಳಲ್ಲಡಗಿರುವ ಭಾರತವನ್ನು ನಿರ್ಮಿಸ ಹೊರಟವರು ಡಾ.ಅಂಬೇಡ್ಕರ್. ಅದರ ನೆಲೆಯಲ್ಲೇ ಎಲ್ಲ ದಲಿತ ಸಂಘಟನೆಗಳೂ ಪ್ರಮಾಣಿಕವಾಗಿ ನಡೆಯಬೇಕಾಗಿದೆ. ಭಾರತದಲ್ಲಿ ಜಾಗೃತಿಯನ್ನೂ ಮೂಡಿಸಿ, ಲಕ್ಷಾಂತರ ಅನುಯಾಯಿಗಳನ್ನು ತತ್ವಪ್ರಚಾರವನ್ನು ಸೃಷ್ಟಿಸಿದ

ಡಾ.ಅಂಬೇಡ್ಕರ್. ಇಲ್ಲಿ ಸಾವಿರಾರು ದಲಿತರನ್ನು ಎಚ್ಚರಗೊಳಿಸಿದವರು ಡಾ.ಸಿದ್ಧಲಿಂಗಯ್ಯ. ಹೀಗೆ ಇದರಿಂದ ಪ್ರೇರಿತ ಪ್ರತಿಯೊಬ್ಬ ದಲಿತನು ಕೂಡ ಬುದ್ಧ ಅಂಬೇಡ್ಕರ್ ತತ್ವಗಳನ್ನು ರೂಢಿಸಿಕೊಂಡು, ಅದನ್ನು ಎಲ್ಲರಿಗೂ ವಿಸ್ತರಿಸಿದರೆ, ಅದನ್ನೇ ಎಲ್ಲರೂ ಅನುಸರಿಸಿದರೆ, ನಾಗರೀಕತೆ ಹೆಸರಿನಲ್ಲಿ ಪರಿಸರ ನಾಶ ಮಾಡುತ್ತಿರುವುದನ್ನು ತಡೆದು ಪ್ರಕೃತಿ ಆರಾಧನೆಯಾದ ಮೂಲ ಸಂಸ್ಕೃತಿಯನ್ನು ಮರು ಸೃಷ್ಟಿಸಬಹುದು. ಸರ್ವರಿಗೂ ಶಿಕ್ಷಣವನ್ನು ಕೊಡಬಹುದು. ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡಿ ದಕ್ಷ ಆಡಳಿತ ವ್ಯವಸ್ಥೆಯನ್ನು ಸೃಷ್ಟಿ ಮಾಡಬಹುದು. ವೈಚಾರಿಕ, ವೈಜ್ಞಾನಿಕ ಮನೋಭಾವನೆಗಳಿಂದ ಮೂಢನಂಬಿಕೆಗಳನ್ನು ತೊಲಗಿಸಬಹುದು. ರೈತರಿಗೆ, ಕೂಲಿಕಾರ್ಮಿಕರು, ಶ್ರಮಿಕರು, ಮಹಿಳೆಯರು, ಬಡವರು, ಶೋಷಿತರು, ದಮನಿತರೆಲ್ಲರಿಗೂ ಸಮಾನವಾದ ಜೀವನವನ್ನು ಒದಗಿಸಬಹುದು. ಜಾತಿ, ಮತ ವೈರತ್ವವನ್ನು ತೊಲಗಿಸಿ ಪ್ರೀತಿ, ಪ್ರೇಮ, ಸ್ನೇಹ, ಸಂಬಂಧಗಳನ್ನು ಗಟ್ಟಿಗೊಳಿಸಿ ಅಹಿಂಸೆಯ ಶಾಂತಿಯ ನಾಡನ್ನು ಕಟ್ಟಬಹುದು. ಅದಕ್ಕೆ ಪ್ರತಿಯೊಬ್ಬ ಭಾರತೀಯನು ತನ್ನ ದೇಶದ ಬಗ್ಗೆ ಅಭಿಮಾನವನ್ನು ಹೊಂದಿ, ದೇಶದ ಸಮಸ್ಯೆಯನ್ನು ತನ್ನ ಸಮಸ್ಯೆಯೆಂದು ಪರಿಗಣಿಸಿ, ದೇಶದ ಪ್ರಗತಿಗೆ ಶ್ರಮಿಸಿ, ತನ್ನ ಕೆಲಸ ಕಾರ್ಯಗಳನ್ನು ಸ್ವಾವಲಂಬನೆಯಿಂದ ಸ್ವಾಭಿಮಾನಿಯಾಗಿ ಹೊರಟರೆ "ಪ್ರಬುದ್ಧ ಭಾರತ" ನಮ್ಮ ಕನಸಿನ, ಸ್ವಚ್ಛಂದ ಭಾರತ ನಿರ್ಮಾಣ ಸಾಧ್ಯವಾಗುತ್ತದೆ ಎಂಬುದು ಡಾ.ಅಂಬೇಡ್ಕರ್ ಚಿಂತನೆಗಳಲ್ಲೂ ಹಾಗೆಯೇ ಡಾ.ಸಿದ್ಧಲಿಂಗಯ್ಯನವರ ಸಾಹಿತ್ಯದ ಆಶಯದಲ್ಲೂ ಮಾನವೀಯತೆಯ, ಸಮಾನತೆಯ ಭಾರತವನ್ನು ಕಾಣಬಹುದಾಗಿದೆ. ಸಿದ್ಧಲಿಂಗಯ್ಯನವರು ಅಂಬೇಡ್ಕರ್ ಮತ್ತು ಬುದ್ಧನ ತತ್ವಗಳನ್ನು ಜನರಿಗೆ ತಲುಪಿಸುವ ಕೆಲಸವನ್ನು ಮಾಡಿದ್ದಾರೆ. ಅದರ ಮೂಲಕ ಸಮಾಜದಲ್ಲಿ ಉತ್ತಮ ಬಾಂಧವ್ಯದ ಸಹಬಾಳ್ವೆಯ, ಸಮಾನತೆ, ಜಾತಿಯಿಲ್ಲದ, ಭೀತಿಯಿಲ್ಲದ ನಾಡನ್ನು ಕಟ್ಟಲು ಅವರು ತಮ್ಮ ಸಾಹಿತ್ಯದಲ್ಲಿ ಹಾಗೆಯೇ ಅವರ ಭಾಷಣಗಳಲ್ಲೂ ಸಮ ಸಮಾಜದ ಕಲ್ಪನೆಯೇ ಜೀವಾಳವಾಗಿದೆ.

ಅಡಿ ಟಿಪ್ಪಣಿಗಳು

೧. ಜನಸಂಸ್ಕೃತಿ, ಡಾ.ಸಿದ್ಧಲಿಂಗಯ್ಯ, ಪುಟ-೧೪೫

೨. ಬಡವರ ನಗುವಿನ ಶಕ್ತಿ, ಹೆಚ್.ದಂಡಪ್ಪ, ಪುಟ-೩೨

೩. ಸಂಬಂಜ ಅನ್ನೋದು ದೊಡ್ಡದು ಕನಾ, ಡಾ.ಅಪ್ಪಗೆರೆ ಸೋಮಶೇಖರ್, ಪುಟ-೩

೪. ಅದೇ, ಪುಟ-೫

೫. ಅದೇ, ಪುಟ-೯

೬. ಅದೇ, ಪುಟ-೧೧

೭. ಬಡವರ ನಗುವಿನ ಶಕ್ತಿ, ಹೆಚ್.ದಂಡಪ್ಪ, ಪುಟ-೩೩

೮. ಅದೇ, ಪುಟ-೨೧

೯. ಸಂಬಂಜ ಅನ್ನೋದು ದೊಡ್ಡದು ಕನಾ, ಡಾ.ಅಪ್ಪಗೆರೆ ಸೋಮಶೇಖರ್, ಪುಟ-೨೯, ೩೦

೧೦. ಸಾಹಿತ್ಯ ಮತ್ತು ಸಮಾಜ, ಲೇ:ರಂಜಾನ್‌ದರ್ಗಾ, ಪುಟ-೫

೧೧. ಸುಟ್ಟಾವು ಬೆಳ್ಳಿಕಿರಣ, ಡಾ.ಅಪ್ಪಗೆರೆ ಸೋಮಶೇಖರ್, ಪುಟ-೮

೧೨. ಡಾ.ಸಿದ್ಧಲಿಂಗಯ್ಯನವರ ಸದನದ ಭಾಷಣಗಳು, ದೊಡ್ಡ ಹುಲ್ಲೂರು ರುಕ್ಕೋಜಿ, ಪುಟ-೭೪

೧೩. ಅದೇ, ಪುಟ-೯

೧೪. ಶತಮಾನದ ನಾಟಕ, ಕೆ.ಮರುಳಸಿದ್ಧಪ್ಪ, ಪಂಚಮ, ಸಿದ್ಧಲಿಂಗಯ್ಯ, ಪುಟ-೮೦೧, ೮೦೨

೧೫. ಅದೇ, ಪುಟ-೮೦೩

೧೬. ಅದೇ, ಪುಟ-೮೨೩

೧೭. ತನು ಮುಟ್ಟದ ಮುನ್ನ, ಡಾ.ಅಪ್ಪಗೆರೆ ಸೋಮಶೇಖರ್, ಪುಟ-೧೩೪

೧೮. ಅದೇ, ಪುಟ-೧೩೫

೧೯. ಅದೇ, ಪುಟ-೧೯೭

೨೦. ಮೆರವಣಿಗೆ, ಸಿದ್ಧಲಿಂಗಯ್ಯ, ಮುನ್ನುಡಿ, ಡಿ.ಆರ್.ನಾಗರಾಜ್, ಪುಟ-೧೪, ೧೫

೨೧. ತನು ಮುಟ್ಟದ ಮುನ್ನ, ಡಾ.ಅಪ್ಪಗೆರೆ ಸೋಮಶೇಖರ್, ಪುಟ-೧೨೮, ೧೨೯

೨೨. ಅದೇ, ಪುಟ-೧೩೧, ೧೩೨

೨೩. ಅದೇ, ಪುಟ-೧೩೨

೨೪. ಶತಮಾನದ ನಾಟಕ, ಕೆ.ಮರುಳಸಿದ್ಧಪ್ಪ, ಪಂಚಮ-ಸಿದ್ಧಲಿಂಗಯ್ಯ, ಪುಟ-೮೧೫

೨೫. ಅದೇ, ಪುಟ-೮೧೫, ೮೧೬

೨೬. ಅದೇ, ಪುಟ-೮೧೬

೨೭. ಧಾರ್ಮಿಕ ಸ್ವಾತಂತ್ರ್ಯದೆಡೆಗೆ, ಅಂಬೇಡ್ಕರ್, ಅನುವಾದ:ಕಾಂಬಳೆ, ಪುಟ-೧

೨೮. ಅದೇ, ಪ್ರಸ್ತಾವನೆ

೨೯. ಅವತಾರಗಳು, ಸಿದ್ಧಲಿಂಗಯ್ಯ, ಪುಟ-೧೬

೩೦. ಅದೇ, ಪುಟ-೧೬

೩೧. ಶತಮಾನದ ನಾಟಕ, ಕೆ.ಮರುಳಸಿದ್ಧಪ್ಪ, ಪಂಚಮ-ಸಿದ್ಧಲಿಂಗಯ್ಯ, ಪುಟ-೮೨೨

೩೨. ಅದೇ, ಪುಟ-೮೧೯

೩೩. ತನು ಮುಟ್ಟದ ಮುನ್ನ, ಅಪ್ಪಗೆರೆ ಸೋಮಶೇಖರ್, ಪುಟ-೧೩೪

೩೪. ಏಕಲವ್ಯ, ಸಿದ್ಧಲಿಂಗಯ್ಯ, ಪುಟ-೨೧, ೨೨, ೨೩

೩೫. ಡಾ.ಸಿದ್ಧಲಿಂಗಯ್ಯನವರ ಸದನದ ಭಾಷಣಗಳು, ಭಾಗ-೨, ದೊಡ್ಡಹುಲ್ಲೂರು ರುಕ್ಕೋಜಿ, ಪುಟ-೧೧೨

೩೬. ಹಿಂದೂ ಧರ್ಮದ ತಾತ್ವಿಕತೆ, ಅಂಬೇಡ್ಕರ್, ಅನು:ಗಂಗಾಧರಮೂರ್ತಿ, ಪುಟ-೨೨

೩೭. ಅದೇ, ಪುಟ-೧೯

೩೮. ಜನಸಂಸ್ಕೃತಿ, ಡಾ.ಸಿದ್ಧಲಿಂಗಯ್ಯ, ಪುಟ-೨೧

೩೯. ಡಾ.ಸಿದ್ಧಲಿಂಗಯ್ಯನವರ ಸದನದ ಭಾಷಣಗಳು ಭಾಗ-೨, ದೊಡ್ಡಹುಲ್ಲೂರು ರುಕ್ಕೋಜಿ, ಪುಟ-೭೩

೪೦. ಅದೇ, ಪುಟ-೨೯

೪೧. ದಲಿತ ಚಿಂತನೆ, ಮೊಗಳ್ಳಿ ಗಣೇಶ, ಪುಟ-೧೧೨

೪೨. ಅದೇ, ಪುಟ-೭೬

೪೩. ಡಾ.ಸಿದ್ಧಲಿಂಗಯ್ಯನವರ ಸದನದ ಭಾಷಣಗಳು ಭಾಗ-೧, ದೊಡ್ಡಹುಲ್ಲೂರು ರುಕ್ಕೋಜಿ, ಪುಟ-೨೪, ೨೫

೪೪. ಧಾರ್ಮಿಕ ಸ್ವಾತಂತ್ರ್ಯದೆಡೆಗೆ, ಅನು: ಕಾಂಬಳೆ, ಪುಟ-೬೪

೪೫. ಜನಸಂಸ್ಕೃತಿ, ಸಿದ್ಧಲಿಂಗಯ್ಯ, ಪುಟ-೨೦

೪೬. ಸಂಬಂಜ ಅನ್ನೋದು ದೊಡ್ಡದು ಕನಾ, ಅಪ್ಪಗೆರೆ ಸೋಮಶೇಖರ್, ಪುಟ-೮೩

ಅಧ್ಯಾಯ – ೫

ನಮ್ಮ ಭಾರತೀಯ ಸಂಸ್ಕೃತಿ ಶ್ರೇಷ್ಠವಾದುದ್ದು. ಜಗತ್ತಿಗೆ ಆದರ್ಶ ಪ್ರಾಯವಾಗಿದ್ದು ಗೌರವ ಆದರಗಳಿಂದ ನೋಡುವ ಈ ಭಾರತೀಯ ಸಂಸ್ಕೃತಿಯು ಆರ್ಯರ ಕಪಿಮುಷ್ಠಿಯಿಂದ ಇಡೀ ಭಾರತೀಯ ನಾಗರೀಕತೆಯು ಸಮಾನತೆ, ಸ್ವಾತಂತ್ರ್ಯ ಮತ್ತು ಸಹೋದರತೆಗಳನ್ನು ಹತ್ತಿಕ್ಕುವ ವಿಷಮ ವಾತಾವರಣವನ್ನು ಸೃಷ್ಟಿಸಿತು. ದಟ್ಟವಾದ ಕಗ್ಗತ್ತಲಿನಲ್ಲಿ ಮುಳುಗಿದ್ದ ದಲಿತ ಜನಾಂಗವನ್ನು ಜಾಗೃತಗೊಳಿಸಿ ಅವರ ಬಾಳಿಗೆ ಜ್ಞಾನದ ಬೆಳಕಾಗಿ ವಿಮೋಚನೆಯ ದಾರಿದೀಪವಾಗಿ ಬಂದರು. ಇಂತಹ ಅವಮಾನಿತ ಜನತೆಗೆ ತಮ್ಮದೇ ಆದ ಸಂಸ್ಕೃತಿ ಇದೆ ಎಂದು ಸ್ವಾಭಿಮಾನದ ಗೌರವವನ್ನು ಮೂಡಿಸಿ, ಈ ರಾಷ್ಟ್ರದ ಇತಿಹಾಸದ ಪುಟಗಳಲ್ಲಿ ಮರೆಯಾಗಿ ಹೋಗಿದ್ದ ಪುಟಗಳನ್ನು ತೆರೆದು ತೋರಿಸಿದವರು. ಈ ಆರ್ಯ ಸಂಸ್ಕೃತಿಯ ಲೋಪದೋಷ, ಅಸಮಾನತೆ, ಜಾತಿವ್ಯವಸ್ಥೆಯ ರೋಗಗಳ ವಿರುದ್ಧ ಹೋರಾಟದ ಮೂಲಕ ಹೊಸ ಕ್ರಾಂತಿಯನ್ನುಂಟು ಮಾಡುವ ಸಮಾಜವಾದಿ ಮೌಲ್ಯಗಳನ್ನು ಸಾಂಸ್ಕೃತಿಕ ಹಾಗೂ ಆಧ್ಯಾತ್ಮಿಕ ನೆಲೆಗಟ್ಟಿನಲ್ಲಿ ರೂಪಿಸಿದರು. ಎಲ್ಲ ಶೋಷಿತರ, ಅವಮಾನಿತರ ಬದುಕಿನಲ್ಲಿ ಹೊಸ ಮೌಲ್ಯಗಳನ್ನು ಆದರ್ಶಗಳನ್ನು ಸೃಷ್ಟಿಸಿ, ಹಸಿದವರಲ್ಲಿ, ದಿಕ್ಕೆಟ್ಟವರಲ್ಲಿ ತಬ್ಬಲಿಗಳ ಬಾಳಿನಲ್ಲಿ ಬಾಳಿನ ಕನಸು ಚಿಗುರೊಡೆಯುವಂತೆ ಮಾಡಿ, ವಿಮುಕ್ತಿಯ ಕಡೆಗೆ ನಡೆಸಿದವರು ಡಾ.ಬಾಬಾಸಾಹೇಬ್ ಅಂಬೇಡ್ಕರ್. ಮಾನವನು ಪ್ರಕೃತಿಯ ಕೂಸು. ಜನನ–ಮರಣ, ನೋವು–ನಲಿವು, ಕಷ್ಟ – ಸುಖ ಪ್ರತಿಯೊಬ್ಬರ ಬಾಳಿನಲ್ಲೂ ಇರುವ ಸಹಜ ಕ್ರಿಯೆಗಳು. ಆದರೆ ಇದನ್ನೆಲ್ಲ ಹೊರತುಪಡಿಸಿ ಮನುಷ್ಯ ತನ್ನ ಸ್ವಾರ್ಥ ಸಾಧನೆಗಾಗಿ, ಮೇಲು–ಕೀಳು, ಬಡವ–ಬಲ್ಲಿದ, ಮೇಲ್ವರ್ಗ–ಕೆಳವರ್ಗ ಎಂಬ ಬೇಧಭಾವವನ್ನು ಸೃಷ್ಟಿಸಿ ಮನುಷ್ಯನ ನಡುವೆ ಕಂದಕವನ್ನು ಸೃಷ್ಟಿಸಿ, ಒಬ್ಬರು ಮತ್ತೊಬ್ಬರ ಮೇಲೆ ದ್ವೇಷ, ಅಸೂಯೆ, ಗಲಾಟೆಗಳನ್ನು ನಿರ್ಮಾಣ ಮಾಡಿಕೊಂಡು ತಮ್ಮ ಜೀವನವನ್ನು ಅಶಾಂತಿ ಅಸಮಾಧಾನದಿಂದ ನೆಮ್ಮದಿಯನ್ನು ಹಾಳು ಮಾಡಿಕೊಂಡು ಜೀವನ ನಡೆಸುತ್ತಿರುವುದನ್ನು ಕಾಣುತ್ತೇವೆ.

ಜಾತಿವ್ಯವಸ್ಥೆಯಲ್ಲಿ ೪ ವರ್ಗವೇ ಇದ್ದರೂ ಇದ್ದನ್ನು ಮೀರಿದ ವರ್ಗವೇ ಅಸ್ಪೃಶ್ಯರು. ಇವರ ಸ್ಥಿತಿ–ಜೀವನದ ಸ್ಥಿತಿಯನ್ನು ಕಲ್ಪಿಸಿಕೊಳ್ಳಲು ಅಸಾಧ್ಯವಾದ ರೀತಿಯಲ್ಲಿ ಅವರ ಬದುಕು ನಡೆಸುತ್ತಿದ್ದರು. ಇದು ಈ ಸಮಾಜದ ಬಹಳ ಘೋರ ಕಳಂಕವಾದ ಅವಹೇಳನಕರವಾದ ಪದ್ಧತಿಯನ್ನು ತೊಡೆದು ಹಾಕಿ ಸರ್ವಸಮಾನತೆಯನ್ನು ಹುಟ್ಟು ಹಾಕಲು ಅಂಬೇಡ್ಕರ್‌ರವರು ತಮ್ಮ ಜೀವನದುದ್ದಕ್ಕೂ ಚಿಂತನೆ–ಹೋರಾಟಗಳಲ್ಲೇ ಕಳೆದರು. ಶೋಷಿತರಿಗೆ ಶಿಕ್ಷಣವನ್ನು ಪಡೆದು

ಜಾಗೃತರಾಗಿ ತಮ್ಮ ಮೂಲಭೂತ ಹಕ್ಕುಗಳನ್ನು ಪಡೆಯಲು ಸ್ವಾಭಿಮಾನದ ಹೋರಾಟವನ್ನು ಮಾಡಿ ಈ ಸಮಾಜದ ಮೂಢನಂಬಿಕೆಗಳನ್ನು ತ್ಯಜಿಸಿ, ವೈಚಾರಿಕ, ವೈಜ್ಞಾನಿಕ ಚಿಂತನೆಯಲ್ಲಿ ತೊಡಗಿ, ಜಾತಿ ವ್ಯವಸ್ಥೆಯನ್ನು ತೊಲಗಿಸಲು ಅಂತರ್ಜಾತಿ ವಿವಾಹಗಳು ನಡೆಯಲೆಂದು, ಈ ನಮ್ಮ ಸ್ಥಿತಿಗಳಿಗೆಲ್ಲ ಧರ್ಮ, ದೇವರು ಕಾರಣವೆಂದು ಅವರನ್ನು ಧಿಕ್ಕರಿಸಿ ಮಾನವೀಯತೆ, ದಯೆವಿರುವ ಧರ್ಮವನ್ನು ಧಾರ್ಮಿಕ ಸ್ವಾತಂತ್ರ್ಯದೆಡೆಯಲ್ಲಿ ಹೊಸ ಜೀವನವನ್ನು ಒದಗಿಸಿಕೊಟ್ಟವರು ಡಾ.ಭೀಮರಾವ್ ಅಂಬೇಡ್ಕರ್.

ಇಂತಹ ಮಹಾ ಮಾನವತಾವಾದಿ ದಲಿತಸೂರ್ಯ ಅಂಬೇಡ್ಕರ್ ಸ್ಫೂರ್ತಿಯಿಂದ ಡಾ.ಸಿದ್ಧಲಿಂಗಯ್ಯನವರು ಭಾರತದ ಜಾತಿಯ ಅಸಮತೋಲನ, ಶ್ರೇಣಿಕೃತ ವ್ಯವಸ್ಥೆ ತ್ಯಜಿಸಿ ಸಮಾನತೆ, ಮಾನವೀಯತೆಯ ಸಮಾಜವನ್ನು ಕಾಣಬೇಕೆಂದು ಕನಸು ಕಂಡರು. ಅದು ನೆರವೇರದಿದ್ದಾಗ ಕೊರಗಿದವರು. ಆದರೂ ಸದಾ ಆಶಾಭಾವನೆಯಿರುವ ಮಹಾನ್ ಚಿಂತಕರಿವರು. ಇವರಿಗೆ ಬಡತನ, ನೋವು, ಶೋಷಣೆಯೇ ಇವರ ಸಾಹಿತ್ಯ, ಚಳುವಳಿಗೆ ಪ್ರೇರಣೆಯನ್ನು ಒದಗಿಸಿತು. ಸಮಕಾಲೀನ ಸಾಮಾಜಿಕ ಪರಿಸ್ಥಿತಿ, ಒತ್ತಡಗಳು ಇವರ ಕ್ರಾಂತಿಕಾರಕ ಹೋರಾಟಗಳಿಗೆ ಸ್ಫೂರ್ತಿಯ ಅಂಶಗಳಾದವು. ಸರ್ಕಾರದ ವಿರುದ್ಧ, ರೈತರು, ಕೂಲಿಕಾರ್ಮಿಕರ ಪರ, ಸಮಾಜದ ದಬ್ಬಾಳಿಕೆಗಳ, ದೌರ್ಜನ್ಯಗಳನ್ನು ಖಂಡಿಸಿ ಪ್ರತಿಭಟನಾ ರ್‍ಯಾಲಿಗಳನ್ನು ಮಾಡುತ್ತಿದ್ದರು. ದೇವಸ್ಥಾನ ಪ್ರವೇಶ, ಬೆತ್ತಲೆಸೇವೆ, ಹೆಣ್ಣುಗಳ ಮೇಲೆ ನಡೆಯುತ್ತಿದ್ದ ಅತ್ಯಾಚಾರ, ದಲಿತರ ಕಗ್ಗೊಲೆ, ನಕಲಿ ಜಾತಿ ಪ್ರಮಾಣ ಪತ್ರದ ವಿರುದ್ಧ, ಮೀಸಲಾತಿ ವಿರೋಧಿಗಳ ವಿರುದ್ಧ, ಮಂಡಲ್ ವರದಿ ಜಾರಿಗೊಳಿಸುವಂತೆ ಹೋರಾಟ, ಜಾಥಾಗಳನ್ನು ನಡೆಸಿದ್ದಾರೆ. ಹಾಗೆಯೇ ಸಾಹಿತ್ಯ ಕ್ಷೇತ್ರದಲ್ಲೂ ೧೯೭೭ರಲ್ಲಿ 'ಬಂಡಾಯ ಸಾಹಿತ್ಯ' ಪರಂಪರೆ ನಾಂದಿಯನ್ನು ಹಾಡಿದರು ಡಾ.ಸಿದ್ಧಲಿಂಗಯ್ಯನವರು.

ಇವರು ವಿಧಾನಪರಿಷತ್‌ನಲ್ಲಿ ಸದಸ್ಯರಾಗಿದ್ದಾಗಲೂ ಸದನದಲ್ಲಿ ಕೂಡ ಅಂತರ್ಜಾತಿ ವಿವಾಹದ ಬಗ್ಗೆ, ಅವರಿಗೆ ನೀಡುವ ಪ್ರೋತ್ಸಾಹಧನ ಬಗ್ಗೆ, ದಲಿತರ ಮೇಲೆ ನಡೆಯುವ ದಬ್ಬಾಳಿಕೆ ವಿರುದ್ಧ, ಗಿರಿಜನರ, ಕಾರ್ಮಿಕರ ಸಮಸ್ಯೆಗಳ ಬಗ್ಗೆ, ಪೌರಕಾರ್ಮಿಕರ, ಕಾರ್ಖಾನೆ ಕಾರ್ಮಿಕರ ಪರವಾಗಿ, ಮೀಸಲಾತಿಯ ಬಗ್ಗೆ ಪೋಲಿಸರ ದೌರ್ಜನ್ಯಗಳ ಬಗ್ಗೆ, ಕನ್ನಡ ಭಾಷೆಯ ಸಂಸ್ಕೃತಿ, ಸಾಹಿತ್ಯಕ್ಕೆ ಸಂಬಂಧಿಸಿದಂತೆ ದನಿಯೆತ್ತಿ ಮಾತನಾಡಿ, ಹೋರಾಟ ಮಾಡಿ, ಸಲಹೆ ಮಾರ್ಗದರ್ಶನವನ್ನು ನೀಡಿದ್ದಾರೆ. ಇವರು ವೈಚಾರಿಕವಾಗಿ ಸಂಶೋಧನಾತ್ಮಕವಾಗಿ ಅಧ್ಯಯನ ಮಾಡಿ ಅಗಾಧ ಜ್ಞಾನವನ್ನು ಪಡೆದಿದ್ದು, ಇವರು ಭಾಷಣಗಳಲ್ಲಿ ಸಮಾಜ ವಿಜ್ಞಾನಿಯ ಚಿಂತನಶೀಲ ಆಲೋಚನೆಗಳಿವೆ. ಇವರು ವಾದಕ್ಕಾಗಿ ವಾದ ಮಾಡುವ ಮನಸ್ಥಿತಿಯವರಲ್ಲ. ಸಮಾಜದ ನಿಜ ಸ್ಥಿತಿಯನ್ನು ಆಳವಾಗಿ ಭೇದಿಸಿ ಅದನ್ನು ಸುಲಲಿತ ಭಾಷೆಯಲ್ಲಿ ಎಲ್ಲರಿಗೂ ಮನಮುಟ್ಟುವಂತೆ ಹೇಳುತ್ತಿದ್ದರು. ಇವರು ತಮ್ಮ ಕಾವ್ಯದ

ಮೂಲಕ ಜನರಲ್ಲಿ ಹೊಸಬಗೆಯ ಚಿಂತನೆ, ಆಲೋಚನೆ, ದೃಷ್ಟಿಕೋನವನ್ನು ಉಂಟು ಮಾಡಿದುದ್ದೂ ಅಲ್ಲದೇ ಸಮಾಜದಲ್ಲಿ ದಲಿತರನ್ನು ಸ್ವಾಭಿಮಾನಿಗಳನ್ನಾಗಿ ಮಾಡಿ ಎಚ್ಚರಗೊಳಿಸಿದರು. ಸಾಮಾಜಿಕ ಕ್ರಾಂತಿಗೆ ನಾಂದಿ ಹಾಡಿದರು. ಬುದ್ಧ, ಅಂಬೇಡ್ಕರ್, ಬಸವಣ್ಣನವರ ಜಾತ್ಯಾತೀತ ತತ್ವವನ್ನು ಮೈಗೂಡಿಸಿಕೊಂಡಿದ್ದ ಇವರು ಸಮಾಜದ ಅಸಮಾನತೆಯ ಸಂಕೇತ ಎಲ್ಲಾ ಸಾಮಾಜಿಕ ಸಮಸ್ಯೆಗಳ ಮೂಲ ಜಾತಿಪದ್ಧತಿ ನಾಶವಾಗಬೇಕಾದರೆ ಮೇಲು-ಕೀಳು ತಾರತಮ್ಯ ಹೋಗಬೇಕಾದರೆ ಅಂತರ್ಜಾತಿಯ ವಿವಾಹಗಳಿಂದ ಸಾಧ್ಯವೆಂದು ತಿಳಿದಿದ್ದರು. ಅದಕ್ಕಾಗಿ ಇವರು ಸಹ ಅಂತರ್ಜಾತಿಯ ವಿವಾಹವನ್ನೇ ಮಾಡಿಕೊಂಡು ಬೇರೆಯವರಿಗೆ ಮಾರ್ಗದರ್ಶನವಾದರು. ಅಂತರ್ಜಾತಿ ವಿವಾಹವಾಗುವವರಿಗೆ ಶೇ.ಶಿರಷ್ಟು ಮೀಸಲಾತಿಯನ್ನು ಕೊಡಬೇಕೆಂದು ಆಗ್ರಹ ಪಡಿಸಿದ್ದರು. ಸಮಾಜದ ಸಮಸ್ಯೆಗಳಿಗೆ ಸ್ಪಂದಿಸುತ್ತಿದ್ದರು. ಸಾಹಿತ್ಯದ ಮೂಲಕವಾದರೂ, ಹೋರಾಟದ ಮೂಲಕವಾದರೂ ಪ್ರತಿಕ್ರಿಯಿಸುತ್ತಿದ್ದರು. ಸಾಧ್ಯವಾದರೆ ಅದಕ್ಕೆ ಪರಿಹಾರದ ಮಾರ್ಗವನ್ನು ತೋರಿಸಿ ಕೊಡುತ್ತಿದ್ದರು. ಒಟ್ಟಿನಲ್ಲಿ ಸಿದ್ಧಲಿಂಗಯ್ಯನವರು ಶೋಷಿತರ ಪರ, ದಲಿತಪರ ಹೋರಾಟಗಾರರಾಗಿ ಕರ್ನಾಟಕದ ಸಾಮಾಜಿಕ ವಲಯದಲ್ಲಿ ಉಂಟು ಮಾಡಿದ ಕ್ರಾಂತಿ ಅಸಾಧಾರಣವಾದುದು. ಅದಕ್ಕೇ ಇಡೀ ಕರ್ನಾಟಕದ ಸುತ್ತಲೂ ಇವರ ಹೋರಾಟ, ಚಳುವಳಿಯ ವ್ಯಕ್ತಿತ್ವವನ್ನು ಗೌರವ ಪ್ರೀತಿಯಿಂದ ನೋಡಿ ಅವರನ್ನು ಗೌರವಿಸಿ, ಆರಾಧಿಸುವವರು ಇದ್ದಾರೆ. ಶಿಕ್ಷಣ, ಸಂಘಟನೆ, ಹೋರಾಟ ನಮ್ಮ ಸಮಸ್ಯೆಗಳಿಗೆ ಈ ಮೂರರಿಂದ ಪಡೆಯಬಹುದೆಂದು ಡಾ.ಅಂಬೇಡ್ಕರ್ ಹೇಳಿ ಹೋಗಿದ್ದರು. ಅದಕ್ಕೆ ಅನುಗುಣವಾಗಿ ಸಿದ್ಧಲಿಂಗಯ್ಯನವರು ಜಾತೀಯತೆ, ಅಸ್ಪೃಶ್ಯತೆ ತೊಲಗಬೇಕಾದರೆ ಈ ಸಮಾಜದಲ್ಲಿ ಹೋರಾಟ ಮಾಡದೆ ಬೇರೆ ದಾರಿ ಇಲ್ಲ. ಅಂತಹ ಹೋರಾಟ ಮಾಡಬೇಕಾದರೆ ಒಂದು ಸಂಘಟನೆಯೂ ಅವಶ್ಯಕವೆಂದು ತಿಳಿದಿದ್ದ ಪರಿಣಾಮವಾಗಿಯೇ 'ದಲಿತ ಸಂಘರ್ಷ ಸಮಿತಿ'ಯೂಂದ ದಲಿತ ಚಳುವಳಿಯ [illegible] ಉಗಮವಾಯಿತು.

"೨೦ನೆಯ ಶತಮಾನದ ಬಹುಮುಖ್ಯ ಸಾಮಾಜಿಕ ಕಾಳಜಿಯಾಗಿದ್ದ ಸಮಾನತೆಯ ಕೂಗನ್ನು ಕನ್ನಡದ ಸಂದರ್ಭದಲ್ಲಿ ಸಿದ್ಧಲಿಂಗಯ್ಯನವರು ಹಿಡಿದ ರೀತಿಯು ಅನನ್ಯವಾದದ್ದು. ಅವರ ಬರಹದ ವ್ಯಾಪ್ತಿ ದೊಡ್ಡದು. ವೈಚಾರಿಕವಾಗಿ ಅವರು ಮಾಡಿದ ಆಲೋಚನೆಗಳೆಲ್ಲವೂ ಕೇವಲ ವೈಚಾರಿಕ ನೆಲೆಗಟ್ಟಿನಿಂದಲೇ ಬಂದವುಗಳಲ್ಲ. ಅವುಗಳ ಹಿನ್ನೆಲೆಯಲ್ಲಿ ಅನುಭವದ ವ್ಯಾಪ್ತಿ ಇದೆ. ಬಡವ, ಶೋಷಿತ ಸಮುದಾಯದ ನೋವಿನ ಸೆಲೆಗಳನ್ನು ಪರಿಣಾಮಕಾರಿಯಾಗಿ ಅಭಿವ್ಯಕ್ತಿಸುವ ಸೃಜನಶೀಲಶಕ್ತಿ ಇದೆ. ತುಳಿತಕ್ಕೆ ಒಳಗಾದ ಅಸ್ಪೃಶ್ಯ ಜನಾಂಗ ಹಾಗೂ ಶೋಷಣೆಯ ವರ್ಗ ಸ್ವರೂಪವನ್ನು ಸಿದ್ಧಲಿಂಗಯ್ಯನವರು ಕನ್ನಡ ಸಾಹಿತ್ಯದಲ್ಲಿ ಮೊದಲ ಬಾರಿಗೆ ವಿಶಿಷ್ಟಶೈಲಿಯಲ್ಲಿ ಹಿಡಿದಿಟ್ಟರು. ಪ್ರಸಿದ್ಧ ಚಿಂತಕ ಬೆಲೆನ್ಸ್ಕಿ ಹೇಳುವಂತೆ "ನಮ್ಮ ಕಾಲದ ಕಲೆ, ನಮ್ಮ ಸಮಾಜ ಕುರಿತ

ವಿಮರ್ಶೆ ಮತ್ತು ತೀರ್ಪು. ಅದು ನಮ್ಮ ಸಂಕಟ-ಆನಂದಗಳ ಅಮರಗಾನವಾಗದಿದ್ದರೆ ಅದು ಸತ್ತಂತೆ'. ಸಿದ್ಧಲಿಂಗಯ್ಯನವರ ಕಾವ್ಯವು ಪ್ರಶ್ನೆಯಾಗಿ ಉತ್ತರವಾಗಿ ಸಂಕಟ ಆನಂದಗಳ ಗಾನವಾಗುತ್ತ ವರ್ತಮಾನಕ್ಕೆ ಸ್ಪಂದಿಸಿದೆ" ಇಂದಿನ ಜಾತೀಯತೆ, ಕೋಮು ಸಂಘರ್ಷದ ಮತ್ತು ಭಯೋತ್ಪಾದನೆ ಇವತ್ತಿನ ನಿಜವಾದ ಮನುಷ್ಯನ ಶತ್ರುಗಳು. ಇವುಗಳನ್ನು ಇಲ್ಲವಾಗಿಸಿ ಜನರ ಮಧ್ಯೆ ಪ್ರೀತಿ-ಪ್ರೇಮ, ಅಂತಃಕರಣದ ಮೇಲೆ ಮಾನವನ ಜೀವನ ನಿರ್ಮಾಣವಾಗಬೇಕೆಂದು ಬಯಸುವ ಮಾನವೀಯ ಸಂವೇದನಾಶೀಲ ವ್ಯಕ್ತಿಯಾಗಿದ್ದಾರೆ. ಇವರ ಪಂಚಮ, ನೆಲಸಮ, ಏಕಲವ್ಯ ನಾಟಕಗಳು ಜಾತಿ, ವರ್ಗ, ವರ್ಣರಹಿತ ಸಮಾಜ ನಿರ್ಮಾಣವನ್ನು ಕ್ರಾಂತಿ ಮುಖೇನವಾದರೂ ಈ ಸಮಾಜದ ಏರುಪೇರುಗಳನ್ನು ನೇರವಾಗಿಸಿ ಆದರ್ಶ ಸಮಾಜವನ್ನು ಕಟ್ಟಬೇಕೆಂಬುದೇ ಇವರ ನಾಟಕಗಳ ಒಟ್ಟು ಧೋರಣೆಯಾಗಿದೆ. "ಸಾಮಾಜಿಕ ಪರಿವರ್ತನೆಗಾಗಿ ಸಂಘರ್ಷ ಎಂಬುದು ನಾಟಕಗಳ ಆಶಯವೂ ಆಗಿದೆ.

ಡಾ.ಅಂಬೇಡ್ಕರ್‌ರವರ ವೈಚಾರಿಕ ಚಿಂತನೆಗಳಲ್ಲಿ ಅಪಾರ ನಂಬಿಕೆಯಿರುವ ಕವಿ ಡಾ.ಸಿದ್ಧಲಿಂಗಯ್ಯ ಸಮಾನತೆ ಪರಿಕಲ್ಪನೆಯನ್ನು ಹೀಗೆ ಹೇಳುತ್ತಾರೆ. "ಅಸಮಾನತೆ, ಅನ್ಯಾಯವೇ ಕತ್ತಲು, ಸಮಾನತೆ ದೀಪ ಉರಿಯಲು ಪ್ರೀತಿಯ ಬತ್ತಿಬೇಕು. ಸೌಹಾರ್ದತೆ ಎಣ್ಣೆ ಬೇಕು. ಅದ್ದರಿಂದ ಸಮಾನತೆ, ಸಾಮಾಜಿಕ ನ್ಯಾಯಕ್ಕೆ ಮಾನವ ಪ್ರೀತಿ, ಜನಾಂಗೀಯ ಸೌಹಾರ್ದತೆಯೇ ಮೂಲ ಆಧಾರ." ದಲಿತರ ಸಾಮಾಜಿಕ, ಆರ್ಥಿಕ, ಧಾರ್ಮಿಕ ಉನ್ನತಿಗೆ, ಬದಲಾವಣೆಗೆ ನಿಷ್ಠೆಯಿಂದ ಪ್ರಯತ್ನ ಮಾಡಿದ ಅಂಬೇಡ್ಕರ್ ಜಾತಿರಹಿತ ಸಮಾಜ ಸರ್ವ ಸಮಾನತೆಯ ಹೊಸ ಸಮಾಜದ ಕನಸು ಕಂಡಿದ್ದರು. ಡಾ.ಅಂಬೇಡ್ಕರ್ ಅಂತಹವರ ಮಾರ್ಗದಲ್ಲಿ ಬಂದಂತಹ ಡಾ.ಸಿದ್ಧಲಿಂಗಯ್ಯನವರು ಕೂಡ ಅವರು ತೋರಿದ ದಾರಿಯಲ್ಲೇ ಸಾಗಿಬಂದು ಅವರ ತತ್ವ, ಚಿಂತನೆ, ಆಲೋಚನೆಗಳನ್ನು ಇಂದಿನ, ಇಲ್ಲಿನ ಸಂದರ್ಭಕ್ಕೆ ಅನುಗುಣವಾಗಿ ತಮ್ಮ ಹೋರಾಟ, ಸಾಹಿತ್ಯ ರಚನೆ, ಭಾಷಣಗಳಲ್ಲಿ ಕಾಣುವ ಪ್ರಯತ್ನವನ್ನು ಪ್ರಮಾಣಿಕವಾಗಿ ಮಾಡಿದ್ದೇನೆ. ಡಾ.ಅಂಬೇಡ್ಕರ್‌ರವನ್ನು ಪೂಜಿಸಿದರೆ, ನೆನಪಿಸಿಕೊಂಡರೆ ಸಾಲದು. ಅವರೇ ಸ್ಫೂರ್ತಿಯಾಗಿರುವಾಗ ನಾವು ಈ ಸಮಾಜವನ್ನು ಮೂಲದಿಂದಲೇ ಪರಿವರ್ತಿಸುವ ಅಗತ್ಯವಿದೆಂಬುದು ಅಭಿಪ್ರಾಯವಾಗಿದೆ.

ಕಾಡನು ದೋಚಿ ನಾಡನು ಮಾರಲು
ಗುಳ್ಳೇನರಿಗಳು ಬರುತಿಹರು
ಈ ಖೂಳರ ಆಟ ನಿಲ್ಲಿಸಲೆಂದು
ಜನ ಸಮುದಾಯವೇ ಎದ್ದೇಳಿ (ಗ್ರಾಮದೇವತೆ)

ಇದು ಇಂದಿನ ವಾಸ್ತವ ಪರಿಸ್ಥಿತಿಯನ್ನು ಹೇಳುತ್ತದೆ. ಪ್ರಕೃತಿಯನ್ನು ಹಾಳು ಮಾಡಿ ಅದನ್ನೇ ದೋಚುತ್ತಿರುವ ಅದನ್ನು ಆರಾಧಿಸುವ ಬದಲು ಪ್ರಕೃತಿ ಧರ್ಮವನ್ನೇ ಮರೆತು ಪರಿಸರದ ಏರುಪೇರಿಗೆ ಕಾರಣವಾಗಿ ಮಲಗಿರುವವರನ್ನು ಕಂಡು ಜನ ಸಮುದಾಯ ಎಚ್ಚೆತ್ತುಕೊಂಡು ಈ ನೆಲದ ಮೂಲ ಜನಾಂಗದ ಸಂಸ್ಕೃತಿಯನ್ನು ಈ ನೆಲದ ಒಡೆಯನನ್ನು ಕಾಪಾಡಿಕೊಂಡು ಹೋಗುವ ಗುರುತರ ಜವಾಬ್ದಾರಿ ನಮ್ಮ ಮೇಲಿರುವುದರಿಂದ ಸರ್ವ ಸಮಾನತೆಯ ಮಾನವ ಪ್ರೀತಿಯಿರುವ ಸಮಾಜವನ್ನು ಹುಟ್ಟುಹಾಕುವ ನಿಟ್ಟಿನಲ್ಲಿ ನಾವೆಲ್ಲರೂ ನಮ್ಮ ಹಿರಿಯರು ಹಾಕಿಕೊಟ್ಟ ಮಾರ್ಗದಲ್ಲಿ ನಾವು ಚಿಂತಿಸಿ ಜಾಗೃತರಾಗಿ ಒಂದಾಗಿ ಸಾಗೋಣ.

ಪರಮಾರ್ಶನ ಗ್ರಂಥ ಸೂಚಿ

೧. ಅಂಬೇಡ್ಕರ್. ಬಿ.ಆರ್ — ಧಾರ್ಮಿಕ ಚಿಂತನೆ
ಅನು: ಡಾ.ಡಿ.ಆರ್.ನಾಗರಾಜ್
ಬಾಬಾಸಾಹೇಬ್ ಅಂಬೇಡ್ಕರ್ ಶತಮಾನೋತ್ಸವ ಸಮಿತಿ
ರಾಜಾಜಿನಗರ, ಬೆಂಗಳೂರು. ೧೯೯೦

೨. ಅಂಬೇಡ್ಕರ್.ಬಿ.ಆರ್. — ಹಿಂದೂ ಧರ್ಮದ ತಾತ್ವಿಕತೆ
ಅನು: ಗಂಗಾಧರಮೂರ್ತಿ
ಬಾಬಾಸಾಹೇಬ್ ಅಂಬೇಡ್ಕರ್ ಶತಮಾನೋತ್ಸವ ಸಮಿತಿ
ರಾಜಾಜಿನಗರ, ಬೆಂಗಳೂರು. ೧೯೯೦

೩. ಅಂಬೇಡ್ಕರ್.ಬಿ.ಆರ್. — ಧಾರ್ಮಿಕ ಸ್ವಾತಂತ್ರ್ಯದೆಡೆಗೆ
ಅನು: ಶ್ರೀ.ಎಲ್.ಶಿವಲಿಂಗಯ್ಯ, ಅಧ್ಯಕ್ಷರು
ಅಂಬೇಡ್ಕರ್ ಸ್ಮಾರಕ ಸಂಸ್ಥೆ, ಬೆಂಗಳೂರು. ೧೯೯೪

೪. ಅಂಬೇಡ್ಕರ್.ಬಿ.ಆರ್ — ರಾನಡೆ, ಗಾಂಧಿ ಮತ್ತು ಜಿನ್ನ
ಅನು: ಎನ್.ನಾಗರಾಜು
ಅಮರ ಸಾಹಿತ್ಯ, ವಾಲ್ಮೀಕಿ ನಗರ
ಬೆಂಗಳೂರು. ೧೯೮೫

೫. ಅಂಬೇಡ್ಕರ್.ಬಿ.ಆರ್. — ಪೂನಾ ಒಪ್ಪಂದ
ಅನು: ಡಾ.ಏಜಾಸುದ್ದೀನ್(ಆಶ್ರಫಿ)
ಅಮರ ಸಾಹಿತ್ಯ, ವಾಲ್ಮೀಕಿ ನಗರ
ಬೆಂಗಳೂರು. ೧೯೮೫

೬. ಅಂಬೇಡ್ಕರ್.ಬಿ.ಆರ್. — ಶ್ರೀಮಾನ್ ಗಾಂಧಿ ಮತ್ತು ಅಸ್ಪೃಶ್ಯರ ವಿಮೋಚನೆ
ಅನು: ಬಿ.ಎಸ್.ರಾಮಪ್ರಸಾದ್
ಅಮರ ಸಾಹಿತ್ಯ, ವಾಲ್ಮೀಕಿ ನಗರ
ಬೆಂಗಳೂರು. ೧೯೮೫

೭. ಅಂಬೇಡ್ಕರ್.ಬಿ.ಆರ್. ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು (ಸಂ-೧) ಪ್ರ.ಸಂ:ಪ್ರದಾನ್ ಗುರುದತ್ತ್ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಬೆಂಗಳೂರು. ೨೦೦೯

೮. ಅಂಬೇಡ್ಕರ್.ಬಿ.ಆರ್. ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು (ಸಂ-೧೧) ಸಂ: ರಾಜಶೇಖರಯ್ಯ

೯. ಅಂಬೇಡ್ಕರ್.ಬಿ.ಆರ್. ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು (ಸಂ-೩) ಸಂ: ಡಾ.ಎ.ಎಂ.ರಾಜಶೇಖರಯ್ಯ

೧೦. ಅಂಬೇಡ್ಕರ್.ಬಿ.ಆರ್. ಬುದ್ಧ ಮತ್ತು ಆತನ ಧರ್ಮ ಅನು: ಎ.ಡಿ.ಕೃಷ್ಣಯ್ಯ ನಿರ್ದೇಶಕರು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ ಮೈಸೂರು. ೧೯೯೬

೧೧. ಅರವಿಂದ ಮಾಲಗತ್ತಿ ಸಾಹಿತ್ಯ ಸಂಸ್ಕೃತಿ ಮತ್ತು ದಲಿತ ಪ್ರಜ್ಞೆ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ೨೦೦೩

೧೨. ಅರವಿಂದ ಮಾಲಗತ್ತಿ ದಲಿತಮಾರ್ಗ ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು. ೨೦೦೨

೧೩. ಅಪ್ಪಗೆರೆ ಸೋಮಶೇಖರ್ ತನು ಮುಟ್ಟದ ಮುನ್ನ ಪ್ರಸಾದ್ ಏಜೆನ್ಸೀಸ್, ವಿದ್ಯಾರಣ್ಯಪುರಂ ಮೈಸೂರು. ೨೦೦೬

೧೪. ಅಪ್ಪಗೆರೆ ಸೋಮಶೇಖರ್ ಸಂಬಂಜ ಅನ್ನೋದು ದೊಡ್ಡದು ಕಣಾ ವಿಜಯಲಕ್ಷ್ಮಿ ಪ್ರಕಾಶನ, ಕುವೆಂಪುನಗರ

ಮೈಸೂರು. ೨೦೦೬

೧೫. ಅಪ್ಪಗೆರೆ ಸೋಮಶೇಖರ್ — ಸುಟ್ಟಾವು ಬೆಳ್ಳಿಕಿರಣ
ಪ್ರಸಾದ್ ಏಜೆನ್ಸೀಸ್, ವಿದ್ಯಾರಣ್ಯಪುರಂ
ಮೈಸೂರು. ೨೦೦೬

೧೬. ಆನಂದ ತೇಲ್ ತುಂಬ್ಡೆ — ಅಂಬೇಡ್ಕರೋತ್ತರ ದಲಿತ ಸಂಘರ್ಷ-ದಾರಿ-ದಿಕ್ಕು
ಅನು: ರಾಹು
ಚಿಂತನ ಪುಸ್ತಕ, ಜಯನಗರ
ಬೆಂಗಳೂರು. ೨೦೦೯

೧೭. ಕೃಷ್ಣಪ್ಪ.ಬಿ. — ಪ್ರೊ.ಬಿ.ಕೃಷ್ಣಪ್ಪ ಚಿಂತನೆಗಳು - ಬರಹಗಳು
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು. ೧೯೯೯

೧೮. ಚಂದ್ರಣ್ಣಗೌಡ.ಕೆ.ವಿ. — ವಿಚಾರವೀಳ್ಯ
ಕನ್ನಡ ಸಾಹಿತ್ಯ ಪರಿಷತ್ತು
ಬೆಂಗಳೂರು. ೧೯೯೧

೧೯. ಚಿನ್ನಸ್ವಾಮಿ ಸೋಸಲೆ.ಎನ್. — ದಲಿತರ ಮೇಲೆ ದೌರ್ಜನ್ಯ ಒಂದು ನೋಟ
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ
ಹಂಪಿ. ೨೦೦೬

೨೦. ಜವರಯ್ಯ.ಮ.ನ — ಪರಂಪರೆ ಹಾಗೂ ದಲಿತ ಬಂಡಾಯ ಸಾಹಿತ್ಯ ಸಮಗ್ರ ಅಧ್ಯಯನ
ಸಿದ್ಧಾರ್ಥ ಗ್ರಂಥ ಮಾಲೆ, ಕುವೆಂಪುನಗರ
ಮೈಸೂರು. ೧೯೯೪

೨೧. ಜವರೇಗೌಡ.ದೇ — ಕ್ರಾಂತಿಕಾರ ಡಾ.ಅಂಬೇಡ್ಕರ್ (ಸಂಕ್ಷಿಪ್ತ ಆವೃತ್ತಿ)
ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು. ದ್ವಿತೀಯ ಮುದ್ರಣ. ೧೯೮೪

೨೨. ಜವರೇಗೌಡ. ದೇ — ವಿಚಾರವಾದಿ, ಕ್ರಾಂತಿಕಾರಿ
ಡಾ.ಅಂಬೇಡ್ಕರ್
ಸ್ವಪ್ನ ಬುಕ್ ಹೌಸ್, ಗಾಂಧಿನಗರ

ಬೆಂಗಳೂರು. ೨೦೦೯

೨೩. ದಂಡಪ್ಪ.ಎಚ್. ಬಡವರ ನಗುವಿನ ಶಕ್ತಿ
ಅಂಕಿತ ಪುಸ್ತಕ, ಬಸವನಗುಡಿ
ಬೆಂಗಳೂರು. ೨೦೦೧

೨೪. ದೊಡ್ಡಹುಲ್ಲೂರು ರುಕ್ಕೋಜಿ ಡಾ.ಸಿದ್ಧಲಿಂಗಯ್ಯನವರ ಸದನದ ಭಾಷಣಗಳು ಭಾಗ-೧
ಅಂಕಿತ ಪುಸ್ತಕ, ಬಸವನಗುಡಿ
ಬೆಂಗಳೂರು. ೨೦೦೪

೨೫. ದೊಡ್ಡಹುಲ್ಲೂರು ರುಕ್ಕೋಜಿ ಡಾ.ಸಿದ್ಧಲಿಂಗಯ್ಯನವರ ಸದನದ ಭಾಷಣಗಳು ಭಾಗ-೨
ಕಾಮಧೇನು ಪುಸ್ತಕ ಭವನ, ಶೇಷಾದ್ರಿಪುರಂ
ಬೆಂಗಳೂರು.

೨೬. ಪುರುಷೋತ್ತಮ ಬಿಳಿಮಲೆ ಬಂಡಾಯ-ದಲಿತ ಸಾಹಿತ್ಯ
ಕರ್ನಾಟಕ ಸಾಹಿತ್ಯ ಅಕಾಡೆಮಿ.
ಬೆಂಗಳೂರು. ೧೯೯೯

೨೭. ಮೊಗಳ್ಳಿ ಗಣೇಶ್ ದಲಿತ ಚಿಂತನೆ
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ
ಹಂಪಿ. ೨೦೦೨

೨೮. ಮಹಾದೇವಯ್ಯ.ಪಿ. ದಲಿತರು ಮತ್ತು ಪರ್ಯಾಯ ರಾಜಕಾರಣ
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ
ಹಂಪಿ. ೨೦೦೫

೨೯. ಮಹಾದೇವಯ್ಯ.ಪಿ. ದಲಿತರು ಭಾಷೆ ಮತ್ತು ಸಮಾಜ
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ
ಹಂಪಿ. ೨೦೦೬

೩೦. ಮರುಳಸಿದ್ಧಪ್ಪ.ಕೆ. ಶತಮಾನದ ನಾಟಕ
ಕರ್ನಾಟಕ ಸಾಹಿತ್ಯ ಅಕಾಡೆಮಿ
ಬೆಂಗಳೂರು. ೨೦೦೩

೩೧. ಮಂಗ್ಳೂರು ವಿಜಯ — ಸಂಘರ್ಷ–ಅಂಬೇಡ್ಕರ್ ಜೀವನ –ಸಾಧನೆ
ಸಂಬುದ್ಧ ಪ್ರಕಾಶನ, ವಿ.ನಾಗನಹಳ್ಳಿ
ಬೆಂಗಳೂರು. ೨೦೦೨

೩೨. ಡಾ.ರಾಮಮನೋಹರ ಲೋಹಿಯಾ — ಜಾತಿಪದ್ಧತಿ
ಅನು: ಹಸನ್ ಸಮೀಂ ಸುರಕೋಡ
ಪತ್ರಿಕೆ ಪ್ರಕಾಶನ, ಬೆಂಗಳೂರು.
ದ್ವಿತೀಯ ಆವೃತ್ತಿ – ೧೯೯೦

೩೩. ವಸಂತ್ ಮೂನ್ — ಡಾ.ಬಾಬಾ ಸಾಹೇಬ್ ಅಂಬೇಡ್ಕರ್
ಅನು: ಬಿ.ಎ.ಸನದಿ
ನ್ಯಾಷನಲ್ ಬುಕ್ ಟ್ರಸ್ಟ್ ಇಂಡಿಯಾ
ಹೊಸದೆಹಲಿ. ೨೦೦೨

೩೪. ಲಕ್ಕಪ್ಪಗೌಡ.ಹೆಚ್.ಜೆ — ಸಮತೆಯ ಶಿಲ್ಪಿ
ಬಾಬಾಸಾಹೇಬ್ ಅಂಬೇಡ್ಕರ್ ಶತಮಾನೋತ್ಸವ ಸಮಿತಿ
ಸ್ಫೂರ್ತಿಧಾಮ. ಬೆಂಗಳೂರು.

೩೫. ಲಕ್ಕಪ್ಪಗೌಡ. ಹೆಚ್.ಜೆ. — ಬಂಡಾಯ ಸಾಹಿತ್ಯ ಚಳುವಳಿ : ಹತ್ತು ವರ್ಷ
ಪ್ರಸಾರಾಂಗ, ಕುವೆಂಪು ವಿಶ್ವವಿದ್ಯಾಲಯ
ಶಿವಮೊಗ್ಗ . ೧೯೯೦

೩೬. ಲಕ್ಷ್ಮಿನಾರಾಯಣ ನಾಗವಾರ — ಹೊಲೆ ಮಾದಿಗರ ಹಾಡು : ೩೦
ಬತ್ತದ ಬೆಳದಿಂಗಳು ಡಾ.ಸಿದ್ಧಲಿಂಗಯ್ಯ
೨೦೦೬

೩೭. ಸಿದ್ಧಲಿಂಗಯ್ಯ — ಆಯ್ದ ಕವಿತೆಗಳು
ಕನ್ನಡ ಪುಸ್ತಕ ಪ್ರಾಧಿಕಾರ.
ಬೆಂಗಳೂರು. ದ್ವಿತೀಯ ಮುದ್ರಣ. ೨೦೦೪

೩೮. ಸಿದ್ಧಲಿಂಗಯ್ಯ — ಜನಸಂಸ್ಕೃತಿ
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ
ಹಂಪಿ. ೨೦೦೭

೩೯. ಸಿದ್ಧಲಿಂಗಯ್ಯ — ಗ್ರಾಮದೇವತೆಗಳು
ಮೂಲಭಾರತಿ ಪ್ರಕಾಶನ
ಬೆಂಗಳೂರು. ೧೯೯೭

೪೦. ಸಿದ್ಧಲಿಂಗಯ್ಯ — ಅವತಾರಗಳು
ಅಂಕಿತ ಪುಸ್ತಕ. ಬಸವನಗುಡಿ
ಬೆಂಗಳೂರು. ೨೦೦೨

೪೧. ಸಿದ್ಧಲಿಂಗಯ್ಯ — ಊರುಕೇರಿ
ಅಂಕಿತ ಪುಸ್ತಕ. ಬಸವನಗುಡಿ
ಬೆಂಗಳೂರು. ೨೦೦೦

೪೨. ಸಿದ್ಧಲಿಂಗಯ್ಯ — ಊರುಕೇರಿ – ೨
ಅಂಕಿತ ಪುಸ್ತಕ. ಬಸವನಗುಡಿ
ಬೆಂಗಳೂರು. ೨೦೦೯

೪೩. ಸಿದ್ಧಲಿಂಗಯ್ಯ — ಏಕಲವ್ಯ
ಅಂಕಿತ ಪುಸ್ತಕ, ಬಸವನಗುಡಿ
ಬೆಂಗಳೂರು, ೨೦೦೩ ಮರುಮುದ್ರಣ,

೪೪. ಸಿದ್ಧಲಿಂಗಯ್ಯ — ಉರಿಕಂಡಾಯ
ಅಂಕಿತ ಪುಸ್ತಕ. ಬಸವನಗುಡಿ
ಬೆಂಗಳೂರು. ೨೦೦೯

೪೫. ಡಾ.ಸುಭಾಷ್ ಭರಣಿ — ಧರೆಗೆ ದೊಡ್ಡವರು
ದ್ರಾವಿಡ್ ಪಬ್ಲಿಕೇಷನ್ಸ್, ಶ್ರೀರಾಮಪುರ
ಮೈಸೂರು. ೨೦೦೫

೪೬. ಸಂಕ್ಷಿಪ್ತ ಕನ್ನಡ ನಿಘಂಟು — ಕನ್ನಡ ಸಾಹಿತ್ಯ ಪರಿಷತ್ತು
ಮೂರನೆಯ ಮುದ್ರಣ
೨೦೦೧

ಡಾ||ಕೆ.ವಿ. ಚಂದ್ರಣ್ಣಗೌಡ
ಎಂ.ಎ., ಎಂ.ಫಿಲ್., ಪಿಎಚ್.ಡಿ
ಮುಖ್ಯಸ್ಥರು, ಕನ್ನಡ ವಿಭಾಗ
ಬೆಂಗಳೂರು-560 004